ಮಂಗಳ ಭಾರತಿ

ಮಲ್ಲಿಕಾ

ಮಂಗಳ ಭಾರತಿ

ಮಲ್ಲಿಕಾ

ಯೂಯಂ ತತ್ ಸತ್ಯಶವಸ
ಆವಿಷ್ಕರ್ತ ಮಹಿತ್ವನಾ ।
ವಿದ್ಯತಾ ವಿದ್ಯುತಾ ರಕ್ಷಃ ।

Mangala Bharathi in Kannada by "Mallika"
Published by Lakshmi Prakashana,
Kadidal Nilaya, 14th Cross, Bangalore-80

ಪ್ರಕಟಣ ವರ್ಷ : ೧೯೯೮

ಬೆಲೆ : ಮೂವತ್ತಾರು ರೂಪಾಯಿ

ಮುದ್ರಕರು :
ನ್ಯೂ ಐಡಿಯಾಸ್
351, 10ನೇ ಬಿ ಮುಖ್ಯ ರಸ್ತೆ
ಜಯನಗರ
ಬೆಂಗಳೂರು- 560 011

"ಶ್ರೀ ಭಾರತ ಮಾತಾ ಪಾದಾರ್ಪಣಮಸ್ತು"

ಮಂಗಳ ಭಾರತಿ

ಲೇಖಕರು ❋ ಪ್ರಕಾಶಕರು
359, ಕಡಿದಾಳ್ ನಿಲಯ, 14ನೇ ಕ್ರಾಸ್
ಬೆಂಗಳೂರು-80

ಪರಿವಿಡಿ

ನಿವೇದನೆ

'ಅಸತೋ ಮಾ ಸದ್ಗಮಯ' ಎಂಬುದರ ಪರಿಪೂರ್ಣ ಪಾಠವನ್ನು ಅಕ್ಷರಶಃ ಅನುಸರಿಸಿದ ದಿಟ್ಟತನದ ಮಹಾನ್ ಯೋಗಿನಿ ಮೇಡಂ ಕಾಮಾ. ರಾಷ್ಟ್ರಕ್ಕಾಗಿ ಎಂಥ ಮಹಾ ಪ್ರಯಾಸಕರವಾದ ಕಠಿಣಾತಿಕಠಿಣ ಮಾರ್ಗಯೋಗವನ್ನು ಕೈಕೊಂಡಳು ಆ ಧೀರ ಸ್ತ್ರೀ ವನಿತೆ? ಆದಿಯಿಂದ ಅಂತ್ಯದವರೆಗೂ ಅವಳು ನಡೆದು ಹೋದ ಹಾದಿ ಅಗ್ನಿ ಕುಂಡ ಎಂದರೆ ಅತ್ಯುಕ್ತಿಯಲ್ಲ. ಪರಿಪುಣ್ಯ ರಾಷ್ಟ್ರದಲ್ಲಿ ಹುಟ್ಟಿ ಬೆಳೆದ ಪುಣ್ಯವತಿ ವಜ್ರಾಂಗಿನಿ. ಅವಳಿಗೆ ಮತ್ತಾರೂ ಸರಿಸಾಟಿಯಿಲ್ಲದ ಮಹೋನ್ನತ ಮಾನಿನಿ. ಮಿಸುನಿ ಸಲಾಕೆಯಂತೆ ಥಳಥಳಿಸಿದ ಅಪ್ಪಟ ಅಪರಂಜಿ. ವರ್ತಮಾನ ಯುಗಧರ್ಮವನ್ನು ಅಮೂಲಾಗ್ರವಾಗಿ ಮೈಗೂಡಿಸಿಕೊಂಡ ಯುಗಧರ್ಮ ಪ್ರವರ್ತಕಿ. ಏಕನಿಷ್ಠೆ, ಏಕವ್ರತ, ಏಕಮತ, ಏಕ ಪ್ರವೃತ್ತಿಯ ಮಹಾನ್ ಮಂಗಳಾಂಗಿ. ನಿಷ್ಕಾಮ ಕರ್ಮಯೋಗಿನಿ ಮೇಡಂ ಕಾಮಾ. ಭಾರತ ಇತಿಹಾಸ ಪುಟಗಳಲ್ಲಿ ಸ್ವರ್ಣಾಕ್ಷರಗಳಲ್ಲಿ ಬರೆದಿಡಬೇಕಾದಂಥಹ ಅಪೂರ್ವತರ ಪಂಚಾಗಿನಿ !

ಇನ್ನು, ಮುಂದಿನ ಕಾವ್ಯದ ಅಭಿವ್ಯಕ್ತಿ ರಾಜಾರಾಮ ಮೋಹನರಾಯ್ ಬಗ್ಗೆ ಹೇಳುವುದಾದರೆ, ವಂಗ ಸಮಾಜ ಕುರುಡು ನಂಬಿಕೆಗಳಿಂದ ಹಿಂಗಟ್ಟು ಮುಂಗಟ್ಟು ಬಿಗಿದು, ನಡೆಗೆಟ್ಟು ತೊಳಲುತಿದ್ದ ಕಾಲದಲ್ಲಿ ಹೆಂಗಳೆಯರ ಸಂಕಟದ ಕಂಬನಿಯನ್ನು ತೊಡೆಯಲೆಂದೇ ಈ ಪುಣ್ಯಭೂಮಿಯಲ್ಲಿ ಸಂಭವಿಸಿದ ಮಹಾನ್ ಸಾಧಕ. ಅಂದಿನ ಪುಣ್ಯ ಜೀವಿಗಳನ್ನು ನಾವಿಂದು ಎಷ್ಟೆಷ್ಟು ಸ್ಮರಿಸಿದರೂ ಸಾಲದು! ಅಂತಹ ಪ್ರಾತಃಸ್ಮರಣೀಯರು ಇಂದು ದೀಪ ಹಚ್ಚಿ ಹುಡುಕಿದರೂ ದೊರೆಯಲಾರರು. ಇದು ದುರದೃಷ್ಟಕರ. ಅವರ ಹೆಜ್ಜೆಗಳನ್ನು ಅನುಸರಿಸದೆ ನಮ್ಮವರು ಹಿಂದುಳಿದುದು ರಾಷ್ಟ್ರದ ದೌರ್ಭಾಗ್ಯ.

ಅಂತೆಯೇ, ಮುಂದಿನ ಕಾವ್ಯದ ಮಹಾನ್ ವ್ಯಕ್ತಿ ರವೀಂದ್ರನಾಥ ಠಾಕೂರ್. ಬಹುಮುಖ ಪ್ರತಿಭೆಯ ಕವಿ ಚಕ್ರವರ್ತಿ. ತನ್ನ ಜೀವಿತವನ್ನು ಸಾಹಿತ್ಯ ಕಲಾ ಕ್ಷೇತ್ರಕ್ಕೆ ಮೀಸಲಿರಿಸಿ ಕಲಾಕೋವಿದನಾಗಿ ತನ್ನ ಪರಿಸರವನ್ನೇ ಕತ್ತಲೆಯಿಂದ ಬೆಳಕಿನೆಡೆಗೆ ನಡೆಸಿದ ಪರಮ ಪುರುಷ. 'ತಮಸೋ ಮಾ ಜ್ಯೋತಿರ್ಗಮಯ' ಎಂಬ ಉಪನಿಷದ್ ವಾಕ್ಯದ ಆದ್ಯ ಪ್ರವರ್ತಕರು. ಸಮಕಾಲೀನರಾದ ಪುರುಷ ಶ್ರೇಷ್ಠರು. ಇವರಿಬ್ಬರೂ ಭಾರತೀಯರಿಗೆ ದಾರಿದೀಪಗಳಾದ ಮಹಾನ್ ದೀಪಸ್ತಂಭಗಳು !

ಇನ್ನು ರೆಡ್ ಕ್ರಾಸ್ ಸಂಸ್ಥೆಯ ವಿಚಾರವಾಗಿ ಹೇಳುವುದಾದರೆ, 'ಮೃತ್ಯೋರ್ಮಾಮೃತಂಗಮಯ' ಈ ವಾಕ್ಯವನ್ನು ಅನುಸರಿಸಿಯೇ ಸೇವೆಯನ್ನು ಕೈತುಂಬ ಸಲ್ಲಿಸುವ ಮಹಾನ್ ಸಂಸ್ಥೆ ರೆಡ್ ಕ್ರಾಸ್! ದಯೆ ಕರುಣೆ ಮಾನವೀಯ ಧರ್ಮ ಎಂಬುದನ್ನು ಸಾರಿ ಸಾರಿ ಹೇಳುತ್ತ ಕಣ್ಣಿದ್ದು ಕುರುಡಾದ ಮನುಕುಲಕ್ಕೆ ಕಣ್ತೆರೆಸುವ ಸಂಯೋಜನೆಯನ್ನು ರೂಪಿಸಿದ ಮಾನವ ಜೀನ್ ಹೆನ್ರಿ ಡೂನಾಂಟ್. ಈ ಕಾಲದಲ್ಲಿ ಅಂತಹ ಇನ್ನೊಂದು ವ್ಯಕ್ತಿ ಲಭಿಸುವುದು ದುರ್ಲಭ. ನಮ್ಮ ರಾಷ್ಟ್ರದಲ್ಲಿ ಹಣವಿಲ್ಲ ಎನ್ನುವಂತಿಲ್ಲ. ಕಪ್ಪು ಹಣದ ಮಾತಿರಲಿ, ಸಿರಿವಂತರಲಿ ಹಣದ ಹೊಳೆಯೇ ಹರಿಯುತ್ತಿದೆ. ಸ್ವಾರ್ಥಮೂಲವಾದ ಹೃನ್ಮನಗಳಿಗೆ ಅದರಿಂದ ಶಾಶ್ವತ ಸುಖದಾಸೆಯೇ ಹೊರತು ಮತ್ತೊಂದು ಧ್ಯೇಯವಿಲ್ಲ. ಇದು ಅತ್ಯಂತ ದುರದೃಷ್ಟಕರ!

ಕೊನೆಯದಾಗಿ 'ವಂದೇ ಮಾತರಂ' ಸಂಗೀತೆಯನ್ನು ಜಡನಿದ್ರಿತ ಭಾರತೀಯರ ಕಣ್ತೆರೆಸುವ, ಚಿಂತನಾವಲಯದ ಕಿಚ್ಚಿನ ಕಿಡಿಗಳನ್ನು ಉದ್ದೀಪಿಸುವ ಸಲುವಾಗಿಯೇ ಉತ್ಪನನವಾದ ಗೀತೆಗಳ ರಾಜಾಧಿರಾಜ ವಂದೇಮಾತರಂ! ಅಜ್ಞಾನಿಗಳ ಕಣ್ತೆರೆಸಿ, ಎದೆಯ ಕಿಚ್ಚಿಗೆ ತೈಲವೆರೆದು ಎಚ್ಚರಿಸಿದ ಮಹಾನ್ ಕವಿ ಕಾರ್ತಿಕೇಯ ಬಂಕಿಮ ಚಂದ್ರ ಚಟ್ಟೋಪಾಧ್ಯಾಯ ಶತಮಾನ ಉರುಳಿದರೂ ನಸು ಬಾಡದ ಸಂಗೀತೆ ವಂದೇ ಮಾತರಂ! ಸುಜಲಾಂ ಸುಫಲಾಂ ಮಲಯಜ ಶೀತಲಾಂ ಸಸ್ಯ ಶ್ಯಾಮಲಾಂ ಮಾತರಂ!

ನಾನು ಕನ್ನಡ ನುಡಿಸೇವೆಗೆ ದೀಕ್ಷೆ ತೊಟ್ಟಂದಿನಿಂದ ಇಂದಿನವರೆಗೆ ಎಡೆಬಿಡದೆ ಸಾಗಿ ಬಂದ ಲೇಖನಿ ಧಾರೆಯಲ್ಲಿ ಮೂಡಿದ ಸತ್ ಸಾಹಿತ್ಯ ರಾಗಾನುರಾಗಿಣಿಯಾಗಿಯೂ ಉತ್ತರೋತ್ತರಣಿಯಾಗಿಯೂ ಊರ್ಧ್ವಮುಖಿ ಯಾಗಿಯೂ ಹರಿಯುತ್ತಿರುವುದು ದೈವಕೃಪೆಯಿಂದ ಮತ್ತು ಆರ್ಜವ ಹೃದಯ ಸಂಪನ್ನರಿಂದ. ನನ್ನ ಆವ ಜನ್ಮದ ಸುಕೃತವೋ ಇಂದು ನಾಡು ನುಡಿಯ ಸೇವೆ ಸಲ್ಲುತ್ತಿದೆ. ವಿದ್ಯಾಧಿದೇವಿಯ ಪಾದ ಸನ್ನಿಧಿಗೆ. ಇದು ಹೀಗೆಯೇ ಮುಂದುವರಿಯಲಿ ಎಂದು ಶ್ರೀ ಭಗವತಿಯಲ್ಲಿ ಪ್ರಾರ್ಥನೆ.

ಶ್ರೀ ಬಹುಧಾನ್ಯ ಸಂವತ್ಸರ
ಜ್ಯೇಷ್ಠ ಪೂರ್ಣಿಮಾ
ಬುಧವಾರ 10-6-98

ಮಲ್ಲಿಕಾ

ಮೇಡಂ ಕಾಮಾ

ಅಹೋ ಕಿವ ಪಿ ಚಿತ್ರಾಣಿ
ಚರಿತ್ರಾಣಿ ಮಹಾತ್ಮಾನಾಂ ।
ಲಕ್ಷ್ಮೀಂ ಶೃಣಾಯ ಮನ್ಯಂತೆ
ತದ್ಬರೇಣ ಸಮಂತ್ಯಪಿ ॥

ಹೇ ಬ್ರಹ್ಮ ಮಹದ್ ಮಂತ್ರ ಸಂಭವೆ, ವೇದಾಂತ
ಸ್ವರೂಪಿಣಿ, ಸಕಲ ಜನ ಸೇವಿತೆ, ತ್ರೈಭುವನ
ಮೋಹಿನಿ, ವರ ಕಲ್ಯಾಣಿ, ಮಧುರ ಸಂಗೀತೆ, ಚಿರ
ಧವಳೆ, ಕವಿ ಕಾವ್ಯ ರಸ ಪ್ರಭವೆ, ವರ ವಿರಾಟ್
ಸ್ಫೂರ್ತಿದಾಯಕಿ, ದಿವ್ಯಕಲಾಕಲೆ, ಸಂಜೀವನ
ಚೇಜಸ್ವಿನಿ, ಭಾವ ಚಿಂತಾಖನಿಯೆ, ಶಿಖಿವರದೆ
ತಲೆಬಾಗುವೆನ್ನೈ ನಿನ್ನಮಲ ಪಾದ ಪದ್ಮಗಳ
ದಿವ್ಯ ಸನ್ನಿಧಿಗೆ, ಭಕ್ತಿಭಾವವಂ ಮನತುಂಬಿ.
ಹೇ, ಮಹಾದೇವಿ! ಎನ್ನೀ ಜಡ ಮತಿಗೆ ಪರಮ
ಚೇತನದ ಕಿಡಿವೊಗೆದು ಚಿಜ್ಜ್ಯೋತಿಯಂ ಉರಿಸು
ಉಕ್ಕಿ ಹರಿಯಲಿ ನಿತ್ಯ ಸ್ವಚ್ಛಂದಮಾನಂದ
ಕಾವ್ಯರಸ ಸಲಿಲವೆನ್ನ ಜೀವಕಣವಂ ಮುಟ್ಟಿ
ಪುಳಕಗೊಳ್ಳವೊಲ್ ಕಣ್ಬೆಳಕು ನಂದುವ ನಕ.
ಮಿನ್ನೆ ಭಾರತ ಭುವಿಯಲಿ ಅಸ್ವತಂತ್ರ ಜೀವನ
ವಾಹಿನಿಯಲಿ ನೆರೆಬೆಂದು ಬೇಯುತ ರಾಷ್ಟ್ರೀಯ
ಸ್ವಾತಂತ್ರ್ಯಕಾಗಿ ಜೀವ ತೇಯ್ದವರಂ ನೆನೆದು
ಈ ಕಾವ್ಯ ಗುಚ್ಛಮಂ ನಿನ್ನಯ ಪದ ಪ್ರಾಂತ್ಯಕೆ
ಈವೆಂ ಕುಸುಮಾಂಜಲಿಯೊಲ್ ಹೇ ಅಜಜಾಯೇ!
ಪುಣ್ಯ ಭಾರತದ ಜೀವನ ಸಲಿಲದಲಿ ಬಿಂದು
ಪರಮ ಸಿಂಧುವಾಗಿ ವಿಜೃಂಭಿಸಿ ಭಾರತ ನಭೋ

ಮಂಡಲದ ಸೀಮಾ ಕ್ಷೇತ್ರದಲಿ ತಾರೆಯಾಗಿಹ
ಮೇಡಂ ರುಸ್ತುಂ ಭಿಕಾಜಿ ಕಾಮಾ ಭಾರತೀಯ
ಔರಸಪುತ್ರಿ! ಧೀಮಂತ ಮಹಿಳಾಮಣಿ! ರಾಷ್ಟ್ರ
ನಿಷ್ಠೆಯ ವರಪುಣ್ಯಾವನಿ ! ಸ್ತ್ರೀಕುಲಕೆ ನಿತ್ಯ
ಮೇಲ್ಪಂಕ್ತಿವೆತ್ತ ದಿವ್ಯ ಚೇತನ! ಶ್ರೀಮಂತೆ!
ಅಪೂರ್ವ ಸತಿ! ನಿನ್ನಂ ನೆನೆವುದೊಂದೆ ನಿನಗಾಂ
ಸಲ್ಲಿಸುವ ಋಣಮಿಂದು ತಾಯೇ! ಇದೋ ನಮನ!
ಏಗಳುಂ ನೆನೆದು ಸಂಭಾವಿಸಿ ಸಲಿಪೆನೆನ್ನ
ಪರಮ ಭಕ್ತಿಯಂ ನಿನಗೆ ಆನಂದಗೌರವದಿಂ!
        ಸಗ ಸಾವಿರದೆಂಟನೂರ ಸೆಪ್ಟೆಂಬರ್ ಇಪ್ಪತ್ತ-
ನಾಲ್ಕನೇ ತೇದಿ! ಶತಮಾನವೊಂದುರುಳಿದುದು
ಇಂದಿನೀ ಸೆಪ್ಟೆಂಬರ್ ಇಪ್ಪತ್ತನಾಲ್ಕಕ್ಕೆ!
ಓವೋ! ಅಪೂರ್ವ ಪುಣ್ಯದಿನಂ ಭರತವರ್ಷದ
ಇತಿಹಾಸದಲಿ! ವೀರ ನಾರೀಮಣಿಯ ಸತ್ಯ
ಕಥನ ಚರಿತ್ರೆಯಂ ಮನದುಂಬಿ ನೆನೆಯುತಿರೆ ಮೈ
ನವಿರ್ ನಿಮಿರಿ ಪೆರ್ಮೆಯಲಿ ಉರ್ಬುವುದೆನ್ನೆರ್ದೆ!
ಮಹಾ ಭಾರತದ ವಜ್ರದ ಗಣಿಯೊಳ್ ಪೊದಳ್ದ
ಕೊಹಿನೂರ್ ವಜ್ರ! ತಾಯ್ನಾಡ ಸಂಕಷ್ಟಮಂ
ತೊಡೆಯಲೆಂದೈದ ದಿವ್ಯ ತಾರೆ! ನಿಜ ಮಾತೃಕೇ!
        ಆವಾವ ಶುಭಗ್ರಹಗಳನುಗ್ರಹಮೊ ಅಂದು
ಘನಿಸಿ ಶುಭಮುಹೂರ್ತವನಾರ್ಪೈದುದು ವರಕಂದನ
ಜನ್ಮಧಾರಣೆಗೆ ಮುಂಬೈ ನಗರಿಯಲಿ, ಭಾರತ
ರಾಷ್ಟ್ರೀಯ ಗೌರವವೇ ಮೈವೆತ್ತು ಬಂದವೊಲ್!
ಪಿತ ಪ್ರೇಮ್‌ಜಿ ಸೋಹ್ರಾಬ್‌ಜಿ ಎನಲ್ ಸಾಮಾನ್ಯ
ವ್ಯಕ್ತಿಯಲ್ತು; ಮುಂಬಯಿ ಪ್ರಾಂತ್ಯದಲಿ ಪೆಸರಾಂತ
ಮಹನೀಯ! ವ್ಯಾಪಾರದಲಿ ಅತಿ ಚತುರ, ಸದ್ಗುಣಿ
ಶ್ರೀಮಂತ! ಮೇಣಂತೆಯೆ ಶ್ರೀಮಂತ ಕುಟುಂಬ.
ಒಂಭತ್ತು ಮಕ್ಕಳಂ ಪೆತ್ತ ಸತಿ ಮಾತೃಮಯಿ!

ಮೇಡಂ ರುಸ್ತುಂ ಭಿಕಾಜಿ ಕಾಮಾ ಆ ತುಂಬು
ಸಂಸಾರದೊಂಭತ್ತು ಮಕ್ಕಳಲಿ ತಾನೋರ್ವ
ಮಹಾ ಚಲ್ಲೆಗಾರ್ತಿ!
ಪಿತ ಪ್ರೇಮ್‌ಜಿ ಸೋಹ್ರಾಬ್‌ಜಿ
ಅತಿ ಪ್ರೀತ್ಯಾದರದಿಂ ಪಾಲಿಸುತಿರ್ದ ಪುತ್ರಿಯಂ,
ಮುದ್ದು ಮಾತಿನೊಳ್ 'ಮುನ್ನಿ' ಎಂದುಪನಾಮವಂ
ಇರಿಸಿದರ್ ಮುದ್ದು ಮಗುವಂ ಮುದ್ದು ಮುದ್ದಾಗಿ
ಕರೆದು ಮುದ್ದಾಡೆ. ಮುನ್ನಿ-ಮುನ್ನಿ-ಮುನ್ನಿ ಎಂದು
ನಲ್ಮೆಯಿಂ ಬಲ್ಮೆಯಿಂ ಪ್ರಿಯವಾಗಿ ಕರೆವರ್.
ಮುನ್ನಿ ಎಲ್ಲರ ಕಣ್ಮಣಿ. ಸುರ ಸುಂದರ ರೂಪು.
ಪುಟ್ಟ ಪುಟ್ಟ ಹೆಜ್ಜೆಯಿಡುತ ತೊದಲು ಮಾತುಗಳ
ಸರಿ ಸುರಿಯೆ ಪೆತ್ತವರ ಆನಂದವೋ ಆನಂದ!
ಮುದ್ದು ಮೊಗದ ಬೊಗಲೆಗಂಗಳ ಬಾಲೆ ಚಿನ್ಮಯೀ
ಮುನ್ನಿ ವಿದ್ಯೆಯಲಿ ಜಾಣೆ, ಬುದ್ಧಿಯಲಿ ಮುಂದೆ.
ಕಾಮಾ ಅಸಮಾನ್ಯೆ. ಅಸದೃಶ ಅನನ್ಯತರ
ಪ್ರಜ್ಞಾನ ನಿಧಿ.
ಇಂತಿರೆಯಿರೆ ಮುನ್ನಿ ಅರಗಿಳಿಯ
ಅಂಕಮಂ ದಾಂಟಿ ತಾರುಣ್ಯದ ಹೊಸ್ತಿಲೇರೆ
ಭಾರತ ಭುವಿಯಗಲ ಹರಿದುದು ಜಾಗೃತ ದೃಷ್ಟಿ.
ಭಾರತ ಭುವಿಯಲಿ ಆಂಗ್ಲರಾಳ್ವಿಕೆ! ಇದೇನಿದು?
ಪರಕೀಯರ ಪಾರುಪತ್ಯವೆಮ್ಮಯ ಭುವಿಯಲಿ?
ಎನುವೊಂದು ಅಚ್ಚರಿಯಲಿ ಮನವಿಡೆ ಪ್ರಜೆಗಳ
ಕೆನ್ನೆತ್ತರ್ ಪೀರ್ವ ಕುಕರ್ಮಿಗಳ ಚಿತ್ತಾರವೆ
ಎಲ್ಲೆಲ್ಲು! ಕೂರಾತಿಕೂರ ಕಟ್ಟುನಿಟ್ಟಿನ
ಕಾಯ್ದೆಗಳವತರಣಂ ಬಡವರಂ ಬೊಗ್ಗು ಬಡಿಯೆ!
ಹದಿ ಹರೆಯದ ಕಾಮಾ ಭಾರತ ವರ್ಷದ ಸ್ಥಿತಿ
ಗತಿಯಂ ಗಮನಿಸಿ ಮುಮ್ಮಲ ಮರುಗುವಳ್ ನಿಚ್ಚ.
ಆಂಗ್ಲೇಯರ್ ಭಾರತದಲಿ ಸ್ವರ್ಗ ಸೌಖ್ಯಮಂ

ಮೊಗೆದುಂಡು ಭಾರತೀಯರಂ ಪಶುವರ್ಗಕಿಂ
ಕಡೆಯೈಸಿ ಕಾಂಬ ಧೂರ್ತತನಮಂ ಮೂಕಮೌನ
ಮಾಳ್ಕೆಯಲಿ ಸಹಿಪುದೆಂತು ಪ್ರಜ್ಞಾನ ಚಿತ್ತಂ?
ತನ್ನೊಳ್ ಮನ ಮಥಿಸಿ ಮಥಿಸಿ ಭಾರತ ವರ್ಷದ
ಪರಮೋದ್ಧಾರಮೆನ್ನ ಗುರಿಯೆಂದು ಪಣತೊಟ್ಟಳ್
ಚಿತ್ಕಲೆ! ವರಪುಣ್ಯಾವನಿ ಭಿಕಾಜಿ ಕಾಮಾ!
ಪಿತ ಪ್ರೇಮ್‌ಜಿ ಆಂಗ್ಲರಾಳ್ವಿಕೆಯಂ ಆನಂದ
ಮೋದದಿಂ ಮೆಚ್ಚಿರ್ದ ವ್ಯಕ್ತಿಯಿರೆ ವಿರೋಧದ
ಸೊಲ್ಲೆತ್ತುವುದು ವ್ಯರ್ಥಂ. ದೇಶಕಾಗಿ ಜೀವನ
ತೆತ್ತ ದೇಶಭಕ್ತರನತಿ ಭಕ್ತಿಭಾವದಿಂ
ನೆನೆವ ಮೇಣ್ ಸ್ವಾತಂತ್ರ್ಯ ಚಳವಳಿಯಲಿ ಬೇವ
ಪುಣ್ಯ ಜೀವಿಗಳಂ ಗೌರವಿಸುವ ಪರಿಜ್ಞಾನಂ
ಬಲಿಯುತಿರ್ದುದು ದಿನೇ ದಿನೇ ಹೃತ್ ದೇಶದಲಿ.
ಕ್ರಮಾನುಕ್ರಮದೊಳ್ ಪಾರತಂತ್ರ್ಯದಿಂ ಸೋಲ್ದು
ರಾಷ್ಟ್ರ ಸ್ವಾತಂತ್ರ್ಯ ಚಳವಳಿಯ ಸುಡುಬೆಂಕಿಯಲಿ
ಧುಮುಕಿದಳ್, ಪೆತ್ತವರ ಬಿಗಿಗಟ್ಟಂ ತಾಂ ಮೀರ್ದು!
ಲೋಕ ಪ್ರಜ್ಞೆ ಅರಳಿದ ಮಂದಾರವಾಗುತಿರೆ
ಮನಃಚಿತ್ತ ಕಲ್ಪದಲಿ; ಬಿರುಗಾಳಿಗಂಜದ
ಮುಂಡು ಮರದೊಲ್ ಸದೃಢವಾದಳ್ ಸುಕಾಮಾ!

ಅಹಾ! ಭಾರತ ವರ್ಷದ ಭುಮಿಯುಗಲ ಮಂಗಳ
ಮೂರ್ತಿಗಳೆನೆ ಸಂಜನಿಸಿ ಭಾರತದ ಪರಮ ಪದ
ಸೇವೆಗೆ ಪಣಕಟ್ಟಿ ಉಸಿರ್ ಬಿಗಿಹಿಡಿದು ಪಗಲ್
ಇರುಳೆನ್ನದೆ ದುಡಿದು ಕಸಕ್ಕಿಂತ ಕಡೆಯೈಸಿ ತನು
ಒಗೆದು ಭಾರತಿಯ ಮಣ್ಣ ಹುಡಿಯಲಿ ಮಣ್ಣಾಗಿ
ಸಂದ ಪ್ರಾತಃಸ್ಮರಣೀಯರಂ ನೆನೆಯೈ ಮನವೇ!
ಭಾರತ ಜನನಿಯ ಶೃಂಖಲೆಯಂ ಕಳಚೆ ಶಾಂತಿ
ಮಂತ್ರಮಂ ಆತ್ಮಶ್ರೀವಿದೂರರ ಮುಂದೆ ಪಠಿಸಿ,
ಆತ್ಮ ತ್ಯಾಗದ ಪ್ರಥಮ ಪಾಠಮಂ ಲೋಕಕೆ

ಕಲಿಸಿದ ಅಮರರಂ, ಪರಮಯೋಗಿಗಳಂ ಸತ್
ಸಜ್ಜನರಂ, ಧರ್ಮಭೀರುಗಳಂ, ನೆನೆ ಮನವೇ!
ಭಾರತ ಭುವಿಯಗಲ ನೆತ್ತರಂ ತಿಳಿನೀರಿನೊಲ್
ಚೆಲ್ಲಾಡಿ ಸ್ವಾತಂತ್ರ್ಯದ ಸವಿಯುಣದೆ ಸಗ್ಗಕೆ
ಸಂದ ಲೋಕಮಾನ್ಯರಂ ನೆನೆ ಮನವೇ!
ಸಹಸ್ರ ಸಹಸ್ರ ಶತ ಸಹಸ್ರ ಸಂಖ್ಯೆಯುಂ ಮಿಕ್ಕಿ
ಮೀರಿ ದೇಶ ನಿಷ್ಠೆಯಿಂ ಆತ್ಮಬಲಿದಾನಗೈದ
ರಾಷ್ಟ್ರದಾದ್ಯಂತಖಿಲ ಸಂಜೀವ ದಾನಿಗಳ
ಆಪನಿತು ತ್ರಿಕರಣ ಪೂರ್ವಕದಿಂ ನೆನೆ ಮನವೇ!

ಅಂದು,

ಭಾರತದಗಲ ಎಲ್ಲೆಲ್ಲಿಯುಂ ದಯಾದಾರಿದ್ರ್ಯ,
ಧರ್ಮದಾರಿದ್ರ್ಯ, ಕ್ಷೇಮದಾರಿದ್ರ್ಯ, ಆರ್ಥಿಕ
ದಾರಿದ್ರ್ಯಗಳ್ ಕೂಡಿ ದಾರಿದ್ರ್ಯವನ್ನತಿ ದಾರಿದ್ರ್ಯ
ಸ್ಥಿತಿಗಿಳಿಸುವನಿತು ಕಡು ದಾರಿದ್ರ್ಯ! ಮತ್ತಂ
ಸಾಂಕ್ರಾಮಿಕ ರೋಗಗಳ ಭಯಂಕರ ಹಾವಳಿ!
ಎಲ್ಲಕ್ಕೂ ಕಿರೀಟವಿಟ್ಟವೊಲ್ ಪ್ರಭುತ್ವದ
ನಿರ್ಲಕ್ಷ್ಯ; ನಿರಾಸಕ್ತಿ; ನಿರ್ಯೋಜನೆ!

ಭಗವನ್...

ಭಾರತ ವರ್ಷ ಮಹಾನ್ ಪುಣ್ಯಭೂಮಿ! ಎಲ್ಲೆಡೆ
ಕೀರ್ತಿ ಕಸ್ತುರಿ ಪರಿಮಳ ಪಸರಿಸಿದ ಪವಿತ್ರ
ಭೂಮಿ! ಶತಶತಮಾನಗಳ ದಾಸ್ಯದಿಂ ಸರ್ವ
ಸಾರಮಂ ಬಸಿದು ಬರಡಾಗಿಹಳೊ ಎನೆ ಇಂದು
ಎಲುಬಿನ ಹಂದರ! ಅರೆಹೊಟ್ಟೆ ಅರೆಬಟ್ಟೆಗಳ
ಜೀವಶ್ಶವ! ನೋಡಿ ಭರಿಸಲಾಗದ ಜೀವಶ್ಶವ!
ಹಾ! ಭಾರತದೇಶಂ ಮುಂದೆಂದಾದೊಡಂ ಈ
ಸಂಕಷ್ಟದಿಂ ಪಾರಾದಪುದೆ ಎಂಬ ಸಂಕಟದ
ಪ್ರಶ್ನೆ ಒಂದಾದೊಡೆ ಮತ್ತೊಂದು ವಿದೇಶಗಳ

ಮಾಳ್ಕೆಯಲಿ ಮೈದುಂಬಿ ಮೆರೆದಪುದೆ ಎಲ್ಲರೊಳ್
ಸ್ಪರ್ಧೆಗೆತ್ತು? ಎಂಬ ಕಡು ಸಂಕಟದಾ ಪ್ರಶ್ನೆ
ಅತನುವಾಣಿಯೊಲ್ ಕರ್ಣಗಹ್ವರದಲಿ ಸದಾ
ಮೊರೆದಿರೆ ಕಿಡಿಕಿಡಿಯಾದಪುದು ಮೈ. ಬಿಸಿ ಬಿಸಿ
ಯಾದಪುದು ಕೆನ್ನೆತ್ತರ್. ಮಾನಸ ಹಿಂಸೆ, ಆತ್ಮ
ಹಿಂಸೆ ಏಗಳುಂ ಪಿಂಡುತಿರ್ಪುದು ಪ್ರಾಣಮಂ.
ಈಯೊಂದು ಗಂಡಮಂ ಕಳೆವುದೆನೆ ಆಂಗ್ಲೇಯ
ಪ್ರಭುತ್ವದ ವಿರುದ್ಧ ದಂಗೆ! ಗುಂಡು ಮದ್ದಿನ
ವಿರುದ್ಧ, ಫಿರಂಗಿಯ ವಿರುದ್ಧ ದಂಗೆ! ಎನಿತೊಂದು
ಮುಗ್ಧ ಜನ ಹುತಾತ್ಮರಾಗಿರ್ಪರ್! ಇನ್ನೂ
ಎನಿತೊಂದು ಜೀವಗಳ ಮಾರಣ ಹೋಮಮಂ
ಗೈಯಲಕ್ಕುಮೊ? ಇದರ ಪರಿಹಾರ ಇನ್ನೆಂತೊ
ಬಡದೇಶ ಬಡಜನ ನೆನೆದೊಡೆ ಕಂಬನಿ ಒಸರಿ
ಕಣ್ಣು ತೊಯ್ಯುವುದೊಂದೆ ಪರಿಹಾರಮೆನೆ ಕಷ್ಟ;
ಕಡುಕಷ್ಟ. ಆದೊಡಂ! ಪಿಂಜರಿಕೆ ಅಸಾಧ್ಯಂ!
ಎಂದೆಂಬ ಅಂತ್ಯ ತೀರ್ಮಾನಕೆಡೆ ಕೊಟ್ಟಿತ್ತೈ
ಪರಮ ರಾಷ್ಟ್ರೀಯ ಸಂಕಷ್ಟದಾ ಪರಿಸ್ಥಿತಿ
ಏನೊದವಿದೊಡಂ ಬೆದರದೆ ಮುಂದ್ವೈದು ದೇಶದ
ಸ್ವಾತಂತ್ರ್ಯಕ್ಕಾಗಿ, ಧರ್ಮ ಸತ್ಸಮೃದ್ಧಿಗಾಗಿ,
ದಲಿತ ಭಾರತೀಯರ ಪರಮೋದ್ಧಾರಕಾಗಿ
ಹೋರಾಟ! ಹೋರಾಟಮೆಂದೊಡೆ ಸಾಮಾನ್ಯಮೆ?
ಘೋರಾತಿಘೋರ ಹೋರಾಟ! ಬರಿಗೈ ಬಂಟರ
ಹೋರಾಟ. ಚಳವಳಿ-ಗಲಾಟೆ-ದೊಂಬಿ-ಗದ್ದಲ
ಹೊಡೆತ-ಬಡಿತ-ಸಾವು-ನೋವು-ಗೋಳು-ರಣಗೋಳು!
ಸುಳಿಬಾಳೆಯಂ ಪೋಲ್ವ ತನ್ವಂಗಿಯ ರಾಜಕೀಯ
ಬೆಂಕೆ ಮನೆಯಂ ಮುಟ್ಟುತಿರೆ ಪಿತ ಪ್ರೇಮ್‌ಜಿ ಮನದೆ
ಚಿಂತೆಗೆತ್ತು ಮಗಳಂ ಪಿಂದೆಳೆಯೆ ಪ್ರಯತ್ನಿಸಿ
ಕೈಸೋಲ್ತು ನೆಚ್ಚುಗೆಡುತಿರೆ ನೊಂದು ನೀರಾಗಿ,

“ಮಗಳೇ, ಮುನ್ನಿ! ದೇಶ ಕಾರ್ಯದಲಿ ನಮ್ಮಯ
ಜೀವನ ಶಾಂತಿ ಕಳೆದು ಹೋಹುದಲ್ಲದೆ ಬೇರೇಂ
ದಕ್ಕದು ಎನಲ್ ನೀಂ ಪರಾಮರಿಸು!” ಎಂದನಾ
ಪ್ರೇಮ್‌ಜಿ ಸೊಹ್ರಾಬ್‌ಜಿ. ಅದರ್ಕಾ ಸುಕುಮಾರಿ
ಮಣಿದಳೇಂ? ಅವಳಿಚ್ಚೆಯೇ ಇಚ್ಚೆ! ಆರಿಗುಂ
ತಲೆ ಬಾಗುವಳಲ್ಲಂ. ಈ ಕಷ್ಟಮಂ ಕಳೆಯೆ
ಏಂಗೈವುದೆಂದು ಯೋಚಿಸುತಿರಲಾ ಪ್ರೇಮ್‌ಜಿ
ಮನದಲಿ ಪೊಳೆದುದೊಂದು ಸುಲಭಮಾರ್ಗ! ಮುನ್ನಿಗೆ
ಸಂಲಗ್ನ! ಸರಿಯಪ್ಪ ವರದೊರಕೆ ಸಂಲಗ್ನ!
ಮುದ್ದು ಮುನ್ನಿ ಸಂಸಾರ ಬಂಧನದೊಳಿರ್ದೊಡೆ
ಜೀವನಂ ನಿರ್ಮಲಂ ಬದುಕು ಘನ ಗೌರವಂ!
ಎಂದೆನಲ್ ತಡಮೇಕೆ ಆನಿದಂ ಕೈಗೊಂಬೆ
ಎಂಬೊಂದು ದೃಢಭಾವದಿಂ ಎರ್ದೆಯುರ್ಬಿರೆ
ಪ್ರೇಮ್‌ಜಿ ಸೊಹ್ರಾಬ್‌ಜಿ ತತ್‌ಕ್ಷಣಂ ಸ್ವಕಾರ್ಯ
ನಿರತನಾದಂ! ದಕ್ಷತೆಯಿರ್ದೊಡಾವುದಸಾಧ್ಯ?
ವ್ರತನಿಷ್ಠೆಯುಂ ಫಲಿಸಿ ದೊರೆತ ಯುವ ಮನೀಷಿ
ಸತ್ಪಾತ್ರವೇ ದಿಟಂ. ಸನ್ಮಾನ್ಯ ವಕೀಲಂ.
ಧನಮಾನ್ಯಂ. ರಾಜಕೀಯ ಮುತ್ಸದ್ದಿ. ಸಾಮಾಜಿಕ
ಸೇವಕ. ಸುರಸುಂದರ ತರುಣ. ಗಣಿಯೊಳ್ ಪುಡುಕಿ
ಆಯ್ದು ತಂದ ರನ್ನದೊಲ್ ಅಪ್ಪಟ ಅಪರಂಜಿ!
ಅಹೋ ರೂಪ! ಅಹೋ ಧ್ವನಿ! ಅಹೋ ನಿಷ್ಠೆ! ಎನಲ್
ಸಂಬಂಧಕೆಲ್ಲಿಯ ವಿರೋಧಂ? ವಿಧಿವತ್ತಾದ
ಬಾಂಧವ್ಯ ಬೆಸೆದು ತುಂಬು ಹರೆಯಂ ತಲೆಮಣಿಯೆ
ರುಸ್ತುಂ ಕೆ. ಆರ್. ಕಾಮಾನ ಗೃಹಿಣೀ ಪದಮಂ
ಒಪ್ಪಿದಳ್ ರುಸ್ತುಂ ಭಿಕಾಜಿ ಕಾಮಾ! ಲಗ್ನ
ವಿಜೃಂಭಣೆಯಿಂ ನಡೆದು ‘ಮೇಡಂ ಕಾಮಾ’ ಆದಳ್
ಸಿಂಹಿಣಿ! ಪಿತ ಪ್ರೇಮ್‌ಜಿ ಸೊಹ್ರಾಬ್‌ಜಿ ಪ್ರೀತಿಯ
ಕುವರಿಯಂ ಮಾತ್ರಮಲ್ತು ತನ್ನ ತಲೆ ನೋವಂ -

ಗೂಡಿ ರುಸ್ತುಂ ಕೆ. ಆರ್. ಕಾಮಾ-ಗೆ ಧಾರೆಯೆರೆದು
ಹೊಣೆಗಾರಿಕೆಯಂ ಸುಲಭದೊಳ್ ಕಳೆದು ನಿಶ್ಚಿಂತ
ಗತಿಯಲ್ಲಿ ಮಿಣ್ಣನಾದಂ! ರುಸ್ತುಂ ಕೆ. ಆರ್. ಕಾಮಾ
ಮಡದಿಯ ಮನೋಭಾವವರಿಯದವಂ ಎಂದಲ್ಲ.
ಸಾಮಾಜಿಕ-ರಾಜಕೀಯ ರಂಗದೊಳಿರ್ದೆಲ್ಲಂ
ಅರಿತವಂ! ಮಡದಿಯಂ ದಯೆ-ಧರ್ಮ ಪ್ರೇಮ-ಪೆ-
ರ್ಮೆಗಳಿಂ ಪಾಣಿಗ್ರಹಣಗೆಯ್ದ ರುಸ್ತುಮನೇ ವಲಂ!
ದಂಪತಿಗಳ್ ಒಗ್ಗೂಡಿ ಸಾಮಾಜಿಕ ಸೇವೆ
ಕೈಕೊಂಡರ್. ರಾಜಕೀಯದ ಪ್ರಸ್ತಾಪಮೊದವಿ
ಬರೆ ದಂಪತಿಗಳ ವೈಚಾರಿಕತೆ ಬೇರೆವೇರೆ.
ರುಸ್ತುಂ ಕಾಮಾ ಆಂಗ್ಲೇಯರಾಳ್ವಿಕೆಯಂ ಒಪ್ಪಿ,
ಮನದುಂಬಿ ಆನಂದದಾಮೋದದಿಂ ಬಾಯಿ
ತುಂಬ ಬಣ್ಣಿಸುವ. ಸತಿ ರೋಷದುಸಿರಂ ಬಸಿದು
ಸಿಡಿದೇಳುವಳ್! ವಾದವಿವಾದಗಳ ಕಾವಿನ
ಸ್ಫೂರ್ತಿಯುಕ್ಕೇರುತಿರೆ ತಾಪಾನುತಾಪಗಳ
ಹಣಾಹಣಿಯ ಮೊಳಗಿಂದೆ ಮನಃಚಿತ್ತಗಳಲಿ
ಕಿನಿಸಿಗೆ; ವಿಚಾರ ವಿಪ್ಲವದ ರಾಣಾರಂಪ!
        ರಾಷ್ಟ್ರದಾದ್ಯಂತ ದಟ್ಟ ದಾರಿದ್ರ್ಯ ದೇವತೆ
ಅಕಾಂಡತಾಂಡವ ನೃತ್ಯಗೆಯ್ಯುತಿರೆ ನೋನೋಡಿ
ಸುಮ್ಮನಿರಲಕ್ಕುಮೆ ನರಜನುಮದೊಳ್ ಉದಯಿಸಿ?
ಈಗಾಗಳ್ತೆ ಎರಡು ಶತಮಾನಗಳುರುಳುರುಳಿ
ಪೋದುವಲ್ತೇ ಆಂಗ್ಲರಾಳ್ವಿಕೆಯ ಮೋಜಿನಾ
ಮರ್ಜಿಯಲಿ ಲೋಕದ ಪರಮ ಬುದ್ಧಿಜೀವಿಗಳ
ಕಣ್ಮುಂತೆ? ನಂನಮ್ಮ ಜೀವನೀಕ್ಷೇತ್ರಂ
ನಮ್ಮನಲ್ಲದಾರಂ ಅವಲಂಬಿಪುದು? ಕಲಿತ
ಬುದ್ಧಿಮಾನ್ಯ ಲೋಗರ್ ನಿರ್ಲಕ್ಷಿಸೆ ಸರಿದಾರಿ
ತೋರ್ಪರಾರ್? ಎನುತೆ ಸುಯ್ಯುತೆ ಜಾನಿಪಳ್ ಕಡು
ಚಿಂತಾಭಾವದಿಂ ಮೇಡಂ ಕಾಮಾ. ರಾಷ್ಟ್ರೀಯ

ಪರಿಸ್ಥಿತಿಯನವಲೋಕಿಸಿ ರುಸ್ತುಂ ಕಾಮಾ
ಮಡದಿಗೆಂದಂ ನಲ್ಮೆಯಿಂ, ''ಕೇಳ್, ಮನದನ್ನೆ!
ಈಗಳಾವು ಸ್ವಾತಂತ್ರ್ಯ ಸಂಗ್ರಾಮಕ್ಕೆ ಬೆನ್
ತಿರುವದೆ ಗತಿಯಿಲ್ಲ. ಭಾರತ ಪಿಂದುಳಿದ ರಾಷ್ಟ್ರ.
ಸಕಲತರ ಸಂಸ್ಕಾರದ ನೆರಮಿಲ್ಲದೆ ಎಂತು
ಮುಂಬರಿಕೆ? ಈ ಬ್ರಿಟಿಷರಾಳ್ವಿಕೆ ಮೇಣವರ
ಸಹವಾಸದಿಂ ದೇಶೀಯ ಹುಂಬರ್ ಜಗದ ನವ
ನಾಗರಿಕತೆಯನರಿತು ಜೀವನದಿ ಉತ್ಕ್ರಾಂತಿ
ಮೈದೋರೆ ಏಂ ಸೊಗಂ? ನವನಾಗರಿಕತೆಯು
ತುಟ್ಟತುದಿಗೇರುವನ್ನ ನೀಂ ಶಾಂತಿ-ವಿಶ್ರಾಂತಿ
ಯಿಂದಿರ್ಪುದೊಳ್ಳಿತು!''

ಪತಿಯ ಸ್ವರದೊಲುಣ್ಮಿದ
ವ್ಯತಿರಿಕ್ತ ಭಾವದಿಂ ಮನಂ ನೊಂದು ನೀರಾಯ್ತು.
''ನೀನಿಂತು ಪರಿಭಾವಿಸಿದೊಡೆ ದುರ್ಗತಿಯೆ ಕಣಾ!
ಆಂಗ್ಲರಾಳ್ವಿಕೆ ಕಿತ್ತೊಗೆಯದೆಲ್ಲಿಯ ಸಂಮೃದ್ಧಿ?
ಶತಶತಮಾನಗಳಾಳ್ವಿಕೆಯ ಸಾಧನೆ ಏನಿಹುದು
ಪೇಳ್ವೆ? ನಮ್ಮ ರಾಷ್ಟ್ರ ನಮ್ಮ ಸಂಸ್ಕೃತಿ ನಂನಮ್ಮ
ಕೈಯೊಳಿರ್ಪುದೆ ಚೆನ್ನು, ಸ್ವಶಕ್ತಿ ಸಾಮರ್ಥ್ಯಮಂ
ಆಂಗ್ಲೇಯರ ಕೈಯೊಳ್ ಅಡವಿಟ್ಟು ದಿನದಿನಂ
ಕಣ್ಣೀರ್ಗಡಲೊಳಾವು ಮುಳುಗಿರ್ಪುದ ಕಾಣೆಯ?
ಸಾಮ್ರಾಜ್ಯಮಿರ್ದು ಸ್ವಾತಂತ್ರ್ಯ ಹೀನತೆ ಎನಲ್
ಲಜ್ಜೆಗೇಡಲ್ತೆ? ಚಿನ್ನಂಬೆಳೆದು ದಾರಿದ್ರ್ಯಂ
ಕೈಕೊಂಬರೆ? ಭಾವಿಸಿ ನೋಡು ನಿನ್ನೊಳ್ ರಮಣ!''

''ಜನ್ಮ ಸಂಸ್ಕಾರ ಬಲಿವನ್ನ, ವಿದ್ಯಾಬುದ್ಧಿ
ಗಳಿಸಿ ನಾಗರಿಕತೆ ಬೆಳಸುವನ್ನ ಕಡ್ಡಾಯ
ಸರಿಯಕ್ಕು. ನಂತರಂ ಎಲ್ಲ ಸೊಗಮಪ್ಪುದೆನೆ
ಚಿಂತಿಸದಿರ್.''

ರುಸ್ತುಂ ಕಾಮಾ ಮಡದಿಯೆತ್ತರಂ
ಅರಿತು ನುರಿತವ. ರಾಜಕೀಯ ಅಭಿಪ್ರಾಯಮಂ
ತಿಳಿದವ. ಹಠಸಾಧನೆಯ ಗೊತ್ತು ಗುರಿಗಳ್ ಕರ
ತಲಾಮಲಕಮೆನಲೆಲ್ಲಮಂ ಅರಿತರಿತು ಬಲ್
ಪ್ರೀತಿಯಿಂ ಸಂಜೀವನವನಾರೈದ ಗಂಡುಗಲಿ!
ಸಂಸಾರದ ನಲ್ಮೆಯೊಡೆತನವಂ ಕೈಬಿಡಲ್
ಮನವೊಪ್ಪದ ಘನವಂತ! ಮಡದಿಯಂ ನಾನಾ
ಪರಿಯಲಿ ಒಪ್ಪಿಸಿಕೊಳ್ವ ನೆಚ್ಚು-ಕೆಚ್ಚು ಮನದಲಿ
ಪುರ್ಚುಗೊಂಡಿರೆ ಎಲ್ಲಿಯ ಪಿಂಜರಿಕೆ? ಮುನ್ನಿಯ
ಪ್ರೀತಿ ಸ್ವರ್ಗತುಲ್ಯಂ, ಅಭಿಮತಂ ಬೇರೆಯಿರೆ
ಜೀವನಂ ಕೆಡದೆಂಬ ಪ್ರೇಮಮಯ ಬಾಂಧವ್ಯದ
ಬಿಗಿಗಟ್ಟು ಬಿಗಿಯುತಿರ್ದುದು ದಿನದಿನಂ. ರುಸ್ತುಂ
ಕೆ. ಆರ್. ಕಾಮಾ ಮನಂಗೆಡದೆ ವೃತ್ತಿಯೊಡನೆಯೆ
ರಾಜಕೀಯ-ಸಾಮಾಜಿಕ ರಂಗಗಳಲ್ಲಿ ಮಿಗೆ
ದುಡಿಯುತಿರ್ದಂ. ತಾಂ ವಿವಿಧ ರಂಗದಲಿ ಸೇವೆ
ಸಲ್ಲಿಸುತಿರೆ ಸತಿಯುಂ ಮನಸೇಚ್ಛೆ ಸಲ್ಲಿಸಲಿ
ಎನುತೆ ಹೃದಯಭಾರವಿಳಿಸಿರ್ದನಾ ಕಟ್ಟು
ನಿಟ್ಟಾದ ಕಟ್ಟಾಳು! ಆದೊಡೇಂ, ದೈವಬಲ
ಬೇರೆಯಿರೆ ಜೀವನದ ಮಾರ್ಗಯೋಗಂ ದಿನದಿನ
ಕವಲೊಡೆದು ದೂರ ಸರಿಯುತಿರ್ದುದು ಗಮನಕ್ಕೆ
ಬಾರದವೊಲ್! ಅಂತಿಂತು ಸಾಗಿದುವೆನಿತೊ ದಿನ
ಮಾನಂ. ಪತಿ ರುಸ್ತುಂ ಕೆ. ಆರ್. ಕಾಮಾ ಪಿಡಿದ
ಪಟ್ಟುಬಿಡುವನಲ್ಲಂ. ಆಂಗ್ಲ ಚಕ್ರಾಧಿಪತ್ಯ
ಸ್ವರ್ಗ ಸದೃಶ! ಇಂಗ್ಲಿಷರೆ ಪ್ರತ್ಯಕ್ಷ ದೇವರು!
ಆಂಗ್ಲರ ಜಗತ್ಪ್ರಸಿದ್ಧ ಆಳ್ವಿಕೆಯಂ ಮೀರ್ವ
ಚಾಣಾಕ್ಷರ್ ಈ ಭೂಮಿಯೊಳಿನ್ನುಂ ಪುಟ್ಟಿಯೇ
ಇಲ್ಲಮೆನೆ ಆಂಗ್ಲರೆತ್ತರಕೆ ಏರ್ವೊಡೆ ಇಲ್ಲ
ಯೋಚನೆಯ ಗಾವರಂ? ಎಂಬ ದೃಢಭಾವಂ

ಮನದಲಿರೆ ಚಿತ್ತಕಲ್ಪಂ ಏಗಳುಂ ಕಷ್ಟ-
ಸಂಕಷ್ಟದೂರಂ; ನಿರಾಳಂ; ನಿಶ್ಚಿಂತಂ.
ಯಾವತ್ಕಾಲಂ ಆ ಸತೀಮಣಿಯ ಚಿಂತನಾ
ಶೀಲ ಸೂಕ್ಷ್ಮದೃಷ್ಟಿ ಹರಿಯುತಿರ್ದುದು ರಾಷ್ಟ್ರದ
ಹಣೆಬರೆಹದ ಮೇಲೆ. ಸಹಿಸಲಾಗದ ತೀವ್ರ
ಬಡತನ, ಅಸನ-ವಸನ-ವಸತಿಗಳ ಭಯಂಕರ
ದಾರಿದ್ರ್ಯ; ಸಕಲ ವಿದ್ಯಾದಾರಿದ್ರ್ಯ; ವಿಜ್ಞಾನ
ದಾರಿದ್ರ್ಯಗಳ ಮಹಾ ಸಂಘಂ! ಕಾರುಣ್ಯ
ಪೂರ್ಣ ಚಿತ್ತಾರ ಕಂಬನಿ ತರಿಪನಿತು ಘೋರ!
ಲೋಕದೊಳ್ ಪರಮ ಪುಣ್ಯಭೂಮಿ ಭಾರತವರ್ಷ
ಎಂಬೊಂದು ಘನ ಕೀರ್ತಿವೆತ್ತ ಈ ರಾಷ್ಟ್ರಮಂ
ಇಂದು ಆವಾವ ಮಾನದಂಡಗಳಿಂದಳೆದೊಡಂ
ಕಣ್ಗೆ ಕಾಂಬುವ ಮೊತ್ತ ದಾಸ್ಯ ಜೀವನ ಚಿತ್ರ.
ಆತ್ಮಶ್ರೀವಿದೂರರಪ್ಪ ಆಂಗ್ಲರ ಕೈಯಲ್ಲಿ
ದಿವ್ಯ ಭವಿಷ್ಯಮಂ ಅಡವಿಟ್ಟು ನೆತ್ತರಾರಿದ
ಬದುಕು ದಾರಿದ್ರ್ಯ ದೇವತೆಯ ಕೈಕೂಸು! ಈ
ರಾಷ್ಟ್ರ ಆಂಗ್ಲರಿರುವನ್ನ ಭವ್ಯ ಭವಿಷ್ಯಮಂ
ಕಾಣದೈ. ಶೃಂಖಲಾಬದ್ಧ ಭಾರತ ಜನನಿ
ಏಂಗೈದಪಳ್? ಶೃಂಖಲೆಯಂ ಕಿತ್ತೊಗೆಯದೆಂತು
ಉದ್ಧಾರಮಪ್ಪುದೆಮ್ಮ ರಾಷ್ಟ್ರ? ಪರಾಕ್ರಾಂತ
ಜೀವನಂ ನರಳುತಿರೆ ಸಾಧನಾ ಸೌಕರ್ಯಂ
ಇನಿತಿಲ್ಲದೊಲ್, ಮುಕ್ತಿ ಮಾರ್ಗಕೆಲ್ಲಿ ನಿಜಗತಿ?
ಹಾ....! ಸಂಜೀವನದಾಸೆ ದೂರಾತಿದೂರಮೆನೆ
ಈ ದೇಹದ ನೆತ್ತರಿನ ಪ್ರತಿ ಕಣಕಣಮಂ
ಭಾರತಿಯ ಪದತಲಕೆ ಭಕ್ತಿಯಿಂ ಚೆಲ್ಲದಿರೆ
ಸ್ವಾತಂತ್ರ್ಯ ಕನ್ನಡಿಯ ಹಿರಿಗಂಟು! ರಾಷ್ಟ್ರೀಯ
ಉತ್ಪತ್ತಿಯೊಳ್ ಆಂಗ್ಲರಿಗೆ ಸಿಂಹಪಾಲೆನಲ್ .
ಇಂದು ಸ್ವಾತಂತ್ರ್ಯವೊಂದೆ ಪರಿಪುಷ್ಟಿ ಮಂತ್ರಂ!

ಇಂ ಬುದ್ಧಿ ಜೀವಿಗಳ್ ಕೈಕಟ್ಟಿ ಕುಳ್ಳಿದೊಡೆ
ಜಸಮಿಲ್ಲಮೆಂದೆಂದು ಸ್ವಾತಂತ್ರ್ಯಮಿಲ್ಲದೆಯೆ
ಲೋಕಮಾನ್ಯತೆ-ಗೌರವವಿದೂರಂ. ಭರತಭೂಮಿ
ಮಹಾನ್‌ರಾಷ್ಟ್ರ! ವೇದಾಂತ ಪರಿಮಳಮಂ ವಿಶ್ವ
ಜಗತ್ತಿಗೆ ಪ್ರಸರಿಪ ಸಾಂಸ್ಕೃತಿಕ ದೇವತಾ
ಮಂದಿರ! ಮತ್ತೇಂ ಗುಲಾಮೀಪದಂ? ಛೀ! ಛೀ!
ಮಾನಗೇಡು! ಲಜ್ಜೆಗೇಡು! ಎನುತೆ ಮನಮಥಿಸಿ
ತನ್ನೊಳ್ ಕೆಚ್ಚಿನ ಕಿಡಿಯೊಲುಜ್ವಲಿಸಿ ಯೋಗದಿಂ
ಜಾನದಿಂ ಬಗೆಗಣ್ಣಿಂ ನೋಡಿದಳ್ ಭಾರತ
ಭೂಮಿಯಂ. ಏಂ ಸಂಮೃದ್ಧಮಾ ಸಮಸ್ತ ಭೂ
ವಲಯ ವಿಸ್ತಾರಂ! ಗಿರಿ, ವನ, ನದಿ, ವಾರ್ಧಿಗಳ
ದಿವ್ಯ ಸಂಗಂ! ಪ್ರಕೃತಿದತ್ತ ಸಕಲತರ
ಸೌಭಾಗ್ಯ ವಿಶೇಷಂ! ಮೇಣ್ ದೈವ ಭಕ್ತಿಯಿಂ
ಧರ್ಮಭೀರುತೆಯಿಂ ಪರಿಶೋಭೀ ಜನಸ್ತೋಮ!
"ಓ....! ಇಂತು ಪುಣ್ಯಭೂಮಿಯೈಸಿದ ಭಾರತಿಗೆ
ಆಪನಿತು ಸೇವೆಗೈವೆಂ! ಭಾರತ ಜನನಿಯ
ಸ್ವಾತಂತ್ರ್ಯಮೆನ್ನ ಗುರಿ! ಮೇಣ್ ಭಾರತೀಯರ
ಸಂಜೀವನ ಪ್ರಕಾಶಮೆನ್ನಯ ನಿಜ ಉಸಿರ್!
ಜೀವನೀಯ ಪ್ರಕಾಂಡ ಕಾಂಡದಲಿ ನರಳುತ
ಸೌದೆಯಂ ಒಲೆಯೊಳಿಟ್ಟು ಅಗ್ಗಿಯನೂದಿಯೂದಿ
ಉರಿಸಿ, ವರ ಆತ್ಮ ಜ್ಯೋತಿಯಲಕ್ಷಿಪ ಮಂದಮತಿ
ಆನಲ್ತು!" ಎನಲಾಗಳಿಗೆಯೊಳ್ ಹೃದಯ ಬನದ
ಪಕ್ಷಿಯುಂ ಸಾನಂದದಿಂದುಲಿದುದಿಂತು "ಎಲೆ,
ನೀರೆ! ಭಾರತ ಮಾತೆಯ ಶೃಂಖಲೆಯಗಳಚದೆ
ಬುದ್ಧಿಮಾನ್ಯರಿಗಿಲ್ಲ ವಿಶ್ರಾಂತಿ ! ಪ್ರಾಣಮಂ
ಪಣವಿಟ್ಟು ಹೋರಾಡು! ಕೈವಿಡದೆ ಹೋರಾಡು!
"ಹೇ ಭಗವನ್ ಎಂಥ ಸಮಯೋಚಿತ ಉಪದೇಶ!
ಏಂ ಮೊಳಗು? ಹೇ, ತಾಯಿ! ಭಾರತೀ! ನಿನ್ನಪದ

ಸೇವೆಯೆನ್ನ ಗುರಿ! ಈ ಸಂಸಾರ ಬಂಧದೊಳ್
ಆನಿನ್ನಿರಲಾರೆ! ಎನುತೆ ದೃಢ ಸಂಕಲ್ಪ
ಗೈದಳ್. ಅದೆ ಚಣದಲಿ ಸರ್ವತೋಮುಖೀ ನವ
ಜೀವನದ ಚಿತ್ರ ಅಕ್ಷಿಪಟಲದಲಿ ಸುಳಿದಾಡೆ,
ಪತಿ ರುಸ್ತುಂ ಅನುರೂಪ ವ್ಯಕ್ತಿ. ಸುಂದರ ಬಾಳು?
ಎಂಬಾಶೆಯಾ ಪಾಶ ಸುತ್ತಮುತ್ತ ಸುಳಿಯುತ
ಮನವ ಸೆಳೆಯಲೆಳಸಿದೊಡಂ ಪಿಂಜರಿಯದೆಯೆ
ರಾಷ್ಟ್ರನಿಷ್ಠೆ ಜೀವನನಿಷ್ಠೆಯಿಂದತಿವಿರಿದು.
ರಾಷ್ಟ್ರೋ ರಕ್ಷತಿ ರಕ್ಷಿತಃ! ರಾಷ್ಟ್ರೀಯ ಜೀವನ
ಸುಂದರಂ ಮಮ ಜೀವನ ಬಂಧುರಂ!'' ಎಂದಳಾ
ಲಲನೆ ಭಾವೋದ್ವೇಗದಿಂ ನವಿರ್ ನಿಮಿರುವೊಲ್!
ಆಗಳ್ ದಡದಡ ಮೆಟ್ಟಿಲೇರಿ ಮನೆಮೇಗಣ
ಬಿಸಿಲ್ ಮಚ್ಚಿನಲಿ ನಿಂದು ಪರಿಸರದ ಬೃಹದ್
ಪರಿದೃಶ್ಯಮಾನ ಸೌಂದರ್ಯ ವಾರಾಶಿಯಲಿ
ಹೃನ್ಮನಂ ನೆಟ್ಟು ಪಕ್ಷಿನೋಟ ಬೀರಿದಳ್! ದೂರ
ಸೀಮಾ ಕ್ಷೇತ್ರದಲಿ ಸಾಗರ ನೀಲಿಯಂ ಗಗನ
ನೀಲಿ ತಬ್ಬಿ ಮುದ್ದಿಡುವುದೋ ಎನಲ್ಕೆ ಸೀಮಾ
ಸಾಯುಜ್ಯಂ ರಾಗಾರುಣತಾನಂ ಮೀಂಟಿದೊಲ್
ಮನಮೋಹಕಂ! ಆಹಾ ಏಂ! ನೈಸರ್ಗಿಕ ಸತ್ಯ
ಸಂವಿಧಾನಂ!
ಆ ರಮಣೀಯ ರಸಾನಂದ
ಸುಧಾಸೂತಿಯಂ ನೋಡುತಿರೆಯಿರೆ ಅಂಗನೆಯ
ಹೃದಯಾಬ್ಧಿ ತುಂಬಿ ತುಳುಕಿದುದು ಅಮಿತೋತ್ಸಾಹ
ಗಾಂಭೀರ್ಯದಿಂ. ಕೆಲ ಪದಂ ಮಿಣ್ಣನುರುಳ್ದುದು
ತನಗರಿಯದವೊಲ್. ಚಿಂತಾಭಾರದಲಿ ನಿಂದಳ್
ನೀರೆ. ನೋಟಮಂ ಸೆರೆವಿಡಿದುದು ಮಹಾವಾರ್ಧಿಯ
ಅದ್ಭುತ ಅಲೆಗಳೋಳಿ. ಧುಮುಧುಮಿಸಿ ಭೋರ್ಗರೆದು
ಮುನ್ನುಗ್ಗಿ ಅಲೆಯೇರಿ ಅಲೆಯಿಳಿದು ಬೆಳ್ನೊರೆಯಂ

ಬುಳಬುಳನೆ ರಾಚುತ್ತ ತೀರಮಂ ಮುದ್ದಿಡುವ
ಮಹಾ ಉಬ್ಬರಂ ರುದ್ರರಮಣೀಯಂ! ಮತ್ತಾ
ಸಾಗರಕೆ ಹೆಗಲೆಣೆಯೊ ಎನಲ್ ಇತ್ತಲಿತ್ತಲ್
ನಗರಿಯುಂ ತುಂಬಿ ತುಳುಕುವ ಮಹಾ ಜನರಾಶಿ!
ಬಡತನದ ಪ್ರತೀಕಮಪ್ಪ ದಯನೀಯಮಾ
ದೀನದಲಿತ ಜನಸಾಗರ! ದೇಶದಾದ್ಯಂತ
ಅಸ್ವತಂತ್ರದಗ್ಗಿಯಲಿ ಸುಟ್ಟುರಿದು ಕರಿಮುರಿ
ಗೊಂಡ ಘೋರಾತಿಘೋರ ದಾರಿದ್ರ್ಯ ವೈಭವಂ!
        ಮುಂಬೈ ನಗರದಲಿ ಆಂಗ್ಲೇಯ ಅಧಿಕಾರಿಗಳ್
ರಾಜಮಾರ್ಗಗಳಲಿ ಅತುಲನೀಯ ಠೀವಿಯಿಂ
ದರ್ಪದಿಂ ಠೀಕುಟಾಕಿನ ಮೋಜಿನಿಂ ಭವ್ಯ
ವಾಹನಗಳಲಿ ಮೆರೆದಪರ್ ನಿಚ್ಚ ದೇಶಿಯ
ಹುಂಬರ ಒಡಲ್ಗಿಚ್ಚಿಗೆ ನೆಯ್ಯನೆರೆವ ತೆರಂ!
ಮೇಣವರ ದೇಶೀಯ ಸಿರಿವಂತ ಗೆಣೆಯರುಂ
ಆಂಗ್ಲೇಯರನುಕರಣೆಯಿಂ ಮೈಮರೆತು ರಾಷ್ಟ್ರ
ಸಂಕಟಂ ಕಡೆಗಣಿಸಿ ಬಾಳ್ವರ್ಗೆ ಕೊರಮಿಲ್ಲ;
ಮತ್ತಂ ಭರ್ರನೆ ಪರಿವ ವಾಹನಗಳೊಡನೆ ತಾಂ
ಸ್ಪರ್ಧೆಗಿಳಿದುದೊ ಎನಲ್ ವೀಥಿವೀಥಿಗಳಲ್ಲಿ
ನಡೆದಾಡುವ ಜನರಿಂದೆ ಇರುವೆಗಳ ಸಾಲಂ
ನೆನಪಿಗೆ ತರುವೊಲಿರ್ದುದು ಜನಜಂಗುಳಿ ಚಿತ್ರಂ!
        ಆಂಗ್ಲ ಮಹನೀಯರ್ ಮಹಲುಗಳಲಿ ಅತ್ಯಂತ
ವೈಭವೋಪೇತ ವಾಸ್ತವ್ಯದಲಿರೆ ದೇಶೀಯ
ದೀನದಲಿತರ್ ಮನೆಯಲ್ಲದ ಮನೆಯೆನಿಪ ಸೋಗೆ
ಗುಡಿಸಿಲಲಿ ಬದುಕಿ ಕೊಚ್ಚೆಯ ದುರ್ವಾಸನೆಯಂ
ಆಘ್ರಾಣಿಪರ್ ಕ್ರಿಮಿಕೀಟಗಳ ಮಾಳ್ಕೆಯಲಿ.
        ಮೇಡಂ ಕಾಮಾ ಕೆಲಪದಂ ನಿಂತಳಲ್ಲಿ ಮೈ
ಮರವಟ್ಟವೊಲ್. ಒಡಲ ಬಳ್ಳಿ ಸುಟ್ಟು ಕರಿಮುರಿ
ಯಾದವೊಲ್ ಸಂಕಟದಲಿ ನರಳುತಿರೆ ಮಂಗಳೆ

ಚಿಂತಿಸಿದಳೇಕಾಂಗಿನಿ. ಭಾರತ ಮಾತೆಯಂ
ಆಂಗ್ಲರಾಳ್ವಿಕೆಯಿಂದೆ ಬಿಡುತೆ ಮಾಳ್ಪೊಡೆಮ್ಮಯ
ಜನಕೋಟಿ ಒಗ್ಗಟ್ಟಿನಿಂದೆದುರ್ಚಿದಲ್ಲದೆ
ಗತಿಯಿಲ್ಲಮೆನರೆಲ್ಲರೊಗ್ಗಿನಿಂ ಎದುರ್ವೆತ್ತು
ರಣಹೂಡದಿರ್ದೊಡೆಂದಿಗುಂ ಈ ಗುಲಾಮೀ
ಪದವೆಮಗೆ ಕಟ್ಟಿಟ್ಟ ಬುತ್ತಿಯೆಂಬುದು ದಿಟಂ!
ಎಂಬೊಂದು ಘನಚಿಂತೆ ವರಚಿತ್ತಕಲ್ಪವಮಂ
ಬೊಕ್ಕು ನೆತ್ತರಿನ ಕಣಕಣಮಂ ಕುದಿಕುದಿಸಿತು
ಕಿಚ್ಚಿಟ್ಟು ಉರಿಸಿದೊಲ್. ಆಗಳೇಂ ಭಾಮಿನಿಯ
ಮನೋನಿಶ್ಚಯಂ "ಹಾ! ಇದನರಿತರಿತು ಕಂಡು
ಕಾಣುತುಂ ಸಿಡಿದೇಳದೆ ನೋವುಂಡುದು ದೇಶ
ವಿಶೇಷಂ! ಇಂದು, ಕನ್ಯಾಕುಮಾರಿಯ ದಿವ್ಯ
ಪಾದ ಪಂಕಜದಿಂ ಹಿಮವಂತನ ಪ್ರದೇಶ
ಪ್ರಾಂತ್ಯದವರೆಗಿನ ಭಾರತೀಯರ ಜೀವ ಕಣ
ಕಣಂ ಎಳ್ಚತ್ತು ಸಿಡಿದೆದ್ದು ಕ್ರೂರಾಂಗ್ಲರಂ
ಬೊಗ್ಗು ಬಡಿದು ಪಾರತಂತ್ರ್ಯ ಕಿತ್ತೊಗೆದು ಶಾಂತಿ-
ಶಿಸ್ತು-ಸತ್ಯ-ಧರ್ಮಗಳ ನೇಮದಲಿ ಸ್ವಾತಂತ್ರ್ಯ
ಯಜ್ಞ ನಡೆಸಲಕ್ಕು!"
ಹೃನ್ಮನಗಳ ಘೋಷದಿಂ
ಕೆರಳಿ ಸಿಂಹಿಣಿಯಾದ ಶುಭಗಳಿಗೆಯೊಳ್ ಮಡದಿ
ಕರಗಳಂ ಜೋಡಿಸಿ ಗಗನದೆಡೆಗೆ ಇನಿ ಕೊರಳ್
ಎತ್ತಿ ನೋಡುತ ಭಾವೋದ್ವೇಗದಿಂ ನುಡಿದಳ್,
"ಹೇ! ದೇವಾಧೀದೇವನೆ! ನಿನ್ನ ಸಿರಿ ರಕ್ಷೆಯಿಂ
ಪುಟ್ಟಕ್ರಿಮಿಕೀಟಗಳವೊಲ್ ನರ ಜನ್ಮಮಂ
ವ್ಯರ್ಥವೈಸಲಾರೆ! ತವ ನೇಮದಲಿ ರಾಷ್ಟ್ರದ
ಸ್ವಾತಂತ್ರ್ಯಯಜ್ಞಮಂ ಕೈಕೊಂಬೆ! ದಯೆಗೈದು
ಸರಿದಾರಿ ತೋರ್ಗೈ ಹೇ! ಮಮ ಪ್ರಾಣಪ್ರಿಯ ಬಂಧು!"
ಎದೆಯ ಮೊರೆ ತಂಗಾಳಿಯಲಿ ತೇಲಿ ಆ ದೇವ

ದೇವನ ಪದತಲದಲಿ ಸಮರ್ಪಿತಮಾದವೊಲ್
ಕಿವಿಯ ಸನಿಹದಲಿ ಮೊಳಗಿತೊಂದು ಆತನುವಾಣಿ!
“ಕೇಳ್ ಮಗಳೆ ದಕ್ಷತೆ ವಿಚಕ್ಷಣೆ-ಧೈರ್ಯಸ್ಥೈರ್ಯ
ಪುರುಷ ಸಿಂಹಗಳ ಸ್ವತ್ತಾಗದಿರಲಿ! ಪೆಣ್ತನಕೆ
ಮುಗ್ಧದುಗ್ಧ ಶೃಂಗಾರಕ್ಕಿಳಿಸಿದ ಲೋಗರ್
ಕೀಳ್ಗೈದಪರ್! ನೀನುದ್ಧರಿಸು ಸ್ತ್ರೀವರ್ಗಮಂ!
ನೀನಾಗು ದಾರಿದೀಪ ಮನುಕುಲಕೆ ಮಗಳೆ!”
ಕೇಳ್ದು ಮೈಪುಳಕಗೊಂಡ ಕೋಮಲೆಯಾಗಳ್ತೆ
ಮೆಟ್ಟಿಲಂ ದಡದಡನಿಳಿದು ಬಂದಳ್, ಕೆಳಗಡೆ.
ಆಗಳೇನೆಂಬೆನೊ ವರ ನೀರೆಯ ಮನೋಭವಂ
“ಭಾರತೀಯರುದ್ಧಾರ ಭಾರತೀಯರಿಂದಲೆ!
ಬೃಹತ್ತಮ ಜಗತ್ತಿನ ನಾಗಾಲೋಟಮಂ
ನೋನೋಡಿ ತಂತಮ್ಮ ಆತ್ಮಶೋಧನೆಗೈದು
ಸ್ವಾತಂತ್ರ್ಯ ಚಳವಳಿಯ ಕಾಂಡ ಪ್ರಕಾಂಡದಲಿ
ಮುಳುಗಿ ಸುಟ್ಟು ಪುಟವಿಟ್ಟ ಅಪರಂಜಿಯೆನೆ ನೆರೆ
ತೊಳಗಿ ಬೆಳಗದ ಜೀವನಂ ಪಶು ಜೀವನಮೆ
ಸೈ!” ಮನವುಲಿದುದು ಕೆಚ್ಚು ನೂರಾಗಿ.
ಮುಂಬಯಿ
ನಗರಿಯಂ ಮಾಕಾಳಿಯೊಲ್ ಬಂದೌಂಕಿದ ಪ್ಲೇಗ್
ಮಾರಿಯಿಂ ಕ್ರಿಮಿ ಕೀಟಗಳಿಗಿಂ ಕಡೆಯಾಗಿ
ಸಾಯುತಿತ್ತು ಜನರಾಶಿ! ಮೇಡಂ ಕಾಮಾಳ
ಸಮಯ ಪ್ರಜ್ಞೆ ಅತ್ತ ಹೊರಳಿತು ಹೆಡೆ ಎತ್ತಿರ್ದ
ಪಾಂಬಿನೊಲ್! ತಕ್ಷಣ ಪ್ರಾಥಮಿಕ ಪಾಠಕ್ಕೆನಲ್
ದೈವಮೊದವಿಸಿದ ಸದವಕಾಶಮೆ ಆದಾಗಿರೆ
ಬಿಡುವಳೇಂ ಆ ಲಲಿತೆ? ಪಗಲಿರುಳ್ ರೋಗಿಗಳ
ಸೇವೆಗೈದಳ್ ನಿರ್ಭಯ ನಿರ್ಯೋಜನೆಗಳಿಂದೆ.
ಆಳ್ವವರ ನಿರ್ಲಕ್ಷ್ಯದಲಿ ವಿಜೃಂಭಿಸಿದ
ಮಹಾರೋಗ ಮಾರಿ ಮನೆಮನೆಯಲಿ ಭಯಂಕರ

ಅತಿಥಿಯೈಸಿ ಆತಿಥ್ಯಂಬಡೆದು ತಾಂ ಮೆರೆಯುತಿರೆ
ಮಹಾಸತಿ ನಿಷ್ಠೆಯಿಂ ಬಲ್ಮೆಯಿಂ ಶುಶ್ರೂಷೆ
ನಡೆಸಿರಲ್ ಪ್ಲೇಗ್ ಮಾರಿಯ ದಂಷ್ಟ್ರನಕೆ ಸಿಲ್ಕಿ
ಸಾಯಲಿರ್ದ ರೋಗಿಗಳನೇಕರ್ ಬದುಕಿದರ್
ಮೇಡಂ-ಳ ಪ್ರೇಮ, ಕರುಣೆಗಳ ಅನುಗ್ರಹದಿಂ.
ಆ ಪ್ರಾಥಮಿಕ ಸೇವೆ ಸ್ವಾತಂತ್ರ್ಯ ದಾಹಮಂ
ಜನಕೋಟಿಯಲಿ ಕೆರಳಿಸೆ ಅನುಕೂಲಮಾದೊಡಂ,
ತನ್ವಂಗಿ ಕಾಮಾ ನರಳಿದಳ್ ಪ್ಲೇಗ್ ಮಾರಿಯ
ಕಪಿ ಮುಷ್ಟಿಯಲಿ ಸಿಲ್ಕಿ. ಸೂಕ್ಷ್ಮ ದೇಹ ಪ್ರಕೃತಿ
ನರಳಿ ಬಳಲಿದುದು ಬೇನೆಯಿಂ. ಆದೊಡಾ ವಿಧಿ
ಸಿಂಹಿಣಿಯ ಸನಿಹಕ್ಕೆ ಬರಲಂಜಿದನೊ ಎನಲ್
ಸಿರಿ ಜೀವ ಉಳಿದುದು ಬದುಕಿ. ಸುತ್ತಮುತ್ತಣಂ
ಬಡಜನರ್ ಸಾಯುತಿರೆ ರೋಗದಿಂ ದಿನದಿನಂ
ದೀಪದ ಕುಡಿಗೆತ್ತ ಪುಳುಗಳವೊಲ್ ಪಟಪಟಿಸಿ.
ಎನಿತೊ ಮನೆ ಬರಿದಾಯ್ತು. ಪ್ಲೇಗ್ ಮಾರಿಯಿಂ, ಆ
ನತದೃಷ್ಟ ಶವಗಳಂತ್ಯ ಸಂಸ್ಕಾರದೊಡನೆಯೆ
ಸಾಧ್ಯವಾಗದೆ ಕೊಳೆತು ನಾರಿದ ಪ್ರಸಂಗಕ್ಕೊ
ಕೊರಮಿಲ್ಲಂ! ಸಂಕಟ-ಸಂಕಷ್ಟಗಳ ಕೋಟೆ
ಬಲಿಯುತಿರ್ದುದು ದಿನದಿನಂ. ಪರಮ ಸತಿ ಕಾಮಾ
ಬದುಕಿರ್ದೊಡಂ ಅನಾರೋಗ್ಯ ಮೈಗೊಂಡುದುದು
ಪೆಮ್ಮಾರಿಯೊಲ್. ಆಗಲಾತ್ಮೀಯರ ಬಳಗಂ
ಕಟ್ಟೊತ್ತಾಯದಿಂದವಳಂ ಕಳಿಪಿದರ್ ದೂರ
ಯುರೋಪ್ ಪ್ರಾಂತ್ಯಕೆ.
ತಣ್ಣನೆಯ ತನಿಗಾಳಿ
ಸುಯ್ದುಯ್ದು ಮುದ್ದಿಸುವ ಶೀತಲತೆಯಿಂದೆ ಮೈ
ತಣಿದೊಡಂ ಮನಂ ತಣಿದುದಿಲ್ಲಂ. ಸ್ವದೇಶೀಯರ್
ನಾನಾ ಸಂಕಟಗಳಿಂ ನರಳುತಿರೆ ಬಹುದೆಂತು
ಮನಶ್ಶಾಂತಿ? ತಾನೆಲ್ಲೆಲ್ಲಿ ಸುತ್ತಾಡಿದೊಡಲ್ಲಿ

ದೇಶೀಯ ಮುಖಂಡರಂ ಕಂಡು ಭಾರತೀಯರ
ನರಕ ಸದೃಶ ಜೀವನ ಪರಿಸ್ಥಿತಿಯನೊರೆದು
ಆಂಗ್ಲರ ದುರಾಡಳಿತಮಂ ಮೇಣಲ್ಲಿನ ಸಕಲ
ಸಂಪತ್ತಂ ಸೂರೆಗೊಂಬುವ ಹೀನ ವೃತ್ತಿಯಿಂ
ಬಡತನವನಿನ್ನಿನಿಸು ಬಡತನದಾ ರೇಖೆಯಡಿ
ತಳ್ಳುತಿದೆ ಮಾನವೀಯತೆಗೆ ಮಿತ್ತೊ ಎನಲ್!
ಎನುತೆ ಕಾಮಾ ಆತಂಕಿತ ವಾಣಿಯಲಿ ಪದರ
ಪದರವಾಗಿ ಮುಂದಿಡೆ, ಎಲ್ಲ ಮಿತ್ರರ ಸ್ನೇಹ
ಸಹಕಾರ ಸಹಾನುಭೂತಿಗಳ ಸೊಲ್ಲು ಸಸ್ನೇಹ
ಪ್ರೇಮಗಳ ಅನುರಾಗದಿಂ ಪೊಣ್ಮೆ ಆನಂದ
ಪುಳಕಮಾದುದು ಮನಂ. ಯುರೋಪಿನ ಅನೇಕ
ರಾಜ್ಯಗಳ ಪ್ರವಾಸಮಂ ಮುಗಿರ್ಚಿ ತಾನೈದಳ್
ಕಾಮಾ ಸಾವಿರದೊಂಭೈನೂರೈದರಲಿ ಲಂಡನ್
ಮಹಾ ನಗರಿಗೆ. ಇಂಗ್ಲೆಂಡ್ ರಾಜ್ಯದ ರಾಜಧಾನಿ!
ನಾಗರಿಕ ಪ್ರಪಂಚದ ನಾಗರಿಕ ಧಾತ್ರೀ!
ಪ್ರಭುತ್ವ-ದರ್ಪದಾಳ್ವಿಕೆಯ ಪ್ರಭುತ್ವದಾ
ರಾಜಧಾನಿ! ತನ್ನ ಚಟುವಟಿಕೆಗೆ ಅಜ್ಞಾತ
ವಾಸಮಲ್ಲದೆ ನಿಜ ಬೆಳಕು ಇಲ್ಲವೇ ಇಲ್ಲಂ!
ಮೇಡಂ ಕಾಮಾ ಅಜ್ಞಾತ ಕಾರಸ್ಥಾನಮಂ
ಕಂಡುಕೊಳಲ್ ಅಲ್ಲಿರ್ದ ಭಾರತೀಯರಂ ತಾಂ
ಸಂಧಿಸಿ ನಿರೂಪಿಸಿದಳ್ ಕಾರ್ಯಕ್ರಮಗಳಂ!
        ಯುರೋಪಿನಲಿ ಮೂರು ವರ್ಷಮಾನಂಗಳಂ
ಕಳೆದಿರ್ದೊಡಂ ತನ್ನಂಗಿಯ ದೇಹ ಪ್ರಕೃತಿಯು
ಮುನ್ನಿನಾರೋಗ್ಯಮಿನಿತು ಮೈಗೊಳದೆ ನಿಶ್ಶಕ್ತಿ
ಕಾವಳಿಸಿರೆ ಬೆಂಬಿಡದೆ, ಆಸ್ಪತ್ರೆಗೆ ತಾನೈದಳ್.
ಕರುಣಾಮಯ ವೈದ್ಯ ವೃಂದ ಅವಳ ದೈಹಿಕ
ಪರೀಕ್ಷೆಯಂ ನಡೆಸಿ ಶಸ್ತ್ರ ಚಿಕಿತ್ಸೆ ಕೈಕೊಂಡರ್.
        ಆ ಮಹತ್ತರ ಚಿಕಿತ್ಸೆಯ ಬಳಿಕ ಮೆಲುಮೆಲ್ಲನೆ
ಸಚೇತನಗೊಳುತೆ ಮುನ್ನಿನುತ್ತಮ ಶಕ್ತಿಯುಂ

ಮೈಗೂಡಿ ಆರೋಗ್ಯ ಭಾಗ್ಯಂ ಒದವಿ ಬರಲ್
ಕಾಲ ಕ್ರಮದೊಳ್ ಹಾರುವ ಹಕ್ಕಿಯಾದಳಾ
ಮೇಡಂ ಕಾಮಾ! ಪಗಲಿರುಳ್ ಶ್ರಮಿಸಿದೊಡಂ
ಮುಗಿಯದಾ ದೇಶಕಾರ್ಯ್ಯಂ. ಏಗಳುಂ ಗುಪ್ತ
ಕಾರ್ಯಾಗಾರದಲಿ ದೇಶೀಯರ್ಗ್ಗೆ ದಿನದಿನಂ
ಸಲಹೆ ಸಹಕಾರಗಳನಿತ್ತು ಭಾರತೀಯರ
ಮನಃಪ್ರಾಣಗಳ ಚೋದಿಸುತಿರ್ದಳ್ ಸಿಂಹಿಣಿ!
ಲಂಡನ್ ನಿವಾಸಿ ಭಾರತೀಯ ಮುಖಂಡರಪ್ಪ
ದಾದಾಭಾಯಿ ನವರೋಜಿಯ ಕಾರ್ಯದರ್ಶಿತ್ವ
ಪಾತ್ರಮಂ ನಿರ್ವಹಿಸಿದಳ್ ಗುಪ್ತ ರೀತಿಯಲಿ.
ಆಗಳಾ ಭಾರತೀಯ ಪ್ರಮುಖರ ಪರಿಚಯ
ಮೇಣ್ ಸ್ನೇಹಾಚಾರ ಮುಂದಿನ ಮಹಾ ಕಾರ್ಯ
ನಿರ್ವಹಣೆಯ ಭಾರಕೆ ತಾನಾದುದು ಅನುಪಮ
ಬಿತ್ತು. ಗುಪ್ತ ಪತ್ರ ವ್ಯವಹಾರಗಳಿಂ ನಿಚ್ಚ
ವಿಚಾರ ವಿನಿಮಯದಿಂ ಭಾರತದ ಸಂಕಷ್ಟ
ಸಂಕಟಗಳ ಪರಿಜ್ಞಾನ ಎರ್ದೆಗುಡಿಯಲಿ ಮೃಗ
ಶಾಬಕದವೊಲ್ ಗದ್ದಲವೆಬ್ಬಿಸುತಿರೆ ಕಿಂಚಿತ್
ಶಾಂತಿಗೆ ಅವಕಾಶಂ ಇಲ್ಲಮಾಯ್ತು ಮಡದಿಗೆ.
ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯ ಚೋದನೆಗೆ
ಬಹುಮೂಲ್ಯ ಸಲಹೆಗಳ ವಿನಿಮಯಂ ಪಗಲಿರುಳ್
ನಡೆದತ್ತು ದೇಶ ನಿಷ್ಠೆಯಿಂ. ಆಗಳ್ ಚಂಡ
ಪ್ರಚಂಡ ಯೋಗಿನಿಗೆ ನಾಲ್ದೆಸೆಯ ಬೆಂಬಲಂ
ಬಂದೊದವಿ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯು
ದಿನದಿನಂ ಮುಂಬೆಳೆದುದು ರಸಗೊಬ್ಬರವುಂಡ
ಕದಳಿಯೊಲ್. ದೇಶೀಯರ ಭಂಗಬವಣೆಗಳಂ
ಕೇಳಿಕೇಳಿ ಮನಃಚಿತ್ತಗಳ್ ಕುದಿಯುತಿರೆ ಕಿಡಿ
ಇಟ್ಟ ಎಣ್ಣೆಯೊಲ್; ಗುಪ್ತ ಕಾರ್ಯಾಗಾರದಾ
ಶಾಖೋಪಶಾಖೆಗಳ್ ಹರೆಗೈ ಚಾಚಿ ಚಾಚಿ

ಬೆಳೆಯತೊಡಗಿತು ದಿನದಿನಂ. ಮತ್ತಾ ಸುದ್ದಿಯುಂ
ಭಾರತದ ರಾಜಕೀಯ ಮುತ್ಸದ್ದಿಗಳ ಕಿವಿ
ಮುಟ್ಟಿ ಚೋದಿಸುತಿರ್ದುದು ಬಿಸಿನೆತ್ತರ್ ಕುದಿಸಿ,
ಮೇಣ್ ಭಾರತ ಸ್ವಾತಂತ್ರ್ಯ ಚಳವಳಿಯಲಿ ಎರ್ದೆ
ಗೊಟ್ಟು ಜೀವತೆತ್ತ ಹುತಾತ್ಮರ ಬಡಕುಟುಂಬ
ಕೋಟಿಗಳ ಸಂಕಷ್ಟ ಪರಿಹಾರಕೆಂದಲ್ಲಲ್ಲಿ
ಅರ್ಥಮಂ ಸಂಗ್ರಹಿಸಿ ಪರಮಾರ್ಥ ಸಿಂಚನೆಯ
ನೇಮದಲಿ ಗುಪ್ತಗತಿಯಿಂ ಕಳುಹಿಸುತಿರ್ದಳ್
ಭಾರತಕೆ, ಅಹಹ! ಏಂ ಧೈರ್ಯ ಸ್ಥೈರ್ಯದ ಗಣಿಯೊ,
ಬ್ರಿಟಿಷರ ಹದ್ದುಗಣ್ಣಿನ ಮುಂದೆ ನಾಟಕದ
ಸತ್ಪಾತ್ರವಹಿಸಲ್! ವಿದೇಶಿ ನೇಹಿಗರವಳ
ಪರಮ ಬುದ್ಧಿವಂತಿಕೆಯಂ ನೆಚ್ಚಿ ಮೆಚ್ಚಿ ಅತಿ
ಆಸ್ಥೆ ವಹಿಸಿ ಸರ್ವತ್ರ ಬೆಂಬಲಿಸಿದರ್ ದೇಶ
ನಿಷ್ಠೆಯಾ ಸಂಯೋಜನೆಗೆ. ಆಗಾಗಳ್ ಕೂಡಿ
ನಿರ್ಣಯಿಸುತಿರ್ದರ್ ರಾಷ್ಟ್ರಸ್ವಾತಂತ್ರ್ಯ ಕಾರ್ಯಂ.
ಓವೊ! ಭಾರತದಾದ್ಯಂತ ರಾಜಕೀಯ ರಂಗದ
ಮಹಾ ದಾಂಧಲೆ! ಎಲ್ಲಿ, ಯಾವೆಡೆಯಲಿ ಕೇಳಿದೊಡೆ
ಘೋರಾತಿಘೋರಮಪ್ಪ ಸುದ್ದಿಯ ಸಾಹಿತ್ಯ!
ಆಂಗ್ಲ ಪ್ರಭುತ್ವ ನಿಚ್ಚ ನಿರಾಯಧೀ ಭಾರತ
ದೇಶೀಯ ಜನರ್ಗತಿ ದೌರ್ಜನ್ಯದುತ್ತರ
ನೀಡುತಿರ್ದುದು ನಿರ್ದಯೆ ನಿರ್ದಾಕ್ಷಿಣ್ಯದಿಂ.
        ಅಂತೊಂದು ಭಯಾನಕ ಪ್ರಕರಣದೊಳ್ ದೂರ
ವಿದೇಶದಲಿ ಸೆರೆ ಸಿಲ್ಕಿದ ಸ್ವಾತಂತ್ರ್ಯವೀರ
ಸಾವರ್‌ಕರ್ ಮಹೋದಯರಂ ಘೋರಮೆನಿಪ್ಪ
ರಾಜದ್ರೋಹವೆಸಗಿದ ಮಹಾಪರಾಧಿಯೈಸಿ
ವಿಚಾರಣೆಗೆಂದು ಭಾರತದತ್ತ ಒಯುತಿತ್ತು
ಹಡಗು ಮಾರಿಯಾ! ಆಗಳಾ ಯೋಜಿತ ಸುದ್ದಿ
ಮಂತ್ರ ಮಾಟದೊಳ್ ಕರ್ಣಾಕರ್ಣಿಯೈಸಿವಂದ

ಗಳಿಗೆಯೊಳೆ ತಂತಿ ಸುದ್ದಿ ತಟ್ಟನೆ ಮುಟ್ಟಿದುದು
ಮೇಡಂ ಕಾಮಳ ಕರ್ಣ ಗಹ್ವರಮಂ ಕರ್ಬುನದ
ಕಾದ ರಸದೊಲ್! ಆ ಚಣಂ ಮೇಡಂ ಕಾಮಾ
ತನ್ನ ಮಿಂಚಿನ ಕಾರ್ಯಸಾಧನಾಭಂಗಿಯಲಿ
ಸಜ್ಜಾದಳ್. ಆ ಧೂರ್ತಾಂಗ್ಲರ ಚೈತ್ರ ಭಾರತ
ಧಾತ್ರಿಯಂ ಮುಟ್ವ ಮುನ್ನಮೆ ಮಹಾವೀರನಂ
ಆಂಗ್ಲರ ಸೆರೆಯಿಂ ಯುಕ್ತಿಯಲಿ ಬಿಡಿಸಿಕೊಂಬುವ
ಸಂಚು ನಡೆಸಿರ್ದ ಕಾಮಾ ತನ್ನ ಗೆಣೆಯರಪ್ಪ
ಪರಮ ದೇಶ ಭಕ್ತರೊಡಂ ಹೊಂಚಿ ಕಾದಿರ್ದಳ್
ಮಹಾ ಸಾಗರ ತೀರದಲಿ. ಮೇಲೆ ರಣರಣಿಪ
ಸುಡುಬಿಸಿಲ್. ಆವಗಳಿಗೆಯಲಿ ಹಡಗು ಇತ್ತಲ್
ಬಂದಪುದೆಂಬರಿವಿನಿತಿಲ್ಲಂ. ಸಾವರ್‌ಕರ್ ಪರಮ
ಸಾಸಿಯಾದೊಡಂ ಆಂಗ್ಲರೊಡಂ ಸೆಣಸಿ ಹೋರಿ
ಸೆರೆಮನೆಯ ಅತಿಥಿಯಾಗಿ ಶಕ್ತಿಯಳಿದು ಸೋತು
ಸುಣ್ಣಮಾದ ಜೀವವೆನಲೆಂತು ಸಾಗರ ವೀಸಿ
ಬಂದಪರೊ ಎಂದೆಂಬ ಆಸಂಕೆ ಕ್ರಿಮಿಯೊಳ್
ಕೊರೆಯುತಿರೆ ಮನಂ ಮೇಡಂ ಕಾಮಾ ಪಲವೊಂದು
ದೇವರಂ ನೆನೆದಳ್ ಮನದಿ. ಅತ್ತಲಾ ಸುದ್ದಿ
ವೀರ ಸಾವರ್‌ಕರ್ಗೆ ತಿಳಿದತ್ತು; ತಾನೆಲ್ಲಿ
ಯಾವೆಡೆಯೊಳ್ ತೆಕ್ಕನೆ ಮಹಾವಾರ್ಧಿಗೆ ಧುಮುಕಿ
ಆಂಗ್ಲರಂ ಕಣ್ಮರೆಸಿ ಈಸಿ ಧಾವಿಸಿ ದಡಕೆ
ಪೋಕುಮೆಂದು! ಆಹಾ! ಎಂತಪ್ಪ ಸಾಸಮೋ!
ಇನ್ನೆಂತಪ್ಪ ಧೈರ್ಯಮೋ! ಆ ಪರಮ ವೀರ
ಸಾವರ್‌ಕರ್-ಗೆ. ಎಡೆವಿಡದೆ ಮೈಲಿ ಮೈಲಿ ಈಸಿ
ಬೃಹದ್ ಅಲೆಗಳೊಡನೆ ಹೋರಾಡಿ ಪಿಂತಿಕ್ಕಿ
ತೀರದ ವಿಶಿಷ್ಟ ತಾಣಮಂ ಸೇರ್ವೆನೆಂಬೊಂದು
ಧೈರ್ಯವಾರ್ತೆ ಸಾಮಾನ್ಯಮೆ? ಉಸಿರ್ ಬಿಗಿ ಹಿಡಿದು
ಕಾದಿರ್ದ ಮೇಡಂ ಕಾಮಾಳ ಜೀವ ಚಿಮ್ಮುವ

ಮಾಳ್ಕೆಯಲಿ ತುಡಿಯುತಿರೆ ನೋನೋಳ್ಪ ಕಣ್ಮಂತೆ
ವೀರಸಾವರ್‌ಕರ್ ಮುಳುಮುಳುಗೇಳುತ ಈಸಿ
ಸೇರಿದರ್ ತೀರಮಂ! ಮೇಣ್ ಈಸಿ ಬಳಲ್ದು
ಬೆಂಡಾಗಿ ಮೇಲುಸಿರ್ ಬಿಡುತಲಲ್ಲೆ ಕುಸಿದರ್.
ಏಂ ಈಸಿ ಬಂದಪರೊ ಅಲ್ಲೆ ಮುಳುಗಿ ಪೋದಪರೊ
ಎಂದೆಂಬಾ ಸಂಕೆಯಿಂ ನಲುಗಿರ್ದ ಪೆಣ್ಮನಕೆ
ಚಿತ್ತ ಬೆಪ್ಪಾಗುವನ್ನ ವೀರ ಸಾವರ್‌ಕರ್
ದೃಷ್ಟಿಗೆತ್ತರ್ ಸೋಲ್ದು ಸುಣ್ಣವಾಗಿ! ಮೇಣ್
ಜೇಲಿನ ಅತಿಥಿಯ್ಯೆಸಿ ನೆತ್ತರಾರಿರ್ದ ಮೂರ್ತಿ
ಬಹುಕಾಲದಿಂ ಸ್ವಾತಂತ್ರ್ಯ ಚಳವಳಿಯಲಿ ನಿಂದು
ಸ್ವಸ್ವಾಸ್ಥ್ಯಮಂ ನಿರ್ಲಕ್ಷಿಸಿ ದೇಶ ಸೇವೆಯಲಿ
ಮನವಿಟ್ಟ ವ್ಯಕ್ತಿ! ಎನಲ್ಕೆ ಎನಿತಾಶ್ಚರ್ಯಮೋ
ಬೃಹದ್ಸಾಗರಮಂ ಕಡು ಧೈರ್ಯದೊಳೀಸಿ ದಡ
ಸೇರ್ದುದು! ಒಡನೆ ತಲೆಯ ಭಾರವಿಳಿಸಿದವೋಲ್
ನೇಹಿಗರೊಡಂ ಅವರನೆತ್ತಿ ವಾಹನಕೊಯ್ದು
ಪೊರವೊಂಟಳ್ ತನ್ನಯ ಕುಟಿಗಭಿಮುಖವಾಗಿ!
        ಹಾ, ಅಲ್ಲಿಗೆ ಮುಗಿದುದೇಂ ಪ್ರಕಾಂಡಕಾಂಡಂ?
ಪಿಂಬಾಲಿಸಿದ ಧೂರ್ತರ್ ಬಿಡದೆ ಸಾವರ್‌ಕರಂ
ಸೆರೆವಿಡಿದರ್ ಇನಿತು ದಯ ದಾಕ್ಷಿಣ್ಯಮಿಲ್ಲದೆ!
ಬಿಡುಗಡೆಯ ಆನಂದ ಕ್ಷಣಭಂಗುರಮಾಯ್ತು!
ಮೇಡಂ ಕಾಮಾ ಕೈಗೂಡದ ಸಾಸಮಂ ನೆನೆದು
ನೊಂದು ನೋಯುತಿರೆ ಮನದಿ 'ಮಾಸಾಸಂ ಕನ್ನಡಿ
ಗಂಟಾಯ್ತೆ?' ಎನುತೆ ನರಳಿತು ಒಡಲ್ ಬಳ್ಳಿಗುಡಿ.
ಆಗಳಾ ನಿಲುಗನ್ನಡಿಯೊಳ್ ಕಾಣ್ಬ ತನ್ನಯ
ಪ್ರತಿಬಿಂಬ ಕೂಗಿ ನುಡಿಯಿತು ''ಹೇ, ಬುದ್ಧಿಮತಿ!
ನಿನ್ನ ಭಾವನೆ ಬಡತನಕಿಳಿಯದಿರಲಿ, ಎಂದೂ
ಧೃತಿಗೆಡದಿರೌ, ಸೋಲುಗಳೆ ವಿಜಯಕ್ಕೆ ಪರಮ
ಸೋಪಾನ! ನೀನ್ ಮೇಡಂ ಕಾಮಾ ಎಂಬುದಂ

ಸರ್ವಥಾ ಮರೆಯದಿರ್. ಭೂತ ವರ್ತಮಾನಂ
ಬದಿಗೊತ್ತಿ ಭವಿಷ್ಯದ ಗುಡಿಗೋಪುರಂ ಕಟ್ಟು!''
ಆ ಪ್ರತಿ ಬಿಂಬದ ಉಪದೇಶಂ ಮೈಮನಂ
ಪುಳಕಿತಗೊಳಿಸೆ ದಿಟ್ಟಿ ಹರಿದುದು ಪುನಃ ಕನ್ನಡಿ
ಪ್ರತಿಬಿಂಬದ ಕಡೆಗೆ. ನವ ತಾರುಣ್ಯ ಉಕ್ಕುವ
ದೇಹ! ಊರ್ಧ್ವಮುಖಿ ಜೀವನಯೋಗ! ಮತ್ತೇಕೆ
ಪಿಂಜರಿಕೆ? ಆ ಕೂಡಲೆ ರಮಣೀಮಣಿ ತಾರು
ಕೊಟ್ಟಳಾ ಮುಂಬಯಿಯ ವಕೀಲ ಗೆಣೆಯರಿಂಗೆ
ವೀರ ಸಾವರ್‌ಕರರಿಗೆ ಸರ್ವ ಸಹಾಯಕೋರಿ.
ಕತ್ತಲೆ
ಕಾವಳಿಸಿದ ದೂರ ಬಲು ದೂರ ಗಮ್ಯದ ಜಾಡು
ಈಗೀಗ ಸುಸ್ಪಷ್ಟಂ! ನಿಚ್ಚಳಂ! ಸದೃಢಂ!
ಮೇಡಂ ಕಾಮಾ ದೃಢ ನಿಲುವಿಂದೆ ಮುನ್ನಿನೊಲ್
ಗುಪ್ತ ಕಾರ್ಯಾಚರಣೆಯಲಿ ಮನವಿಟ್ಟಳ್; ನಿತ್ಯ
ಹೃನ್ಮನಗಳ ಅಮಿತೋತ್ಸಾಹದಿಂ ಚಟುವಟಿಕೆ
ಮುಂಬೆಳೆದುದು ಗೊಬ್ಬರವಿಟ್ಟ ಕಲ್ಪ ವೃಕ್ಷದೊಲ್.
ಏಗಳುಂ ಭಾರತ ಜನನಿಯ ನಲ್ ಪರಕೆಯಿರೆ
ಎಲ್ಲಂ ಸುಗಂ ಎನುವೊಂದು ಭರವಸೆ ಮನದೊಳ್.
ಸಾವಿರದೊಂಭೈನೂರೇಳರ ಆಗಸ್ಟ್ ತಿಂಗಳಲಿ
ಜರ್ಮನಿಯ 'ಸ್ಟರ್ಟ್‌ಗಾರ್ಟ್' ಎಂಬ ಸ್ಥಳದಲ್ಲೊಂದು
ಸಭೆ! ಅಂತರಾಷ್ಟ್ರೀಯ ಸಮಾಜವಾದೀ ಸಭೆ!
ಅಂತರಾಷ್ಟ್ರೀಯರ್ ಪ್ರತಿನಿಧಿಸುವ ಮಾಸಭೆ!
ಆ ವಿಚಾರ ಕರ್ಣಪಟಲಗಳಿಗೆ ಮುಟ್ಟಿ ಆ
ವೀರ ರಮಣಿ ಭಾರತ ಗುಲಾಮೀ ಸ್ಥಿತಿಯಂ
ಸಭೆಯ ಮುಂದೆ ಮಂಡಿಸುವ ಯೋಚನೆಯೊಳ್ ನಡೆದ-
ಳಲ್ಲಿಗೆ. ಜಗತ್ತಿನ ನಾನಾ ರಾಷ್ಟ್ರಗಳ ಪ್ರತಿ
ನಿಧಿಗಳ್‌ಸಮಾವೇಶಗೊಂಡ ರಂಗು ರಂಗಿನ
ಜ್ಯೋತಿರ್ಮಯೀ ಸಭೆಯೊಳ್ ಭಾರತದ ಪೆಸರಂ

ಕರೆದೊಡನೆ ಮೇಡಂ ಕಾಮಾ ವೇದಿಕೆಯ ನೇರಿ
ನಿಂದಳ್! ಅಹಃ ಆಕರ್ಷಕ ನಿಲುವು! ಸುಸುಂದರ
ವದನ ಬಿಂಬ. ಕರ್ಪುರ್ಕಂಗಳ್. ವರ್ಣವರ್ಣಾಂತ
ಅಂಚಿನ ಧವಳ ಕಾಂತಿಯ ದುಕೂಲ. ಗಾಂಭೀರ್ಯ
ತುಂಬಿ ತುಳುಕುವ ದೇಹ ಸಂಪುಟ! ಸಭೆ ಅವಳಂ
ಅಮಿತಾಶ್ಚರ್ಯ ತುಂಬಿದ ನಿಟ್ಟೋಟದಿಂ ನೋಡಿ
ಭಾರತದ ರಾಜ ಪುತ್ರಿಯ ಪಾಂಗಿನಿಂದಿರ್ಪಳ್!
ಎಂದಾಡಿದರ್ ತಮ್ಮತಮ್ಮೊಳ್. ಮೇಡಂ ಕಾಮಾ
ತನ್ನ ದನಿಯೆತ್ತಿ, ಆಂಗ್ಲರಾಳ್ವಿಕೆ ಪರಿಪುಣ್ಯ
ಭೂಮಿ ಭಾರತದಲಿ ನಡೆಸುತಿಹ ಅನಾಚಾರ.
ಅನೀತಿ-ಅನ್ಯಾಯಗಳಿಗೆ ಕೊನೆಯಿಲ್ಲವೆಂಬುದಂ
ಕಂಠ ಪೂರ್ತಿ ವಿವರಿಸಿ ಬಡಜನರ ಸಂಕಟದ
ಪರಿಹರಿಪ ಬದಲ್ ಕೂರಾತಿಕೂರ ಕಾನೂನು
ಕಟ್ಟಳೆಗಳ ನೆರವಿಂದೆ ಬೊಗ್ಗು ಬಡಿಯುತಿಹರ್
ನಿಷ್ಕರುಣೆ-ನಿರ್ದಯೆಗಳಿಂ; ಎನುತೆ ತಮ್ಮವರ
ಕಣ್ಣೀರಿನ ಕಥೆಯಂ ಬಣ್ಣಿಸಿದಳ್ ಗದ್ಗದ
ಕಂಠ ತುಂಬಿ ಭಾವೋದ್ವೇಗದಿಂ ಕೆಂಗೆಂಪು
ತಳೆದು. ಆ ಸಭಿಕರ್ ಅವಳ ವಾಗ್ವೈಖರಿಯಂ
ಮೆಚ್ಚಿದರ್. ಬ್ರಿಟಷರ ಕೂರ ದಬ್ಬಾಳಿಕೆಗೆ
ಪೇಸಿದರ್. ಬಡ ಭಾರತೀಯರ ಕಡುಗೋಳಿಗೆ
ಮರುಗಿದರ್. ಮತ್ತಾ ಮೇಡಂ ಕಾಮಾ ತನ್ನಯ
ಕೊಂಕಳಲಿ ಸುರುಳಿಸುತ್ತಿರಿಸಿರ್ದ ಭಾರತದ
ಧ್ವಜಮಂ ಧೈರ್ಯದಿಂ ಪೆರ್ಮೆಯಿಂ ಗೌರವದಿಂ
ಸಭೆಯೆದುರು ಪ್ರದರ್ಶಿಸಿ ''ಇದೊ ನೋಡಿ! ಭಾರತದ
ಪ್ರಪ್ರಥಮ ಧ್ವಜ! ಎಂದಳ್ ಸ್ಥೈರ್ಯದಿಂ.
ಓವೊ!
ಭಾರತ ಧ್ವಜ ಪುಟ್ಟಿರದ ಕಾಲ! ಆರ್ಕೇಳಿ
ಕಂಡಿರದ ವಿಷಯ! ಮೇಡಂ ಕಾಮಾಳಿಂದ

ಪಾಶ್ಚಾತ್ಯ ಭುವಿಯಲಿ ಅಮಿತೌತ್ಸುಕ ಪ್ರದರ್ಶನ!
ಮಹಾನ್ ಮಹಿಳಾಮಣಿಯ ಅದ್ಭುತ ಸಾಹಸ!
ಎಣೆಯಿಲ್ಲದ ಧೀರೋದಾತ್ತ ಸಾಹಸ! ಪರಮ
ವಿಚಕ್ಷಣೆ! ಅನುಪಮ ವಿಚಾರ ವಿಹಾರ! ಎರ್ದೆಯಂ
ನಡುಗಿಪನಿತು ರಣಹೇಡಿಗಳಿಗೊಂದು ಮೇಲ್ಪಂಕ್ತಿ!
ಬ್ರಿಟಿಷ್ ಪ್ರಭುತ್ವದ ಭಾರತಕೆ ಸ್ವಂತ ಧ್ವಜ!
ಎಂತಪ್ಪ ಸೋಜಿಗ? ಅದರ ಪ್ರಥಮ ಪ್ರದರ್ಶನ
ಅಂತರಾಷ್ಟ್ರೀಯ ಮಾ ಸಭೆಯಲಿ! ಅದಂ ಬಿಚ್ಚು
ಮನದಿಂ ಪ್ರದರ್ಶಿಸಿದ ರಮಣೀಮಣಿ ಮೇಡಂ
ಕಾಮಾ ಎನೆ ಸಾಮಾನ್ಯಮೆ? ಆಗ ಸಭೆಯೊಳ್
ಗುಸುಗುಂಪಲಿರೆ ಮೇಡಂ ಕಾಮಾ ಧ್ವಜವಂ
ಎತ್ತಿ ನುಡಿದಳ್ ''ಕೇಳಿ! ಸಾತಂತ್ರ್ಯ ಮಾವೀರ!
ರಾಷ್ಟ್ರೀಯ ಪರಮಭಕ್ತ! ಸಾವರ್‌ಕರ್ ತನ್ನ
ಗೆಣೆಯರೊಡಗೂಡಿ ರಚಿಸಿದ ಪವಿತ್ರ ಬಾವುಟ!
ಇದರಲಿಹ ಅಷ್ಟಪುಷ್ಪಗಳ್ ರಾಷ್ಟ್ರದ ಅಷ್ಟ *
ಪ್ರಾಂತ್ಯಗಳ ಸಂಕೇತ! ಧ್ವಜ ಮಧ್ಯೆ ಕೇಸರ
ವರ್ಣಾಂತ ಪಟ್ಟಿಯಲಿ 'ವಂದೇಮಾತರಂ' ನಲ್
ನುಡಿಗಟ್ಟು ಜನನಿಗೆ ವಂದನಾರ್ಪಣೆಯ ಸೊಬಗು!
ತ್ರಿವರ್ಣಗಳಲಿ ಕೆಮ್ಮನೆ ಕೆಂಪುವರ್ಣ ಶಕ್ತಿಯ
ಪ್ರತೀಕ! ಹಸಿರು ಧೈರ್ಯೋತ್ಸಾಗಳ ಪ್ರತೀಕ
ಕೇಸರಿ ವಿಜಯದ ಪ್ರತೀಕ!'' ಕಾಮಾ ಮತ್ತೆ
ಧ್ವಜಮಂ ಹಿಡಿದೆತ್ತಿ ''ಈ ಧ್ವಜ ನಮೂನೆಯಂ
ತಯಾರಿಸಿದ ವ್ಯಕ್ತಿ ಭಾರತೀಯ ಯುವ ದೇಶ
ಭಕ್ತ! ಅಮಿತ ನಿಷ್ಠಾವಂತ! ವೀರ ಸ್ವಾತಂತ್ರ್ಯ
ಯೋಧ! ವಿದ್ಯೆ ಬುದ್ಧಿಗಳಲಿ ಪ್ರಕಾಂಡ ಪಂಡಿತ!
ಕೇಳಿ! ಎಂತೆಂತಹ ಅಮೋಘ ರತ್ನಗಳಿಂದು

*** ಆಗ ಭಾರತದಲ್ಲಿದ್ದುದು ಎಂಟು ಪ್ರಾಂತ್ಯಗಳು**

ಜೇಲಿನಲಿ ಕೊಳೆಯುತಿರ್ಪರ್! ಎನಿತೆನಿತು ಮಂದಿ
ಕೂರಾಂಗ್ಲರ ಗುಂಡಿಗೆ ಆಹುತಿಯಾದರ್! ಮದ್ದು
ಗುಂಡಿನೊಡನೆ ನಮ್ಮವರ್ ಬರಿಗೈಲಿ ಹೋರುವ
ಚಿತ್ರ ಅಸಮಾನ್ಯ!'' ಎಂದು ಬಣ್ಣಿಸಿದ ಬಳಿಕ
''ಇದೋ ಈ ಧ್ವಜಕೆ ಎದ್ದು ನಿಂತು ಗೌರವ ಸಲ್ಲಿಸಿ!''
ಎಂದು ನಲ್ಮೆಯಿಂ ಕೋರಿದಳ್ ಲಲನಾಮಣಿ.
ಆ ಪೆರ್ಮೆಯ ನುಡಿಯಂ ಕೇಳ್ದಾ ಸಭೆ ತೆಕ್ಕನೆ
ಎದ್ದು ನಿಂತು ಗೌರವಂ ಸಲಿಸಿತು ಮಾನವೀಯ
ಸ್ನೇಹ ಪ್ರೇಮ ಸೌಜನ್ಯಗಳ ತಂಡವಾಗಿ
                                        ಏಂ
ಪ್ರತಿಭೆ! ಏಂ ಗೌರವ! ಏಂ ಭೌದ್ಧಿಕ ಸರಿತ್ಸಾಗರ!
ತಾಂ ಸ್ವಂತ ಮಕ್ಕಳಂ ಪಡೆಯದಿರ್ದೊಡಂ ತನ್ನ
ತಾಯ್ನಾಡ ಮಕ್ಕಳೆಲ್ಲ ತನ್ನವರೆಂಬ ಅತಿ
ಅಭಿಮಾನ! ಸ್ವಲಾಭಮಿನಿತಿಲ್ಲದ ಅಭಿಮಾನ!
ಭಾರತೀಯ ಸ್ವಾತಂತ್ರ ಚಳವಳಿಯಲಿ ತೊಳಗಿ
ಬೆಳಗಿ ನೇಪಥ್ಯವೇರಿದ ಮಹಾನ್ ಮಹಿಳಾ
ಮಣಿ ಮೇಡಂ ಕಾಮಾ! ನೀಂ ಮತ್ತೆ ಮತ್ತೆ ಭಾರತ
ಭುವಿಯಲಿ ಮರು ಹುಟ್ಟು ಪಡೆಯೈ ಪರಮ ಯೋಗಿನೀ!
        ತರುವಾಯಿ ಅಮೆರಿಕ ಖಂಡಮಂ ತಾಂಬೊಕ್ಕು
ಸ್ವದೇಶೀಯ ದುಸ್ಥಿತಿಯಂ ಬಣ್ಣಿಸಿ, ಬುದ್ಧಿಮಾನ್ಯರಂ.
ಸಜ್ಜನ ಪರಮ ಬಂಧುಗಳಂ ಸಂದರ್ಶಿಸಿದ
ಬಳಿಕ ಭಾರತ ಸ್ಥಿತಿಯಂ ಕಣ್ಣಾರೆ ಕಂಡು
ತಿಳಿಯಿರೆಂದು ಕರೆ ನೀಡಿದಳ್ ಮೇಡಂ ಕಾಮಾ!
ಆರ್ಥಿಕ ಬಲಮಿಲ್ಲಂ; ರಾಷ್ಟ್ರಮಂ ಪ್ರತಿನಿಧಿಪ
ಹಕ್ಕು ಅಥ ಪರವಾನಗಿ ಮುಂತಪ್ಪ ಆವೊಂದು
ಅಧಿಕೃತ ಬಲಮಿಲ್ಲಮೆನೆ ಭಂಗ ಬನ್ನಗಳ
ಅರಿತು ವಿಶ್ಲೇಷಿಸಿ ನೋಡೈ ಸುಜ್ಞಾನ ಮನವೇ!
ಪರರಾಷ್ಟ್ರ-ಪರಜನರ ಮಧ್ಯೆ ಅಂಡಲೆದಳಾ

ಭಾರತೀಯ ವೀರ ರಮಣಿ! ಸ್ವಾಭಿಮಾನ ಶೀಲೆ!
ಸ್ವರಾಜ್ಯ-ಸ್ವಾತಂತ್ರ್ಯಗಳ ಮಂತ್ರಿ ತಾನಾಗಿ!
ಸತ್ಯ-ಶಾಂತಿ-ಶಿಸ್ತು-ಧರ್ಮಗಳ ಸನ್ಮಾರ್ಗದೊಳ್
ನಮ್ಮ ಮುನ್ನಡೆ ಮೇಣ್ ಹೋರಾಟ ಎಂದೊರೆದು,
ಶಾಂತಿ ಸಂಗ್ರಾಮದ ಹುರುಳಂ ಸಾರಿ ಡಂಗುರ
ಬಾರಿಸುವುದೆಂದೊಡೆ ಏಂ ಸಾಮಾನ್ಯಮೆ ಒಡೆಯಾ?
ಕಾಮಾ ನಿಜಕೂ ದೇವ ಪುತ್ರಿ! ಧೀಮಂತಿನಿ!!
ಮುಂದೆ ಸಾವಿರದೆಂಟನೂರೇಳರ ಸಮಯಂ
ಅಕ್ಟೋಬರ್ ಇಪ್ಪತ್ತೆಂಟರಂದು ವಾಲ್ಡಾಫ್
ಆಸ್ಟ್ರಿಯಾ ಹೋಟೆಲಿನಲಿ ಮಿನರ್ವ ಕ್ಲಬ್ ನಿಜ
ಜನಾನುಬಂಧದ ನೇಮದಲಿ ಏರ್ಪಡಿಸಿದೊಂದು
ಅಮೂಲ್ಯ ಸಭೆ. ಮೇಡಂ ಕಾಮಾ ವಿಷಯಮರಿತು
ಧಾವಿಸಿದಳಲ್ಲಿಗೆ! ಸಮುದಿತ ಮನದಿಂದೆಲ್ಲರ
ವಾದ ವಿವಾದವನಾಲೈಸಿ ತನ್ನ ಸರದಿಗಾಗಿ
ಕಾದಿರ್ದು ಏರಿದಳ್ ವೇದಿಕೆಯಂ! ಅಹ; ಎಂಥ
ಮೊಳಗು! ಶ್ರೀಕಂಠದ ಅಪೂರ್ವ ಸದ್ ಯೋಚನೆಯ
ಮೊಳಗು! ಮನ ಕೆರಳಿದ ವಿಚಾರಧಾರೆಯ ಮೊಳಗು!
‘‘ಮಾನ್ಯರೇ, ಕೇಳಿರೈ! ಭಾರತದ ಪ್ರಸಕ್ತ
ರಾಜಕೀಯ ದುಸ್ಥಿತಿ ಆಂಗ್ಲ ಸಂಸ್ಕೃತಿಗೆ ದಕ್ಕೆ!
ಇಡೀ ಮನುಕುಲವೇ ತಲೆ ತಗ್ಗಿಸುವನಿತು ಹೀನ
ಕೃತ್ಯಗಳ ಆವಾಸ ಸ್ಥಾನ! ಅತ್ಯಾಚಾರ
ಅನೀತಿಗಳ ಬೃಹದ್ ಕೋಂಟೆ! ಅವಜ್ಞೆಯ ಅತಿ
ರೇಕ! ಧೂರ್ತಾಂಗ್ಲೇಯರ ಆಳ್ವಿಕೆಯ ಕಪಿಮುಷ್ಟಿ
ತೊಲಗಿ ಭಾರತ ಧಾತ್ರಿ ಸ್ವಾತಂತ್ರ್ಯದ ಸವಿಯುಂಡು
ನಿಮ್ಮೀ ರಾಷ್ಟ್ರಗಳ ಪಂಕ್ತಿಯಲಿ ರಾರಾಜಿಸದೆ
ಗೌರವ-ಘನತೆಗಳ್ ಬಪ್ಪುದೆಂತು? ಪುಣ್ಯಭೂಮಿ
ರಣಗೋಳಿನಲಿ ನರಳುತಿಹುದು ಈ ನಾಗರಿಕ
ಜಗತ್ತಿನ ಕಣ್ಮುಂತೆ! ಇಂ ಆಂಗ್ಲ ಪ್ರಭುತ್ವ

ಮೇಣ್ ದೇಶೀಯ ಪ್ರಭುತ್ವಗಳ್ ತೊಲಗಿದೊಡೆ
ಸುಕ್ಷೇಮ! ಮತದಾನದ ರೀತ್ಯ ಪ್ರಜಾಸತ್ತೆ
ಪ್ರಭುತ್ವಪದಂ ಕೈಕೊಂಡಲ್ಲದೆ ದಾರಿದ್ರ್ಯ
ನಿವಾರಣೆ ಅಸಾಧ್ಯಂ! ರಾಷ್ಟ್ರೀಯ ಸಂಪದದ
ಸಿಂಪ ಪಾಲು ಆಂಗ್ಲರ್ಗೆ. ರಾಷ್ಟ್ರೀಯ ಬಡತನ
ಮೇಣ್ ಸಂಕಷ್ಟಮಂ ಕಣ್ತುಂಬ ಕಾಣುತುಂ
ಸರ್ವ ಸಂಪದಂ ದೋಚಲ್ ಮನವೆಂತು ಸಂತು?''
ಎಂದಳಾ ಲಲಿತಾಂಗಿ. ಮುಖಮುದ್ರೆಯಲುಣ್ಮಿದ
ಸಂಕಟದ ಛಾಯೆಯಂ ಕಂಡು ಮನ ಮರುಗಿದ ಸಭೆ
ಒಮ್ಮನ ಒಮ್ಮತಗಳಿಂ ಸಹಾನುಭೂತಿಯಂ
ತೋರಿದರ್ ಕೈ ನೆಗಹಿ! ಆಗಳ್ ಮನದುಂಬಿ
ಸಂತಸಂ ಘನಿಸಿದೊಲ್ ಆತ್ಮ ಸಂತೃಪ್ತಿಯಿಂ
ನಿರ್ಗಮಿಸಿದಳ್ ಮೇಡಂ ಕಾಮಾ. ಮೇಣಲ್ಲಿಯೆ
ವರ್ಷಾವಧಿ ಇರ್ದು ಪರಿಸರದ ವಿದೇಶಗಳ
ಸಂಯಾತ್ರೆಗೈದು ಭಾರತ ಪರಿಸ್ಥಿತಿಯಂ
ಬಿತ್ತರಿಸಿ ಸರ್ವ ಜನ ಸಹಾನುಭೂತಿ ಪಡೆದಳ್
ಎಲ್ಲೆಡೆಗಳಲಿ. ಮತ್ತಮಾ ನಿಷ್ಕ್ರಮಣಯಾತ್ರೆ
ಲಂಡನ್ ನಗರಿಗೆ. ಆದೊಡೇಂ ಅಜ್ಞಾತಮಾ
ಜೀವನಿಯ ಯೋಗಂ! ಮೇಣ್ ಅಜ್ಞಾತ ದಿನ
ಚರಿಯ ಕಾರಾಗಾರಂ! ಭಾರತ ಭವನದಲಿ
ತಾನಿತ್ತ ಭಾಷಣದ ಪ್ರತಿಗಳಂ ಭಾರತಕೆ
ಕಳಿಸುತಿರ್ದಳ್ ಗುಪ್ತ ಗತಿಯಲಿ. ಕರಪತ್ರದ
ಸಂದೇಶ ''ಆಂಗ್ಲೇಯರ ಹಿಂಸೆಗೆ ಪ್ರತ್ಯುತ್ತರ
ಪ್ರತಿ ಹಿಂಸೆಯೇ ಸರಿ!'' ಎಂದೆಂಬ ಕ್ರಾಂತಿಯಾ
ರೂಪಾಂತರ ಪೊಂದಿದ ಶಾಂತಿ ಮಂತ್ರ ಘೋಷಣೆ!
ಅಹಿಂಸಾ ಪರಮೋ ಧರ್ಮಃ ಸರಿಯಾದೊಡಂ
ಉತ್ತರೋತ್ತರ ಅಭಿವೃದ್ಧಿರಸ್ತು ಎಂಬುದು
ಚಿರ ಸತ್ಯ. ನಿಷ್ಕಾರಣ ಹಿಂಸೆಯಂ ಸಹಿಸಿದುದೆ

ದಾಸ್ಯ ಜೀವನಕೆ ನಾಂದಿ! ಎಂದೆಂಬ ನೆಚ್ಚಿನ
ಕೆಚ್ಚಿನ ಕಿಡಿಯಲಿ ಉದಿಸಿರ್ದ ಸಂದೇಶ ಬ್ರಿಟಿಷ್
ಸರಕಾರದ ಹದ್ದಿನ ಕಣ್ಣುಗಳ್ ತಪ್ಪಿಸಿಯುಂ
ಸೂಕ್ಷ್ಮದೊಳ್ ನಡೆಸಿಯುಂ ಭರಣಿಯೊಳಗಿನ ಬೆಂಕಿ
ಆವ ಮಾಯಕದಿಂ ತಿಳಿದುದೊ ಬ್ರಿಟಿಷ್ ಪ್ರಭು-
ತ್ವ ತೆಕ್ಕನೆ ಗಡಿಪಾರ್ ಆಜ್ಞೆಯ ಖಡ್ಗ ಬೀಸಿತು!
ಅದು ಮಾತ್ರಮೆ? ಕೆಲ ಧೂರ್ತ ಅಧಿಕಾರಿಗಳೊಡಲ್
ಕಿಚ್ಚಿನಿಂದುರಿದು ಸೇಡು ತೀರಿಸಿಕೊಳ್ವೊಂದು
ದುರುದ್ದೇಶದಿಂ ಕೊಚ್ಚಿ ಕೊಲ್ಲುವ ಸಂಚಿನೊಳ್
ಸದ್ದಿಲ್ಲದೆ ಮುಂದಾದರ್! ಆಗಳದಂ ಬಲ್
ಸೂಕ್ಷ್ಮದೊಳ್ ಅರಿತು ಈ ಚಣಮೆ ಅಲ್ಲಿಂದ ಅತಿ
ಚಮತ್ಕಾರದಲಿ ಕಡಲ್ದಾಟುವೆಯ ಮೂಲಕಂ
ಫ್ರಾನ್ಸ್ ಸೇರಿದಳ್ ಮೇಡಂ ಕಾಮಾ! ಏಂ ಧೈರ್ಯ
ಸ್ಥೈರ್ಯವೋ ಅಂಥ ಸಾಹಸಾತಿಸಾಹಸ ಕಾಣ್!
ಆಗಳಲ್ಲಿನ ಸಮಾಜವಾದೀ ಪ್ರಜೆಗಳ್
ಮುಂಗೆತ್ತು ಪರಮ ಹಾರ್ದಿಕಮಪ್ಪ ಸ್ವಾಗತವ
ಬಯಸಿದರ್! ಅಃ! ಪುಷ್ಪ ಗುಚ್ಛಗಳ ವಾರಾಶಿ!
ವಿವಿಧ ವರ್ಣರಂಜಿತ ಅರೆಯರಳು ಮೊಗ್ಗೆಗಳ್!
ಬಿರಿ ಮುಗುಳ್ದ ಪೂಗಳ್! ಏಂ ಪ್ರೇಮದ್ಯೋತಕಂ!
ಏಂ ಗೌರವಾಭಿಮಾನಂ! ಅಂತಪ್ಪ ಹಾರ್ದಿಕ
ಸ್ವಾಗತದ ಪೂರಮಂ ಬೆಪ್ಪಾಗಿ ಕಣ್ತುಂಬ
ನೋಡುತಿರೆ ಕರಜೋಡಿಸಿ; ಕಂಗಳಲಿ ಫಳ್ಳನೆ
ಸುಖಾಶ್ರು ಮಿನುಗಿದುವು ರಜತವಾರಿಯೊಲ್ ಮಿಂಚಿ!
ಯಾವತ್ಕಾಲಂ ಮೇಡಂ ಕಾಮಾ-ಳ ನಿವಾಸಂ
ಅಂತರ್ರಾಷ್ಟ್ರೀಯ ಕ್ರಾಂತಿಕಾರಿಗಳಿಗೆ ನಿಚ್ಚ
ರಹಸ್ಯಮಯ ದುರ್ಗದೊಳ್ ವಿಚಾರ ವಿಹಾರಕೆ
ಕೇಂದ್ರಮಾದತ್ತು. ಏಗಳ್ ದೂರ ದೂರದಿಂ
ಐತರ್ಪ ವಿಚಾರವಾದಿಗಳ್ ರಾಷ್ಟ್ರೀಯ ಪಿರಿ

ಸಮಸ್ಯೆಗಳಂ ಚರ್ಚಿಸಿ ಪರಿಹಾರಂ ಕಂಡು
ಕೊಳ್ವರ್ ಒಮ್ಮನದಿಂ. ರಷಿಯಾ ದೇಶೀಯ ಮಹಾ
ಕ್ರಾಂತಿ ಪುರುಷ ಲೆನಿನ್ ಮಹೋದಯಂ ಮೇಡಂ-ಳ
ಭೇಟಿಗೈ ತಂದನೆನೆ ಆ ಪ್ರಾತಃಸ್ಮರಣೀಯ
ನೀರೆಯಂ ನೆನೆ ಮನವೆ! ಆಪನಿತು ನೆನೆ ಮನವೆ!
        ಯಾವಜ್ಜೀವಂ ಸ್ವಾತಂತ್ರ್ಯ ವೀರ ಸಾವರ್‌ಕರ್
ನೀಡುತಿರ್ದ ಸ್ಫೂರ್ತಿಯೇ ಶಾಂತಿ-ಕ್ರಾಂತಿಗಳ ಕಿಡಿ!
ಗುಪ್ತ ಕಾರ್ಯಂ ಭುಗಿಲೆಳ್ದು ನಡೆದತ್ತು ಯಥೋ-
ಚಿತಮನುದಿನಂ. ಆ ಸೂಕ್ಷ್ಮ ವ್ಯವಹಾರ ರಹಸ್ಯ
ಗೂಢಚಾರರಿಂದರಿತ ಆಂಗ್ಲ ಪ್ರಭುತ್ವಂ,
ಅವಳಂ ಬರಿಸಿದೊಡೆ ಭಾರತಕೆ ಜಡಿ ಕುಟ್ಟಲ್ಕೆ
ಸುಲಭಮೆಂದರಿತು ಕುಯುಕ್ತಿಯಲಿ ಮಿಂದು ವಿನಯದ
ಪಾಂಗಿನಿಂ ಆಮಂತ್ರಣ ನೀಡಿತು ಮೇಡಂ-ಗೆ.
ಭಾರತದಿಂದಾಮಂತ್ರಣಮೆನೆ ಪೆಣ್ ಸುಲಭದಿ
ಬಲಿಬೀಳ್ವಳೆಂಬ ನಂಬಿಕೆಯು ಮತ್ತಾಗಿರಲ್
ಪೇಳ್ವದೇಂ? ನಿರೂಪಂ ಮತ್ತೆಮತ್ತೆ ಮೇಣ್ಮತ್ತೆ
ಪೊದಳ್ದುದು ಹಾರ್ದಿಕ ರಸವಾಹಿನಿಯಂ ಮೀರಿ!
ಶಾಂತಿ-ಸತ್ಯ-ಶಿಸ್ತುಗಳ ಮುಖಕೆ ಮಸಿ ಬಳಿಯುವ
ಕುತಂತ್ರ ಜಾಲಮಂ ನವುರು ನವುರಾಗಿ ನೆರೆ
ಹರಡಿ ಲೋಕದ ಕಣ್ಣಿಗೆ ಪಕ್ಕಾಗುವ ತೆರದಿ.
ಅಷ್ಟು ಮಾತ್ರಮೇಂ? ಅದೆ ರೀತಿಯೊಳ್ ನಂಜುಗುವ
ಪಾತ್ರಕೆ ಮಿಸುನಿಯ ಲೇಪವಂ ಒರೆದು ಉತ್ಸಾಹ
ತೋರ್ಪ ವೇಶದಿಂ ತಮ್ಮ ನೆರೆಯ ಪ್ರಾಂತ್ಯಮಾದ
ಫ್ರೆಂಚ್ ಪ್ರಭುತ್ವಕೂ ಆ ನೀರೆಯಂ ಸಧ್ಯ
ಭಾರತಕೆ ಕಳಿಪಿ ಎಂಬ ನಿರೂಪಮಂ ಕೊಟ್ಟು
ಕಾದಿರ್ದುದು ಹೊಂಚಿ ಕೂಡುವ ಕಳ್ಳ ಬೆಕ್ಕಿನೊಲ್!
ಆ ಕುತಂತ್ರಮಂ ಅರಿಯಳೇಂ ಮೇಡಂ ಕಾಮಾ?
ಕೈ ಸೇರ್ದಾ ನಿರೂಪಮಂ ಹರಿದು ಚೂರುಗೈದು

ತಿರಸ್ಕಾರದಿಂ ಕಸದರಾಶಿಗೆಸೆದಳ್ ಮಾನಿನಿ.
ಎಲ್ಲಿರಲಿ ಧೂರ್ತಾಂಗ್ಲರ ಕೂರ್ಗ್ಗಂಗಳ್ ಚುಚ್ಚು
ನೋಟ ಬೀರಿರೆ ಸುತ್ತಮುತ್ತ ಶೂಲಗಳವೊಲ್!
ಗುಪ್ತ ಕಾರ್ಯಾಚರಣೆಯ ಭಂಗ ಶಿವನೆ ಬಲ್ಲ!
ಆದೊಡಂ ಮೇಡಂ ಕಾಮಾ ಪಿಂಜರಿದಳಿಲ್ಲಂ.
ತನ್ನವರ ಸತ್‌ಕೂಟದಲಿ ನಡೆದತ್ತು ಎಂದಿನ
ಕಾರ್ಯಚಟುವಟಿಕೆಗಳ್ ಗುಪ್ತಗಾಮಿನಿಯಾಗಿ!
ಬ್ರಿಟಿಷ್ ಸರಕಾರ ತವ ಮನೋಗತಿಯನೋದಿ
ಎಚ್ಚೆತ್ತ ಮೇಡಂ-ಳ ಚಾತುರ್ಯಬಲದಿಂ ಕಡು
ರೋಷಗೊಂಡು ಕಿಚ್ಚಿನ ಕಿಡಿಯಪ್ಪಿ ಭಾರತದಲಿ
ಅವಳಿಗಿರ್ದ ಅಮೂಲ್ಯ ಆಸ್ತಿಯಂ ಮುಟ್ಟುಗೋಲು
ಕ್ರಮದಿಂ ತನ್ನೊಶಪಡಿಸಿ ಒಡಲುರಿಯ ಸೇಡಂ
ಕೂರಗತಿಯಲಿ ತೀರಿಸಿತ್ತೈ ನಿಜ ಬ್ರಹ್ಮಾಸ್ತ್ರ
ಪ್ರಯೋಗದಿಂದೆ. ಆದೊಡಂ, ಪರಮ ಮಾನಿನಿ
ಕಿಂಚಿತ್ ವಿಚಲಿತಳಾದಳೇಂ? ಅನನ್ಯ ಆಸ್ತಿ
ಕೈಬಿಟ್ಟಿತೆಂದು ಕೋಡಿಡಿದಳೇಂ? ಅಳುಕಿದಳೇಂ?
ಅಳಲಿದಳೇಂ? ''ದೈವವಿತ್ತುದು ದೈವ ನಿಯೋಜಿತಂ''
ಎನುತೆ ಗಂಭೀರ ಭಾವ ತಾಳಿದಳು ಆಸ್ತಿಯು
ಕೈಬಿಡಲ್. ಸ್ವಜನರ್ ಉಳಿದರ್ ಭಾರತ ಭುವಿಯಲಿ
ತನ್ನಯಾ ವಾಸ್ತವ್ಯ ದೂರ ದೂರ ದೇಶದ
ಜನ ಸಂಗದಲಿ. ಇಂ ಭವಿತವ್ಯದ ನಿರ್ಣಯ
ಪರಮಾತ್ಮ ಬಲ್ಲನೆನೆ ಜನ್ಮ ಭೂಮಿಯ ದಾಸ್ಯ
ನಿವಾರಣೆಯಲ್ಲದಾವ ಪರಿಕಲ್ಪನೆಯಿಲ್ಲ
ಚಿತ್ಕೋಶದಲಿ. ಜೀವನಮಾರ್ಗ ಎಂದಿಗುಂ
ಊರ್ಧ್ವಮುಖಿ ಎಂಬುದೊರ್ ಸಮಾಧಾನಂ ಮನಃ
ಸಂಪುಟಕೆ.
ಆಂಗ್ಲ ಸರಕಾರ ರೋಷದುಸಿರಂ
ಬಸಿದು ತಿರುಗಿ ಮತ್ತೆಂದವಳ್ ಬಾರದವೊಲ್

ಭಾರತಕೆ ಕಟ್ಟು ಕಟ್ಟಳೆ ವಿಧಿಸಿ ಮತ್ತೊರ್ಮೆ
ಕಟುಮನದ ಸೇಡು ಸೊಗಡಂ ತೀರಿಸಿ, ತನ್ನಯ
ಲೋಕ ಮರ್ಯಾದೆಯಂ ಉಳಿಸಿದತ್ತು ಘನವೆತ್ತ
ಕಾಯಿದೆಯ ಮಾಳ್ಕೆಯಲಿ. ಸತ್ಯ-ಧರ್ಮಗಳ ಹುರುಳ್,
ನ್ಯಾಯ-ನೀತಿಗಳ ತಿರುಳ್ ಇಲ್ಲದ ಕಾಯಿದೆಯ
ಉರುಳ್ ಭೋಂಕನೆ ಹಿಸುಕಿದುದು ಕೊರಳ್.

ಮೇಡಂ

ಕಾಮಾ ಆದನುಂ ಕಿಂಚಿತ್ ಮನಗೊಂಡಳಿಲ್ಲಂ,
ಸಿತಸ್ಮಿತದಿಂ "ಈಗಳೆನಗುಂ ಭಾರತಕೆ
ಪಿಂತಿರುಗುವ ಅಗತ್ಯಮಿನಿತಿಲ್ಲ. ಎನ್ನೆಲ್ಲ
ಕಾರ್ಯಭಾರಮಿಲ್ಲಿಯೆ. ಕಟ್ಟು ಕಟ್ಟಳೆಯುಳ್ಳ
ಕಾಯಿದೆಗಿನಿತು ಅಂಜೆಂ" ಎನುತೆ ಕಾರ್ಯಭಾರಂ
ನಿರ್ವಹಿಸಿದಳ್ ಎಂದಿನೊಲ್, ಭಾರತಿಯ ಸತ್ಪುತ್ರಿ!
ತದನಂತರಂ ಅವಳ ಧವಳಿಮಾ ಕೀರ್ತಿ ನೆರೆ
ಪಸರಿಸಿತು ಎಲ್ಲೆಡೆಯೊಳ್ ಕಸ್ತೂರಿ ಪರಿಮಳಂ
ಮೀರಿ! ಆ ಧೀರ ರಮಣಿಯನೆಂದೂ ಕಣ್ಣಿನಿಂ
ಕಂಡಿರದ ವಿದೇಶಗಳ್ ಮನತುಂಬಿ ಕೊರಳ್
ಬಿರಿವನ್ನ ಪಾಡಿ ಪೊಗಳಿ ಕೊಂಡಾಡಿದುವು ಸ್ತ್ರೀ
ಕೇಸರಿಯೆ ಅವಳೆಂದು! ಆಂಗ್ಲರ ಮುಖಕೆ ಕೆಸರ್
ರಾಚುವೊಲ್! ಆಗಳ್ ಕಣ್ಕಿವಿಗಳಂ ಮುಚ್ಚಿದೊಲ್
ಶಿಲಾಮೂರ್ತಿಯಾದತ್ತು ಆಂಗ್ಲ ಸರಕಾರ.
ಭಾರತದ ಕ್ರಾಂತಿಕಾರಿ ಸ್ವಾತಂತ್ರ್ಯ ವೀರರ್
ಘೋರ ಪರಿಸ್ಥಿತಿಯ ಒತ್ತಡದಿಂ ಗೂಢಾತಿಗೂಢ
ಕಾರ್ಯ ಚಟುವಟಿಕೆಗಳಂ ಹೊಂಚಿ ಪ್ಯಾರಿಸ್ ನಗರ
ದ್ದೇಶದಲಿ ಕಾಮಾಳಂ ಸಂಧಿಸಿ ಒಮ್ಮನ ಒಮ್ಮತಗಳಿಂ
ಗೆಯ್ದ ಕಾರ್ಯ "ವಂದೇ ಮಾತರಂ" ಎಂದೆಂಬ
ವರ್ತಮಾನ ಪತ್ರಿಕೆಯ ಅಮೋಘ ಪುಟ್ಟುವಳಿ!
ಆದೊಡದೇಂ? ಸಾಮಾನ್ಯ ಉದ್ದಿಮೆಯೆ ಪರದೇಶ

ವ್ಯಾಪ್ತಿಯಲಿ? ಗುಪ್ತ ವ್ಯವಹಾರದಿ ಪತ್ರಿಕಾ
ಪ್ರಕಟಣೆ? ಮೇಣ್ ಭಾರತಕೆ ಕಳಿಪ ಅದ್ಭುತ
ಹೊಣೆಗಾರಿಕೆ! ಈಯೊಂದು ಕಜ್ಜಮಲ್ಲಿಯೆ ಕೈ
ಕೊಂಡಳಾಧೀರಾತಿಧೀರ ಲಲನಾಮಣಿ! ಆ
ಗಂಭೀರತರ ಪ್ರಕಟಣೆಯ ಭಂಗಂ ಮೀರಿ
ನಿಂದತ್ತು ವಿತರಣೆಯ ಬನ್ನಂ. ಹಠಸಾಧನೆ-
ನೆಚ್ಚು-ಕೆಚ್ಚು ಇರ್ಮಡಿಸಿದೊಡಂ ಗುಪ್ತ ಕಾರ್ಯಂ
ಕಷ್ಟಂ; ಕಡುಕಷ್ಟಂ! ಮತ್ತಾಗಳ್ ಮತ್ತೊಂದು
ಪತ್ರಿಕೆ ಜನಿಸಿದತ್ತು, ಹುತಾತ್ಮ ಮದನಲಾಲ್
ಧಿಂಗ್ರನ ನೆನಪಿನೊಳ್! ಆವೊಳ್ತಿಗೆ ಅಕ್ಷತೆಯ
ಆಮಂತ್ರಣಮಿತ್ತು ಬರಮಾಡಿದೊಲ್ ಅಲ್ಲಿಗೆ
ಭಾರತದಿಂದೈತಂದರ್ ವೀರ ಸಾವರ್ಕರ್‌ರವರ್.
ತಮ್ಮ ದೇಹ ಸ್ವಾಸ್ಥ್ಯಮಳಿಯೆ ಬಯಸಿ ವಿಶ್ರಾಂತಿ
ಧಾಮವಂ. ಮೇಡಂ ಕಾಮಾ ಹರ್ಷವಿಸ್ಮಿತ
ವದನದಿಂ ಸ್ವಾಗತಿಸಿ ನಿಟ್ಟಿಸಿದಳ್ ಕಣ್ಣೆವೆ
ಮಿಟುಕಿಸದೆ. ಹಾ, ಹೃತ್ ಕರಂಡಂ ಬಿರಿವನಿತು
ಸಂಕಟಕರಂ ಆ ಬರೀ ಮೂಳೆಯ ಹಂದರ!
ಹಾ! ಭಾರತೀಯ ಪ್ರಖ್ಯಾತ ಪುರುಷ! ಪ್ರಸಿದ್ಧ
ನೇತಾರ! ರಾಷ್ಟ್ರೀಯ ಚಳವಳಿಯ ಕಾವಿನಿಂ
ಸ್ವರ್ಣ ಸಂಪುಟದೊಲಿರ್ದ ಶರೀರ ಬಲಕುಗ್ಗಿ
ಬಿದಿರಗಣೆಯೊಲ್ ತೋರ್ದತ್ತು ಸೆಲೆ ಕರುಣಾ ಜನಕ
ಸ್ಥಿತಿಯೊಳ್!
ಮೇಡಂ ಕಾಮಾ ಒಡನೆ ಸುಖದುಃಖ
ಭರಿತ ಮನದಿಂದಾದರಿಸಿದಳ್ ವರ ಪೂಜೆಯ
ನೇಮದಲಿ! ಹೃತ್ ಗಿಂಡಿಯಲಿ ಭಕ್ತಿ ಗೌರವ
ಪ್ರೀತ್ಯಾದರಗಳುಕ್ಕಿ, ನಲ್ ಶುಶ್ರೂಷೆಯಿಂ
ದಿನದಿನಂ ಚೇತರಿಸಿಕೊಳ್ಳುತಿರ್ದ ಆ ವೀರ
ಸಾವರ್‌ಕರ್ ಅಸ್ವಾಸ್ಥ್ಯಮಂ ಮರೆತು ಪತ್ರಿಕಾ

ಪ್ರಪಂಚದ ಭಾರಕೆ ಭುಜಮಿತ್ತರ್! ಉತ್ಕಟ
ಸೇವೆಯಾಕಾಂಕ್ಷೆ ಸುಮ್ಮನಿರ್ಪುದು ಸಾಧ್ಯಮೇ?
ಬೆಂಕಿಕಿಡಿ ಉಳಿಯಲಕ್ಕುಮೆ ಭರಣಿಯಲಿ? ಪ್ರತಿ
ಚಣಚಣಂ ಚಟುವಟಿಕೆಯ ಬೀಡಾದುದು ತಾನ್
ಅರಿಯದೊಲ್. ಗುಪ್ತಗತಿಯ ಪತ್ರಿಕಾ ಪ್ರಕಾಶನ
ಸಾಮಾನ್ಯಮಲ್ತು. ಮೊದಲಪ್ಪ ಪ್ರಕಟಣೆಯೇ
ದಿವ್ಯ ಸಂಕಷ್ಟಂ! ಇಂ ಭಾರತಕೆ ಕಳಿಪುವಾ
ಪರಮ ಕಜ್ಜಂ ಕೈಗೂಡಿಪುದು ಪ್ರಾಣಂ ಕೊರಳ್
ಮಿಡಿವನಿತು ಸಂಕಟಂ. ಗುಪ್ತ ಕಾರ್ಯಾಗಾರ
ಗುಪ್ತ ಆಯೋಜನಾ, ಗುಪ್ತ ಕರ್ಮಠ ಗುಪ್ತ
ಮಯವೆ ಎಲ್ಲ. ಆದೊಡದು ಆಂಗ್ಲೇಯ ಹದ್ದಿನ
ದೃಷ್ಟಿಗೇಂ ಅಸಾಧ್ಯಮೆ? ಗೂಢಚರರ್ ಸಮಯ
ಸಾಧಿಸಲ್ ಕಾದಿರ್ದರ್ ಗೃದ್ಧನೊಲ್! ಫ್ರೆಂಚ್ ಗಡಿ
ಗೆರೆಯಂ ನಸುದಾಂಟಿದಾಗಳ್ತೆ ಪಿಡಿದು ಜಡಿದಾರ್ದು
ರೊಚ್ಚಿನ ಕಿಡಿಕಾರ್ದು ಪತ್ರಿಕೆಯ ಕಟ್ಟುಗಳಂ
ಕಸಿದು ಅಗ್ನಿಗಾಹುತಿಗೈದು ವಿಧ್ವಂಸಗೊಳಿಸಿ
ಸೇಡು ತೀರ್ಚಿಕೊಂಡರ್ ಭಾರತಂ ಪುಗುವ ಮುನ್ನ
ವಂದೇ ಮಾತರಂ ಪತ್ರಿಕೆಯಲಿ ಬ್ರಿಟಿಷರ
ಅಹಂಕಾರ-ದೌರ್ಜನ್ಯ-ಕುಯುಕ್ತಿ-ಕುತಂತ್ರಗಳ
ನಿಜರೂಪದ ಮಹಾ ಪೂರವೇ ಹರಿದಿರ್ದುದಾ
ಮುಗ್ಧದುಗ್ಧ ಜನಕೋಟಿಯ ಅಂತರಂಗಮಂ
ಪುಗುವವೊಲ್!

ಆದೊಡೇಂ? ಬಿರುನುಡಿಯ ಪತ್ರಿಕಾ
ಸಂಪುಟಂ ಭಾರತಂ ಪುಗದಾಯ್ತು. ಭಂಗದಿಂ
ಶ್ರಮದಾನದಿಂಗೈದ ಕಾರ್ಯಂ ನೀರಿನೊಳ್
ಹೋಮಗೈದ ಮಾಳ್ಕೆಯಲಿ ವ್ಯರ್ಥಮಾದ ಸುದ್ದಿ
ಭಾರತಂ ಮುಟ್ಟಿ ಜನಜಂಗುಳಿಯ ಕೆಚ್ಚು ಕೆರಳಿ
ನೂರಾಯ್ತು. ಮನಮನಂ ಬೆಸೆದವೊಲ್ ಒಂದಾಯ್ತು.

ಮಾಡಿ ಮಡಿವ ಯೋಜನೆ ಹರಡಿದುದು ಜಗದಗಲ.
ಮುಗಿಲಗಲ. ಜನಂ ತೇಂಕಾಡಿದುದು ಉತ್ಸಾಹ
ಮೋದದಿಂ.
ಅತ್ತಲಾ ಪತ್ರಿಕಾ ಜಗತ್ತಂ
ನೆರೆ ಪ್ರಾಂತ್ಯಮಾದ ಹಾಲೆಂಡಿಗೊಯ್ದು ಮುದ್ರಣ
ಕಾರ್ಯಮಂ ಕೈಕೊಂಡರ್. ಆದೊಡದೇಂ ಸುಲಭ
ಸಾಧ್ಯಮೇ ಪರದೇಶದಲಿ? ಕೈಯೊಳ್ ದ್ರವ್ಯಂ
ಕಿಂಚಿತ್ತಿರದ ಕಾಲ; ಅಜ್ಞಾತ ವಾಸದಲಿ
ಕಾಲಹರಣ ಎಂದೆನಲ್ ಎಂತಿದರ ನಿರ್ವಹಣೆ?
ನೀ ಯೋಚಿಸು ಪ್ರಜ್ಞಾನ ಮನವೇ! ಭಾರತಿಯ
ಪರಮ ಸೇವೆಯಲಿ ಮನವಿಟ್ಟು ಜೀವನ ತ್ಯಾಗಿ-
ಗಳಪ್ಪ ಮಹಾ ದೇಶ ಸೇವಕರ ನೆನೆ ಮನವೆ!
ಹಾ! ಹೆಜ್ಜೆ ಮುಂದಿಡೆ ಹಣದ ಮುಗ್ಗಟ್ಟು, ಹೆಜ್ಜೆ
ಹಿಂದಿಡೆ ಗತಿಯ ಮುಗ್ಗಟ್ಟು. ಬದುಕು ದುಸ್ತರ. ಮಾನಸಿಕ
ಹಿಂಸೆ; ಆತ್ಮಿಕ ಹಿಂಸೆಗಳ ಪ್ರಕಾಂಡ ಕಾಂಡಂ
ಪ್ರಾಣ ಕಣಮಂ ಹಿಂಡುತಿರ್ದುದು ಕರ್ಬುನದ
ಗಾಣಕಿತ್ತವೊಲ್! ಆದೊಡಂ ಗುರಿ ಮುಟ್ಟದಿರೆ
ಬದುಕು ವ್ಯರ್ಥ. ಎಂತಾದೊಡಂ ಗುರಿ ಮುಟ್ಟುವುದೆ
ರಾಷ್ಟ್ರೀಯ ಪರಮ ಸೇವೆ ಎಂಬ ಪಣ ಮನದೊಳ್.
ಭಂಗ ಬನ್ನಮೆನಿತಿರ್ದೊಡಂ ಬಿಡದೆ ಪತ್ರಿಕೆ
ಪ್ರಕಟಣ ಕಾರ್ಯಮಂ ಬಹುಕಷ್ಟದಿಂ ನಡೆಸಿ
ಕಳಿಪಿದರ್ ಭಾರತಕೆ. ಆಂಗ್ಲೇಯ ಪ್ರಭುತ್ವ
ಅಲ್ಲಿಗುಂ ಕೈಚಾಚೆ ಮತ್ತಂ ಕಠಿಣ ಜಟಿಲ
ಪ್ರಸಂಗ ಧುತ್ತೆಂದು ಮುಂಗೆತ್ತುದು ಚಣದೊಳ್.
ಪತ್ರಿಕಾ ಪ್ರತಿಗಳ್ ಭಾರತಂ ಮುಟ್ಟದೊಲ್
ವಿಧ್ವಂಸಂ ರಾಷ್ಟ್ರ ಭಕ್ತರ್‌ನೋಳ್ಪ ಕಣ್ಮುಂತೆ!
ಅಂತಿಂತು ಭಂಗದಿಂ ರಾಷ್ಟ್ರಮಂ ಸೇರ್ದ ಹಲ
ಕೆಲ ಪ್ರತಿಗಳಿಂ ಉತ್ತೇಜಿತ ಜನತತಿಯುಂ

ಭುಗಿಲೆಳ್ದುದು ಉರಿವಗ್ಗಿ ನೆಯ್ಯುಂಡವೊಲ್
ಸ್ವಾರ್ಥ ಸಾಧಕರ ಭಂಡತನಕದು ಮುಟ್ಟುಗುಮೆ?
ಐಶ್ವರ್ಯಮಮಂ ಮೊಗೆಮೊಗೆದುಂಡೊಡಲ್ ಸುಲಭದಿ
ಬಿಡಲೊಪ್ಪುಗುಮೆ? ಪಟ್ಟು ಬಿಡದೆ ಅಧಿಕಾರದಿಂ
ಸ್ವಾತಂತ್ರ್ಯ ಬಂಡುಕೋರರಂ ಬೊಗ್ಗು ಬಡಿಯುತ
ತಮ್ಮೊಡಲ್‌ದುಂಬ ಪೇಸು ಜನ್ಮಕೆ ಕರುಣೆ-ದಯೆ
ಇರ್ಪುದೇಂ? ರಾಷ್ಟ್ರೀಯ ಜನತೆ ನೆರೆಮುಪವಾಸ
ಇರ್ದುದಂ ಕಣ್ಣಿಂದೆ ಕಂಡು ಕಾಣುತೆ ದೋಚಿ
ಕೊಂಬ ಧೂರ್ತಾಂಗ್ಲೇಯರ ಕೈಲಿ ಅದೃಷ್ಟವಂ
ಅಡವಿಟ್ಟು ಕಣ್ಣೀರ ಬಾಳಿಗೆ ಅಕ್ಷತೆಯಿಟ್ಟ
ಬುದ್ಧಿಹೀನರ ಸಂತತಿಯಿಂದು ದಾರಿದ್ರ್ಯದ
ಬೆಂಕೆಯಲಿ ಬೇಯುತಿದೆ ಲೋಕ ಪ್ರಜ್ಞೆಯುಮುಳ್ಳ
ಕೋಟ್ಯಾಂತರ ಬುದ್ಧಿಜೀವಿಗಳ ಕಣ್ಮುಂತೆ!
ಮೇಡಂ ಕಾಮಾ ಭಂಗವಟ್ಟೊಡಂ ಕೈಗೂಡಿ
ಬರದ ಕಜ್ಜದಿಂ ಮನನೊಂದು ಮುಂದಿನ ಕಾರ್ಯ
ಕ್ರಮಕ್ಕಣಿಗೊಂಡಳ್. ಪರದೇಶದ ರಕ್ಷೆಯಲ್ಲಿ
ಮುದ್ರಣಂ ಕಂಡ ಪತ್ರಿಕೆ ಭಾರತಮಂ ಪುಗ-
ದಾಗೆ ಕಾರ್ಯಕಾರಣಗಳ ಕಮನೀಯ ಕಠೋರ
ವಿದ್ಯಮಾನಂ ಕಣ್ಮುಂತೆ ನಲಿದುದು ವಿಕೃತ
ರೂಪಿನಿಂ. ಆದೊಡಂ, ಧೃತಿಗೆಡಲಿಲ್ಲವಾ
ಕರ್ಮಶೀಲೆ. ಒಂದರ ಬಳಿಕಿನ್ನೊಂದುಜ್ಜುಗಂ
ಮೈವೆತ್ತು ಮೂರ್ತಿಮತ್ತಾಗಿ ನಿಂದತ್ತು ಅತಿ
ವಿಧೇಯತೆಯ ಊಳಿಗನೊಲ್! ಚಿತ್ತಭಿತ್ತಿಯಲಿ
ಈಯೊಂದು ರುದ್ರನಾಟಕದ ಕಠಿಣ ಪ್ರಸಂಗದಿಂ
ಪಾರಾಗುವೊಡೆ ಸೂಕ್ಷ್ಮಾತಿಸೂಕ್ಷ್ಮ ಬೌದ್ಧಿಕ
ಸ್ತರ ಕೆಚ್ಚಾಗದೆ ಗತಿಯಿಲ್ಲಂ. ಸತ್ಯ-ಶಾಂತಿ-
ಶಿಸ್ತುಗಳ ನೇಮದಲಿ ಸ್ವಾತಂತ್ರ್ಯ ಸಂಗ್ರಾಮ
ನಿಷ್ಠೆಯಿಂ ಶ್ರದ್ಧೆಯಿಂ ನಡೆದಿರಲ್, ಕೂರತರ

ಉತ್ತರಂ ಸುಡುಗೋಲಿ ಮೂಲಕಮೆನಲ್ ಶಾಂತಿ-
ಶಿಸ್ತುಗಳ್ ಎಂತು ಉಳಿದಪವು ಮನಮನದಿ?
ಕಾಲಕ್ರಮದಲಿ ಶಾಂತಿ-ಶಿಸ್ತುಗಳ್ ಗಾಳಿಯ
ಬೆನ್ನೇರಿ ಪೋಗದೇಂ ದಿಕ್ಕುದೆಸೆಗೆತ್ತಪೊಲ್!
ಎನಿತೆನಿತೂ ಬಾರಿ ಶಾಂತಿ-ಶಿಸ್ತುಗಳ ನೇಮದಲಿ
ಪ್ರತೀಕಾರದ ರೊಚ್ಚು ಅಕಾಂಡತಾಂಡವ ನೃತ್ಯ
ಗೈದ ಘೋರ ಪ್ರಕರಣಗಳಿಂಗು ಕೊರಮಿಲ್ಲಂ!
        ಸಾವಿರದೊಂಭೈನೂರೆಂಟರಲ್ಲಿ ಭಾರತೀಯರ
ಸ್ವಾತಂತ್ರ್ಯ ಸಂಗ್ರಾಮ ಆರಂಭಿಸಿದ ನೆನಹು
ಪರಿಸ್ಫುಟಮೈಸೆ, ಅರ್ಧ ಶತಮಾನಂ ತುಂಬಿದ
ಶುಭದಿನಂ ಮಿಸುನಿ ಹಬ್ಬವಾಚರಿಪ ಉದ್ದೇಶ
ಮೂಡಿಬರೆ ಕಾರ್ಯಕ್ರಮಂ ರೂಪಿಸಿದರ್ ವೀರ
ಸಾವರ್‌ಕರ್. ಮತ್ತಂ ಸ್ವಾತಂತ್ರ್ಯ ಚಳವಳಿಯ
ದಳ್ಳುರಿಯಲಿ ಸುಟ್ಟು ಹುತಾತ್ಮರೈದ ಕುಟುಂಬ
ಪರಿವಾರಕೆ ಕಿರು ಸೇವೆಗೈಯಲ್ ಮೇಡಂ-ಳ
ಪ್ರಯತ್ನ ಕಿರಿದಲ್ಲಂ. ನೆರೆಹೊರೆಯ ಪ್ರಾಂತ್ಯದಿಂ
ಅಮಿತ ದ್ರವ್ಯಮಂ ಸಂಗ್ರಹಿಸಿ ಕಳುಹಿಸಿದಳೈ
ಭಾರತಕೆ. ಅಂದು, ರಾಷ್ಟ್ರಕಾಗಿ ಅಸು ತೆತ್ತವರ
ನೆನೆನೆನೆದು ಅರ್ಧ ಶತಮಾನೋತ್ಸವಗೈಯಲ್,
ರಾಷ್ಟ್ರದಾದ್ಯಂತ ಕಣ್ಣೀರಿನ ಕಾಣಿಕೆಯಂ
ಕಾಯಾ ವಾಚಾ ಮನಸಾ ಸಲ್ಲಿಸಿದರ್; ಭಾರತ
ರಾಷ್ಟ್ರದಾದ್ಯಂತ ಸನ್ಮತಿಯ ಪರಮ ಜನಗಣ.
        ಈಜಿಪ್ಟಿನ ರಾಷ್ಟ್ರೀಯ ಸಮ್ಮೇಳನ ನಡೆದುದು
ಸಾವಿರದೊಂಭೈನೂರಹತ್ತರಲಿ. ಆ ಸಭೆಯ
ವೇದಿಕೆಯನೇರಿದಳ್ ಕಾಮಾ, ಭಾರತದ ಏಕ
ಮಾತ್ರ ಪ್ರತಿನಿಧಿಯಾಗಿ! ಬೃಹದ್ ಸಭೆಯಲ್ಲಿ
ಮಿಂಚುಗುವ ಚುಚ್ಚುಗಣ್ಣುಗಳ ಹೊಳಪು. ಪ್ರಥಮ
ದಿಟ್ಟಿಗೆ ಎದೆ ತಲ್ಲಣಿಸುವೊಲ್ ಪ್ರತಿಷ್ಠಿತ ಮಹಾ

ಕಟ್ಟಾಳುಗಳ ಸಂಘ! ಭಾರತ ಪ್ರತಿನಿಧಿ
ಎನಲ್ಕಾ ದಟ್ಟ ದಾರಿದ್ರ್ಯದ ಪ್ರತೀಕಮೆಂದು
ಉದಾಸೀನ ಚಿತ್ರಮಮಂ ಚಿತ್ರಿಸಿರ್ದ ಕಣ್
ನೆಟ್ಟ ನೋಟಮಮಂ ಕೀಲಿಸದೆ ನೋಡಿತತ್ತಲ್
ಅಃ! ಎಂಥ ಮಹತ್ ಪ್ರತಿಮೆ! ಸೋಳ್ಪ ಕಣ್ ಮಂತ್ರ
ಮುಗ್ಧವಾಗುವೊಲ್!
                    ಕಾಮಾ ಸಭೆಯನೊರ್ಮೆ ಎದೆ
ಇಕ್ಕದೊಲ್ ನೋಡಿ ನುಡಿದಳ್ 'ಸೋದರರೆ! ಇಲ್ಲಿ
ಕಾಂಬುದೆನ್ನ ದೃಷ್ಟಿಗೆ ಈಜಿಪ್ಟಿನರ್ಧಾಂಶ
ಮಾತ್ರಮೆನೆ ಬೆಸನಮಕ್ಕು. ನಾರೀ ಜನರೇಕೆ
ಇಲ್ಲಿಗೈತರಲಿಲ್ಲೆ? ಈಜಿಪ್ಟಿನಿನ್ನರ್ಧಾಂಶ
ಎಲ್ಲಿ? ಹೇ, ಈಜಿಪ್ಟಿನ ಪುತ್ರರೆ! ನಿಂನಿಮ್ಮ
ತಾಯಂದಿರೆಲ್ಲಿ? ಸೋದರಿಯರೆಲ್ಲಿ? ಪೇಳಿಮ್!
ನಿಮ್ಮ ತೊಟ್ಟಲ್‌ದೂಗುವ ಕೈ, ನಿಮ್ಮನುಣಿಸುವ
ಕೈ, ವ್ಯಕ್ತಿಯಂ ರೂಪಿಸುವ ಕೈ ಎಂಬುದಂ
ಮರೆವಿರೇಕೆ? ದೇಶವಂ ಕಟ್ಟುವೊಡೆ ಸ್ತ್ರೀ ಪಾತ್ರ
ಮಹತ್ತರ! ಜೀವನೀರಂಗದಲಿ ಹೆಣ್ಣಿರದೆ
ಗಂಡು ಸಾಧಿಸುವುದುಂಟೆ? ಪೆಣ್ಣಿನ ಸಹಕಾರ
ಸಾಮಾಜಿಕ ರಂಗಕೆ ಮಾತ್ರಮೆಂ ಯೋಚಿಸಿರ್ಕೆ!
ರಾಜಕೀಯ-ಆಧ್ಯಾತ್ಮಿಕ-ಸಾಂಸ್ಕೃತಿಕ ಮೇಣ್
ಸಂಸಾರ ಕ್ಷೇತ್ರ ಪೆಣ್ಣಿನಾಶ್ರಯಮಿಲ್ಲದೆಯೆ
ತೊಳಗಿ ಬೆಳಗುವುದೆ ಪೇಳಿಮ್! ಪುಟ್ಟಿನಿಂ ತಮ್ಮಗಳ
ಒಡನಾಡಿಯಲ್ತೆ ಪೆಣ್? ಮತ್ತೇಕೆ ಪಿಂತಿಡುವ
ಬಡ ಭಾವನೆ?' ಪ್ರಶ್ನೆಯ ಮೇಲೆ ಪ್ರಶ್ನೆ ಮಾಡಿಗೆ
ಮುಟ್ಟಿದತ್ತು ಮರುದನಿ ಪಡೆವವೊಲ್!
                              ಸಭೆಯೊಳ್
ಸ್ತ್ರೀಯರಿರದಿರ್ದುದು ದಿಟಮಿರೆ ಸಭಾಸದರ್ ಆ
ಪ್ರಶ್ನಗುಚ್ಛಗಳಿಗುತ್ತರಿಸಲಾರದೆ ಗಳಿಗೆ-

ಯೊಂದು ತಬ್ಬಿಬ್ಬಾದೊಲ್ ಪರಸ್ಪರ ಮುಖ ನೋಡಿ
ವಿಸ್ಮಿತ ವಿಷಾದ ಕಳೆ ಬೆಳಗಿದರ್ ಮೊಗದೊಳ್.
ಅನಂತರಮಾ ಮೇಡಂ ಕಾಮಾ ಪ್ರವಾಸಮಂ
ಕೈಕೊಂಡು ದೇಶದೊಳ್ ಪ್ರಚಾರ ಭಾಷಣಂ
ಗೈದು ಪತ್ರಿಕಾ ಸುದ್ದಿಯ ಮೂಲಕ ಭಾರತ
ರಾಷ್ಟ್ರೀಯ ಹೃತ್ ಕದ ತಟ್ಟದಲ್ ಎಚ್ಚರಿಸೆ.
ಮೂಲೆ ಮೂಲೆಯಲುಳಿದ ಸುಪ್ತ ಚೇತನ ಮೇಣ್
ಜಡ ಚೇತನಗಳನೆಚ್ಚರಿಪಂತೆ ತಿವಿತಿವಿದು!
ದೂರದೂರ ದೇಶದೊಳ್ ನೆಲೆನಿಂದು ಕಿಂಚಿತ್
ಧೃತಿಗೆಡದೆ ಭಾರತ ಜನನಿಯ ಪರಮ ಸೇವೆ
ಗೈದನನ್ಯ ಪುಣ್ಯಾವನಿ ಮೇಡಂ ಕಾಮಾ!
ದೇಶ ಪ್ರಭೃತಿಗಳ್, ಪತ್ರಿಕೆಗಳ್ ಮತ್ತಂ
ಜನ ಸಾಮಾನ್ಯರ್ ಕೊರಳ್‌ತುಂಬಿ ಬಾಯಿತುಂಬಿ
ಪಾಡಿ ಪೊಗಳಿದರ್ ಕಾಮಾ ಚಿರಾಯುವಾಗಲಿ!
ಎಂದು. ಏನಾ ಪೆಣ್ಮಣಿಯ ಸಾಹಸ ಕಾರ್ಯಂ!
ಧೈರ್ಯವೇ ಧೈರ್ಯಂ! ಸುಚೇತನಮೆ ಚೇತನಂ!
ಭಾರತ ರಾಷ್ಟ್ರೀಯ ರಾಜಕೀಯಾಂದೋಲನ
ರಂಗದಲಿ ಓರ್ವ ನೆಲಗಚ್ಚಿದೊಡೆ ಹತ್ತಾಗಿ
ನುಗ್ಗಿ ಬಹ ಜನ ಜಂಗುಳಿಯಿಂ ಮುಖ ಭಂಗಮಾಗಿ
ಸೋಲುವಾ ಸಂಕೆಯಲಿ ತೊಳಲುತಿರೆ ಆಂಗ್ಲೇಯ
ಪ್ರಭುತ್ವ; ಪ್ರಪಂಚ ಪ್ರಥಮ ವಿಶ್ವಸಮರಂ
ಭೋಂಕನೆ ಭುಗಿಲೆದ್ದತ್ತು ಸಾವಿರದೊಂಭೈನೂ-
ರ ಹದಿನಾಲ್ಕರಲಿ ಸಮರ ರಣರಣಿಸುತಿರಲಾ
ಆಂಗ್ಲ ಸಾಮ್ರಾಜ್ಯ ಅತ್ತ 'ಯುದ್ಧ' ಇತ್ತಲಿತ್ತಲ್
'ವಿರುದ್ಧ' ರಣದ್ವಯದ ಕತ್ತರಿಯಲಿ ಸಿಲ್ಕಿರೆ
ತೊಳಲಿದತ್ತು ಪರಿಪರಿಯ ಕಠಿಣ ಸಂತ್ರಾಸದಿಂ.
ಆಗಳೇಂ? ಮೇಡಂ ಕಾಮಾಳ ಚಟುವಟಿಕೆ?
ಬ್ರಿಟಿಷರ ನಿರಂಕುಶ ಪ್ರಭುತ್ವವನ್ ಖಂಡಿಸೆ

ಲೆಕ್ಕಣಿಕೆಯ ಕಾವು ಕಿಡಿ ಕಾರ್ವನಿತು ತೀಕ್ಷ್ಣಂ!
ಬ್ರಿಟಿಷರ ಸೇವೆಯೊಳ್ ಮೈಮರೆತು ಕೆಚ್ಚಿನಿಂ
ಯುದ್ಧಕಿಳಿದ ಭಾರತೀಯ ಸೈನಿಕ ಬಂಧು
ಜನರಂ ಕುರಿತು ದಿಟ್ಟ ವಾಣಿಯಲಿ ''ಕೇಳಿರೈ!
ಭಾರತಾಂಬೆಯ ಪುತ್ರರೇ! ನೀವಿದೇಂ ಈ
ಪರಿ ಮೋಸ ಹೋಗುವಿರಿ? ನೀಂ ಆಂಗ್ಲರ ವತಿಯಿಂ
ಯುದ್ಧಗೈದೊಡೇನಕ್ಕು? ನೀಮಿಂತು ಭೀಕರ
ಯುದ್ಧದಲಿ ಕಾದಾಡಿ ಸಾಯ್ವುದು ಭಾರತಕಾಗಿ
ಅಲ್ಲ, ಬ್ರಿಟಿಷರಿಗಾಗಿ! ಭಾರತ ಮಾತೆಯಾ
ಕೈ ಕೋಳಗಳಂ ಕಳಚಲ್ ನೀಮ್ ಸಿದ್ಧರಾಗಿ!
ಆಂಗ್ಲರಿಗೆ ನೆರಂ ನೀಡಿದೊಡೆ ಭಾರತ ಜನನಿಯ
ಕೈಕೋಳಗಳಂ ಬಿಗಿಗೊಳಿಸುವುದಕದು ನಾಂದಿ!
ನಿಮ್ಮ ತಾಯಂ ಬಂಧನದೊಳಿಟ್ಟ ಧೂರ್ತರ್ಗೆ
ನೆರವೀವರೇಂ? ಛಿಃ! ಇದೇಂ ನಿಮ್ಮಯ ಪೌರುಷ?
ಇಂದೆ ನಿಮ್ಮ ಶಸ್ತ್ರಗಳಂ ಧೈರ್ಯದಿಂ ಕೈವಿಡಿ!
ಎಂದೆಲ್ಲ ಸೈನಿಕರ್ಗೆ ಮಂದಟ್ಟಾಗುವೊಲ್
ನುಡಿಸಿದಳ್ ಕೆಚ್ಚಿನಿಂ ಕಿಚ್ಚಿನಿಂ ಸಮಯೋಚಿತ
ಪರಿಜ್ಞಾನದಿಂ. ಆಗಳಾ ಸುದ್ದಿ ಮಿಂಚಿನೊಲ್
ಮುಟ್ಟಿತು ಫ್ರೆಂಚ್ ಪ್ರಭುತ್ವಕೆ. ಮುಂದದರಿಂ ನೆರೆ
ಪ್ರಾಂತ್ಯಂ ಸಿಡಿದು ರೊಚ್ಚಿಗೇಳ್ವುದೆಂಬ ಪರಿಜ್ಞಾನ
ಘನಿಸಿ ಅವಳಂ ಗೃಹ ಬಂಧನದೊಳಿಟ್ಟಿತು ಫ್ರೆಂಚ್
ಸರಕಾರ!
ಆಂಗ್ಲರಿಗೆ ತಮ್ಮಯ ನೆರೆಯೊಳಿರ್ದು
ಮಂಗನಂತೆಮ್ಮನಾಡಿಸುವಾಕೆಯಂ ತಮ್ಮ
ಇಕ್ಕಳದಲಿ ಸಿಲ್ಕಿಸಲಾರದ ಕಡು ಸಂಕಟ
ಮೇಣ್ ಒಡಲ್ಗಿಚ್ಚಿನಪರಿಮಿತ ದಳ್ಳುರಿಯ ಬೇಗೆ.
ಅಂತಿಂತು ಒಳಗೊಳಗೆ ಕುದಿಕುದಿದು ಭಾರತಕೆ
ಅವಳಂ ಬಹಿಷ್ಕರಿಸಿ ನೀಡಿರ್ದ ಆಜ್ಞೆಯಂ

ಪಿಂತಿಕ್ಕಿದರ್ ಆಕೆ ಹಿಂತಿರುಗಿ ಬಂದ ಬಳಿಕ
ನಿರ್ಣಯಮೆನುತ್ತೆ.
ತರುವಾಯಿ ಫ್ರೆಂಚ್ ಪ್ರಭುತ್ವ
ಮೇಣ್ ಮೇಡಂ ಕಾಮಾಳಿಂಗೆ ಬಹಿಷ್ಕಾರಮಂ
ಕಿತ್ತೊಗೆದ ವಿಚಾರಂ ತಿಳಿಪಿ ಪರಿಣಾಮಮಂ
ನಿರೀಕ್ಷಿಸುತೆ ಕಾದು ಕುಳಿತಿರ್ದುದು ಪೆರ್ಬುಲಿಯೊಲ್!
ಆದರೇಂ? ಫ್ರೆಂಚ್ ಪ್ರಭುತ್ವ ಗಮನವೀಯದೆ
ಕಸದ ಬುಟ್ಟಿಗೊಗೆಯಿತು ಆ ಕಪಟ ನಿರೂಪವಂ.
ಫ್ರೆಂಚ್ ಸರಕಾರ ಅದಂ ಮಾನಿಸದಿರೆ ಬ್ರಿಟಿಷ್
ಕುಯುಕ್ತಿ ಕುಸಿದು ಬಿಳ್ದು ಮಣ್ಣಿನಲಿ ಮಣ್ಣಾಯ್ತು.
ಇಂತೊಂದು ಕಟ್ಟೊಪ್ಪಾಯದ ಗೃಹಬಂಧನಂ
ಇಡೀ ಜೀವಮಾನದ ಕಾರ್ಯ ಚಟುವಟಿಕೆಗಳಿಗೆ
ವಿಶ್ರಾಂತಿ ವೇಳ್ಕುಮೆಂದೆಂದು ಬಗೆದುದೋ ವಿಧಿ
ಎನಲ್ಕೆ ವಿಶ್ರಾಂತಿಯೊದವಿ ಶ್ರಾಂತ ಜೀವಂ
ಪಡೆದುದು ಅಮಿತ ವಿಶ್ರಾಂತಿಯಂ. ಆದೊಡದಂ
ಒಲ್ಲದಿರ್ದ ಹೃನ್ಮನಗಳ್ ಗ್ರಂಥ ಪಠಣದೊಳ್
ಮುಳುಗಿರೆ ದಿನಮಾನಂ ಉರುಳಿದುದೆ ತನಗಿನಿತು
ತಿಳಿಯದೊಲಾಯ್ತು. ಗೃಹ ಬಂಧನದ ಕಟ್ಟಳೆಯ
ದಿನಗಳ್ ಕಳೆಯುತಿರ್ದುವು ಸರಾಗ. ತಿಳಿಮನದ
ನಲ್ ಚಿಂತನೆಗೊದವಿತು ಶುಭ ಕಾಲಮಾನಂ.
ಪ್ರಪಂಚ ಯುದ್ಧ; ಭಾರತದ ರಣಗೋಳು, ಸೆಲೆ
ಮನಃಶಾಂತಿಯಂ ಕದಡುತಿರ್ದುದು ಮಧ್ಯೆಮಧ್ಯೆ.
ಗೃಹ ಬಂಧನದೊಳ್ ತಪಸ್ವಿನಿಯೆನೆ ಅನುಪಮ
ಧ್ಯಾನಯೋಗಿ ತಾನಾದಳ್ ಜಗತ್ ಸಂಪರ್ಕ
ದೂರಾಗಿ. ಕಳೆಯುತಿರೆ ಕಾಲಮಾನಂ ಪರಿವ
ನದಿ ನೀರಿನೊಲ್, ತನ್ನಂಗಿಯ ಚಿತ್‌ಶ್ರೀ ಭಾವರಸ
ಧಾರೆಯಲಿ ಮಿಂದು ಪ್ಲಾವಿತಂ ಎನೆ, ಜೀವಿತಂ
ಪಕ್ವಾದುದು ಸ್ವರ್ಗದ ಸೋಪಾನ ವೇರೆ ನಿಜ
ವಿಶ್ರಾಂತಿಧಾಮವಂ ಬಯಸಿ.

ಜಂಜಡಂ ಬಗೆಹರಿಯದಿರ್ಪುದೊಂದು ಸಂಕಟ
ಒಡಲ ಕುಡಿಗೆ. ತನ್ನಯ ಜೀವಿತದಲಿ ಸ್ವತಂತ್ರ
ಒದವಿರ್ದೊಡೆ ಬರ್ದುಕು ಸಾರ್ಥಕಂ ಎಂಬೊಂದು
ಆಶಾಜ್ಯೋತಿಯ ಉರಿಕಿಡಿ ಇರ್ದುದು ಎರ್ದೆಯಲಿ.
ಮತ್ತಾ ಮನಃತುಮುಲದಿಂ ಸಂತಸಂ ಮುದುಡೆ
ಶ್ರಾಂತ ಪರಿಶ್ರಾಂತ ಜೀವನೀವಾಹಿನಿಗೆತ್ತ
ವಿಶ್ರಾಂತಿಯಿಂ ಬಂದ ಭಾಗ್ಯಮೇನೂ ಇಲ್ಲಂ.
ಅತಿ ಶ್ರಮಿಕ ಜೀವನದಿಂ, ಬೌದ್ಧಿಕ ತುಮುಲದಿಂ
ಮೇಣ್ ಇಳಿವಯೋಧರ್ಮದಿಂ ಮೇಡಂ ಕಾಮಾ
ಬಳಲಿ ಬೆಂಡಾದಳ್. ಅನ್ನೆಬರಂ ಪರದೇಶದ
ಪ್ರವಾಸದಲಿ ನಾಲ್ವತ್ತು ವರುಷಗಳ್ ಕಳೆದುದು
ಮಾತ್ರವಲ್ಲಂ, ಅಮೂಲ್ಯ ಜೀವಿಯ ಜೀವಮಾ
ನವೇ ಕಳೆದತ್ತು ದೇಶ ಸೇವೆಯ ಕಾರ್ಯದಲಿ.
ಬಾಳ್ ಸಂಜೆಯಡರಿ ಬರೆ ತಾಯ್ನಾಡಂ ಸಂದ-
ರ್ಶಿಸುವ ಇಚ್ಛೆಯುಂ ಮೂಡಿದುದು ಹೃನ್ಮನಗಳಲಿ.
ಪ್ರಪಂಚ ಯುದ್ಧರಂಗವೆಬ್ಬಿಸಿದ ಬಿಸಿ ರಣ
ರಣಿಸುತಿರೆ ಅನುಭವದ ಬೆಂಕಿ ಸುಟ್ಟುರಿಸಿದುದು
ತನುಮನಗಳಂ. ಆಂಗ್ಲ ಪ್ರಭುತ್ವಂ ಯಾವೊಂದಂ
ಸ್ಥಿರೀಕರಿಸದೆ ಕಣ್ ಮುಚ್ಚಾಲೆಯಾಡುತಿರೆ
ಮಂತ್ರ ಮಾಯಾಧಾಟದೊಲ್, ಎಲ್ಲಂ ಅನಿಶ್ಚಿತಂ.
ಪ್ರಪಂಚ ಯುದ್ಧ ಮುಗಿಯುವ ಮುನ್ನ ಜಿನೀವಾ
ದೊಳಿರ್ದ ಯುದ್ಧ ಖೈದಿಗಳ ಸೇವೆಗೈಯಲ್ ಮೇಡಂ
ಕಾಮಾ ಮುಂದಾಗೆ ತಡೆ ಹಾಕಿತು ಫ್ರೆಂಚ್ ಪ್ರಭುತ್ವ.
ಗೃಹಬಂಧದೊಳ್ ಸಿಲ್ಕಿರಲ್ ಪಂಜರಬದ್ಧ
ಸಿಂಹಿಣಿಯೊಲಾಯ್ತವಳ ಅಮೂಲ್ಯದಿನಮಾನಂ.
ಪ್ರಪಂಚ ಯುದ್ಧ ಮುಗಿದ ಬಳಿಕಂ ನಿರ್ಬಂಧ
ಸಡಲ್ಚಿ ಮೇಡಂ ಕಾಮಾ ಸ್ವಾತಂತ್ರ್ಯ ಪಡೆದೊಡಂ

ಆವೊಳ್ತಿಗೆ ಶರೀರ ಪ್ರಕೃತಿಯ ಸೊಮ್ಮಳಿದು
ಒರ್ಮೆ ಚೇತರಿಸಿಕೊಂಡೊಡಂ ಮತ್ತಮತ್ತಂ
ಕೆಡುತಲಿರ್ದುದು ಪ್ರಾಣ ಹಿಂಡುವೊಲ್! ಯುದ್ಧದಾ
ಕಾವಾರಿ ಶಾಂತಿ ತಾನಾದ ಬಳಿಕಂ, ಆಂಗ್ಲ
ಪ್ರಭುತ್ವಂ ಯುದ್ಧವಿಮುಖಮಾದೊಡಂ ಕಿಂಚಿತ್
ಮಣಿಯಲಿಲ್ಲಂ, ಭಾರತದ ಧರ್ಮಯುದ್ಧ ತಾಂ
ಮಂಡಿಸಿದ ಸ್ವಾತಂತ್ರ್ಯ ಬೇಡಿಕೆಗೆ. ಕಡುಚಿಂತೆ-
ಚಿಂತನೆಗಳ್ ತುಂಬಿದುವು ಚಿತ್ಕೋಶಂ ಬಿರಿವೊಲ್!
ವಯೋಮಾನಂ ಎಪ್ಪತ್ತರ ರೇಖೆಯಂ ಮುಟ್ಟಿ
ದಾಂಟುತಿರೆ ನಾಲ್ವತ್ತು ವರ್ಷಮಾನದ ಹಿಂದೆ
ಬಿಟ್ಟು ಬಂದ ಭಾರತದೇಶಮಂ ಸಂದರ್ಶಿಸೆ
ಹಂಬಲಿಸಿತು ಜೀವ. ಅನಿತರೊಳ್ ಪ್ರಭುತ್ವಂ
ಮತ್ತಂ ಜಡಿದಿರ್ದುದು ಬಹಿಷ್ಕಾರದ ಮಾರ್ರೊಡ್ಡು!
ಏಗಳುಂ ಹೋರಾಟಮೆ ಜೀವನ ರಂಗದಲಿ,
ಆಂಗ್ಲ ಪ್ರಭುತ್ವದನುಮತಿಯಂಬಡೆಯೆ ಮತ್ತೆ
ಪ್ರಾರಂಭಮಾದತ್ತು ಹೋರಾಟದಂಕಣಂ
ಚಳವಳಿಯ ಪಾಂಗಿನಿಂ! ಪತ್ರ ವ್ಯವಹಾರಂ
ಸಾಗಿದತ್ತು ಬೃಹದ್ ಸಮಸ್ಯೆಯಂ ವಿಶ್ಲೇಷಿಸಿ
ಬಗೆ ಹರಿಪೊಲ್! ಇನ್ನೆಂದೂ ಮೇಡಂ ಕಾಮಾ
ಭಾರತದ ರಾಜಕೀಯದೊಳ್ ಭಾಗಗೊಳ್ಳಲ್
ಅವಕಾಶಮಿಲ್ಲೆಂದು ಕಟ್ಟೆಚ್ಚರಮಿತ್ತಿತು
ಆಂಗ್ಲ ಸರಕಾರ. ಈಯೊಂದು ವ್ಯವಹಾರದಲಿ
ಸರ್ ಕೋವಾಸ್‌ಜಿ ಎಂಬ ಪ್ರಮುಖ ವ್ಯಕ್ತಿಯೇ
ಮುಂದಿರ್ದೊಡಂ ಅಮಿತ ವ್ಯರ್ಥ ಕಾಲಹರಣಂ.
ಮೇಡಂ ಕಾಮಾ ಪ್ರಭುತ್ವದ ಶರತ್ತಿಗೆ ಮಣಿಯೆ
ಒಪ್ಪದಿರೆ ಸರ್‌ಕೋವಾಸ್‌ಜಿಯ ಪ್ರಯತ್ನದಿಂ
ಮನವೊಪ್ಪಿ ಒಡಲ್ತುಂಬಿ ತಾಂ ಪುರುಪುಗೊಂಡಳ್.
ಕಟ್ಟ ಕಡೆಗೆ ಸರ್ ಕೋವಾಸ್‌ಜಿ ಜಹಂಗೀರ್ ಬಲ್

ಶ್ರಮದಿಂ ರಾಯಭಾರವಹಿಸಿ ಒಪ್ಪಂದಮಂ
ಮೂಡಿಸಿರ್ದ ಸಜ್ಜನಂ. ಆ ಅನನ್ಯ ನೆರವಿನಿಂ
ಭಾರತದಭಿಮುಖವಾಗಿ ಸಾಗರ ಯಾನಮಂ
ಕೈಕೊಂಡಳ್ ಶಾಂತ-ಅವಿಶ್ರಾಂತ ಪರಮಯೋಗಿನಿ!
ರಾಷ್ಟ್ರೀಯ ಗೃಹಖಾತೆಯಪ್ಪಣೆಯಂ ಮನದಿ
ಹುಗಿದಿಟ್ಟು; ಅಶಾಂತ ಮನ ಅಶಾಂತ ಹೃದಯಗಳ
ತುಮುಲಮಂ ಪತ್ತಿಕ್ಕಿ, ತನ್ನ ತಾಂ ಸೈತಿಟ್ಟು.
ದೂರ ಸಾಗರಯಾನ ಅಶಕ್ತ ಶರೀರಮಂ
ಮತ್ತಿನಿತು ಅಶಕ್ತಗೊಳಿಸಿತು ರೋಗದೊಳದ್ದಿ.
ತಿಂಗಳೆರಡರ ಮಹಾ ಸಾಗರೀ ಯಾನಮಂ
ಮುಗಿರ್ಚುವನಿತರೊಳ್ ಬಳಲಿ ಬೆಂಡಾಗಿರ್ದುದಾ
ಜೀವ. ತಾಯ್ನಾಡಿನಲಿ ಓಡಾಡಿ ಆನಂದ
ಸುಖಭೋಗಮಂ ಕಾಂಬ ಭಾಗ್ಯಮಿರದೊಂದು ಕಡು
ದುಃಖ ಸಂಕಟಂ. ಕಾಮಾ ಭಾರತ ಭುವಿಯಂ
ಬಿಟ್ಟಾಗಳ್ ತುಂಬು ಜವ್ವನೆ. ನಿಗಿನಿಗಿ ನಲಿವ
ತನುಮನಗಳ್! ದುಡಿಮೆಗೆ ಅಂದಿನಾ ಕಾಲಮಾನ
ಏನೇನ್ ಸಾಲದೆಂಬನಿತು ಘನ ಕಾರ್ಯಭಾರಂ.
        ಇಂದು, ಎಲ್ಲಂ ಬರಿ ಸಪ್ಪೆ, ತಾಂ ಕೈಕೊಂಡ
ದೇಶೋವಿಶಾಲ ಕಾರ್ಯಮಿನ್ನುಂ ಅಪೂರ್ಣಂ.
ಪ್ರೌಢಾವಸ್ಥೆಗೇರಿರ್ದ ಕಾರ್ಯ ಕಲಾಪಂ
ಆಶಾದೀಪ್ತಿಯುರಿಸಿರೆ ಎರ್ದೆಗುಡಿಯಲಿ! ಇನಿತು
ಸಮಾಧಾನಮಿರ್ದುದಲ್ಲದೆ, ಪೂರ್ಣಾನಂದ
ತೋಷಮಂ ಪಡೆದಳಿಲ್ಲಂ ಸ್ವಾತಂತ್ರ್ಯ ಪ್ರೇಮಿ.
ರಾಷ್ಟ್ರ ಸ್ವಾತಂತ್ರ್ಯದ ಕನಸು ನನಸುಗೊಳ್ಳದೆಯೆ
ಮನಶ್ಶಾಂತಿಯುಮಿಲ್ಲ. ರಾಷ್ಟ್ರೀಯ ಪರಿಪುಣ್ಯ
ಭೂಮಿಗೆತ್ತೊಡಂ ಬೃಹದ್ ಭಾರತದರ್ಶನ
ಭಾಗ್ಯಮಿಲ್ಲಂ, ತನ್ನವರಂ ಕೂಡುತೆ ಹೇಳಿ
ಕೇಳಿ ಆನಂದಿಸದವೊಲ್ ಶರೀರ ಸ್ವಾಸ್ಥಂ

ನಿರ್ದಯ ನಿಷ್ಕರುಣೆಗಳಿಂ ದುರ್ವಿಧಿ ಸೆಳೆದತ್ತು.
ಹತ್ತಿರ ಹತ್ತಿರ ಅರ್ಧ ಶತಮಾನವಂ ಭಾರತ
ಸ್ವಾತಂತ್ರ್ಯ ಸಂಗ್ರಾಮದ ಮಹಾಹೋರಾಟದೊಳ್
ಕೆಚ್ಚಿನಿಂ ಸಂದ ದಿನಗಳ ನೆನೆನೆನೆಯುತಲಿ
ಯಾನದ ಪರಿತಾಪವ ಕಳೆದು ಮುಂಬಯಿ ನಗರಂ
ಸೇರಿದ ಸಮಯೆ ಸ್ತೋಲ್ದು ಸುರುಂಟಿರ್ದಳ್ ಕಾಮಾ!
ಆ ಅಪೂರ್ವ ಮಾತಾಮಯಿಯಂ ಜಯ ಘೋಷದ
ಮಹಾಭೇರಿಯಲಿ ಸ್ವಾಗತಿಸೆ ಕಾದಿರ್ದ ಜನ
ಸ್ತೋಮ ತಾಯಿಯ ಸ್ಥಿತಿಗತಿಗಳಂ ಕಣ್ಣಿಂದ
ಕಂಡು ಕುಸಿದೊಡಂ ವೀತಗಾನದೊಳ್ ಪೊಣ್ಮಿದ
ಜಯ ಘೋಷ ಗಗನ ಭೇರಿಯಾದುದು ಒಕ್ಕೊರಲ್
ತುಂಬಿ ಹರಿಯೆ. ನೇಹಿಗರ್ ಬಂಧು ಬಳಗಂ
ಮುಂಗೆತ್ತು ಜಯಘೋಷದಿಂದೆ ಮನೆಗುಯ್ವಬದಲ್
'ಪೆಟಿಟ್ ಹಾಸ್ಪಿಟಲ್' ಎಂದೆಂಬ ಜನ ಸೇವೆಯಾ
ಸಂಸ್ಥೆಯಲಿರಿಸಿ ನಿಷ್ಠೆಯಿಂ ಸೇವೆ ಸಲಿಸಿದರ್.
ಜನಸೇವೆಯ ಸಂಸ್ಥೆಯಲಿ ಏಳೆಂಟು ಮಾಸಗಳ
ಕಾಲ ಸಾವು ಬದುಕಿನ ಹೋರಾಟದಲಿ ಮುಳುಗಿ
ತಾರಾಡಿ ಜೋಕಾಲಿಯಾಡಿತು ಬಳಲಿದ ಜೀವ.
ಕಟ್ಟಕಡೆಗೆ ಮೈಸೋತು ಸಾವಿರದೊಂಬೈನೂರ
ಆಗಸ್ಟ್ ಹದಿಮೂರರಂದು ಮೇಡಂ ಕಾಮಾ
ತಣ್ಣಗೆ ಕಣ್ ಮುಚ್ಚಿ ಪರಂಧಾಮುವನ್ನೈದಳ್
ತನ್ನ ತಾಯ್ನೆಲದಲಿ ಕೊನೆಯಾಸೆಯ ಕೈವಿಟ್ಟು!
ಸ್ವತಂತ್ರ ದೇಶದೊಳ್ ಅಡ್ಡಾಡಿ ಸ್ಥಿತಿಯಂ
ಸ್ವಂತ ಕಂಗಳಿಂ ನೋಡಿ ಸಲಹೆ ಸಹಕಾರದ
ವಿನಿಮಯಗೈವೊಂದು ಪುಣ್ಯ ಸಂತಸ ಕೈಗೂಡಿ
ಬಾರದೊಂದು ನೋವಂ ನುಂಗಿ ಜೀವಿತವನ್ನೆ
ಕೊನೆಗೊಳಿಸಿದಳ್ ಸ್ವಸುಖವನಿನಿತುಣ್ಣದೆಯೆ.
ರುಗ್ಣ ಶಯ್ಯೆಯಲಿ ಮೇಡಂ ಕಾಮಾ ನೀಡಿದ

ಸಂದೇಶ ''ಭಾರತದ ಸ್ವಾಂತಂತ್ರ್ಯಮಂ ಕಳೆದು
ಕೊಂಡೊಡೆ ಸದಾಚಾರಮಂ ಕಳೆದುಕೊಂಡವೊಲ್!
ಎಲ್ಲರೊಗ್ಗೂಡಿ ಸ್ವಾತಂತ್ರ್ಯಕಾಗಿ ದುಡಿಯಿರಿ!
ದಾಸ್ಯ ಮುಕ್ತತೆಗಾಗಿ ಎಲ್ಲ ಸಂಕಷ್ಟಗಳಂ
ಸಹಿಸಿ ಧೀರರಾಗಿ ನಿಲ್ಲಿ! ನಿಮ್ಮ ಧೈರ್ಯಸಾಸ
ಮೇಣ್ ದೇಶಭಕ್ತಿಗಳೆ ಸ್ವಾತಂತ್ರ್ಯ ಪೂರಕಂ
ದಬ್ಬಾಳಿಕೆಯಂ ಕಡು ಕೆಚ್ಚಿನಿಂ ನೆಚ್ಚಿನಿಂ
ವಿರೋಧಿಸಿದೊಡೆ ನೀವ್ ದೇವರಪ್ಪಣೆಯಂ ಪರಿ
ಪಾಲಿಸಿದವೊಲ್ ಎಂದೇ ಭಾವಿಸಿರಿ!'' ಎಂದು
ಕೊರಳುತ್ತುಂಬಿ ನುಡಿದಳ್ ಮೇಡಂ ಕಾಮಾ!

ತಾಯೇ

ಎಂದಿಗೂ ನಿನ್ನಾತ್ಮ ಸತ್ ಶಾಂತಿಯಂ ಪಡೆದು
ಭಾರತ ಗಗನದಲಿ ಉಜ್ವಲ ತಾರೆಯೆನೆ ಬೆಳಗಲಿ!
ನಿನ್ನಮಲ ಕೀರ್ತಿ ಕಸ್ತೂರಿಯ ಪರಿಮಳಮೀ
ರಾಷ್ಟ್ರದಾದ್ಯಂತ ಪಸರಿಸಿ 'ಮಂಗಳ ಭಾರತಿ'
ಎಂದೆಂಬ ಅನ್ಯಾದೃಶ ಉಜ್ವಲ ನಾರಿಯೈಸಿ
ಪರಿಶೋಭಿಸಿ ನೇಪಥ್ಯವೇರಿದ ಮಮತಾಯೆ!
ಕವಯಿತ್ರಿಯ ಕಂಬನಿಯ ಕಾಣಿಕೆಯೊಡಂ ಪರಮ
ಭಕ್ತಿಶ್ರದ್ಧಾಪೂರ್ವಕ ನಮನಮಿದೊ ನಿನ್ನಯ
ಪರಮ ಪುಣ್ಯ ಪಾದದ್ವಯ ಪಂಕೇರುಹಗಳಿಗೆ!

ಓವೊ, ಏ ಭವ್ಯ ನಿರ್ಲಕ್ಷಮೋ ಈ ದೇಶದಲಿ?
ಆ ದಿವ್ಯ ಮಹೋನ್ನತ ಪರಿಪುಣ್ಯ ದೇವತೆಯ
ನೆನಪಿನೊಳ್ ಮಮದೇಶ ಮಿನ್ನೆಬರಂ ಸ್ಮಾರಕ
ಮುಂತಪ್ಪ ಆವೊಂದು ಸತ್ಕಾರ್ಯಮೆಸಗದೆಯೆ
ಘೋರ ಅಪರಾಧಗೈದಿಹುದೆನಲ್ ಮನವೆನ್ನ
ನಾಚಿ ನೀರಾಗಿ ದ್ರವಿಸಿ ಹರಿದು ಪೋದಪುದು
ನದೀ ನೀರಿನ ಮಾಳ್ಕೆಯಲಿ ಕಣ!

ನಮ್ಮವರ ಧೂರ್ತ ಲಕ್ಷಣಮಿದೇ ಎನ್ನುವೊಡೆ
ಏರ್ದ ಅಳುಕುವುದೆನ್ನ! ನೇತಾಜಿ ಸುಭಾಷ್
ಎನಿತು ಪೂಜ್ಯರೋ ಅನಿತೆ ಈ ಮಹಿಳಾಮಣಿಯುಂ
ಪೂಜಿತಳ್! ಇನ್ನಾದೊಡಂ ಮೇಡಂ ಕಾಮಾಳ
ಪೆಸರಂ ಬೆಳಕಿಗೆ ತನ್ನಿರೋ ಸ್ತ್ರೀ ಎಂದೆಂಬ
ಅಲಕ್ಷ್ಯವ ಬದಿಗಿಟ್ಟು ನವಯುಗದ ಶ್ರೀಮಾನ್ಯರೇ!
ಮಲ್ಲಿಕಾ ಬನದ ಕವಿಕಾವ್ಯದಲಿ ಮೂಡಿಬರೆ
ಸಾಲದೈ ಲೋಕ ಪ್ರಜ್ಞೆ ಕೆರಳ್ವನಿತು ಧೀರ
ಶ್ರೀಮಂತ ಸ್ಮಾರಕಂ ಕಟ್ಟಿರಿ ಈ ರಾಷ್ಟ್ರದಲಿ!

"Do all the good you can
By all the means you can
At all the time you can
To the people you can
As long as ever you can"

— o —

ರಾಜಾ ರಾಮ್‌ಮೋಹನ ರಾಯ್

ದಾನಾಯ ಲಕ್ಷ್ಮೀಃ ಸುಕೃತಾಯ ವಿದ್ಯಾ
ಚಿಂತಾ ಪರಬ್ರಹ್ಮವಿನಿಶ್ಚಯಾಯ ।
ಪರೋಪಕಾರಾಯ ವಚಾಂಸಿ ಯಸ್ಯ ವಂದ್ಯ
ತ್ರಿಲೋಕೀತಿಲಕಃ ಸ ಏಕಃ ॥

ಭಾರತ ನಭೋ ಮಂಡಿತ ಅನುಪಮ ನಾಕ್ಷತ್ರಿಕ
ನೇತ್ರಗಳ್ ಭೂತಲದ ಶುಭಾಶುಭಗಳ ದಿವ್ಯ
ಸಂವೀಕ್ಷಣೆಯಿಂ ಮತಿಗತಿಯನಾರೈದವೊಲ್
ಆತ್ಮ ಸಂತೋಷದಿಂ ಬೆಳ್ನಗೆಯ ಬೀರುತಲಿ
ಉಜ್ವಲೋಜ್ವಲಿಸುತಿರ್ದುವು ಅತ್ಯಪೂರ್ವತರ
ಬಜ್ಜರಗಳಂ ಮೀರ್ದ್ವ ಚೆಂಬೆಳಕಂ ನೆರೆಸೂಸಿ!
ನಿಚ್ಚ ಸಂಯಾತ್ರಿಗಳನೆ ಒಯ್ಯೊಯ್ಯನೆ ತೇಲ್ವ
ಬೆಳ್ಮುಗಿಲ್ ತಂಗಗಳ್ ರವಿ ಬಿಂಬಂ ಅಡ್ಡೈಸಿ
ಸುಡುವಿಸಿಲ್ಗೆ ತಡೆಹಿಡಿಯೆ ತಣ್ಬುಗುವ ತಣ್ಣನೆ
ವಾತಾವರಣ ವಿಶೇಷಂ ನಡುಹಗಲಲಿ ಎನಲ್
ಸುರಮ್ಯ ಸುಖ ಬಂಧುರತೆ ಎಂದಿಲ್ಲದ ತೆರಂ.
ನೀಲಾಂಬರದೊಳಾಡುವ ಕಾಮಳ್ಳಿಗಳ್ ಕರಿ
ಚುಕ್ಕಿ ಚುಕ್ಕಿಯ್ಯೆಸಿ ಎರೆಂಕೆಗಳಂ ಬಿದಿರ್ಚಿ
ಆಗಾಗಳ್ ಕೊರಳ್ ದನಿಯಂ ಕಿವಿಗಿಂಪಾಗಿ
ಹರಿಯ ಬಿಡಲ್ ನೋಳ್ಪ ರಸದೃಷ್ಟಿಗೆ
ಆನಂದ ಸಂಭ್ರಮವ ನೀವವೊಲ್ ಮನೋಹರಂ.
ತೆಂಕಣದಿಶೆಯಿಂ ಬೀಸಿ ಬಹ ಮಂದಮಾರುತ
ಸುಯ್ದುಯ್ದು ತೀಡುತಿರೆ ಸಮಗ್ರ ವನಧಿಯಲಿ;
ಎಲೆಎಲೆಗಳ ಮರ್ಮರ ನಿನದಂ ಪಕ್ಷಿಗೊರಳಿನ
ರಾಗರಸನೆಗೆ ಶೃತಿ ಮೀಂಟುತಿರೆ ತನುಮನಂ
ರೋಮ ಹರ್ಷಕಂ. ಮೇಣ್, ಕಮನೀಯ ಕಠೋರ

ಕಾಂತಾರದಿ ವರ್ಣವರ್ಣಾಂತು ಪುಷ್ಪಿತ ಸುಮ
ಸಮುಚ್ಚಯಗಳ ಸುಗಂಧ ಹೃದಯ ರಸಾಬ್ಧಿಗೆ
ರೋಚಕಂ; ಜಗಜಂಜಡವ ಮರೆತು ಬಿಡುವ್ವೋಲ್!
ವಸಂತ ಮಹಾ ಪ್ರಭುವಿನ ಒಡ್ಡೋಲಗದಲಿ
ಪಚ್ಚ ವರ್ಣಾಂತ ಅರಣ್ಯಾನಿ ದೇವೇಂದ್ರನ
ನಂದನವನವಂ ಮೀರಿ ಮೆರೆದತ್ತು ಇಳೆಯೊಳ್
ಆವುದೊ ಸುಮುಹೂರ್ತಂ ಬಳಿಸಾರಿ ಬರ್ಪ ಶುಭ
ಸೂಚನೆಯೊ ಎನೆ ಎಲ್ಲೆಲ್ಲಿಯುಂ ಸಂಭ್ರಮವೇಶಂ!
ಮತಿಮೌಢ್ಯದಿಂ ಧರ್ಮದಾರಿದ್ರ್ಯ ಜೀವನಂ
ಆಕ್ರಮಿಸಿರಲ್ ಜಗಮರೆತು ಮೈಮರೆತಿಹ ಜನ
ಜಂಗುಳಿಯಲಿ ಪೆಣ್ಮಣಿಯರ ಕಂಬನಿ ಹರಿದಿರೆ
ಕಡಲ್ಗೈಸಿ ಧರ್ಮ ಕಾತರಿಸಿದುದೊ ಎಂಬವೊಲ್
ಶ್ರೀಕೃಷ್ಣ ಪರಮಾತ್ಮನ ಅನನ್ಯ ಸಂದೇಶ
....ಸಂಭವಾಮಿ ಯುಗೇ ಯುಗೇ....ಎಂದು ಜನಮನ
ಮಿಡಿದು ಪ್ರತಿಧ್ವನಿಸಿದ ವಾಣಿ ನೀಡಿದ ವರ
ಭರವಸೆಯ ಮೈವೆತ್ತವೊಲ್ ಭಾರತ ಭುವಿಯಲಿ
ಸಂಭವಿಸಿತೊಂದು ಧೀಮಂತ ಸಂಜೀವ ರತ್ನ!
ಧರ್ಮ ಕಲ್ಕುಸಿದು ಮಣ್ಣ ಹುಡಿಯಲಿ ಮಣ್ಣಾಗಿ
ಮನುಕುಲಂ ಮತಿಗೆಟ್ಟು ಕಾಲ ನದಿಯಲಿ ಕೊಚ್ಚಿ
ಹೋಹುತಿರೆ ಧರ್ಮದೇವತೆಯೆ ಅವತರಿಸಿದುದೊ,
ಮುಗ್ಧದುಗ್ಧ ಸತಿಯರ ಪುಣ್ಯವೆ ಮೈವೆತ್ತುದೊ,
ವೇದಾಂತ ಸಂಸ್ಕೃತಿಯೆ ಮೈದಾಳ್ದುದೊ, ಮತ್ತಾ
ಭಾರತಿಯ ಆಶಯಂ ಪಣ್ತುದೊ ಎನಲ್ ಒದವಿ
ತೊಂದು ವರಗಳಿಗೆ ಭಾರತ ವರ್ಷದ ಕೀರ್ತಿ
ಕೇತನಂ ಗಗನಕೇರ್ವಡಿಪ ಸಂಯೋಗದಿಂ!
        ಹದಿನೇಳನೆ ಶತಮಾನ ಸಂಧ್ಯೆಯ ಪುಣ್ಯದಿನ
ಮುಂಗಾರ್ ಮಳೆಯ ಸುಖ ಮಜ್ಜನಂಗೊಂಡು ನಳ
ನಳಿಪ ಭುವಿಯಲಿ ಕೋಟಕೋಟ ವಿಹಂಗಗಳ ಕಲ

ಕಂಠಧ್ವನಿ ಮೊಳಗುತಿರ್ದುದು ಕಿರುಗೆಜ್ಜೆಸರ
ಮಾಲೆಯಂ ಅಲುಗಿಸಿದವೊಲ್! ಅಃ, ಕೇಗಿದುದು
ಮಯೂರಿ ಆನಂದ ಮೋದದಿಂ. ಕುಹು ಕುಹು ಕುಹೂ
ಮೊಳಗಿದುದು ಕೋಗಿಲೆಯ ಮೃದು ಮಧುರ ಕಂಠಸ್ವನ.
ಕೂಗಿದುದು ಕೋಳಿ ಕೊರಳೆತ್ತಿ ಊರನೆಳ್ಚರಿಪ
ಮಾಳ್ಕೆಯಲಿ. ಆ ಮಂಗಳಕರ ಪೊಳ್ತಿನಲಿ ವರ
ಶಿಶುರತ್ನ ಸಂಜನಿಸಿತೈ ಧ್ರುವ ನಕ್ಷತ್ರದೊಲ್!

ಶ್ರೀಮತ್ ರಮಾಕಾಂತರಾಯ್ ಎಂದೆಂಬ ಪುಣ್ಯ
ಪೆಸರ್ವೆತ್ತ ಆಚಾರಶೀಲ-ಗುಣಶೀಲನಪ್ಪ
ಸದ್ ಬ್ರಾಹ್ಮಣ ವಂಶದಲಿ ಸಾವಿರದೆಂಟನೂ-
ರೆಪ್ಪತ್ತೆಂಟರ ಮೇ ಇಪ್ಪತ್ತೆರಡನೇ ತೇದಿ
ದಿವ್ಯ ಪುತ್ರೋತ್ಸವಾದ ಸಮಯಕೆ ಸರಿಯಪ್ಪಿ
ವೈಷ್ಣೋದೇವಿಯ ದೇಗುಲದಲಿ ಗಂಟಾರವಂ
ಢಣಢಣಢಣಿಸಿ, ಶಂಖ ಭೂಂ ಭೂಂ ಮಂಗಳರವಂ
ಮೊಳಗಿಸಿ ಪುಣ್ಯ ಜೀವಿಯ ಸುಖಾಗಮನ ಸಾರಿ
ಮಹದಾಶೀರ್ವಾದಗೈದಳೊ ಎನಲ್ ಮಂಗಳ
ರವದ ಸಿರಿ ಮೊಳಗು!

ಪಿತ ರಮಾಕಾಂತರಾಯ್ ನವ
ಶಿಶುವಿನ ಜನುಮಯೋಗಮರಿಯೆ ಜಾತಕ ಬರೆಸಿ
ಪುಣ್ಯಗಳಿಗೆಯಲಿ ಸಂಜನಿಸಿದ ಶಿಶುಮೆಂದಿಗು
ಕುಂದಿಲ್ಲದೊಲ್ ಜಗ ಬೆಳಕಿಗೆ ಬಂದಪನೆಂದು
ನಲ್ಮೆಯಿಂ ಪೆರ್ಮೆಯಿಂ ಲಾಲಿಸಿ ಪಾಲಿಸಿದಂ.
ಅತ್ಯಂತ ಆನಂದ ತುಂದಿಲತೆಯಿಂ ತುಂಬಿ
ಶುಭಗಳಿಗೆಯಲಿ 'ರಾಮ್‌ಮೋಹನ'ನೆಂದು ಪೆಸರಿಸಿ
ಬಂಧುವರ್ಗಕೆ ಔತಣ ಕೂಟವೇರ್ಪಡಿಸಿದಂ.
ಸಿಹಿಯುಂಡ ಬಂಧು ಬಳಗಂ ಕೊರಳ್ ತುಂಬಿ ನವ
ಶಿಶುವ ಹರಸಿದರ್ ಲೋಕವಂದ್ಯನಾಗಲೆಂದು!

ಓವೊ! ಪ್ರದೇಶಾಮಳೆ ವಿಭ್ರಮೆಯ ಸಂಭ್ರಮ
ವೈಭವ ಸುಜ್ಞಾನ ತೃಷೆಯಿಂದಾಕರಿಸಿದವೊಲ್!
ಝಿಲ್ಲಿಗಳ ಝೇಂಕೃತಿಯಲಿ ಕ್ರಿಮಿ ಕೀಟಗಳ
ಚೀಂಕೃತಿಯಲಿ ಪೊದಳ್ದುದು ಹರಕೆಯ ಶ್ರುತಿಶ್ರೀಃ!
ಪೊಳ್ತರೆಯ ಪಕ್ಷಿಗೊರಳಿನಾ ಸುಪ್ರಭಾತದಲಿ
ಮೇಣ್ ಸಾಯಂ ಸೊಬಗಿನ ಸಂಧ್ಯಾರಾಗದಲಿ
ಪೊದಳ್ದುದು ಶುಭಕಾಮನೆಯ ಸಂಭ್ರಮವೇಶಂ!
ಅತ್ಯಪೂರ್ವ ಪ್ರಾಜ್ಞನಾಗಮನದಿಂದಾನಂದ
ಪಟ್ಟತೆನಲ್ ಮಳೆ ಬೆಳೆಗಳಿಂ ವಿಜೃಂಭಿಸಿತು
ಕಾಲಮಾನಂ, ದಿವ್ಯ ಜೀವನೋತ್ಕರ್ಷತೆಯಲಿ.
ದಿನದಿನಂ ಶುಕ್ಲ ಪಕ್ಷೀಯ ಬಾಲಚಂದ್ರನವೊಲ್
ಬೆಳೆಯುತಿರ್ದ ಕಂದನ ಸೌಂದರ್ಯ ಮಾಧುರ್ಯ
ಮೋಹಕತೆಗೆ ಮಾರುವೋದನೊ, ಒಡಲ್ ಕುಡಿಯಳ್ಕರೆ
ಮುಂಬೆಳೆದುದೊ ಎನಲ್ಕೆ ಪಿತ ರಮಾಕಾಂತ ರಾಯ್
ಎಲ್ಲ ಮಕ್ಕಳಿಗಿಂದತಿ ಪೆರ್ಚಿನ ಪ್ರೀತಿಯಿಂ
ನೋಂಪಿಯಿಂ ಕಂಡು ಪಾಲಿಸುತಿರ್ದನನುದಿನಂ.
ಪೆತ್ತವರ ಎಣೆಯಿಲ್ಲದ ದೈವ ಭಕ್ತಿಯಲಿ
ಮಿಂದು ಸತ್ಯಾರ್ಥ ರಸಪಾನದಲಿ ಪ್ರಮತ್ತ
ಶಿಶುಮನಂ ಧರ್ಮ ಚಿಂತನೆಯಲಿ ಮೆಲುಮೆಲ್ಲನೆ
ಆಕರ್ಷಿತಮಾದುದು ಭ್ರಮರಂ ಮಕರಂದ
ಮಧುಪಾನಕೆ ಆಕರಿಪವೊಲ್. ದಿನದಿನಂ ಶಿಶು
ಪದಂ ಕಳೆದು ಓರಗೆಯ ಚಿಣ್ಣರೊಡಂಗೂಡಿ
ಗುರುಕುಲಂಬೊಕ್ಕು ಅಕ್ಕರದಳ್ಕರೆಯಲಿ ಮನ
ವಿಟ್ಟಂ. ಬಿಜ್ಜೆಯಕ್ಕರೆ ಬಲಿಯೆ ಬಾಲಿಶಂ ಪೊರೆ
ಕಳಚಿದವೊಲ್ ಅರುಗಾದುದು ತಾನೆತಾನ್ನೈಸಿ.
ನಿತ್ಯಂ-ನಿರಂತರಂ ಚಿತ್ತಕಲ್ಪದ ಮೇಲೆ
ಅಭಿಜ್ಞಾನದ ಮುದ್ರೆಯನ್ನೊತ್ತಿದತ್ತು ಸತ್ಯದ
ಸೌಂದರ್ಯಮಂ ಬಿಚ್ಚಿ ತೆರೆದು ತೋರ್ಪವೊಲ್! ಆ

ಬಾಲಕಂ ಶ್ರೀ ವಿಷ್ಣು ಪುರಾಣವನೇಗಳುಂ
ಕೇಳರಿತು ಓದಿಯೋದಿ ಸೃಷ್ಟಿಲಯ ಕರ್ತನಿಂ
ಎಂದರಿತು ನೇಮದಿಂ ನಿಷ್ಠೆಯಿಂ ಧ್ಯಾನದಿಂ
ಅಪಾರ ಭಯ ಭಕ್ತಿಯ ಪರಿಪಾಠದಿಂ ನಿಚ್ಚ
ಮನವೋತು ಎದೆಯೋತು ಜ್ಞಾನಪ್ರದನಾದಂ.
ದಿನದಿನಂ ನಸುಕಿನಲಿ ನಿದ್ದೆಯಿಂದೆಳ್ಚತ್ತು
ಪುರಾಣೀಯ ಉದ್ಗ್ರಂಥಗಳಂ ಪಠಿಸಿ ಪಠಿಸಿ
ಉನ್ಮತ್ತನಾದಂ. ಮುಂಜಾನೆ ಪುರಾಣ ಪುಣ್ಯ
ಕಥನಗಳನೋದದೆಯ ತಾನಾವ ಕಜ್ಜಮಂ
ಕೈಕೊಳ್ಳ, ಮೇಣಾವ ಊಟ ಉಪಚಾರವನೊಲ್ಲ,
ಮೇಣ್ ಓರಗೆಯ ಮಕ್ಕಳಂ ಕೂಡಲೊಲ್ಲನೆನೆ
ಅಚಲ ಭಕ್ತಿಭಾವ ಅಚಲ ಪ್ರೇಮ ಸಂಭ್ರಮ
ತುಂಬಿ ತುಳುಕಿದುದು ಎಳೆಯ ಹೃದಯಕುಂಡದೊಳ್.
ರಾಷ್ಟ್ರದಲಿ ಮ್ಲೇಚ್ಛ ಪ್ರಭುತ್ವಮಿರೆ ಶಾಲೆಯಲಿ
ಪರ್ಷಿಯನ್ ಭಾಷೆ ಮೇಣೆಲ್ಲ ದಿನ ನಿತ್ಯದಾ
ವ್ಯವಹಾರಕೆ ಅರಬ್ಬಿ ಭಾಷೆಯೆ ಆಧಾರ.
ಇಂತಿರೆ, ಸ್ವದೇಶ ಭಾಷೆಗಳಪ್ಪ ಸಂಸ್ಕೃತ
ಬಂಗಾಳಿ ಭಾಷೆಗಳ ಅಧ್ಯಯನಕೆ ಗೃಹಮೆ
ಗುರುಕುಲಂ. ಬಾಲಕಂ ಇಕ್ಕೆಡೆಗಳಲಿ ನಿಚ್ಚ
ವಿದ್ಯಾಧ್ಯಯನಂ ಕೈಕೊಂಡು ಪಿರಿಯರ್ಕಳ
ಅಚ್ಚು ಮೆಚ್ಚಿಗೆಗೆ ಪಾತ್ರನಾದಂ. ಕಲಿಕೆಯಲಿ
ಪ್ರಕಾಂಡ ಪಾಂಡಿತ್ಯಮೊದವಿಬರೆ ಬಾಲ್ಯದೊಳೆ
ಚತುರ್‌ಭಾಷಾಜ್ಞಾನ ಮನಂಗೂಡಿ ಬೌದ್ಧಿಕ
ಶಿಖರವೇರತೊಡಗಿದನ್. ಪ್ರಜ್ಞಾನ ಪಿಪಾಸೆ
ವೆರ್ಚಿದುದು ಹಾಲುಕ್ಕಿ ಹರಿದವೊಲ್, ಪಿತ ರಮಾ
ಕಾಂತರಾಯ್ ಉನ್ನತ ಸಮಾಜದಲಿ ಜನಿಸಿದ
ಮಹಾ ಬ್ರಾಹ್ಮಣ ಪಂಥೀಯ ಕಟ್ಟು ನಿಟ್ಟನಿಂ
ಸಂಪ್ರದಾಯ ನಿಷ್ಠತೆಯ ಬಿಗಿ ಮುಷ್ಟಿಯಲಿರ್ದು

ಚಿಂತೆಗೆತ್ತೊಡಂ, ಮ್ಲೇಚ್ಛ ಭಾಷೆ ದೇಶೀ ನೆಲದಲಿ
ನಿಷಿದ್ಧಂ ಎನುತೆ ದೂರೀಕರಿಪ ಪಿರಿಯರಂ
ಪಿಂತಿಕ್ಕಿ ಕಂದನಭ್ಯುದಯಮಂ ನೆನವಿಟ್ಟು
ಬಿಜ್ಜೆಗಳ ಏಳ್ಗೆಗೆ ನಲ್ ಬಿಜ್ಜಣವಿಕ್ಕಿದಂ.
ತರುವಾಯೊಳ್ ಪಾಟ್ನಾದಲಿ ಪ್ರೌಢ ಶಿಕ್ಷಣಮಂ
ಪಡೆದನಾ ತರುಣಂ ಮನ ಮಂಥನ ಘನಿಸುವನ್ನ.
ಪರಿಸರದ ಮನುಕುಲಂ ಅಜ್ಞಾನ ತಿಮಿರದಲಿ
ಸಿಲ್ಕಿ ನರಳುತಿರ್ಪುದಂ ನೋನೋಡಿ ಚಿಂತಿಸಿ
ಮನಗರಗಿ ಎಂತಾದೊಡಿದನಾಂ ನಿರ್ಮೂಲನ
ಗೈಯದೆ ಬಿಡೆಂ. ಈ ಜನ ಸೇವೆಗೆ ಆಪನಿತು
ಶ್ರಮಿಸುವೆ, ಎನುತೆ ಮೂಕ ಮೌನತೆಯ ಚಿಂತನಾ
ವೇಶದಲಿ ಮನಃಚಿತ್ತಕಲ್ಪಮಂ ಮಥಿಸುವಂ.
ಭವಿಷ್ಯಂ ಸುಸುಂದರಮೈಸೆ ಜನ ಜೀವನದ
ಎಳೆಗಳಂ ಹಿಂಜಿ ಸಾರಾಸಾರಗಳ ಬಸಿದು
ಸ್ವಚ್ಛಗೈವುದೆಂತೆಂಬುದು ದುಂಬಿಯೊಲ್ ಮನವಂ
ಕೊರೆಯುತಿರ್ದುದು ಎಡೆವಿಡದೆ. ಭಾರತವರ್ಷ
ದೇಶೋವಿಶಾಲಂ ಅವಿದ್ಯೆ ಅಜ್ಞಾನದಿಂ
ನರಳ್ವ ಜಡ ಜೀವನಮಂ ನಲ್ ವೆಳಗಿ ದಟ್ಟ
ದಾರಿದ್ರ್ಯತೆಯಂ ಜಡಿ ಕುಟ್ಟಿ ಓಡಿಸದೆಯೇ
ಭಾರತ ವರಭಾರತಮೆನಿಪದು ಎನುತೆ ಪರಮ
ಚಿಂತನೆಯಲಿ ಮುಳುಗಿದನೇಕಾಂಗಿ. ಪೊಳ್ತುರುಳಿ
ಘನಿಸುತಿರೆ ಚಿಂತನಂ 'ಈ ಸಮಾಜದ ಜಡತೆಯಂ
ಸರ್ವತ್ರ ತೊಳೆದು ಜೀವನಂ ಬೆಳಗುವುವೆನ್ನ
ಗುರಿ!' ಎನಲ್, ತಟ್ಟನಾಗಳ್ ನುಡಿದುದೊಂದು ಆತನು
ವಾಣಿ, "ನಿಜ ಮಗನೆ! ಈ ಜಡ ಸಮಾಜದುದ್ಧರಣ
ನಿನ್ನ ಪ್ರಥಮ ಗುರಿಯಕ್ಕೆ. ಈಗಿಂದೀಗಳ್ತೆ
ನೀಂ ಕಾರ್ಯ ಪ್ರವೃತ್ತನಾಗೈ!" ಆ ವಾಣಿಯಂ.
ಕೇಳ್ದು ಪುಳಕಿತನಾದನ್ ರಾಮ್ ಮೋಹನ ರಾಯ್.

ಮೈ ನೆತ್ತರ್ ಜಿಸಿಗೊಂಡು ಸುಡುಬೆಂಕೆಯ ಝುರಿಯೊಲ್
ಜರ್ರನೆ ಪರಿದುದು ದೇಹದಾದ್ಯಂತ ಅರೆಚಣದೊಳ್!
ದೇಶೀಯ ಮತಿಮೌಢ್ಯದ ಕತ್ತಲ ಕೋಂಟೆಯಲಿ
ವಿಜ್ಞಾನ ದಾರಿದ್ರ್ಯ ಆರ್ಥಿಕ ದಾರಿದ್ರ್ಯಗಳ
ನಿಡುಗಂಟು ಕರಗದೆಲ್ಲಿಯ ಸುಜೀವನಂ ಪೇಳ್?
ಆವಾವ ಬಗೆಯ ಕಂದಾಚಾರಗಳೊ ದೇವ!
ಕುವಿಚಾರಗಳ್ ಸುವಿಚಾರಮಂ ಮಿಕ್ಕಿ ಮೀರಿ
ತೊಳಗಿ ಬೆಳಗುತಿರೆ ಏನೆಂಬೆ? ಎಂತು ಸೈಪೆಂ?
ಲೋಕಪ್ರಜ್ಞೆ ಇಲ್ಲದೆ ಕೂಪ ಕೂರ್ಮನ್ಯಾಯದಿ
ಮುಳುಗಿ ನರಳುತ ಹಿಡಿದ ಪಟ್ಟು ಬಿಡದೆ ಬಾಳಿಗೆ
ವ್ಯರ್ಥ ಸಂದುಹೋಪರ್ ಹುಲು ಜೀವನಂ ನಡೆಸಿ!
ಭಗವಂತನನು ಮೂರ್ತಿಯೊಳ್ ನಿರೂಪಿಸಿ ಪೂಜೆ
ಗೈಯುತೆ ಆತ್ಮ-ಆಧ್ಯಾತ್ಮ ಚಿಂತನೆ ಬದಿಗೊತ್ತಿ
ದೈವಕೊಂದು ಸಾಮಾನ್ಯರೂಪ ಕೊಡಲಕ್ಕುಮೆ?
ಅವನಂ ಆವಾವ ಕೋನದಿಂ ನೋಡಿ ಇಂತಪ್ಪ
ವಿಗ್ರಹದೊಳ್ ಕಾಣಲ್ ಸಾಧ್ಯಂ? ಇದೆನಿತೆನಿತು
ಹಾಸ್ಯಾಸ್ಪದ ಮೆನಲಂತಂತೆ ಬಾಲಿಶಂ!' ಎಂಬ
ನಿರ್ಣಯಂ ಹೃತ್ ಕರಂಡದಲಿ. ಅದು ಮಾತ್ರಮೇ?
ಶುದ್ಧ ಕುವಿಚಾರಗಳ್ ಎಲ್ಲರ ಬದುಕಂಬೊಕ್ಕು
ಸದಾಚಾರಮಂ ಮೀಕ್ಕುಮೀರಿ ವಿಜೃಂಭಿಸುತ
ಜೀವನೀಯ ಅವಿಭಾಜ್ಯ ಅಂಗಮೆನೆ ವಿರಾಜ
ಮಾನಂ! ಎನೆ ಎನಿತು ಅಸಹ್ಯಂ!' ಎನಿಸೆ ಮನದಿ
ಮೋಹನ್ ನಿಜ ಕಾರ್ಯತತ್ಪರತೆಯಲಿ ಮುಳುಗಿದಂ.
ಗ್ರಾಮ್ಯ ಯುವ ಪ್ರಭೃತಿಗಳಂ ಕಂಡು ಸಮಾಜ
ಸೇವೆಯಂಗೈವೊಂದು ಸಂಯೋಜನೆಯಂ ನೆರೆ
ರೂಪಿಸಿದನ್. ಏಗಳುಂ ಈವೊಂದು ಆಂತರಿಕ
ವ್ಯವಹಾರಮಂ ಅರ್ಥೈಸಲಸಮರ್ಥ ಜನ
ಜಂಗುಳಿ ಕಿರುಮನದ ಕಿಡಿಗೇಡಿಗಮೆಂದಾಡಿ

ತುಚ್ಛೀಕರಿಸಿದರ್ ಕಡುಕೋಪದ ಕಿಡಿಯೊಗೆದು
ಆದರವನ್ ಜಗ್ಗಿದನೆ? ಬಗ್ಗಿದನೆ? ಸಮಾಜ
ಸೇವೆಯಂ ಕೈವಿಟ್ಟನೆ? ಹೀನಮನದ ಮಿತ್ರ
ಬಳಗದ ವತಿಯಿಂದಲೆ ಸೇವೆಯಸಾರ್ವೈದಂ!
ಸುತನುಮಿಂತೊಂದು ಕಜ್ಜಮಂ ಗೈದ ಸಮಾಜ
ಸೇವೆಯುಂ ಕೋಪತಾಪಗಳಿಂಗೆ ದಾರಿಯ್ಯೆಸೆ
ಮಿಡುಕಿ ಮನದೊಳ್ ''ಮಗನೆ! ಈವೊಂದು ಅಸಂಬದ್ಧ
ವಿಚಾರಕೆಳಸಿ ಸುಸಂಬಂಧಕೆ ಮಿತ್ತಾಗದಿರ್.''
ಪಿತನೆನಲ್ ಅದಂ ಮನಗೊಳ್ಳದೆ ದಿನ ನಿತ್ಯದ
ಓಜೆಯೊಳ್ ಮುಂಬರಿದನೆಂದಿನೊಲ್. ದಿನದಿನಂ
ಮನೆಯೊಳ್ ಅಸಮಾಧಾನ-ಅಸಮತೆ ಬೆಳೆಯುತಿರೆ
ಅಡ್ಡಗೋಡೆಯೊಲ್ ರಾಮ್‌ಮೋಹನರಾಯ್ ಒರ್ಮೆ
ಗೃಹತ್ಯಾಗಗೈದು ಸತ್ಯ ಸೌಂದರ್ಯವನರಸೆ
ಪೊರಟನೇಕಾಂಗಿ! ಸಾಗಿದುದು ದೂರ ಪಯಣಂ
ಒಂದೆ ನಿಟ್ಟಿನಲಿ ಪೊಳಲಂ ದಾಂಟೆ ದೂರದಲಿ
ಕಣ್ಗೆತ್ತುದೊಂದು ಮುನಿರಿಸಿಗಳ ಕಿರಿಗುಂಪು. ಆ
ಗೈರಿಕ ವಸನ ಧಾರಿಗಳ್ ಜ್ಞಾನನಿಧಿಯ್ಯೆಸಿ
ತೋರ್ದರಾ ಸುಜ್ಞಾನ ಪಿಪಾಸಿಗೆ. ಒಡನೊಡನೆ
ಅವರೊಡಂಗೂಡಿ ನಡೆದನ್ ರಾಮ್‌ಮೋಹನಂ.
ವನಧಿಯಲಿ ಮೃಗಚರಣ ಬರೆದ ಪಥರೇಖೆ
ಬಾಬಾರೆನುವೊಲ್ ಹರಿದಿರೆ ಮುಂದೆ ಮುಂದೆ. ಕಿರು
ಹಾದಿ ಕೊಂಡೊಯ್ದುದು ಹಿಮಾಲಯದ ಪದತಲಕೆ.
ಸುಸುಂದರ ವನಶ್ರೀಯ ವೈಭವೋಪೇತ ಶ್ರೀ!
ಆವೊಂದು ವಿಶಿಷ್ಟ ಸಂದರ್ಭಕೆಂದು ಸಿಂಗರ
ಗೊಂಡುದೊ ಎನಲ್ಕೆ ವರ್ಣವರ್ಣಾಂತ ಸುಗಂಧ
ಗಂಧಿತ ಸುಮ ರಾಶಿಯ ಉನ್ನತ ಪರಿವೇಶಂ!
ಸಾಕ್ಷಾತ್ ಪರಬ್ರಹ್ಮನ ಸುಪ್ರತೀಕಮೆ ಮೂಡಿ
ಮೈದಾಳಿದೊಲ್ ಕಣ್ಮನಗಳಿಂಗೆ ಆನಂದ

ರಸದೈಸಿರಿ. ಪೂವಿಂ ಪೂವಿಂಗಲೆವ ಪರಮೆಗಳ್
ಝೇಂಕೃತಿಯೋಂಕೃತಿಯೈಸಿ ಮೊಳಗೆ ಅನುಪಮ
ರಾಗರಸಧಾರಾವಹ್ನಿ ಝೇಂಕರಿಸುತಿರ್ದುದು
ಬೃಹದ್ ವನವಾರ್ಧಿಯು ಮರುಧ್ವನಿಗೊಡುವವೊಲ್.
ಮತ್ತಾ ಗಿಡುಮರಗಳ್ ಬಾಯೊಡೆದುವೊ ಎಂದೆನೆ
ಸಹಸ್ರ ತರದ ಪಕ್ಷಿ ಸಂಕುಲದ ಕಲಕಂಠ
ಧ್ವನಿಯುಂ ಮೊಳಗುತಿರೆ ರಾಗಾನುರಾಗದಲಿ
ಆನಂದ ಪುಳಕಿತಮಾದುದೈ ಮೈಮನಂ. ಆ
ಹಾದಿಯಂಚಲ ಗಿಡುಮರಗಳಿಂ ಚೆಲ್ಲಿ ಸೂಸುವ
ವಿವಿಧ ಕುಸುಮ ರೇಣು, ಕುಸುಮದಳ, ದರುಗೆಲೆ, ಒಣ
ಕಡ್ಡಿಗಳ್ ಕೂಡಿ ವಿರಚಿಸಿದ ಸುರ ಚಿತ್ತಾರ
ಪುಣ್ಯ ಭೂಮಿಯಲಿ. ಆ ದೃಶ್ಯಮಾನ ನಿಸರ್ಗ
ಸೌಂದರ್ಯಮಂ ಸವಿಯುತಿರೆ ದಣಿವಿನಿತಿಲ್ಲದೆ
ಪಯಣಂ ಸಾಗಿದತ್ತು ಸರಾಗದಿಂ. ಅಂತೆಯೇ
ನಡೆಯೆ ಮುಂದೆ ಮುಂದೆ ಹಿಮವಂತನ ಬಾನ್ ಚುಂಬಿತ
ಗೌರೀಶಂಕರ ಶಿಖರಂ ಮಂಜುಮಯ ಶೋಭೆಯಿಂ
ಕಂಗೊಳಿಸೆ ಹೃನ್ಮನಂ ಪರಿಭಾವಿಸಿದುದು ತನ್ನ
ಇಷ್ಟದೇವತೆ ವಿಷ್ಣುವನ್ನೆ. ಭವ್ಯ ಪ್ರಕೃತಿಯ
ದಿವ್ಯ ದರ್ಶನದಿಂದಾದತ್ತು ಮನಃಚಿತ್ತಗಳ
ಕಾಯಕಲ್ಪಂ. ಪರ್ವತ ಪದತಲಮಂ ದಾಂಟ
ಮುಂಬರಿಯೆ ಪಚ್ಚ ಪಸುರ್ವುಲ್ಲಿನ ರನ್ನ ಹಸೆಯಲಿ
ಪಾದಪದ್ಮಗಳಂ ನೆರೆ ಮುದ್ದಿಸುವವೊಲ್ ಪುಲ್
ನವಿರ್ ಸುಖ ಸ್ಪರ್ಶಿಸುತಿರಲ್ ಹಾದಿ ಸಾಗಿದುದು
ದೂರ ಟಿಬೆಟ್ ಪ್ರಾಂತ್ಯಕೆ.
ಓವೊ! ಎಲ್ಲೆಲ್ಲಿಯುಂ
ವಿವಿಧ ರೂಪಿನ ಬುದ್ಧ ಮೂರ್ತಿಗಳ ದರ್ಶನಂ!
ತರುಣನಾ ದರ್ಶನೀಯ ಚಿತ್ತಾರದಿಂ ಮೈ
ಮನಂ ಪುಳಕಿತನಾದೊಡಂ ಮೂರ್ತಿ ಪೂಜೆಗತಿ

ಪೇಸಿದಂ. ಪೂಜಾರಿಗಳು ಕಂಡು ''ಅಯ್ಯಾ,
ಮೂರ್ತಿ ಪೂಜಕರೆ! ಭಗವಾನ್ ಬುದ್ಧನ ಮೂರ್ತಿ
ಎನುತೆ ಪೂಜಿಪುದು ಬರಿ ಆಡಂಬರಮಲ್ಲದೆ
ಮತ್ತೇನಿಹುದು? ಆತನುಪದೇಶಿದ ಧರ್ಮ
ಪ್ರತಿಪಾದನೆಯಿಂ ಗೌರವ ಪಡೆದು ನಿಂನಿಮ್ಮ
ಆತ್ಮೋದ್ಧಾರಗೈವುದು ಪ್ರಾಮುಖ್ಯಮೆಂದೆನಲ್
ಕೋಪಿಸದಿರಿ ಅಣ್ಣಂಗಳಿರಾ!'' ಎಂದನಾ ವಟು.
ಅದಕೊಪ್ಪದಿರಲ್ ಬೌದ್ಧ ಗುರುಗಳ್, ಮತ್ತದಂ
ಪ್ರತಿಪಾದಿಸಿ ಒತ್ತಾಯಿಸಲ್ ರಾಮ್‌ಮೋಹನ್,
ಆಗ ಕಡು ಕುಪಿತರಪ್ಪ ಬೌದ್ಧರ್ ರೋಷದಿಂ
ಜಡಿ ಕುಟ್ಟಿ ಬಡಿಯತೊಡಗಿದರವಂ. ಆಗಳಿರ್ದ
ಮಿದು ಹೃದಯದ ಪೆಣ್ಮಣಿಯರ್ ಸಮಯಕ್ಕೊದವಿ
ಮುಂದ್ವೈದು ತರಣನಂ ಸಂರಕ್ಷಿಸಿ ಗುಟ್ಟಾಗಿ
ಕಳಿಪಿದರ್ ಭಾರತ ಪ್ರಾಂತ್ಯಕೆ. ಆ ಮುನಿಋಷಿಗಳ
ಸಹವಾಸದಿಂ ಮೇಣ್ ದೇಶವಿದೇಶ ಸಂಚರಣ
ಭಾಗ್ಯದಿಂ ಒದವಿದ ವಿವಿಧ ಸಂಸ್ಕೃತಿಯನುಭವ;
ಮೇಣಮಿತ ಧ್ಯಾನ ಗಂಭೀರತೆಯ ಚಿಂತನೆ;
ಲೋಕ ಜ್ಞಾನದ ಪಂಬಲಂ ದಿನದಿನಂವೆರ್ಚೆ
ಜನ ಸೇವೆಯ ನೇಮದಲಿ ತರುಣ ಪಿಂತಿರುಗಿ
ಬಂದನಾ ರಾಧಾನಗರಿಗೆ ಜ್ಯೋತಿಃಪುಂಜ
ತಾನಾಗಿ! ಸುತನಾಗಮನ ಪೆತ್ತವರೊಡಲಂ
ತಣಿಸೆ ಸಗ್ಗ ಸುಧೆಯುಂಡರ್. ಪುತ್ರ ಮೋಹನನ
ಸಂತುಷ್ಟಿಗೆನೆ ಉಪಚರಿಸಿದರೆನಿತೊ ಬಗೆಯಲಿ.
ಆದೊಡೇಂ, ಆಚಾರ ವಿಚಾರಗಳಲಿ ಭಿನ್ನ
ಭಿನ್ನತೆಯೆ. ಅರ್ಥಹೀನ ಕಂದಾಚಾರಮಂ
ಮಗನೊಲ್ಲ. ಪಿರಿಯರದಂ ಬಿಡಲೊಲ್ಲರ್, ಎನಲ್
ಯಾವತ್ಕಾಲಂ ಸಾಮರಸ್ಯ ದೂರಾತಿದೂರಂ.
        ಪಿತ ರಮಾಕಾಂತರಾಯ್ ಅತೀವ ಚಿಂತೆಯಿಂ
ತೊಳಲ್ದು, ಈವೊಂದು ಜಂಜಡಮೆಂತು ಬಗೆಹರಿಸಿ

ಕರಕರೆಯಂ ದೂರೀಕರಿಸುಗುಮೆಂದು ಮನದಲಿ
ಪರ್ಯಾಲೋಚಿಸಿ ಜಾನಿಸಿ ಲಗ್ನಗೈದೊಡಿದುಂ
ಸಲ್ವುದೆಂದು ಬಗೆದು ಸುಪುತ್ರನಂ ಬೋಳೈಸಿ
ಮನವೊಲಿಸಿ ವಿಜೃಂಭಣೆಯಿಂ ಸಂಲಗ್ನಮಂ
ಬೆಳೆಸಿದರ್ ಕಡು ಸಂತಸದಿಂ. ರಾಮ್‌ಮೋಹನಂ
ತನ್ನ ಸೇವಾನಿಷ್ಠೆಯಿಂ ಪಿಂಜರಿಯದೆ ಘನ
ವಿಚಾರ ವಿಹಾರ ಕ್ರಾಂತಿ ಪಥದಲಿ ದಿನದಿನಂ
ಉತ್ತುಂಗ ಶಿಖರಕೇರುತಿರ್ದಂ. ಸಂದುವಾ
ದಿನಂಗಳ್ ಏರುಪೇರಿನಿತಿಲ್ಲದೊಲ್, ರಾಮ್
ಮೋಹನಂ ಸಕಲ ವೇದಾಂತೋಪನಿಷತ್ತುಗಳ
ಅಧ್ಯಯನಮಂ ಬಯಸಿ ಕಾಶೀ ಕ್ಷೇತ್ರಕೆತ್ತಂ-
ಅಲ್ಲಿನ ಗುರುಕುಲದಲಿ ಶಾಸ್ತ್ರ ಕೋವಿದರಪ್ಪ
ಬ್ರಾಹ್ಮಣಾದ್ಯರೊಡಂ ಕಲೆತು ಕಲಿತು ಬಲಿತು ಘನ
ವಿದ್ಯೆಯಂ ಆರ್ಜಿಸುತ ಹಿಂದೂ ದರ್ಶನಸಾರ-
ಗೀತಾಧ್ಯಯನ ಮೇಣ್ ವೇದಾಂತ ಸಾರಮಂ
ಮನದುಂಬಿ ವಿದ್ಯಾಕೋವಿದನಪ್ಪಿ ಪಿಮ್ಮರಳಿ
ಬಂದನಾ ರಾಧಾನಗರಿಗೆ.
ಆಗಳ್ ರೋಗ
ಶಯ್ಯೆಯಲಿ ನರಳುತಿರ್ದ ರಮಾಕಾಂತರಾಯ್
ಕೆಲವಾನು ಕಾಲಂ ನರಳಿ ಸಗ್ಗಮನಡರ್ದು
ಕುಟುಂಬಿಗರಂ ಶೋಕ ತಾಪದಲಿ ಅದ್ದಿದಂ.
ಅನಂತರದೊಳ್ ಪಿತನ ಜಮೀನ್ದಾರಿಯ ಭಾರ
ಭುಜನೇರೆ ಪಿರಿಯಣ್ಣ ಜಗನ್ಮೋಹನನೊಡದರ
ನಿರ್ವಹಣ ಕಾರ್ಯಕ್ಷೇತ್ರಕಿಳಿದಂ. ದೇಶದೊಳ್
ವಿದ್ಯಾದಾರಿದ್ರ್ಯದಿಂ ಮಂದಮತಿಗಳೈಸಿರ್ದ
ಜನೋದ್ಧರಣಂ ಬಗೆದು ಮನನೊಂದು ಜ್ಞಾನನಿಧಿ
ಬೆಳೆಸೆ ತನ್ನ ದ್ರವ್ಯದ ಥೈಲಿಯಂ ಬರಿದಪ್ಪಿ
ಕಟ್ಟಿಸಿದನ್ ಶಾಲೆಗಳಂ. ಶಾಲೆ ತೆರೆದೊಡಂ

ಪ್ಪರೇಂ ಚೆಣ್ಣರ್ ಕಲಿಯಲ್ಕೆ? ಮನೆಮನೆಗೆತ್ತು
ಲಿಸಿ ಕಿರಿಯರಂ ಬರಿಸಲ್ ಪಿರಿಯರೊಪ್ಪದಿರೆ
ಾಧ್ಯಮೇ? ಆ ಪಿರಿಯರಂ ಒಪ್ಪಿಸಿ ಸಾಂತ್ವನ
ೊಳಿಪುದೊಂದು ಸಾಸಂ ಎನೆ ಜಾನಿಸಿ ತಿಳಿಮನವೆ!
ಇಂತೊಂದು ಮಹಾ ಪ್ರಯಾಸದಿಂ ತುಂಬಿದುವಾ
ಾಲಾ ಮನೆಗಳ್. ಅಂತು ಕೈಗೂಡಿದ ಕಜ್ಜದಿಂ
ಸಮಾಧಾನದ ಉಸಿರಂಬರಿಸಿದಂ, ಎನೆ ಅರಿತು
ಅಪನಿತು ಜಾನಿಸಿ ತಿಳಿ ಹೇ ಮನವೆ! ಜಡತನ
ರಿತನಗಳೊಂದಾದ ಜೀವನವ ತಿಳಿಮನವೆ!
ಮಾನವರಿರ್ದು ಮಾನವೀಯತೆಯರಿಯದ ನಿಜ
ಬರಡು ಬರಡಾದ ಜೀವನ ಸಾಮ್ರಾಜ್ಯವ ಕುರಿತು
ಚಿತ್ರಿಸಿಕೊ ಮನವೆ!
ರಂಗಪುರದಲಿ ನೆಲೆಗೊಂಡು
ಅಧಿಕಾರ ನಡೆಸಿರ್ದ ಆಂಗ್ಲರಾಳ್ವಿಕೆಯ ಈಸ್ಟ್
ಇಂಡಿಯಾ ಕಂಪನಿ ಕಛೇರಿಯ ಶ್ರೇಷ್ಠಾಧಿಕಾರ
ಪೀಠಸ್ಥ ಜಾರ್ಜ್ ಡಿಗ್ಬಿಯ ದಿಟ್ಟಿಗೆ ದೇಶೀಯ
ತರುಣ ಶ್ರೇಷ್ಠಂ ಬಿಳ್ದು ಮನಮೆಚ್ಚಿ ಮತಿಮೆಚ್ಚಿ
ತನ್ನ ಕಛೇರಿಯ ಸಹಾಯಾಧಿಕಾರಿಯೆನೆ ನೇಮಿಸಿ
ತನ್ನಯ ಅತುಲನೀಯ ಕಾರ್ಯಭಾರಂ ವಹಿಸಿ
ಸಂತೃಪ್ತನಾದಂ. ಹರಿತ ಬೌದ್ಧಿಕ ಶಕ್ತಿಗೆ
ಅಮಿತ ಕಾರ್ಯಭಾರಂ ಔತಣಮಿತ್ತುದು ನಿಚ್ಚ
ಪೂವೆನೆ ದಳದಳ ಬಿರಿದು ಅರಳುವವೊಲ್! ಮೇಣ್
ಜನ ಸಂಪರ್ಕದಿಂ, ನಿಚ್ಚ ಕಾರ್ಯ ಕುಶಲತೆಯಿಂ,
ಶ್ರದ್ಧಾನಿಷ್ಠೆಗಳ ಪರಮ ಚಿಂತನೆಯಿಂ ಪ್ರಜ್ಞೆ
ಬಲಿತು ಲೋಕ ಪ್ರಜ್ಞೆಗೆ ತಾನಾದುದು ಬಿತ್ತು. ಕೈಲಿ
ಪರಮಾಧಿಕಾರ ಮೇಣ್ ಪರಮೈಶ್ವರ್ಯಮಿರೆ
ಸ್ವಾರ್ಥಸುಖಲಾಲಸೆಗಳಿಗೆ ಬಲಿ ಬೀಳದಿನಿತು
ಅಧಿಕಾರ ವತಿಯಿಂ ಊರೂರುಗಳ ಸುತ್ತಾಡಿ

ದೇಶೀಯ ಸ್ಥಿತಿಗತಿಯರಿಯುತಿರೆ ಮನಮುಂಡುದು
ಸಂತಸದ ಪರಮಾನ್ನಮಲ್ತು ಕಡು ಸಂಕಟದ
ಕದಾನ್ನ. ದಾರಿದ್ರ್ಯವನ್ನತೀ ದಾರಿದ್ರ್ಯ
ಗತಿಗಿಳಿಪನಿತು ನಾನಾ ದಾರಿದ್ರ್ಯಗಳ ಮಹಾ
ಸಂಗ! ಇಂ ವೇಳ್ದುವದೇಂ? ಕಣ್ ದಿಟ್ಟಿಯಂ
ನೆಟ್ಟು ನೋಡಲಾರದ, ನೋಡಿ ಸಹಿಸಲಾರದ
ದಾರಿದ್ರ್ಯ ಅಂಗೈನೆಲ್ಲಿ ಕಾಯಿಯೊಲ್ ಪ್ರಸ್ಫುಟ
ಚಿತ್ರದಲಿ ಭಾರತ ಜನನಿಯು ನಗ್ನ ಸ್ವರೂಪ!
ಅದು ಮಾತ್ರಮೆ? ಹೃದಯ ಹೀನ ಪ್ರಭೃತಿಗಳಾತ್ಮ
ಚಿತ್ರಮಂ ಸಾರಿ ಹೇಳುವ ಘೋರ ಸ್ವರೂಪ!
ಜಾರ್ ಡಿಗ್ಬಿಯ ಕಛೇರಿಯಲಿ ನಿಚ್ಚ ಇಂಗ್ಲೀಷ್
ವ್ಯವಹಾರಮಿರೆ ಬಾಷಾ ಪರಿಜ್ಞಾನ ಬೆಳೆಯಲ್
ಲಭಿಸಿತ್ತೈ ದೈವಾಯತ್ತಮಾದ ಪರಮ ಬಿತ್ತು.
ದಿನದಿನಂ ಜಾನಂವೆರ್ಚಿ ಪ್ರಜ್ಞಾನ ಘನತೆಯು
ಮುಂಬೆಳೆದುದು ಮಂಜುವಾಹಿನಿಯ ಪೂರಂ ಹೋಲಿ!
ಸಾವಿರದೇಳನೂರೆಂಭತ್ತೊಂಭತ್ತರಲಿ
ಫ್ರಾನ್ಸ್ ದೇಶದೊಳ್ ಭುಗಿಲೆಳ ಮಹಾ ಕ್ರಾಂತಿಕಿಡಿ
ಒಗೆದ ಜ್ವಾಲೆಯ ವಿವರ ಆಂಗ್ಲರಾಡಳಿತ
ಕಛೇರಿಗೆ ಬರುತಿರ್ದುದು ಲಂಡನ್ ನಗರಿಯಿಂ.
ಧೀಮಂತ ಮತಿ ದಿನದಿನಂ ಅರಿಯುತಿರಲದಂ
ಪುರುಡುವೆತ್ತ ಮೈ ನೆತ್ತರಿನ್ನಿನಿತು ಕುದಿವೊಲ್
ಕುತೂಹಲ ಕೊನರಿದುದು ಮನಃಚಿತ್ತಕಲ್ಪದಲಿ.
ಸ್ವಾತಂತ್ರ್ಯ-ಸಮಾನತೆ ಪ್ರಜಾಕೋಟಿಯ ಜನ್ಮ
ಸಿದ್ಧ ಹಕ್ಕು. ಯಾವತ್ಕಾಲಂ ಪ್ರಜೆಗಳೊಳಿತು
ಪ್ರಭುತ್ವದ ಪೊಣೆಯಕ್ಕು. ಅಂತಪ್ಪಗಂಧಂ
ಇಲ್ಲದಿರ್ದ ಆಳ್ವಿಕೆಯಿಂದಲ್ತೇ ಫ್ರೆಂಚರಲಿ
ಕ್ರಾಂತಿ ಭಾವವಂ ಭುಗಿಲೇಳಿಸಿದುದು? ಎಂದೆನೆ
ಭಾರತೀಯರ ಬೌದ್ಧಿಕ-ಮಾನಸಿಕ ಸಂಪದ

ಅರಳಿ ಹೂವಾಗದೆ ಘನ ವಿಚಾರ ಸಾಹಿತ್ಯದ
ಹುರುಳು ಅರ್ಥಮಾಗುವುದೆಂತು? ಬಿಜ್ಜೆ ಮನೋಗತ
ಮಾಗದೆಲ್ಲಿಯ ಕ್ರಾಂತಿಕಾರೀ ಭಾವನೆಗಳ
ಪುಟ್ಟುವಳಿ? ಆನೆನಿತು ಪ್ರಯತ್ನಿಸಿದೊಡಂ ಜಡ
ಮತಿ ಅರಳಲಿಲ್ಲಂ ಎನುತೆ ಹಳಹಳಿಪುದು ಮನಂ.
        ಫ್ರಾನ್ಸ್ ಕ್ರಾಂತಿಯನೊಪ್ಪಿ ಪುಳಕಿತ ಪ್ರಾಣಶಕ್ತಿ
ಆನಂದರಸಭರಿತಮಾಗೆ ಗೆಣೆಯ ವರ್ಗಂ
ಕರೆದೌತಣವಿಕ್ಕುತ್ತೆ ಫ್ರಾನ್ಸಿನ ಮಹಾಕ್ರಾಂತಿ
ವಿಚಾರಂ ಬಿತ್ತರಿಸಿದಂ ಅತ್ಯಾನಂದ ರಸ
ಸೂಸಿ. ಆಗಳಾ ಮಿತ್ರ ವೃಂದಂ ''ಇದೇನೈ ಆ
ದೇಶದೊಳ್ ಕ್ರಾಂತಿಯಾದೊಡೆ ನಿನ್ನದೇನಿಲ್ಲಿ
ಸಂಭ್ರಮ?'' ಎನುತೆ ಸಲಿಗೆ ಪ್ರೇಮಗಳಿಂ ಸರಸ
ವಾಡಿದರ್. ಆಗಳಾ ಧೀರಪಟು ಆನಂದ
ತುಂದಿಲತೆಯಂ ಬಿತ್ತರಿಸಿದನಿಂತು ''ಕೇಳಿರಿ!
ಅಣ್ಣಂಗಳಿರಾ ಯಾವೊಂದು ರಾಜ್ಯದ ಪ್ರಜಾ
ವರ್ಗ ಸ್ವಾತಂತ್ರ್ಯದ ಉಸಿರೆತ್ತಿದೊಡೆ ಪ್ರಾಜ್ಞತೆ
ತೋರ್ವುದಲ್ತೆ? ಅಂತೊಂದು ಪ್ರಾಜ್ಞತೆ ಅರಿವೆಮಗೆ
ಮೂಡಿದೊಡೆ ಒಳ್ಳಿತೆಂಬೆ. ಇದೊಂದು ದಿಟ್ಟತೆಯ
ಸತ್ಯದಾವಿಷ್ಕಾರವೆಂಬುದು ಚಿರ ಸತ್ಯಂ.''
ಅಂತೆಂದ ಮಾತಿನೊಳ್ ಆನಂದರಸ ಉಕ್ಕಿ
ಹರಿಯುತಿರೆ ಅತಿಥಿಗಳ್ ನೆಚ್ಚಿದರ್ ಮೆಚ್ಚಿದರ್
ಒಮ್ಮನದಲಿ ಶ್ಲಾಘಿಸಿದರ್ ಮುಕ್ತಹೃದಯದಿಂ.
        ರಾಮ್‌ಮೋಹನ್ ತನ್ನ ಕಾಯಕದೊಡಂ ನಿಚ್ಚ
ಗ್ರಂಥಾನುವಾದಮಂ ಕೈಗೊಂಡು ಬಹುಮೂಲ್ಯ
ಗ್ರಂಥಗಳಂ ಭಾಷೆಯಿಂ ಭಾಷೆಗೆ ಅನುವಾದಿಪ
ಕಾರ್ಯನಿಷ್ಠನಾದಂ. ಸಂಸ್ಕೃತ ಭಾಷೆಯಿಂ
ಇಂಗ್ಲಿಷಿಗೆ ಬಂಗಾಳಿಗೆ ಅನೇಕ ವೇದಾಂತ
ವೇದೋಪನಿಷತ್ತುಗಳ್ ಅನುವಾದಗೊಂಡು ಜಗಕೆ

ಪರಿಮಳಂ ಬೀರಿದುವು ಎನಲ್ ಪ್ರಪಂಚಾಮಳೆ
ನಿಜ ಜ್ಞಾನದ ಹಬ್ಬುಗೆಗೆ ಸತ್ ಪಾತ್ರನಾದಂ.
ಆಪನಿತು ಜೀವನ ಪರಿಶುದ್ಧಿಗೆ ನಾಗರಿಕ
ಜೀವನಾನುಭವಕೆ ವಿದೇಶ ಪರ್ಯಟನೆಯಂ
ಕೈಕೊಳ್ಳುವ ಉತ್ಸಾಹಮಿರೆ ಮನದಲಿ ದಿವ್ಯ
ಅಡಚಣೆಗಳ ಮಾರೊಡ್ಡು ಮುಂಪಥದಿ. ಕುಜನರ್
ಒಡಲ್ಗಿಚ್ಚಿನಿಂ ಬೆಂದು ಬೇಯುತ ದುರುದ್ದಿಶ್ಯ
ಪೂರ್ವಕಂ ರಾಮ್‌ಮೋಹನರಾಯನ ವಿರುದ್ಧ
ದೂರೊಯ್ದು ಕ್ಷುದ್ರತರ ದಾವೆಯಂ ಹೂಡಿದರ್
ನ್ಯಾಯಾಲಯದಲಿ. ನಿಂತ ನೆಲೆಯಿಂ ಕದಲದೊಲ್
ಬಿಗಿಗಟ್ಟು ಬಿಳ್ದುದು ಮನೋಗತಿಗೆ ಕಿರುಕುಳಂ
ದಿನದಿನಂವೆರ್ಚುತಿರೆ ಅಂಜಿ ಕುಗ್ಗಿದನೆ?
ಯಾವತ್ಕಾಲಂ ಹೋರಾಟವೇ ಹೋರಾಟಂ!
ಎನಿತೆನಿತು ಕಷ್ಟ ನಿಷ್ಠೂರಗಳಿರ್ದೊಡಂ ಭಂಗ
ಬನ್ನಗಳಿರ್ದೊಡಂ ಸಾಮಾಜಿಕ ಪುಣ್ಯ
ಸೇವೆಯನೆಲ್ಲೆಡೆ ಕೈಕೊಳಲ್ 'ಆತ್ಮೀಯಸಭೆ' ಎಂಬ
ಸಂಸ್ಥೆಯಂ ಸಂಸ್ಥಾಪಿಸಿ ಸುಜ್ಞಾನ ಮಾನ್ಯರಂ
ಒಗ್ಗೂಡಿಸಿದಂ. ಧರ್ಮದೆಳೆಗಳ ಮಧ್ಯೆ ಬೆರೆ
ಕೊಂಡ ಕುಕರ್ಮ ಕುವಿಚಾರಗಳಂ ನಿರ್ನಾಮಗೈವ
ಯೋಜನೆಗೆ ಹಲರೊಪ್ಪಿರೆ ಕೆಲ ಕಡು ಮೂರ್ಖರಪ್ಪ
ವಿದ್ವಾಂಸರ್ "ಭಾರತ ಸಂಸ್ಕೃತಿಗಿದು ಧಕ್ಕೆ"
ಎಂದೆಂದು ನಿಷ್ಠೂರ ಭಾವದಿಂ ಮತಿಗೆಟ್ಟು
ಉರಿದೆದ್ದರ್ ಒಡಲ್ಗಿಚ್ಚಂ ಕಾರಿ! ಇಂತೊಂದು
ಜಂಜಡದೊಳೆ ಮುಂಬರಿಯೆ ಪಿಂದೆಳೆವುದು ಕುಮತಿ
ಹೂಡಿದ ಹೊಂಚು. ಈ ದ್ವಿಮುಖ ವ್ಯವಹಾರಮಂ
ಕಂಡು, ಸಮಯ ಸಾಧನೆಯಿಂ ಸ್ವಮತೀಯ ವರ
ಪ್ರಭಾವ ಬೀರುವ ಕ್ರೈಸ್ತ ಧರ್ಮೀಯರ ನಿಚ್ಚ
ಕರ್ಮಕಾಂಡ ಸುತ್ತಲ್ ಹೆಡೆಯೆತ್ತಿದ ಫಣಿಯೊಲ್

ಕಾಡುತಿರೆ ಮನಂ ಬೇಸತ್ತೊಡಂ ಎದೆಗೆಡದೆ
ರಾಮ್‌ಮೋಹನ್ ಸಾಗಿದನ್ ಮುಂಪಥವಿಡಿದು.
''ವಿಶ್ವಲೋಕಕೆ ದೇವನೊಬ್ಬನೇ. ಆಕಾರ
ರಹಿತಂ. ಸತ್-ಚಿತ್-ಆನಂದಮಯಂ. ಪ್ರಾಣಿಗಳ
ಪ್ರಾಣಂ. ವರ್ಣನಾತೀತಂ. ಕಲ್ಪನಾತೀತಂ.
ಎಂದೆಂಬ ಉದಾತ್ತ ತತ್ತ್ವಗಳ್ ವೇದಾಂತ
ವೇದೋಪನಿಷತ್ತುಗಳಿಂ ಪೊದಳ್ದುದು ಜಗತ್
ಪ್ರಸಿದ್ಧಂ'' ಎನುತ ಪರಧರ್ಮೀಯರ ಪ್ರಶ್ನೆಗೆ
ಧೀರತನದಿಂದುತ್ತರಿಸುವಂ. ದುರ್ಜನರ ದುರ್
ನೀತಿಯಂ ಬದಿಗೊತ್ತಿ ಸುವಿಚಾರ ಪರವಶತೆಯಲಿ
ಮುಳುಗಿರೆ ಕಿವಿಯ ಬಳಿಯಲಿ ತಟ್ಟನೆ ಮೊಳಗಿತೊಂದು
ಆತನುವಾಣಿ. ಭಾರತ ರಾಷ್ಟ್ರ ಚಿರ ದಾಸ್ಯದಿಂ
ಬಿಡುತೆಗೊಂಡು ಸಕಲತರ ಬಿಜ್ಜೆಗಳಲಿ ಬೆಳಗಿ
ಜಗಕೆ ಮಾದರಿಯಪ್ಪೆ ಪ್ರಜೆಗಳ ಪರಿಪುಷ್ಟಿಯೆ
ರಾಷ್ಟ್ರ ಪುಷ್ಟಿಯೆನೆ ಸತ್ಯಂ! ಜ್ಞಾನ ದೀವಿಗೆಯ
ಉರಿಸದೆಂತು ಮಾನವೀಯ ಸಂಮಾರ್ಜನೆ?
ದುಷ್ಟ ಪ್ರವೃತ್ತಿಗೆ ಮಣಿಯದಿರ್ಪೆ ಧೀಮಂತ!''
ಆ ಉಪದೇಶಂ ಕೇಳ್ದು ನೆತ್ತರಿನ ಕಣ ಕಣಂ
ಭುಗಿಲೇಳುವನಿತು ಪುರುಡು ಮೂಡಿತು ಮೈಯೊಳ್.
ಶಾಲೆಗಳ್ ತುಂಬಿರ್ದೊಡಂ ಕಲಿಪುವರ್ಗಿರದ
ಲೋಕ ಪ್ರಜ್ಞೆಯುಬಪ್ಪುದೆಂತು ಕಲಿವವರಿಂಗೆ?
ಎನಿತೆನಿತು ಪ್ರಯತ್ನಿಸಿದೊಡಂ ಶಿಕ್ಷಣ ಪ್ರಗತಿ
ಮೊಟಕು. ಶಿಕ್ಷಕರ್ ಮಂದಮತಿಗಳಿರೆ ಸಾಧನೆಯ
ದಿವ್ಯಕೊರತೆಯಂ ಪರಿಸುವೊಡೆ ಪಂಡಿತವರ್ಗ-
ಮಿಲ್ಲದಾಗದೆನುತೆ ಆಂಗ್ಲ ಶಿಕ್ಷಣ ತಜ್ಞರಂ
ಮೇಣ್ ಹಿಂದೂ ವಿದ್ವಾಂಸರಂ ಒಗ್ಗೂಡಿಸಿ
ವಿಚಾರ ವಿನಿಮಯಕೆಂದು ಸಂಘರಚನೆಗೈದಂ.
ಕಾಲೇಜುಗಳಂ ತೆರೆದು ವಿಜ್ಞಾನ-ಗಣಿತ

ರಾಜಕೀಯ ಮತ್ತಂ ದೇಶೀಯ ಭಾಷೆಗಳ್
ಮುಂತಪ್ಪ ನವನವೀನ ವಿದ್ಯಾ ಶಾಸ್ತ್ರಗಳ್
ಅಳವಡಿಸಿ ಬಿಜ್ಜೆಯ ಸಸಿಗೆ ತನಿಯೆರೆದು ನಿಚ್ಚ
ಸಂಪೋಷಿಸುತಿರಲ್ ಮೆಲುಮೆಲ್ಲನೆ ಪರಿಪುಷ್ಟಿ
ಗೊಳುತಿರ್ದುದು ಸರಸತಿ ದೇಗುಲಂ. ಮೇಣ್ತನ್ನ
ದ್ರವ್ಯರಾಶಿಯುಂ ಕರಗುತಿರ್ದುದು ಬಿಸಿಲಟ್ಟಿದ
ಮಂಜಿನವೊಲ್! ಆದೊಡಂ ಪಿಂತೆಗೆಯದು ಚಿತ್ತಂ.
ಸುತ್ತಮುತ್ತಲೆತ್ತೆತ್ತಲುಂ ನಿರಕ್ಷರೀ ಜನ
ರಾಶಿ. ಲೋಕ ಪ್ರಜ್ಞೆಯ ಸುಳಿವಿರದೆ ರಣಗೋಳು
ನೆಮ್ಮಿ ಕಂಬನಿ ಕಡಲಲಿ ಮುಳುಗೇಳುತಿಹ ಜನ
ಜಂಗುಳಿಯ ಸಂಕಷ್ಟ ಕರುಳ್ ಬಳ್ಳಿಯನಿರಿದು
ಕೋರೈಸುತಿರೆ ಕಿಂಚಿತ್ ಇಲ್ಲ ಶಾಂತಿ-ವಿಶ್ರಾಂತಿ.
ರಾಧಾನಗರಿಯ ಜನಕೋಟಿ ಆ ಮಹನೀಯ
ನೌದಾರ್ಯದಿಂ ಉಪಕೃತರು ಮಾತ್ರಮೆ? ಬಂಗಾಳಿ
ಸಾಹಿತ್ಯ ಶ್ರೀಮಂತಮಾದತ್ತು ಎಡೆವಿಡದೆ
ಲೇಖಿಸಿದ ಸಾಹಿತ್ಯದಿಂ. ಆದೊಡೇಂ ದೇಶ
ನಿರಕ್ಷರೀ ಜಾಡ್ಯದಿಂ ನರಳುತಿರೆ ಸಾಹಿತ್ಯ
ಭಂಡಾರದಿಂದೇನಪ್ಪುದು? ಈ ಕೊರತೆಯೇಂ
ಸಾಮಾನ್ಯಮೆ? ಎಲ್ಲಾ ದಾರಿದ್ರ್ಯಗಳ ತಾಯಿ
ಅಕ್ಷರ ದಾರಿದ್ರ್ಯಗತಿ! ನಯವಿಲ್ಲ ನುಣ್ಪಿಲ್ಲ
ಪೆಂಪಿಲ್ಲ. ಬದುಕಿನಲಿ ಸಾರವಿಲ್ಲ ಎನಲ್ಕೆ
ಎನಿತೊಂದು ಕಾಲಮಾನವೇಳ್ಕುಮೊ ಭಗವಂತ!
ಎಂಬ ಚಿಂತೆ ಕಾವಳಿಸುತಿರೆ ಮನಃಕಲ್ಪಮಂ.
ರಾಮ್‌ಮೋಹನ್ ಮನದೆ ಕೊರಗುವನ್. ಕರಗುವನ್.
ರಾಷ್ಟ್ರೀಯ ಬಡತನಕೆ ಹೇಳಿ ಮಾಡಿಸಿದವೊಲಿಹ
ಮುಗ್ಧ ಜನಕೋಟಿಯ ಹುಂಬತನಂ ತೊಡೆವರೆ ದಿನ
ನಿಚ್ಚ ಸರಸತಿಯ ಪೂಜೆಯಲ್ಲದೆ ಬೇರಿಲ್ಲಂ.
ಆದೊಡೆಂದಿಗೀ ಪೂಜೆ ಗುರಿಗೊಂಬುದೊ ಮೇಣ್

ಗಮ್ಯಸ್ಥಾನವರಿವ ಜಾಣ್ಮೆಯೆಂತು ಗರಿಗೊಂಬುದೊ
ಎಂಬೊಂದು ಘನ ಚಿಂತೆಯಲಿ ಮುಳುಗಿ ಈಸುವಂ.
ಆವೊಂದು ಕಡು ಭಂಗ ಬನ್ನಗಳ ಕೋಟಲೆಗೆ
ಮನಮರುಗಿ ಕಾರುಣ್ಯ ದ್ರವ್ಯ ದ್ರವಿಸಿ ಜಿನುಗಿ
ಹರಿವವೊಲ್ ತಹತಹಿಪ ರಾಮ್‌ಮೋಹನ ರಾಯನ
ಸ್ಥಿತಿಯಂ ಕಂಡು ಕಾಣುತ "ಅವಂ ಅರೆ ಮರುಳ!"
ಎಂದಪರ್ ಕಣ್ಣಿರ್ದ ನಿಜ ಕುರುಡರ್.

ಓವೊ!

ಆ ದುರ್ದಿನಗಳಲಿ ಕುವಿಚಾರಗಳ್ ಪೊದಳ್ದು
ಸಮಾಜದ ಕಟ್ಟುನಿಟ್ಟಿನೊಳ್ ಮೆರೆದು ಸತ್ಯವೆ
ತಾನಾದವೊಲ್ ವಿಜೃಂಭಿಸುತಿರ್ದ "ಸತಿ
ಸಹಗಮನ" ಮೆಂಬ ಘೋರಾತಿಘೋರ ರೂಢಿಯುಂ
ಕಡುಮೂರ್ಖತನಮೆನುತೆ ಸಾಮಾಜಿಕರ ಪಿತ್ರ
ವರ್ಗವಂ ಎದೆಯೋತು ದಯೆಯೋತು ಬೇಡಿಯುಂ
ಕಾಡಿಯುಂ ನಿಷ್ಫಲಮಿರೆ ಚಿಂತಿತನಪ್ಪಿ ಆ
ದುರ್ದೈವೀ ಸುದತಿಯರ ಕಂಬನಿಯೊರಿಸಿ ಬಾಳ್
ಬೆಳಗಿಸಲ್ ಸತತ ಕಂಠ ಶೋಷಣೆಗೈದೊಡಂ
ಕೇಳ್ವರಾರ್? ಪಿರಿಯರ್ ಶಾಸ್ತ್ರ ಸಮ್ಮತಮೆನಲ್
ವಿಧವೆಯರ್ ಸುಮಂಗಳ ದ್ರವ್ಯದಿಂದೊಪ್ಪಮಿಸಿ
ಭೋರನಳುತ ಚಿತೆಯೇರುತಿರ್ದರ್. ಇಂ ಕೆಲರ್
ಮತಿಗೆಟ್ಟು ಕಂಗಾಲಾಗಿ ಓಡುತಿರೆ ದುರದುಂಬಿ
ಪಿರಿಯರ್ಕಳ್ ನಿರ್ದಯೆಯಿಂ ಪಿಡಿದು ಬಲವಂದು
ಚಿತೆಗೆ ನೂಂಕಿ ಸುಡುತಿರ್ದರೆಲ್ಲರ ಕಣ್ಮುಂತೆ!
ಆವ ಶಾಸ್ತ್ರದೊಳಿರದ ನೀಚ ಪದ್ಧತಿಯೆನುತೆ
ಅರಿವಳಿಕೆಗೆ ತರಲೆತ್ನಿಸಿದೊಡದಮಾನಿಸದಿರೆ
ನೊಂದು ನೋವುಂಡ ರಾಮ್‌ಮೋಹನ್ ಕಾಯಿದೆಯ
ನೆರವು ಪಡೆವುದೊಳಿತೆಂದು ಪರಿಭಾವಿಸಿ ಸಮಯ
ಒದವಿ ಬರಲೆಂದು ಕಾದಿರ್ದಂ. ಅದರ ಗುಟ್ಟಂ

ಅರಿತ ಕೆಲ ಧೂರ್ತರ್ ಪಿರಿ ಜಿಹ್ವೆಯ ಖಡ್ಗದಿಂ
ಇರಿದಿರಿದು ಘಾಸಿಗೊಳಿಸೆ ಇತರರ್ ಕಡಿಗತ್ತಿ
ವಿಡಿದು ಕೊಚ್ಚಿ ಕೊಲಲ್ ಮುಂದಾದರ್! ಪರಿಸ್ಥಿತಿ
ಅಂತಿರಲ್ ಸಾಮಾಜಿಕ ಸೇವೆ ಕಠಿಣತರಂ.
ದೀನಾತಿದೀನ ಪೆಣ್ಗಳ ಕರ್ಮ ಕಾಂಡಮಂ
ನೆನೆನೆನೆದು ಮರುಗುವಂ. ಕರಗುವಂ. ನೋಯುವಂ.
ಮಾನವ ಜನಮ ಎತ್ತಿಯುಂ ಮಾನವೀಯತೆಗೆ
ಪಕ್ಕಾಗದ ಮಾನವರಂ ನೋಡುತಿರೆ ಒಡಲ್
ಕನಿಕರದ ಮೂಟೆಯಪ್ಪುದು ದಿಟಂ. ಭಾರತೀ
ಪರಿಪುಣ್ಯಭೂಮಿ! ಪುರಾತನ ಸುಸಂಸ್ಕೃತಿ ಲೋಕ
ಪ್ರಸಿದ್ಧಿ! ಆದೊಡಮಿದೇಂ ನಾಗರಿಕ ಜೀವನ
ವಾಹಿನಿಯಲಿ ಇಂತೊಂದು ಮೊಸಳೆಗಳ ಮಹಾ
ಸಂಗಂ! ಎನಲ್ ಕರ್ತವ್ಯದ ಫಣೆ ಬುಸ್ಸನೆ
ಹೆಡೆಯೆತ್ತಿ ನಿಲ್ದುದು ಬಡಿದೆಬ್ಬಿಸಿದೊಲ್!

ಒರ್ಮೆ

ರಾಮ್‌ಮೋಹನರಾಯ್ ಕಲಿಕತ್ತೆಯಲಿ ಮುಖ್ಯ
ಕರ್ತವ್ಯ ನಿಷ್ಠನಿರೆ ಅಣ್ಣ ಜಗನ್ಮೋಹನರಾಯ್
ಗತಿಸಿದಂ ರಾಧಾನಗರಿಯಲಿ. ಸುದ್ದಿ ಮುಟ್ಟಿ
ಪಿಂತಿರುಗುವನ್ನ ಶವವಂ ಚಿತೆಗೇರಿಸಿ ಮಸಣ
ಕೈಂಕರ್ಯದೊಳಿರ್ದರ್ ಕುಟುಂಬಿಗರ್. ಮಂಗಳ
ದ್ರವ್ಯ ಪರಿಶೋಭಿತಳಪ್ಪ ಅತ್ತಿಗೆ ಚಿತೆಯೇರಿ
ಕುಳ್ಳಿರ್ದಳ್ ಪತಿಯ ಶವವಂ ತೊಡೆಯ ಮೇಲಿರಿಸಿ!
ಆ ಘೋರ ದೃಶ್ಯದಿಂ ಎದೆ ಹೌಹಾರಿ ಮುನ್ನುಗ್ಗೆ
ಕಿಕ್ಕಿರಿ ನೆರೆದ ಮಂದಿ ಬಿಡುವರೇಂ ಮುಂಬರಿಯೆ.
ಪಿಂದೆಳೆದು ಬಡಿದರೌಂಕಿ! ''ಅತ್ತಿಗೆ! ಅತ್ತಿಗೇ!''
ಎನುತೆ ಕರೆದು ಕೂಗಿದನಾ ರಾಮ್‌ಮೋಹನಂ!
ಅಮಿತ ಸಂತಾಪದಿಂ ಕೂಗಿದಂ ಮತ್ತೆ ಮತ್ತೆ!
ಕೇಳ್ದವರ ಕಟುಮನಂ ಕರಗಲಿಲ್ಲಂ. ತನ್ನ

ಬಿಗಿವಿಡಿದರಂ ಬೊಗ್ಗು ಬಡಿವನಿತು ರೋಷಮಿರೆ,
ಚಿಂತೆಯಿರೆ ಬಿಡಿಸಿಕೊಳ್ಳಲಾಗದೆ ಆಪನಿತು
ಬೇಡಿದಂ ''ಅಣ್ಣಂದಿರಾ! ಅತ್ತಿಗೆಯನುಳಿಸಿ!
ಹಾ! ಇದೇಂ ಘೋರ ದುಷ್ಕೃತ್ಯ? ಎನುತೆ ಬೇಡಿದಂ.
ಕಂಬನಿ ಸುರಿದು ಹೋದುದು ನಯನದ್ವಯಗಳಲಿ.
ಸುತ್ತಮುತ್ತಲ್ ನೆರೆದ ಮಂದಬುದ್ಧಿಯ ಮೂರ್ಖ
ಮಂದಿ ಉತ್ಸಾಹದಿಂ 'ಮಹಾಸತಿ!' ಎಂದೆನುತೆ
ಜಯಘೋಷಗೈದರ್! ಚಿತೆ ಧಗಧಗಿಸುತ ಉರಿದು
ಕೆನ್ನಾಲಿಗೆ ಚಾಚಿತು ಕಡು ಮೂರ್ಖ ಜನರ ಮುಂತೆ!
ಅತ್ತಿಗೆ ಅಲಕಮಂಜರಿ ನಲ್ಮೆ ಬಲ್ಮೆಗಳ ಗಣಿ!
ಆಯಸ್ಸಿರ್ದು ಇಲ್ಲವಾದಳ್ ಜಗದಲಿ! ಅಃ!
ಇಂತೊದವಿತೆ ಅತ್ತಿಗೆಯ ಅಂತ್ಯ? ಸಮಯಕ್ಕೊದವಿ
ಆಪತ್ ಕಳೆಯಲಾಗದ ಕಡು ಚಿಂತೆ ಹೃದಯಂ
ಕೊರೆಯುತಿರ್ದುದು ಭೈರಿಗೆಯೊಲ್? ಆಗಳ್ ರಾಮ್
ಮೋಹನಂ ಈ ದುಷ್ಟ ರೂಢಿಯಂ ಝಾಡಿಸದೆ
ಬಿಡೆನೆಂದು ಬದ್ಧ ಕಂಕಣನಾಗಿ ಕೋರಿದಂ
ಆಂಗ್ಲೇಯ ಸರಕಾರಮಂ. ಆದೊಡೇಂ ಧೂರ್ತ
ಆಂಗ್ಲ ಸರಕಾರದ ಮನೋಧರ್ಮ ಕಿವುಡುತನ.
ಸಾಯ್ವನಿತು ಸಾಯಲೆಂಬ ದಿವ್ಯ ನಿರ್ಲಕ್ಷ್ಯ. ರಾಮ್
ಮೋಹನಂ ಎಲ್ಲ ಶಾಸ್ತ್ರಗಳನಾರೈದು ಸೋಸಿ
ಎಲ್ಲಿಯುಂ ಶಾಸ್ತ್ರ ಸಮ್ಮತಮಿರದಿರಲ್ಕೆ ''ಸತಿ
ಮಿಥ್ಯದ ಮಹಾ ಮಾರಿ! ಇದೆಂತೆಮ ಮನೆಮನೆಯಂ
ಬೊಕ್ಕುದೊ ಸಮಾಜದ ವೈರಿಯಿದು'' ಎನುತೆ ನಾಡಿನ
ಪಿರಿಯರ್ಕಳಂ ಕಂಡು ''ಸತಿ ಶಾಸ್ತ್ರಗಳಲಿಲ್ಲ.
ಇದುಂ ಕ್ರೂರ-ಅನೈತಿಕ-ಅನಾಗರಿಕ'' ಮೆನುತೆ
ಹೇಳಿ ಕೇಳಿ ಬೇಡಿದೊಡಂ ಬುದ್ಧಿಹೀನ ಜನ
ಒಪ್ಪಿ ಮಣಿದರೇಂ ? ಮರುಗಿದರೇಂ ? ಕರ್ಬುನದೊಲ್
ಕಠಿಣಮಾಗೆ ನಿಚ್ಚಂ ಸಹಗಮನ ನಡೆದತ್ತು

ಯಥೋಚಿತಂ! ಎಲ್ಲ ರೀತಿಯೊಳ್ ವಿಫಲನಾಗಲ್
ಹೃತ್ ಬನದ ಪಕ್ಷಿ ಚೀರ್ದತ್ತು ''ಕೊಲೆ! ಕಗ್ಗೊಲೆ!
ನೀನಿದಂ ಕೊನೆಗಾಣಿಸು! ಕೊನೆಗಾಣಿಸು! ಬಿಡಲು
ಬೇಡ. ಕಜ್ಜ ಕೈಗೂಡುವನ್ನೆಗಂ ಹೋರಾಡು!''
ಹೃದಯದ ವೀರಘೋಷ ಕರ್ಣಗಹ್ವರದಲಿ
ಮೊರೆಯುತಿರ್ದುದು ಸದಾಕಾಲಂ. ಪೆಣ್ಮಣಿಯರ
ಕಣ್ ತೆರೆಸೆ ವಿದ್ಯಾಭ್ಯಾಸಮೊಂದೆ ಎನಿಸಿ ಎಲ್ಲ
ಪೆಂಗಳೆಯರ್ ಬಿಜ್ಜೆ ಕಲಿಯಲ್ ಪ್ರೋತ್ಸಾಹಿಸಿದಂ.
ಬಿಜ್ಜೆಯೇಳ್ಗೆ ದೂರ ಭವಿಷ್ಯಂ! ಅನ್ನೆಬರಂ
ಸುದತಿಯರ ವ್ಯರ್ಥಬಾಳಿಗೇಂ ಪರಿಹಾರಮೆನೆ
ಚಿಂತೆ ಹೃತ್ ಬನದ ಪಕ್ಷಿಗೆ. ಜಗದಿತರ ರಾಷ್ಟ್ರಗಳ್
ಸ್ವಾತಂತ್ರ್ಯ ಸುಗ್ಗಿಯಂ ಮೊಗೆದುಂಡು ಆನಂದ
ಭೋಗದಿಂ ಬಾಳುತಿರೆ ನಮ್ಮವರ್ ಬಂಗಾರದ
ಬಾಳಂ ಆಂಗ್ಲರ ಕೈಲಿ ಅಡವಿಟ್ಟು ನರಳ್ವುದು
ಆವ ತಾಪಸರ ಅಭಿಶಾಪಮೊ ಎನೆ ಕಂಡು
ಕಾಣುತಿರಲ್ ಪ್ರಜ್ಞಾನ ಘನರ್ ಕಂಗಳ್ ಮುಚ್ಚಿ
ಸುಮ್ಮನಿರಲಕ್ಕುಮೆ? ಮನಃಕಲ್ಪಂ ಕಡೆದು ಮತಿ
ಖಡ್ಗಂ ವೀಸಿ ಲೇಖನ ಕೃಷಿಯಂ ಕೈಕೊಂಡಂ.
ದೇಶದೊಳ್‌ವೃತ್ತ ಪತ್ರಿಕೆಗಳ್ ಪುಟ್ಟಿರದೆ
ಕೆಲ ಇಂಗ್ಲಿಷ್ ಪತ್ರಿಕೆ ಮಾತ್ರ ರಂಜಿಸಿರ್ದುವು
ಸಿರಿವಂತರಲಿ. ರಾಮ್‌ಮೋಹನ ರಾಯ್ ಅತ್ತಂ
ಮನವಿಟ್ಟು ಕೊರತೆಯಿಂ ಪರಿಹರಿಸೆ ಮುಂದಾದಂ.
ಪತ್ರಿಕಾ ಸುದ್ದಿಯಂ ಆಂಗ್ಲ ಸರಕಾರಮೋದಿ
ಮುದ್ರೆಯೊತ್ತದೆ ಪ್ರಕಟಣೆ ನಿಶಿದ್ಧಮಿರೆ, ಆ
ದಿಶೆಯೊಳ್ ಸರಕಾರದೊಡಂ ಮತ್ತೆ ಹೋರಾಟ
ಆರಂಭಮಾದತ್ತು ದಿಟ್ಟ ಗತಿಯಲಿ. ವಾಗ್
ಬಾಣಗಳ ಪ್ರಹಾರ, ಲೆಕ್ಕಣಿಕೆಯ ಕಾವುಗಳ್
ಒಗ್ಗೂಡಿ ಹರಿದುವು ಪ್ರಭುತ್ವಮಂ ಎಳ್ಚರಿಸೆ.

ಹಗರಣ ಎಡೆವಿಡದೆ ನಡೆಯೆ ಆಂಗ್ಲ ಸರಕಾರ
ರಾಮ್‌ಮೋಹನನ ಮತಿವಂತಿಕೆಯಂ ಮೆಚ್ಚಿ 'ಅಸ್ತು'
ಎಂದಿತು ಅಶಾಂತಿಯ ಮಹಾಪೂರಕೆ ತಡೆಯಿಕ್ಕಿ.
ರಾಮ್‌ಮೋಹನ್ ಪೋರ್ದು ಗೆಲ್ದು ವೃತ್ತಪತ್ರಿಕೆಯ
ಪ್ರಪಂಚಕೆ ಪದಾರ್ಪಣೆ ಮಾಡಿದಂ. ದೇಶದ
ಸುದ್ದಿ ಶ್ರೀ ಸಾಮಾನ್ಯರ ಮನಮಂ ಮುಟ್ಟುವೊಲ್
ದಿನದಿನಂ ಪರಿದುದು ಉಲ್ಲೇಖನ ವಾಹಿಯಲಿ.
ಪತ್ರಿಕಾ ಸ್ವಾತಂತ್ರ್ಯ ಪಡೆಯೆ ಗೈದ ಸಾಸಂ
ಸಾಮಾನ್ಯಮಲ್ಲಮಲ್ತು. ಜೀವಮಾನಮೆಲ್ಲಂ
ಸಾಹಸದ ರಂಗದಲಿ ಕಳೆಯುತಿರಲ್ ಉರುಳುವ
ಚಣಚಣಂ ಹೋರಾಟದ ಪಾಲ್ಗೈಸಿ ಏಗಳುಂ
ವಿಶ್ರಾಂತಿ ದೂರಾತಿದೂರಂ.

ಪರಮ ವಿಶೇಷ

ಸುದ್ದಿಯೆನೆ ಕರ್ಣಾಕರ್ಣಿಯೈಸಿ ಕರ್ಣ ಪಟಲದ
ಮೇಲೊರೆದುದೊಂದು ಸುವಾರ್ತೆ! ಸಾವಿರದೆಂಟನೂರ
ಇಪ್ಪತ್ತನೆಯ ವರ್ಷಮಾನದಲಿ ಅಮೆರಿಕೆಯ
ಹಲ ಕೆಲ ವಸಾಹತುಗಳ್ ಬಿಡುತೆ ಹೊಂದಿ ಸ್ವತಂತ್ರ
ಮಾದಾ ವಿಶೇಷವಾರ್ತೆಯಿಂ ಪುಳಕಿತನಪ್ಪಿ
ಆನಂದಭೋಗದಿಂ ಮನದುಂಬಿ ಆತ್ಮೀಯ
ಗೆಣೆಯರಂ ಆಹ್ವಾನಿಸಿ ಸುಸುದ್ದಿಯಂ ಬಾಯಿ
ತುಂಬ ಬಿತ್ತರಿಸಿದಂ ''ಕೇಳಿರ್ಕೆ ಬಂಧುಗಳೆ!
ಅಮೆರಿಕೆಯ ಸೋದರರರ್ ಸ್ವಾತಂತ್ರ್ಯ ಸವಿಯುಣುವ
ಭಾಗ್ಯಮಂ ಪಡೆಕೊಂಡುದೆಮಗುಂ ಪರಮಾನ್ನಂ
ಉಂಡನಿತು ಪೆರ್ಮೆಯಲ್ತೆ! ದೇಶದೊಳ್ ಪ್ರಜೆಗಳ್ಗೆ
ವ್ಯಕ್ತಿ ಸ್ವಾತಂತ್ರ್ಯವೇಳ್ಕುಂ, ಅಮೆರಿಕ ಪ್ರಾಂತ್ಯಗಳ್
ಸ್ವತಂತ್ರ ಪಡೆದೊಡೆ ಎಮಗೇತರ ಪುರುಪು ಎನಿಸಿ
ಪರಿಹಾಸ್ಯಗೊಳ್ಳದಿರಿಂ. ಇದೆಮಗೆ ನಿಜಸ್ಫೂರ್ತಿಯ
ಆಗರಮೆನೆ ಸರಿಯಕ್ಕು; ಭಾರತ ವರ್ಷಮಿಂತೆ

ಬಿಡುಗಡೆಯ ಭಾಗ್ಯ ಪಡೆಕೊಳ್ಳೆ ಭಾರತೀಯರ್
ಒಗ್ಗಟ್ಟನಿಂ ಮುಂದ್ಯೆದು ನಿಲ್ಲಲ್ ಈಯೊಂದು
ಪ್ರಕರಣ ಉದಾಹರಣೆಯಲ್ತೆ?'' ಎನಲ್ ರಾಮ್
ಮೋಹನ್, ಮರುವಾದಿಸದೆ ಗೆಣೆಯರ್ ತಲೆದೂಗಿ
ಸಮ್ಮತಿಸಿದರ್ ಒಮ್ಮನದಿಂ ''ಆರಾದೊಡೇಂ?
ಮಿತ್ರರೆ! ಮನುಜರೆನಲ್ ಸೋದರ ಬಂಧುಗಳಲ್ತೆ?
ಇತರರ ಸುಖದುಃಖ ಮನಗೊಂಡಾವು ಪಾಲ್ಗೊಳದೆ
ಇರ್ಪುದು ಮನುಜಮತಿಗೆ ತಕ್ಕುದಲ್ಲಂ'' ಎಂದಂ;
ಸಿತಸ್ಮಿತಮಂ ಸೂಸಿ ಆನಂದ ರಸಾನ್ನಂ
ಉಂಡವೊಲ್!
ಪ್ರಪಂಚ ಪ್ರಥಮ ಯುದ್ಧದ ಕಾವು
ಅಡಗಿ ''ಶಾಂತಿಯ ಹರವು ಹರಡುತಿರೆ ತಣ್ಣನೆಯ
ಶೀತಲತೆಯೊಲ್; ರಾಮ್‌ಮೋಹನಂ ಪ್ರಪಂಚ
ಪರಿಸ್ಥಿತಿಯಂ ಅವಲೋಕಿಸಿ ಮನ ಮಥಿಸಿ ಮಥಿಸಿ
ಬಿತ್ತರಿಸಿದಂ ''ದೇಶ ದೇಶಗಳ ಬಾಂಧವ್ಯ
ಅಳಿದು ವೈಮನಸ್ಯಂ ಮೂಡಿದೊಡೆ ಒರ್ಮೆಗೇ
ಯುದ್ಧರಂಗಕ್ಕಿಳಿವುದು ಸರಿಯಲ್ಲಂ. ವಿಷಯ
ವಿಮರ್ಶೆಗೈದು ಮತ್ತೆ ಮತ್ತೆ ಕೂಡಿ ಜಟಲತೆ
ಕಳೆದು ಶಾಂತಿಯಿಂ ಬಗೆ ಹರಿಪ ಸಂಘ ಸಂಸ್ಥೆಯಂ
ಏರ್ಪಡಿಸಿಕೊಂಡೊಡೆ ಪರಮಲೇಸು. ಇದನರಿತು
ರಾಷ್ಟ್ರ ರಾಷ್ಟ್ರಗಳ್ ಸಂಯೋಜಿಸಿದೊಡೆ ಸತ್ ಶಾಂತಿ
ಲಭಿಸುಗುಂ ಇಕ್ಕೆಡೆಗೆ.''
''ಲೀಗ್ ಆಫ್ ನೇಷನ್ಸ್''
ಸಂಸ್ಥೆ ಒಡಮೂಡುವ ಶತಮಾನ ಪೂರ್ವಮೇ
ಇಂತೊಂದು ಸದ್ ಆಶಯಂ ವ್ಯಕ್ತಪಡಿಸಿರ್ದ
ನೆನಲ್ ಆ ಚಿಂತನಾಶೀಲತೆಯಂ ನೆನೆಮನವೆ!
ಸಹ ಜೀವನ-ಸಹಕಾರ-ನಾಗರಿಕತೆಗಳ
ಸಂಯೋಜನಾ ಮೈತ್ರಿಯಲಿ ದಿನದಿನಂ ಅರಳ್ದ

ಧೀಶಕ್ತಿ ತೊಳಗಿ ಬೆಳಗಿದತ್ತು ನವ ನವೀನ
ಕಾಂತಿಯೊಲ್! ಅಂದು, ಜನರಲಿ ಅಕ್ಕರದಳ್ಕರೆಯು
ಇನಿತಿಲ್ಲದ 'ಅರಳು ಮರುಳು' ಜೀವನ ಚಿತ್ರಂ
ಚಿಂತ್ರಿಸಿಕೊ ಮನವೆ! ಜೀವಂತ ಪೆಣ್ಣಂ ಸುಡುವ
ಮೂರ್ಖಮತಿಗಳಪ್ಪ ಜನ ಜಂಗುಳಿಯ ಜೀವನಂ
ಚಿತ್ರಿಸಿಕೊ ಮನವೆ! ಅನಾಗರಿಕ ಬದುಕಿನಲಿ
ನಾರಿಯರ ಭಂಗಮಂ ನೆನೆದು ಚಿತ್ರಿಸಿಕೊ ಮನವೆ!
        ಆಂಗ್ಲೇಯ ಪ್ರಭುತ್ವದ ನ್ಯಾಯಾಲಯಗಳಲಿಹ
ನ್ಯಾಯದಾನಮಿನ್ನೊಂದು ವಿಚಿತ್ರ. ಬಿಳಿಯರ್ಗೆ
ಮೇಣ್ ದೇಶೀಯರ್ಗೆ ಬೇರೆ ವೇರೆ ನೀತಿಯ
ನ್ಯಾಯದಾನಂ. ಭಾರತೀಯ ಜ್ಯೂರಿಗಳಿಗೆ
ಪ್ರವೇಶ ಕಿರಿಯ ನ್ಯಾಯಾಲಯಗಳಿಗೆ ಮಾತ್ರಮೆ.
ಪಿರಿಯ ನ್ಯಾಯಾಲಯಗಳಿಗೆ ಆಂಗ್ಲೇಯ ಜ್ಯೂರಿಗಳ್
ಎಂಬೊಂದು ತಾರತಮ್ಯವಿರ್ದುದು ಆಂಗ್ಲೇಯ
ಪ್ರಭುತ್ವದಲಿ. ಅದಂ ಅನ್ಯಾಯ-ಅನಾಚಾರ
ಎಂದೆನುತೆ ಧ್ವನಿಯೆತ್ತಿ ವಾದಿಸಿ ಮತಿಗತ್ತಿ
ಮಸೆದು ಕಂಠಶೋಷಣೆಗೈದು ಆಂಗ್ಲ ಪ್ರಭುತ್ವದ
ಮನವೊಲಿಸಿ ಒಪ್ಪಿಸಿ ಅಸಹ್ಯ ತಾರತಮ್ಯಮಂ
ಪೋಗಾಡಿದನಾ ವೀರ ಧೀಮಂತ ಭಾರತ!
        ಪೂರ್ವ ಸಂಯೋಜನೆಯಿಂ ದೇಶೀಯ ಸಿರಿವಂತ
ಗದ್ದಿಗೆಯೊಳ್ ಪ್ರತಿಷ್ಠಿತ ಜಮೀನ್ದಾರ ವರ್ಗಂ
ನಗರ ಜೀವನೀಯ ವಿಲಾಸದಲಿ ಮೈಮರೆತು
ದಿನಗಳೆಯುತಿರ್ದರ್ ಪರಮಾನಂದ ಭೋಗದಲಿ!
ದುಡಿವ ಗೋಜಿಲ್ಲಂ; ಬೆವರುವ ಕಡು ಭಂಗಂ
ಇನಿತಿಲ್ಲಂ. ಕೃಷಿ ಜೀವನದ ಭಂಗ ಬನ್ನಂ
ಕೃಷಿಕ ಪ್ರಜೆಗಳಿಗಕ್ಕು. ವರ್ಷಾಂತ್ಯದಲಿ ಬೆಳೆ
ಕೊಯ್ದು ಬಳಿಕಂ ಭುವಿಯೊಡೆಯರಪ್ಪ ಚಕ್ರವರ್ತಿಗಳ್
ಬಕ ಪಕ್ಷಿಗಳೊಲ್ ಬಂದೆರಗುತಿರ್ದರ್ ಕೊಯ್ದು

ಧವಸ ಧಾನ್ಯಕೆ; ಬೆಮರ್ ಬಸಿದರಂ ನಿರ್ಲಕ್ಷಿಸಿ!
ಸ್ವಾರ್ಥವೆ ಪರಮಾರ್ಥಮಿರೆ ದಯೆ ಕರುಣೆಗಳಿಂಗೆ
ಎಡೆಯೇ ಇಲ್ಲಂ. ರಾಮ್‌ಮೋಹನನ ಮನಗರಗಿ
ಕಾರುಣ್ಯಪೂತ ದೃಷ್ಟಿ ಹರಿದುದತ್ತಲ್.
                                        ಓವೊ!
ಅದೇಂ ಸಾಮಾನ್ಯ ಸಂಕಷ್ಟಮೆ ಬಗೆ ಹರಿಸಲ್?
ಕಠಿಣತರ ಕಿನಿಸಿಗೆಯ ಹೋರಾಟ. ಧನಿಕರ್ಗೆ
ಒಡಲ್ಗಿಚ್ಚಿನ ಬೆಂಕಿಯ ರೋಷ! ಆಕ್ರೋಶ! ಮಿಗೆ
ಬಾಂಧವ್ಯಕೆ ಮಿತ್ತು! ದಿನದಿನಂ ಹದಗೆಟ್ಟುದು
ಸ್ನೇಹ ಸಂಬಂಧ. ದುಃಖ ಸಂಕಟಗಳಂ ಪೇಸಿ
ಕೈವಿಟ್ಟೊಡೆ ಅಪರಾಧಿಯು ತಾನೈಸುವುದು ದಿಟ
ಎಂಬುದು ಕರತಲಾಮಲಕಮಿರೆ ದಾಕ್ಷಿಣ್ಯಮಂ
ಬದಿಗೊತ್ತಿ ರಾಮ್‌ಮೋಹನ್ ಅಂಕದ ಕಣಕ್ಕೆ
ತಾನಿಳಿದನ್. ಸುಖ-ದುಃಖ-ರೋಷಗಳ ಜಾಲಂ
ಸುತ್ತುವರಿದುದು ಜಾಡನ ಪರೆಯಂ ಮೀರಿ, ಮತಿ
ಕಿಡಿಸುವೊಲ್! ಆದೊಡಂ ಕಾರ್ಯರಂಗದಿಂ ತಾಂ
ನಿರ್ಗಮಿಸುವ ವ್ಯಕ್ತಿಯಲ್ತು ರಾಮ್‌ಮೋಹನರಾಯ್.
ಶ್ರಮವನೆ ಶ್ರಮಿಸಿದನ್ ಬೆವರಿಳಿದು ಹರಿಯುವ
ಮಾಳ್ಕೆಯಲಿ. ಎಲ್ಲೆಲ್ಲಿಯುಂ ನಾನಾ ವಗೆಯಲಿ
ಪೊದಳ್ದ ಸಮಸ್ಯೆಗಳ ಜಾಲಮಂ ಬಗೆಹರಿಸೆ
ಬುದ್ಧಿಮಾನ್ಯರ ಸಲಹೆ-ಸಹಕಾರಗಳಿಗಾಗಿ
‘‘ಬ್ರಹ್ಮಸಮಾಜ’’ ಎಂಬೊಂದು ಸಂಸ್ಥೆಯಂ ಸ್ಥಾಪಿಸಿ
ಸಂಘಟಿಸಿ ಆಕರ್ಷಿಸಿದಂ ವಿಕಸಿತ ಚಿತ್ತ
ಕಲ್ಪಮಂ. ವೇದಘೋಷ, ಪ್ರಾರ್ಥನೆ, ಭಜನೆಗಳ್,
ಶಾಸ್ತ್ರಾರ್ಥ ವಿಮರ್ಶೆಗಳ್, ತರ್ಕವಿತರ್ಕಗಳ್
ನಡೆಯುತಿರ್ದು ಲೋಗರ್ಗೆ ತಾನಾದುದು ದಾರಿ
ದೀಪ ಬ್ರಹ್ಮಸಭೆ. ಮೇಣ್, ದುಂಬಿಯಂ ಆಕರ್ಷಿಪ
ಮಕರಂದವೊಲ್ ಬುದ್ಧಿ ಜೀವಿಗಳಿಗೊಂದು

ಆಕರ್ಷಣೀಯ ರಂಗಮಾ ಬ್ರಹ್ಮಸಮಾಜ.
ರಾಮ್‌ಮೋಹನಂ ತನ್ನ ಭಾವಗೀತೆಗಳನಲ್ಲಿ
ಹಾಡಿ ಪಾಡಿ ಸಭೆಯಂ ತಣಿಸುವಂ. ಲೇಖಮಂ.
ಓದಿ ವಿಷಯ ವಿಮರ್ಶೆಗಿತ್ತು ಜನ ಮಾನಸಂ
ತಾನೋದುವಂ. ಮೇಣ್ ಬಗೆವಗೆಯ ಜ್ಞಾನದಿಂ
ಸಭೆ ವಿಜೃಂಭಿಸಿದತ್ತು ಕಾಲೋಚಿತಮಪ್ಪಿ.
ಆದೊಡಂ ಸತಿಯರ ಸಹಗಮನ ರೂಢಿಯಂ.
ಕಿತ್ತೊಗೆಯಲಾಗದೆ ನರಳಿದತ್ತು ಧೀಮಂತ
ಜೀವ. ಕಾಯಿದೆಯ ಡಾಕಿನಿ ಎದುರ್ವೆತ್ತಲ್ಲದೆ
ನಿವಾರಣೆ ಅಸಾಧ್ಯಮಿರೆ ಲಂಡರ್ ನಗರಿಯಲಿ
ಪಾರ್ಲಿಮೆಂಟ್ ಕೂಡುವ ಸಮಯಕಾಗಿ ಕಾದಂ
ಚಾತಕ ಪಕ್ಷಿ ಮಳೆ ನೀರಿಗಾಗಿ ಕಾದಿರುವವೊಲ್.
ಅಂದಿನಾ ಮೂಢಮತಿಯಲಿ ಸಾಗರೋಲ್ಲಂಘನಂ
ಪರಮ ಪಾಪಮೆಂಬೊಂದು ನಂಬಿಕೆಯಿರೆ ರಾಮ್
ಮೋಹನನ ಮಹಾಸಾಗರಯಾನದ ವಿರುದ್ಧ
ಸಿಡಿದೆದ್ದರ್ ಸಾಮಾಜಿಕ ಪಿತೃಗಳ್.
ಅಗಳ್
ಮೊಗಲ್ ಶಾಯಿಯ ದ್ವಿತೀಯ ಬಾದಷಹ ಮಯಿನ್
ಅಕ್ಬರ್ ಉದ್ದಿನ್ ತನ್ನಯ ನಿವೃತ್ತಿ ವೇತನಮಂ
ಪೆರ್ಚಿಸಿಕೊಳಲ್ ಬ್ರಿಟಿಷ್ ಪಾರ್ಲಿಮೆಂಟಿನ ಮುಂದೆ
ವಿನಯಪೂರ್ವಕ ಬೇಡಿಕೆಯಂ ಮಂಡಿಸುವ ಪೆರ್
ಬಯಕೆಯಲಿ ತಾನಿರ್ದಂ. ಮತ್ತಾಗಳ್ ರಾಮ್
ಮೋಹನನ ಇಂಗಿತಮನರಿತು ತನ್ನೊಂದು ಬಗೆ
ಹರಿಯದ ಸಮಸ್ಯೆಯಂ ನೊಂದಾಯಿಸಲೀತನೇ
ತಕ್ಕಮೆನುತೆ ಸಾಗರಯಾನಕೆ ಪಣವನಿತ್ತು
ಮೇಣ್ 'ರಾಜಾ' ಎಂಬ ಬಿರುದನಿತ್ತು ಗೌರವಿಸಿ
ಕಳಿಪಿದಂ.
ರಾಜಾ ರಾಮ್‌ಮೋಹನ ರಾಯನಾ
ಸಾಮಾಜಿಕರ ವಿರೋಧಮಂ ನಿರ್ಲಕ್ಷಿಸಿಯೇ

ಪೂರವಂಟನ್ ಸಾಗರ ಯಾನಮಂ ಕೈಕೊಂಡು.
ಮೂಢಮತಿಯ ಜನವೃಂದ ಶಪಿಸಿ ದೂಷಿಸಿದರ್,
ಹೀಯಾಳಿಸಿ ತನುಮನಮಂ ತಣಿಸಿದರ್ ಮಿಣ್ಣನೆ.
ಚೈತ್ರಂ ಅಲೆಗಳೇರಿಳಿತದಲಿ ತಾನೇರಿಳಿದು
ತುಯ್ಯಲಾಡುತ ಸಾಗಿತು ಜಲಧಿಯಲಿ. ಸುತ್ತಲೂ
ಧುಮುಧುಮಿಸುವ ಅಗಾಧ ಜಲರಾಶಿ! ಪ್ರಪ್ರಥಮ
ನೋಟಕೆ ತನುಮನ ನಡುಗಿಸುವನಿತು ಭಯಾನಕ.
        ಗಂಭೀರ ಸನ್ನಿವೇಶದಲ್ಲಿ ಘನ ಗಂಭೀರ
ಚಿಂತನಾ ವೇಗದಲುಣ್ಮಿದ ಭಾವರಸೋಜ್ವಲ
ತೇಜದಿಂ ವದನ ಮಂಡಲ ತೊಳಗಿ ಬೆಳಗುತಿರೆ
ನಯನದ್ವಯಗಳ ಸೆಳೆಮಿಂಚಿಗಾವ ತಾರಗೆ
ನೆರವಿತ್ತುದೊ ಎನಲ್ಕೆ ಥಳಥಳಿಸಿದುವು ಪೊಚ್ಚ
ಉಲ್ಕೆಗಳವೊಲ್! ತಾಯ್ನಾಡು ಕಣ್ಮರೆಯಾಯ್ತು.
ಎತ್ತೆತ್ತಲುಂ ಭೋರ್ ಭೋರನೆ ಭೋರ್ಗರೆಯುತ
ಮೇಲಾಯ್ದು ಬಹ ಮಹಾ ಅಲೆಗಳೋಳಿ! ಆವಾವ
ಗಳಿಗೆಯಲಿ ಚೈತ್ರಮಂ ಕಬಳಿಸುವುವೋ ಎನಿಪ
ಭಯಂಕರ ಚಿತ್ರ! ದೂರ ದೂರದಾ ಇಂಗ್ಲೆಂಡ್
ಪ್ರಾಂತ್ಯಕಭಿಮುಖಿ ಚೈತ್ರಂ ಸಾರ್ದುದು ಭಾರತದ
ಔರಸ ಪುತ್ರ-ಪ್ರಜ್ಞಾನ ನಿಧಿ ರಾಜಾ ರಾಮ್
ಮೋಹನರಾಯನಂ ಪೊತ್ತು. ಓವೋ, ಏನೆಂಬೆ?
ವ್ಯಕ್ತಿಗತ ಸತ್ಕೀರ್ತಿ ಪರಿಮಳಂ ಮುಟ್ಟಿದುದು
ವ್ಯಕ್ತಿ ಸೇರುವ ಮುನ್ನಮೆ ಇಂಗ್ಲೆಂಡ್ ಪ್ರಾಂತ್ಯಕೆ
ಕಸ್ತೂರಿ ಗಂಧಂ ತಂತಾನೆ ಪಸರಿಸುವವೊಲ್!
ಅರ್ಧ ಶತಮಾನ ಪರ್ಯಂತ ನಡೆಸಿದ ಮಹಾ
ಹೋರಾಟದ ಚಾರಿತ್ರಿಕ ಧವಳ ಕೀರುತಿಯ
ಧ್ವಜ ಗಗನಕೇರ್ವಟ್ಟಿರೆ ಕಾಣದವರಾರ್?
ಸುದ್ದಿ ಮೇಘ ಸಂದೇಶದೊಲ್ ಮುಟ್ಟಿದೊಡನೆಯೆ
ಏಂ ಸಂಭ್ರಮ ವಿಶೇಷ ಗೆಣೆಯ ಬಾಂಧವರಿಂಗೆ!

ನರೋತ್ತಮ ಆಗಮಿಸುವನೆನೆ ಬಲ್ ಪೆರ್ಮೆಯಿಂ
ಸುಸಜ್ಜಿತಗೊಂಡಿತು ಲಿವರ್‌ಪೂಲ್ ಬಂದರ್.
ತಿಂಗಳೆರಡರ ದೀರ್ಘ ಪ್ರವಾಸದ ಅತೀವ
ದಣಿವು ಆ ಕಿಕ್ಕಿರಿ ನೆರೆದ ಮಂದಿಯಂ ಕಂಡು
ಗುರುತಿಸಿದೊಡನೆ ಸುಖಮೂರ್ಛೆ ಬರುವೊಲ್ ಆನಂದ
ಸಂಭ್ರಮದಿಂ ತುಂಬಿತು ಹೃದ್ಗಡಲು. ನೋಡಲ್,
ಭಾರತೀಯ ಮಿತ್ರರು ಮಾತ್ರಮೇ? ಆಂಗ್ಲೇಯ
ಮಿತ್ರವೃಂದ ಒಗ್ಗೂಡಿ ನಿಂದಿಹ ದೃಶ್ಯದಿಂ
ತೆಕ್ಕನೆ ತನುಮನ ಪುಳಕಮಾದುದು ಮೈನವಿರ್
ನಿಮಿರುವವೊಲ್. ಶಿರಬಾಗಿ ಕೈಮುಗಿದು ವಂದಿಸಿ
ಆತ್ಮೀಯ ಆಲಿಂಗನ ನೀಡಿದನ್; ಸಂತಸ
ರಸವಾಹಿನಿಯಲಿ ತೇಲಿ, ಮೂಕ ವಿಸ್ಮಿತನಾದಂ.
ಆಗಳ್ ಗೆಣೆಯರ್ ತಮ್ಮೊಡನಿರ್ದ ಆಂಗ್ಲೇಯ
ಮಿತ್ರನ ಕುವರನಂ ಪರಿಚಯಿಸುತ "ಕೇಳೈ, ಮಿತ್ರ!
ಈ ಯುವಮನೀಷಿ ಆಂಗ್ಲೇಯ ಇತಿಹಾಸಕಾರ
ವಿಲಿಯಂ ರಾಸ್ಕೊ ಮಹನೀಯನ ಸುಪುತ್ರ. ಈಗಳ್
ವಿಲಿಯಂ ಮಹನೀಯ ನರಳುತಿರ್ಪಂ ಗಂಭೀರ
ಪಾರ್ಶ್ವವಾಯು ರೋಗದ ಕಪಿಮುಷ್ಟಿಯೊಳ್ ಸಿಲ್ಕಿ.
ರುಗ್ಣ ಶಯ್ಯೆಯಲಿರ್ದೊಡಂ ನಿನ್ನ ಸಾಹಸಂ
ಕೇಳಿ ಕೇಳಿ ಆನಂದ ಪಟ್ಟಿರ್ದ ಘನವಂತ!
ನೀನವಂ ಕಂಡೊಡೆ ಬಲ್ ಸಂತಸಪಡುವನೆನೆ
ದಿಟಂ!" ಎಂದರನುಕಂಪದಿಂ ಕರುಣ ದ್ರವ್ಯಂ
ಸೂಸಿ. ಆ ದಯಾ ಪೂರ್ಣ ವಿಷಯಂ ಅರಿತೊಡನೆ
ರಾಜಾ ರಾಮ್‌ಮೋಹನ್ ಮನಮರುಗಿ ರೋಗಿಯಂ
ಕಂಡುಬರೆ ಪೊರವಂಟನಲ್ಲಿಂದೆ, ನೇಹಿಗರ
ತಂಡದೊಡಂ. ಆಗಳಾ ನತದೃಷ್ಟ ವೃದ್ಧ
ವಿಲಿಯಂ ರಾಸ್ಕೊ ಭಾರತ ಶ್ರೇಷ್ಠನಂ ಕಣ್ತುಂಬ
ನೋಡಿ ಪ್ರಸನ್ನ ಮುಖದಿಂ ಸ್ವಾಗತಿಸಿ ಕೈ

ನೀಡಿದಂ ಹಸ್ತಲಾಘವಕೆ. ''ಅಯ್ಯಾ, ಧೀಮಂತ!
ನಿನಗೆ ಒಳ್ಳಿತಕ್ಕೆ! ನಿನ್ನಿಂದ ರಾಷ್ಟ್ರ ಬೆಳಗಲಿ!''
ಎನುತೆ ಎದೆ ತುಂಬಿ ಹರಸಿ ಬೀಳ್ಕೊಟ್ಟಂ,
ಬಳಿಕಮಾ ಅಲ್ಲಿನನೇಕವಗೆಯ ಸಂಘಗಳ್
ಸಂಸ್ಥೆಗಳ್ ಮುಂಗೆತ್ತು ಸ್ವಾಗತಿಸಿದರ್ ಗೌರವ.
ಪ್ರೇಮಗಳ ನೋಂಪಿಯಿಂ. ಎಲ್ಲರೊಗ್ಗಿನ ಭೇಟಿ
ವಿಚಾರ ವಿನಿಮಯದಿಂ ಮಹತ್ಪೂರ್ಣಮಾದುದು
ಭಾವೋಜ್ವಲ ಕಾಂತಿಗೆ.
ತರುವಾಯೊಳ್ ಲಂಡನ್
ನಗರಿಯಲಿ ಪಾರ್ಲಿಮೆಂಟ್ ಕೂಡಿದ ಒಳ್ದಿನಂ
ಅನೇಕ ಸದಸ್ಯರಂ ಕಾಣಲ್ಕೆ ಭ್ರಮರಂ
ವನದಿ ಪೂವಿಂಪೂವಿಗೆ ಅಲೆವ ತೆರದಿ ಅಲೆದು
ಬಂಗಾಲದ ಪರಿಸ್ಥಿತಿಯಂ ಬಿತ್ತರಿಸಿದಂ
ಕರುಳ್ ಮಿಡಿಸುವೊಲ್ ಕಿವಿಗೊಂಬ ಸುಜನರ್ಗೆ.
ಮೂಢಮತಿಯ ಕರುಣ ಕಥಾನಕಮಂ ತಿಳಿಪಡಿಸಿ
ತನ್ನಂತರಂಗದ ಕಡು ಸಂಕಟವ ತೋಡಿ
ವಿನಯ ದೈನ್ಯದಿಂ ಸತಿ ಸಹಗಮನ ಪದ್ಧತಿಯಂ
ಈಗಿಂದೀಗಳ್ತೆ ಕಿತ್ತೊಗೆಯೆ ತುರ್ತು ಶಾಸನ
ಗೈದುಪಕರಿಪ ಕಾಯ್ದೆಯ ಶ್ರೀರಕ್ಷೆವೇಳ್ಕುಮೆಂದು
ಬೇಳ್ದಂ, ಮಹಿಳಾಮಣಿಯರ ಆತ್ಮಬಂಧುವೇ
ತಾನೈಸಿ!
ಇಂತೊಂದು ಜಡತ್ವದ ಜಾಡ್ಯ ಅತಿ
ದುರದೃಷ್ಟಕರ ದುಃಖಪೂರ್ಣ ಸಂಗತಿಯೆಲ್ಲು
ಕಂಡು ಕೇಳಿರದ ವಿಷಯಮೆಂದು ಕರುಣೆಯಿಂದೆ
ಹೃದಯವಂತ ಸದಸ್ಯರನೇಕರ್ ಮನಮರುಗಿ
ಕರಗಿ ಈ ಸಲ ಅದಂ ಕಾನೂನಿನ ಕಡ್ಡಾಯದ
ಬಾಣವೊಗೆದು ನಿರ್ನಾಮಗೈವ ಆಶ್ವಾಸನೆಯಂ
ನೀಡಿ ಗೆಣೆಯ ರಾಜಾ ರಾಮ್‌ಮೋಹನನಾ

ಎದೆಗುದಿಗೆ ಸಾಂತ್ವನಂ ನೀಡಿದರ್. ಅಂದಿನಾ
ಪಾರ್ಲಿಮೆಂಟ್ ಅಧಿವೇಶನವನೀಕ್ಷಿಸೆ ಬದ್ಧ
ಅನುಮತಿಯ ಪರವಾನಗಿಯಂ ನೀಡಿದರ್. ಆ
ದಿನಮಾನ ತನ್ನೊಂದು ಜೀವಿತದ ಪರಮೋಚ್ಚ
ಮೈಲಿಗಲ್ಲೆನುತೆ ಆನಂದಪೂತ ಮನದಿಂ
ತನ್ನ ತಾನೆ ಅಭಿನಂದಿಸುವವೊಲ್ ಪುರುಪಿನಿಂ
ಶ್ರೀವಿಜಯ ತೋಷದಿಂ ಸಂತುಷ್ಟ ಹೃದಯದಿಂ
ಪೊಕ್ಕನಾ ಪಾರ್ಲಿಮೆಂಟ್ ಮಹಾ ಭವನಂ. ಆ
ದೇಶೀಯ ವಿದ್ಯಾವಿಶಾರದರಪ್ಪ ಅನುಪಮ
ವಿಭೂತಿಗಳ ಮಾ ಅಧಿವೇಶನದ ಪ್ರಪ್ರಥಮ
ಸಂವೀಕ್ಷಣೆಯ ಭಾಗ್ಯದೊರೆತುದಾ ಸುಪ್ರಜೆಗೆ.
ಪಾರ್ಲಿಮೆಂಟಿನ ವೈಭವೋಪೇತ ಅಧಿವೇಶನ
ಮೆರೆದಿರೆ ಪರಿದೃಶ್ಯಮಾನದ ಸೌಂದರ್ಯರಾಶಿಯ
ವೈಖರಿಯಲಿ. ಜಗಜಗಿಸುತಿರ್ಪ ಉಜ್ವಲೋಜ್ವಲ
ದೀಪಮಾಲೆಗಳ ಶೃಂಗಾರ ಕಣ್ ಮನಗಳಂ
ಆಕರ್ಷಿಪವೊಲ್ ವರ ಬಂಧುರಂ! ಎಲ್ಲ ಸ್ವಚ್ಛ
ಶುಭ್ರಮಿರೆ ಸ್ವರ್ಗ ತುಲ್ಯಮಾ ವೈಭೋಗಂ
ನೋಳ್ಪ ರಸಪೂರ್ಣ ದೃಷ್ಟಿಗೆ! ಮೇಣ್ ನಾಗರಿಕ
ವಲಯದಲಿ ನಾಗರಿಕ ವ್ಯವಹಾರಂ ನಿಚ್ಚ
ಸರ್ವತೋಮುಖೀ ಪ್ರತಿಭೆಯ ಚೆಲ್ಲಿ ಸೂಸಿರೆ
ಪೇಳಲೇನಾ ಘನ ಲಕ್ಷಣೀಕರಣಂ! ನಿತ್ಯ
ನವನವೋನ್ಮೇಶಶಾಲೀನ್ಯತೆಯ ಸುಂದರಂ!
ಸಭೆಯುಂ ವಿವಿಧ ವಿಷಯಮಂ ಕುರುತು ನಡೆಸಿರ್ದ
ವಿಚಾರ ವಿಮರ್ಶೆಗಳಿಂ, ವಾದ ವಿವಾದಗಳಿಂ
ಗಳಿಗೆ ಗಳಿಗೆಗೆ ಕಳೆಯೇರುತಿರೆ ನೋಡಿ ಕಣ್ದಣಿಯೆ
ಅಧೀನ ರಾಷ್ಟ್ರಗಳ ಹಿಂಡಿ ಹಿಪ್ಪೆಗೈದು ಸಂಪದಂ
ಮೊಗೆದುಂಡವರ ಆಟಾಟೋಪಮಿದೆನುತೆ ನೊಂದು
ತನ್ನೊಳ್ ನಿಡುಸುಯ್ದಂ. ಮತ್ತೆರಡು ವಾರಗಳ

ಅವಧಿಯಲಿ ಸತಿ ಸಹಗಮನ ನಿರೋಧ ಕಾಯಿದೆ
ರೂಪುಗೊಂಡು ಕಡಿಗತ್ತಿವೀಸೆ ಅದರ ಪಿತಂ
ಧರ್ಮದೇವತೆಯಂ ನೆನೆದು ಕೃತಜ್ಞತೆಯಂ
ಸಲಿಸಿದಂ ಮನಂ ತಣಿವನ್ನ.
ಬ್ರಿಟಿಷ್ ಪ್ರಭುತ್ವ
ಮಿನ್ನೆಯೆ ಕಡ್ಡಾಯದ ಕಾಯಿದೆಗೊಳಿಸಿರ್ದೊಡೆನಿತೊ
ಪೆಣ್ಜೀವ ಬದುಕಿ ಬಾಳುತಿರ್ದುವು ಆಯಸ್ಸು
ಇರುವನ್ನ. ಬಾಳ್ ತುಂಬುವನ್ನ. ನರ ಜನ್ಮವ
ಪಡೆದು ಫಲವಿಲ್ಲ ಎನುತೆ ಸುಖದುಃಖದ ಗಣಿ
ತಾನಾದಂ. ಅತ್ತಲಾ ಭಾರತದೊಳ್ ಜನಮತಿ
ಖತಿಗೊಂಡು ಆಂಗ್ಲ ಪ್ರಭುತ್ವಮಂ ಮೇಣ್ ರಾಜಾ
ಬಿರುದಾಂಕಿತ ರಾಮ್‌ಮೋಹನನಂ ಶಪಿಸಿದರ್ ಮತಿ
ಮಸೆದು ಗಂಟಲ್ ಹರಿದು ಹೋಹನ್ನ. ಪಂಜರದ
ಕೇಸರಿಗಳವೊಲ್ ಅತ್ತಿತ್ತಲಾಡಿ ಅಬ್ಬರಿಸಿ
ಸೊರ್ಕಳಿದು ಮಿಣ್ಣನಾದರ್ ತನಗೆ ತಂತಾನೆ
ಸಂತೈಸಿ ಕೊಳ್ವವೊಲ್.
ಬಳಿಕಲಾ ಧೀಮಂತ
ತಾನಲ್ಲಿಯೆ ನೆಲೆನಿಂದಂ ಅವಿಶ್ರಾಂತ ಜೀವಕೆ
ವಿಶ್ರಾಂತಿ ನೀಡಲೊ ಎನಲ್ಕೆ, ಕಾಲಮಾನಂ
ಸೊಗದಿಂ ಕಳೆದುದು ಲಂಡನ್ ಮಹಾ ನಗರಿಯಲಿ;
ಸುಪುತ್ರಂ ರಾಧಾನಗರದಿಂ ಆರ್ಥಿಕ ನೆರವು
ನೀಡುವನ್ನ. ಮಿನ್ನೆ ಧೂರ್ತ ಬಂಧುಗಳ್ ಕನಲಿ
ಪೂಡಿರ್ದ ದಾವೆ ನ್ಯಾಯಾಲಯದಲಿ ಮಿಥ್ಯದ
ಪಾಲಾಗೆ. ಕೊರಳ್ಗೆತ್ತ ಉರುಳಿಂ ಕಂಗೆಟ್ಟನಾ
ವರ ಸುತಂ. ದುರುಳವರ್ಗಂ ಬಗೆದ ಒಳಸಂಚು
ಎದುರ್ವೆತ್ತು ಸಕಲೈಶ್ವರ್ಯಂ ಕೈವಿಟ್ಟುದುದು
ಬಡತನಕೆ ನಾಂದಿ ಹಾಡಿ. ಅತ್ತ ಲಂಡನ್ ಮಹಾ
ನಗರದಲಿ ರಾಜಾ ರಾಮ್‌ಮೋಹನ ರಾಯ್ ಕಠಿಣ

ಪ್ರಸಂಗದಿಂ ಬರಿಗೈಯಾಗಿ ತಹತಹಿಸುತೆರೆ
ಪುಣ್ಯ ಜೀವಕೆ ನೆರಂಗೂಡೆ ಭಾರತೀಯರ್
ಕೆಲರ್ ಮುಂದ್ವೆಯ್ದು ನೆರವಿತ್ತರೊಲವಿಂದೆ. ಆ
ಜನಾದರಣೀಯತೆಯಲೆನಿತೊ ಕಾಲ ಕಳೆದುದು
ಸರಾಗಂ. ಆದೊಡಾ ಸಂಕಟದ ಹಿರಿಕೊರೆತ
ಸಾಮಾನ್ಯಮಲ್ತು. ಕಡು ದಾರಿದ್ರ್ಯದ ಕರಾಳ
ಕತ್ತರಿಯಲಿ ಸಿಲ್ಕಿ ಬಳಲಿರೆ ಮೈಮನಂ ದಿನ
ದಿನಂ ರೋಗವಶಮಾದತ್ತು ದೈಹಿಕ ಸಂಪತ್ತಿ
ಒಡಲಿನಕ್ಕರೆ ತುಂಬಿದ ಸಕ್ಕರೆ ಬಳ್ಳಿಯುಂ,
ಸಾವಿರದೆಂಟನೂರ ಮೂವತ್ತಮೂರನೆ ಸೆಪ್ಟೆಂ-
ಬರ್ ಇಪ್ಪತ್ತೇಳನೆ ಪವಿತ್ರ ದಿನಮಾನದಲಿ
ಜೀವ ಜಗದಿಂ ದೂರ್ವೈದು ಕಣ್ಮರೆಯಪ್ಪಿತ್ತೈ
ಸ್ವರ್ಗ ಪಥವಿಡಿದು. ಭಾರತಿಯ ಮಹಾನ್ ಔರಸ
ಪುತ್ರ ರತ್ನ ಲಂಡನ್ ನಗರಿಯ ಭುವಿಯಂ ಸೇರ್ದು
ಮಣ್ಣಾಯ್ತು, ಪಾರ್ಲಿಮೆಂಟಿಗೆ ಸಂದ ಗೌರವವೋ
ಎನೆ. ಪೆಣ್ಮಣಿಗಳ ಕಂಬನಿಧಾರೆಯಂ ತೊಡೆದು
ದಯನೀಯಮಾದ ಜೀವನಂ ಬೆಳಗೆ ಮೇಣ್
ಮಾನವೀಯತೆಯನುದ್ಧರಿಸೆ ಶ್ರಮವನ್ನೇ
ಶ್ರಮಿಸಿದ ಪರಮ ವೀರ ವಿಕ್ರಮ ತೇಜದಿಂ
ಪ್ರಸಿದ್ಧಿ ಪಡೆದ ಧೀಮಂತ ಧೀರೋದಾತ್ತ
ನೀತಿಯಿಂ ತೊಳಗಿ ಬೆಳಗಿದ ಪರಮ ಕೀರುತಿಯ
ಶಿಖರವೇರಿದ ವೀರ ಭಾರತೀಯರಂ ನೆನೆ
ನೆನೆ ಮನವೆ! ಆಪನಿತು ಜಾನಿಸಿ ನೆನೆ ಮನವೇ!
ಇಂತಪ್ಪ ಧೀಮಂತ ಮಹೋದಯರುದಿಸಿರ್ದು
ರಾಷ್ಟ್ರಕೆ ಮಂಗಳವೆಸಗಿ ಮೆಂಗಳ ಭಾರತಿಯೆನಲ್
ಕಮನೀಯ ಕಾವ್ಯ ಕಾನನಕೆ ಸಿರಿ ಬಿತ್ತಾಗಿ
ಮೊಲ್ಲೆ ಬನದಲಿ ಮೊಲ್ಲೆಯನೆ ಅರಳಿ ಸರುಗಂಪು
ಬೀರಿದ ಮಹೋದಯರ ಪುಣ್ಯ ಜೀವನಮಂ
ನೆನೆನೆನೆದು ಚಿಂತಿಸಿಕೊ ಹೇ ಮನವೆ!

``The heights that great men reached and kept
were not attained by sudden flight
But they, while their companions slept
were toiling upword in the night"

— o —

ರವೀಂದ್ರನಾಥ ಠಾಕೂರ್

“ತ್ವರೋತ್ತಿಷ್ಠಂ ಸುಯುಗಮಿಹ ನೇದಿಷ್ಠಮ ಭಯಂ
ಸಕೃದೃಷ್ಟ್ವಾ ಪ್ರೇಷ್ಠ ಭುವನ ಪರಮೇಷ್ಠಂ ತವಪುರಾ
ಯುಗೋಪಾಸ್ಯಂ ವಿಶ್ವಾ ಸ್ತುತ ಚರಣರೇಣುಂ ನರಹರಿಂ
ಕೃತಾರ್ಥತ್ವ ಯಾತು ಪ್ರಭವತು ಚ ಜೀವಃ ಸಪದಿತೇ”

ಫಾಲ್ಗುಣೀ ಪೂರ್ಣಿಮೆಯ ಶುಭ್ರ ಧವಳ ಜ್ಯೋತ್ಸ್ನಾ
ಕೀರ್ತಿಮಾಲೆಯಂ ಧರಿಸಿ ಮೆರೆವ ಬೆಳದಿಂಗಳ
ರಾತ್ರಿಯವೊಲ್ ಕಣ್ಗೆಸೆದತ್ತು ವರ ಶ್ರೀಮಾತೆ
ವೀಣಾಪಾಣಿ ಶಾರದೆಯ ಭವ್ಯ ಚಿತ್ತಾರ!
ಶ್ವೇತಾಂಬರಧಾರಿಣಿ, ಜ್ಯೋತಿರ್ಮಯಿ ಸುಜ್ಞಾನ
ಮೋದಿನಿ, ಸಕಲ ವಿದ್ಯಾ ಪ್ರದಾಯಿನಿ ಕವಿತಾ
ಕಾವ್ಯ ಕಲಾ ಕಲೆ, ವರ ಕಲ್ಯಾಣಿ, ನಿಜ ಜಾಯೆ!
ಭುವನ ಮನ ಮೋಹಿನಿ ತವ ಪದಾಂಭೋಜಗಳಿಗೆ
ತಲೆಯಂ ಮಣಿವೆ ಭಕ್ತಿಭಾವದಿಂ. ತವ ದಯದಿಂ
ಎಡೆಬಿಡದೆ ಪರಿಯಲೀ ದೌತಿಯೊರತೆ ತಂತಾನೆ!

ಓ ಎನ್ನ ಕಲ್ಪನಾ ಸುಂದರಿಯೆ, ಮಾತೃಮಯಿ
ನಿನ್ನ ಮಹಿಮಾಮಯ ಕರುಣೆ ಪ್ರೇಮಗಳಿಂದಲಿ
ಕಗ್ಗಾಡಿನ ಕಟುಹೃದಯಿ ವ್ಯಾಧ ತಾನಾದಂ
ಆದಿಕವಿ ಭಾರತ ಭುವಿಯ ಕೀರ್ತಿ ಕಸ್ತೂರಿ
ಪರಿಮಳಿಸೆ. ಹೇ ತಾಯೆ! ವಿದ್ಯಾಧಿದೇವತೆಯೆ!

ಭಾರತ ವರ್ಷದ ಪುಣ್ಯಭೂಮಿಯಲಿ ಎನಿತೆನಿತೊ
ಪ್ರಜ್ಞಾನ ಘನರ್ ಸಂಜನಿಸಿ ಲೋಕದೊಳ್ ಸತ್
ಕೀರ್ತಿವೆತ್ತು ಸೀಮಾಪುರುಷರೆನಿಸಿದರೈಸೆ?
ವಂಗಭೂಮಿ ಆರಿಸಿದ ಅಣಿ ಮುತ್ತುಗಳ ಗಣಿ!
ಲೋಕೋತ್ತರ ಸುಜ್ಞಾನಿಗಳ ತಾಯಿ! ಅಧ್ಯಾತ್ಮ
ಚಿಂತನಾವೇಶದ ಪರಮಯೋಗಿಗಳ ಬೀಡು!

ಸುವಿಚಾರಶೀಲರ, ವರಕವಿಗಳ, ರಾಜಕೀಯ
ದುರಂಧರರ, ವಿಜ್ಞಾನವೇತ್ತರ ಪರಂಧಾಮ!
ಇಂತಪ್ಪ ವಿಭೂತಿಗಳಿಂಗೆ ತಿಲಕ ಪ್ರಾಯಮೆನೆ
ಸಗ ಸಾವಿರದೆಂಟನೂರರವತ್ತೊಂದನೆ ಮೇ
ತಿಂಗಳ ಆರನೆಯ ಪುಣ್ಯ ಕಾಲಮಾನದೊಳ್
ವಂಗದೇಶದಲಿ ಮೂಡಿದ ಉಜ್ವಲೋಜ್ವಲ
ನಕ್ಷತ್ರ ಪ್ರಜ್ವಲಿಸಿದುದು ಲೋಕೋತ್ತರಮಾಗಿ!
ಓಹೊ! ಆ ಶುಭದಿವಸ ನಿಸರ್ಗದೈಸಿರಿಯುಂ
ಮುಂಗಾರ್ ಮೀಹದಿಂ ಸ್ವಚ್ಛ ಶುಭ್ರ ಶೈಲಿಯು
ನಳನಳಿಸಿ, ಪಚ್ಚ ಪಸಿರ್ ಮೈದುಂಬಿ ವಿಧವಿಧ
ವರ್ಣವರ್ಣಾಂತ ಚಿಗುರೊಡೆದುದು ಸಿರಿ ಸಗ್ಗವೆ
ಧರೆಗಿಳಿದು ಬಂದೊಲ್! ದೇವೇಂದ್ರನ ಸಿರಿ ಸಗ್ಗದ
ನಂದನೋದ್ಯಾನವೆ ಪೊದಳ್ದವೊಲ್! ಕಣ್ಗೆಡ್ಡ
ಚಿತ್ರಣಂ ಎಲ್ಲೆಲ್ಲಿಯುಂ. ತಣ್ಣಗೆ ತಣಿಸುವ
ಜೇಷ್ಠಾನಿಲಂ ತೀಡುವ ದಿಸೆದಿಸೆಗೆ ರೊಯ್ಯನೆ
ಸಾಗಿದಂ ಜಯಧ್ವನಿಗೈವವೊಲ್! ಆಗಳಾ
ವನ ವಿಹಂಗಗಳ್ ಕಲ ಕಂಠದಿಂ ಪಾಡಿದುವು
ಸುಪ್ರಭಾತಮಂ ರೆಂಕೆಗೆದರುತುತ್ಸಾಹದಿಂ!
ನಭೋದೇಶದಲಿ ನಿರ್ಭಾರ ಜೀಮೂತಗಳ್
ಸುಳಿಸುತ್ತುತ ಒಯ್ಯೊಯ್ಯನೆ ವೈಯಾರದಿಂದ
ಮಹಾಯಾನದಲಿ ಮಂಜುಮಯಿ ತುಂತುರು ಹನಿಗಳ
ಅಕ್ಷತೆಯೊಲ್ ಬಳಬಳನೆ ಎಲ್ಲೆಡೆ ಚೆಲ್ಲಿದುವು.
ಅಂದು, ಶ್ರೀಮಂತ ಸುಪ್ರಸಿದ್ಧ ಸುಕುಟುಂಬ
ಪರಿವಾರಂ ಎದುರು ನೋಡುತಿರ್ದ ಸುಗಳಿಗೆಯುಂ
ಸಾರಿಬರೆ ಸಂಜನಿಸಿತೊಂದು ಪರಿ ಪುಣ್ಯ ಶಿಶು
ಶಾರದಾ ದೇವಿಯ ಪರಮ ಗರ್ಭಾಂಬುಧಿಯಲಿ
ಭಾರತ ಭುವಿಯ ಪುಣ್ಯವೇ ಘನಿಸಿ ಬಂದವೊಲ್!
ತಿಳಿಗಗನದ ನಿರ್ಮಲ ನಿರ್ಮೋಡ ನೀಲಿಯಲಿ

ಸೂಚನೆಯು ಮಿಲ್ಲದೆಯೆ ಸೆಳೆಮಿಂಚು ಮಿಂಚಿದುದು
ಮತ್ತೆಮತ್ತೆಮೇಣ್ಮತ್ತೆ. ಆ ಸುಗಳಿಗೆಯೋಳ್
ಅಲ್ಲಿಗೈದ ಜೋಗಿಯೋರ್ವಂ ಶಂಖವಂ ಊದಿ
ಜಾಗಟೆಯಂ ಬಡಿದು ಬಾರಿಸಿ ಪೊಗಳಿ ಪಾಡಿದನ್,
''ಇಂದಿನೀ ದಿನಂ ಬಲು ಶುಭದಿನಂ ಎಂದೆನುತೆ
ತೋಷದಿಂ ಜಾನದಿಂ ಬಡಿಬಡಿದು ಕೇಳಿಸಿದಂ!
ಬ್ರಹ್ಮನ ದಯದಿ ಜನ್ಮ ನಕ್ಷತ್ರಂ ಶುಭಮಿರ್ಕೆ
ಪೆತ್ತವರ ಆನಂದ ಭೋಗಕೆ ಎಣೆಯಿಲ್ಲಂ.''
ಜಾತಕ ಬರೆಸಿದರ್ ನಲ್ ಬ್ರಾಹ್ಮಣಾದ್ಯರಂ
ಕಂಡು. ಆಗಳಾ ಶಾಸ್ತ್ರಕೋವಿದರ್ ಮನದೊಳ್
ಮೆಚ್ಚಿ ಶಿಶುವಿನ ಅಭ್ಯುದಯವನರಿತು ಶುಭವಂ
ಕೋರಿದರ್ ಮನ ತುಂಬಿ ಎದೆತುಂಬಿ. ಮತ್ತಂ
''ಈ ಶಿಶುವನೆಂದು ಬೈಯದೆ ನೋಯಿಸದೆ ಅಳಿಸಿ
ಗೋಳು ಹುಯ್ಯದೆ ಪರಿಪಾಲಿಸಿ; ಮುಂದೆ ಲೋಕದಲಿ
ಸತ್ಕೀರ್ತಿ ಪಡೆದು ಸದ್ವಂಶೋತ್ಫುಲ್ಲ ನಕ್ಷತ್ರ
ತಾನಾದಪಂ ಎಂದೊರೆದರ್ ನಿಷ್ಕಪಟದಿಂ.
ಆಗಳ್ ಪಿತ ದೇವೇಂದ್ರನಾಥಂ ಬಂಧುಗಳ
ಸಮ್ಮುಖದೊಳ್ ಸಡಗರ ಸಂಭ್ರಮಗಳಿಂದಲಿ
ಕಂದಂಗೆ ರವೀಂದ್ರನಾಥನೆಂದು ಪೆಸರಿಸಿ
ನಾಮಕರಣ ಸಮಾರಂಭಮಂ ನೆರವೇರಿಸಿದಂ.
ಸಂಜೀವನೋಚಿತಮಾದ ಸಂಭ್ರಮ ಸಂಪದದಿಂ.
ಆ ಪಿರಿಯರ್ಕಳ, ಬಲ್ಲಿದರ ಮೇಣ್ ಪೆತ್ತವರ
ಪರಕೆಯೊ ಎನೆ ಶಿಶುರತ್ನ ಶುಕ್ಲಪಕ್ಷದ ಚಂದ್ರ
ಗ್ರಹದವೊಲ್ ದಿನದಿನಂ ಮೈತುಂಬಿ ಮುದ್ದಾಗಿ
ಬೆಳ್ಳಿಬೊಂಬೆಯೆನೆ ಬೆಳೆಯುತಿರ್ದಂ ಧವಳಿಮಾ
ಕೀರ್ತಿ ತಾನಾಗಿ. ವರ ಪಿತ ದೇವೇಂದ್ರನಾಥ
ಠಾಕೂರರ ಸಂತಸ ತುಂಬಿದ ಹೃದಯಗಡಲ್
ಉಕ್ಕಿ ಹರಿದುದು ಕೋಡಿಪರಿವನ್ನೆ. ಮಾತೆಯ

ಮನವಂ ತಣಿಸುವನ್ನ. ಬಂಧುಗಳ್ ನಲಿವನ್ನ.
ಶಿಶು ಬೆಳೆಯುತಿರೆ ಆನುವಂಶೀಯ ಬಹುಮೂಲ್ಯ
ಗುಣಗಳ್ ಮೈಗೂಡಿ ಆನಂದ ವಾರ್ಧಿಯೊಲ್
ಧುಮುಧುಮಿಸಿ ವಿಜೃಂಭಿಸಿ ರವೀಂದ್ರನಾಥ
ಠಾಕೂರ್ ಎನಿಸಿ ಪುಟ್ಟಿನೊಳೆ ಕೀರ್ತಿವೆತ್ತಂ.
ಗ್ರಾಮೀಣ ಜೀವನೀಯ ಮುಗ್ಧತಾ ವಿಶೇಷಕೆ
ಶಾಂತನಿಶ್ಶಾಂತಸುಶಾಂತಪ್ರಶಾಂತವಾಶಾಂತ
ವಾತಾವರಣ ಪೂರಕಮಿರೆ ಶಿಶು ರವೀಂದ್ರ
ಕದಳಿ ಸಸಿಯೊಲ್ ನಳನಳಿಸುತ್ತೆ ಬೆಳೆಯುತಿರ್ದಂ
ಸೊಂಪು ಪೆಂಪುಗಳ ಅಲಂಪಂ ತಾಂ ಮೈಗೊಂಡವೊಲ್!
ಓರಗೆಯಣುಗರ್ ಚೆಲ್ಲಾಟದೊಳ್ ಮನವಿಡಲ್
ರವೀಂದ್ರಂ ಗಂಭೀರ ವಿಚಾರಗಳಲಿ ಮುಳುಗಿ
ತೋಟದಂಚಲ ಪಾತ್ರದಲಿ ವಿಚರಿಸುವಂ. ಮನ
ಮಥಿಸಿ ಮಥಿಸಿ ಯೋಚಿಸಿ ಪರಿಭಾವಿಸಿ ಜಾನಿಸಿ
ಗ್ರಾಮೀಣ ಜೀವನೀಯ ವಿಸ್ತಾರದಲಿ ನೆರೆ
ಹಬ್ಬಿರ್ದ ಸಾರಾಸಾರಂಗಳಂ ಅಳೆಯುವಂ.
ಬಡ ಶಾಲೆಯ ಬಡಮಕ್ಕಳ ಚಿತ್ತಕಲ್ಪಮಂ
ಅರಳಿಸಿ ದಿವ್ಯ ಜೀವನ ಸಂಕಲ್ಪದ ಬೇರುಗಳ್
ಸುಭದ್ರಗೊಳ್ವ ಅಭಿಲಾಷೆಯಂ ಮನಕಲ್ಪದಲಿ
ದುಂಬಿಕೊಳ್ಳುವಂ. ಗ್ರಾಮ್ಯ ಪ್ರದೇಶದ ನಿತ್ಯ
ಜನ ಜೀವನದಲಿ ಹಬ್ಬಿ ಮುಳ್ಳಿನ ಕಂಟಿಯೊಲ್
ಹರೆಗೈಗಳ್ ಚಾಚಿ ಬೆಳೆಯುತಿರ್ದ ಸಲ್ಲದಿಹ
ಆಚಾರಗಳ್ ಕುವಿಚಾರಗಳೆಂಬುದಂ ತಾಂ
ಅಳೆಯುವಂ, ಹೃನ್ಮನಗಳಿಂಗೆ ಕಾಯಕಲ್ಪದ
ಹುಚ್ಚೆದ್ದು ಕಿಚ್ಚಿನ ಕಿಡಿಯಾಗುವ ಮಾಳ್ಕೆಯಲಿ
ಬಾಲಕ ರವೀಂದ್ರನಾಥ ದಿವ್ಯ ಜೀವನದ
ಮಾನವನೆತ್ತರಕೇರ್ವಡಿಸೆ ಭದ್ರ ಬುನಾದಿಯಂ
ಇಟ್ಟಿತ್ತೆ ಮನಮಂಥನಂ ಮೇಣ್ ಭಾವನಾ

ಲೋಕದಲಿ ಪರಿಪೂರ್ಣ ವಾಙ್ಮಯದ ಚಿಂತನಂ,
ಏಗಳುಂ ಸರ್ವತ್ರ ಸರಸತಿಯ ಪೂಜೆಯಲಿ
ನೆಲೆ ನಿಂದು ತಾನಾದನಾ ಸರಸತಿಯ ಪುತ್ರ!
ದಿನದಿನಂ ಮನದುಂಬಿ ಮೈದುಂಬಿ ಚೆಂದದಿಂ
ಪಕ್ಕಾಗುತಿರೆ ಅಭ್ಯಾಸಕೆ ಆವ ಡಾಕಿನಿಯ
ಕೂರ್ಮೆಯೋ ಮತ್ತಾವ ದುಷ್ಟ ಗ್ರಹದ ಧೂರ್ತ
ಕ್ರೀಡೆಯೋ ರವೀಂದ್ರಂ ರೋಗ ಪರವಶನಾದಂ,
ಆವಾವ ಪಂಡಿತರ್ ಚಿಕಿತ್ಸೆ ಕೈಕೊಂಡೊಡಂ
ಕೈಗೂಡದೆ ಬಳಲಿದನಾ ಬಾಲಕಂ. ಶಾಲೆ
ಬಿಟ್ಟು ಮನೆಯಲುಳಿಯೆ ಅನಾರೋಗ್ಯದಾ ರಾಹು
ಕೇತುಗಳ್ ಪರಿಪರಿಯಲಿ ಕಾಡಾಡಿ ಮರ್ದಿಗೆ
ಕುಗ್ಗದೆಯೆ ಮುತ್ತಿದುವು ಬೆಂಬಿಡದೆ. ಪ್ರತಿದಿನ
ಎಳೆದೇಹ ಕ್ಷೀಣಿಸುತಿರೆ ಕೃಷ್ಣ ಪಕ್ಷದ ಶಶಿಯ
ತೆರಂ. ಚಿಂತಿತ ದೇವೇಂದ್ರನಾಥ ಠಾಕೂರ್
ಪುತ್ರನ ಚಿಕಿತ್ಸೆಗೆ ದೂರದ ಧನ್ವಂತ್ರಿಗಳಂ
ಬರಿಸಿದಂ. ಬಡಶಾಲೆಯ ಬಡ ಸಹಪಾಟಿಗಳ
ಸಂಗದಿ ಸೆಂಡಿನೊಲ್ ಪುಟಿಯುತಿರ್ದ ಬಾಲಕ
ರುಗ್ಣ ಶಯ್ಯೆಯಲಿ ಸೆರೆ ಸಿಲ್ಕಿ ನೊಂದು ನೀರಾಗೆ
ದೇವೇಂದ್ರನಾಥಂ ಚಿಂತಿತನಪ್ಪಿ ಕುಮಾರನ
ಭವಿಷ್ಯಂ ನೆನೆದು ಬಿಜ್ಜೆಯ ಕೃಪೆಯಿಂದಲ್ಲದೆ
ಭವ್ಯ ಭವಿತವ್ಯಮಿಲ್ಲಮೆಂದರಿತು ಬಿಜ್ಜೆಯ
ಚಿಕಿತ್ಸೆಯೊಡಂ ಮುಂದರಿಸಿದಂ. ಕುಮಾರಕಂ
ಆ ದಿಶೆಯೊಳ್ ತಗ್ಗದೆ ಮುಗ್ಗದೆ ಸತತ ಕಲಿತು
ಏಳ್ಗೆಯೊಡೆದಂ ಪಿತನ ಮಹದಾಶಯದಗ್ಗಿಗೆ
ನೆಯ್ಯ ನೆರೆಯುವೊಲ್. ಕಾಲಕ್ರಮದಲಿ ಅತೀವ
ರೋಗ ಬಾಧೆಯು ಪಿಂಜರಿದೊಡಂ ಮುನ್ನಿನೋಲ್
ಸದೃಢಾರೋಗ್ಯಭಾಗ್ಯ ಮೈಗೂಡದೆಯೆ ರಾಹು
ಕೇತುಗಳ ಕಾಟದೊಲ್ ಬೆಂಬಿಡದ ಮಾಳ್ಕೆಯಲಿ

ಆಗಾಗಳ್ ಮತ್ತೆಮತ್ತೆ ಮರುಕಳಿಸುತಿರ್ದುದು
ರೋಗಬಾಧೆ. ಯಾವತ್ಕಾಲಂ ಕಸಿವಿಸಿಯುಣಿಸೆ
ಶಾಂತಿ ದೂರಾದ ಕಾಲಮಾನಂ ಸಾಗಿದುದು
ಪರಿಪರಿಯ ಕ್ಲೇಷದಿಂ.
ದೇವೇಂದ್ರನಾಥನಾ
ಸಂಕಷ್ಟದಿಂ ಎರ್ದೆಗೆಡದೆ ಕಷ್ಟಸುಖಗಳ
ಸಮನ್ವಯ ಸ್ಫೂರ್ತಿಯಿಂ ತಳ್ಕೈಸಿ ವಿಜಯಿಯಾಗೆ
ಬಾಲಕ ರವೀಂದ್ರನಾಥಂ ಕಾಲಕ್ರಮದಲಿ
ಆರೋಗ್ಯ ಧಾಮವಂ ಬೊಕ್ಕವೊಲ್ ದಿನದಿನಂ
ಚೇತರಿಸಿಕೊಳ್ಳುತಿರ್ದಂ. ಪುನರಪಿ ಶಾಲೆಯು
ಆನೆವಾಗಿಲಂ ತೆರೆದು ಸ್ವಾಗತಿಸಿತು ಮಿಗೆ
ಪ್ರೇಮದಿಂ ಧೀಮಂತಸಂ. ಎನಿತೊ ದಿವಸಗಳ
ಬಳಿಕ ಶಾಲೆಗೆತ್ತು ಒಡನಾಡಿಗಳ್ ಕೂಡಿದಂ.
ಆಟ ಪಾಠದಲಿ ಪಾಲ್ಗೊಂಡು ಆನಂದಪೂತ
ಹೃನ್ಮನಗಳಿಂ ಜೀವ ಹಗುರಾಯ್ತು ಅರಳೆಯ
ಮಾಳ್ಕೆಯಲಿ. ಬಿಜ್ಜೆಯೊಳ್ಘನವಂತನೆನೆ ಭವ್ಯ
ಭವಿಷ್ಯದಲಿ ಮನವಿಟ್ಟು ಓಜೆಯಂ ಓಜಿಸಿ
ಚಿಚ್ಛಕ್ತಿಗೆ ಭಾವಾಗ್ನಿಯ ಕಿಡಿಯಂ ಪೊತ್ತಿಸಿರೆ
ದೂರ ಭವಿತವ್ಯದ ಉಜ್ವಲೋಜ್ವಲ ದೀಪ್ತಿಕುಡಿ
ಕರಿಕಟ್ಟದೊಲ್ ಉರಿಯತೊಡಗಿತು ಕುಂದದೆ;
ದೂರದೂರದ ಗಮ್ಯ ಸ್ಥಾನಮಂ ಗುರಿಗೊಂಡು.
ರವೀಂದ್ರ ನಿಚ್ಚಂ ಇಳಿವೊಳ್ತಿನ ತಣ್ಪಿನಲಿ
ತಂಗಾಳಿ ವಿಹಾರಾರ್ಥಂ ಪೋಪನೇಕಾಂಗಿ.
ಸಸ್ಯಶ್ಯಾಮಲ ನಿಸರ್ಗದೈಸಿರಿಯ ಸೌಂದರ್ಯ
ರಾಶಿಯಲಿ ರಸಸ್ವಾದನೆಯಾಪಂಬಲದಿಂದೆ
ಮೈಮರೆತು ಧ್ಯಾನಲೀನನಾಗುವಂ ನಿರ್ಜನ
ಸುಖ ಶಾಂತಿಯಲಿ. ಕೆಲವೊರ್ಮೆ ಕಳ್ತಲೆ ಕವಿದುದಂ
ತಾನರಿಯದೊಲಿರೆ, ಮಂದ ಮಾರುತನ ತಣ್ಣನೆ

ಮುದ್ದಿನಿಂ ಎಳ್ಚತ್ತು ಇರುಳು ಪೆಣ್ಣಿನ ಕರ್ಪು
ಕಂಗಳ ಕರುಣೆ ಕಣ್ಗಳ ತಿವಿಯಲ್ ತೆಕ್ಕನೆ
ತಾನೆಳ್ದು ಪೊರಡುವಂ, ಮನಃಕಲ್ಪದ ಪರಮ
ರಾಮಣೀಯಕ ಸುಷುಪ್ತಿಯಿಂ ಬಿಡುಗಡೆ ಹೊಂದಿ!
ಪರ್ಣಾರ್ಣವದ ಪಚ್ಚ ಪಸಿರ್ ಮೈ ಗೊಂಡುದುದೊ
ಪುಷ್ಪಲೋಕದ ಅಪೂರ್ವ ಚೆಲುವು ಹರ್ಷದ ಹೊನಲ್
ಹರಿಸಿದುದೊ ಎನಲ್ ತನುಮನಂ ಆವೇಶಮಯಂ
ಕವಿಕಾವ್ಯ ಸ್ಫೂರ್ತಿಕಿಡಿಗೆ ತೈಲವನೆರೆವವೊಲ್!
ಕಾಲವಾಹಿಪರಿದುದು ಸರಾಗದಲಿ ದಿನದಿನ
ಪ್ರತಿದಿನ ದುರ್ವಿಧಿಯನಣಕಿಸುವ ಮಾಳ್ಕೆಯಲಿ
ಬಾಲ್ಯಗತಿಕಳೆದು ಪ್ರೌಢಾವಸ್ಥೆಗೇರುತಲಿ
ರಾಷ್ಟ್ರೀಯ ಪರಿಸ್ಥಿತಿಯಂ ಗಮನಿಸಿ ಸಮಗ್ರ
ವೀಕ್ಷಣೆಯಲಿ ಮನವಿಡೆ ದಿನದಿನಂ ಕಾಣುತಿಹ
ಚಿತ್ರ ದಯನೀಯ ಜನಜೀವನಂ ರಾಷ್ಟ್ರದಲಿ!
ಹಾ! ಭಾರತ ವರ್ಷ ಸತ್‌ಸಂಮೃದ್ಧಭೂಮಿ! ನೆಲ
ಜಲ ಅರಣ್ಯ ಧವಸಧಾನ್ಯಗಳಿಂಗೆ ಕೊರಮಿಲ್ಲ.
ಖನಿಜಸಂಪತ್ತಿಯುಂ ಅಪಾರಮಿರ್ದು ನಾನಾ
ಬಡತನದಲಿ ನರಳುತಿಹ ಜನಕೋಟಿಯಂ ನೋಡೆ
ಕರುಣೆಯಿಂ ಮಿಡಿವುದು ಒಡಲ ಬಳ್ಳಿ ಖೇದದಿಂ
ಚಿಂತೆಯಿಂ ಸದ್ದಿಲ್ಲದೆ ದೂರ ಭವಿತವ್ಯದ
ವೇದಿಯಲಿ ಅಂಡಲೆದಂ ಏಕಾಂತ ದುಃಖದಲಿ.
        ಯಾವತ್ಕಾಲಂ, ಭಾರತ ಸಿರಿಭೂವಲಯದಲಿ
ವೇದಾಂತ ಕೀರ್ತಿ ಪರಿಮಳ ಜಗದ್ವಿಖ್ಯಾತಂ !
ಸದ್ಧರ್ಮ ದೈವಚಿಂತನೆ ಅಪಾರ ! ಸಂಸ್ಕೃತಿ
ಸಾಹಿತ್ಯ ಪ್ರಜ್ಞಾನಕೆ ಕೊರಮಿನಿತಿಲ್ಲ. ಜನ
ಶಾಂತಿದಾತರ್. ಮುಕ್ತಿ ಪ್ರಿಯರ್. ಪರಜನಹಿತ
ಪ್ರಖ್ಯಾತರ್. ಸೌಜನ್ಯಮಾನಿಸರ್. ಉತ್ಕೃಷ್ಟ
ಸಂಸ್ಕಾರ ಶರಣರ್. ಪರಧರ್ಮ ಸಹಿಷ್ಣುಗಳ್

ಎನಲೆಲ್ಲರ್ ಭಾರತೀಯ ಪ್ರತೀಕ. ಮತ್ತೇಂ
ಆಂಗ್ಲೇಯ ಪ್ರಭುತ್ವದ ಅಲಕ್ಷ್ಯ ಅಸಡ್ಡೆಗಳ
ಕೂರ್ಮೆಯೊಳ್ ನರಳ್ವ ದೀನದಾರಿದ್ರವೆಮಗೆ ?
ಅನನ್ಯ ಐಸಿರಿಯಿದ್ದು ಅಗಾಧ ಜನಶಕ್ತಿಯು
ತುಂಬಿದ್ದು ಲೋಕ ಪ್ರಸಿದ್ಧಿ ಪಡೆದಿರ್ದೊಡಂ
ಕರುಣಾಜನಕ ಸ್ಥಿತಿಯಲಿದೆ ಭಾರತ ವರ್ಷ!
ವಿಚಾರಂ ಯೋಚನಾತೀತಮಿರೆ ಏಗಳುಂ
ಬಗೆ ಹರಿಯದ ಸಮಸ್ಯೆ; ಕೊನೆವರಿಯದ ಚಿಂತೆ;
ಪೆತ್ತವರ ನಲ್ಮೆ, ವಿದ್ಯಾ ಸರಸತಿಯ ಬಲ್ಮೆ
ಮನವಂ ಸ್ವಾಂತನಗೈದೊಡಂ ಕೊರತೆಯ ಕೂರ್ಮೆ
ಕೊರೆಯುತಿಹುದು ಎರ್ದೆಯಂ ಗುಂಗೆ ಹುಳುವಿನೊಲ್.
ಮತ್ತಾಗಳಾ ಮನಮತಿಯ ರಂಗಣ ರಿಂಗಣ
ಸಂಘರ್ಷದಲಿ ಜ್ಯೋತಿರ್ಕಿಡಿಗಳೆದ್ದುವೊ ಎನಲ್
ಉಜ್ವಲೋಜ್ವಲಿಸಿದುದು ಎಳೆಯ ಚಿಚ್ಚೇತನಶ್ರೀ!
ಮನಮಂಥನದಿಂ ಜಾನ ಸರಿ ಸುರಿಯುತಿರೆ
ಪಡಿಗೊಂಡು ಲೇಖನ ಕೃಷಿಗೆಯ್ದು ಗುರುಹಿರಿಯರ
ಮುಂತೆ ತಾನೋದಿದಂ. ಆ ಸಾಹಿತ್ಯಮೆಲ್ಲರ
ಮನ ಮೆಚ್ಚಿಗೆಯಂ ಪಡೆದು ನಲ್ ನುಡಿಗಳ ಮಾಲೆ
ಕೊರಳ್ಗಿತ್ತು ರವೀಂದ್ರನಾಥ ಪುಳಕಿತನಾಗೆ
ನವನವೀನ ರಸಚಿಂತನಧಾರೆ ಬುಗ್ಗೆಯೊಲ್
ಪೊದಳ್ದುದು ದಿನದಿನಂ ಸಾಹಿತ್ಯ ರಸನಿಧಿಗೆ
ಪೂರಕಮೆನಿಸುವ ಮಾಳ್ಕೆಯಲಿ. ಆ ಪ್ರಾಥಮಿಕ
ಹಂತದೊಳ್ ಪೂರ್ಣ ಯಶೋವಿಜಯಂ ಕವಿ
ವಾಣಿಯಂ ಮಿಡಿಸಿತು ಧವಳಿಮಾ ತುಷಾರಕೀರ್ತಿ
ಶಿಖರದಲಿ. ಮೇಣ್ ಕವಿಯ ಚಿತ್ತಕಲ್ಪಂ ನೆರೆ
ಬಿರಿದು ಸ್ವರ್ಗ ತಾಂ ಸ್ವರ್ಗೀಯಮಾಯ್ತು. ಲೇಖನ
ರಮಣೀಯಮಾಯ್ತು ಲೋಕ ತಲೆ ದೂಗುವಂದದಿ.
ಕವಿ ಪುಣ್ಯ ನಾಮ ಜನಜನಿತಮಾಯ್ತು ರಾಜ್ಯದಲಿ.

“ಅಭಿಲಾಷೆ” ಎಂಬ ನಲ್ ಕೃತಿಯಂ ಪ್ರಕಟಿಸಿದಂ
ರಾಷ್ಟ್ರೀಯ ಪ್ರಜ್ಞಪ್ತಿ ಪ್ರಜ್ಞೆಗೆ ದರ್ಪಣಂ
ಪಿಡಿವವೊಲ್. ಬುದ್ಧಿಮಾನ್ಯರ್ ನೇಹ ಭಾವದಿಂ
ಆತ್ಮೀಯ ಪ್ರೀತ್ಯಾದರದಿಂ ಅಭಿವಂದಿಸಿ
ಉತ್ತೇಜಿಸಿದರ್ ಆನಂದರಸದೌತಣಮಂ
ನೀಡಿ. ಹದಿಹರೆಯದ ಕವಿ ತಾಂ ವಿದ್ಯಾರ್ಜನೆಯ
ತುಟ್ಟ ತುದಿಯಂ ಏರ್ವ ಮುನ್ನಮೆ ಪ್ರಸಿದ್ಧಿಯ
ಪಂತವೇರಿದಂ. ಅಂದಿನಿಂದೆಲ್ಲೆಲ್ಲಿ ಸಭೆ
ಸಮಾರಂಭಗಳೊ ತಾನಲ್ಲಿ ಆಮಂತ್ರಿತಂ.
ಕವನ-ಕಾವ್ಯವಾಚನ ಮೇಣ್ ಭಾಷಣಂಗಳ
ವಿಶೇಷ ರಸಗೋಷ್ಠಿಗೆ. ಗೆಣೆಯ ಬಳಗಂ ಕೂಡಿ
ನೀಡುತಿರ್ದ ರಸಸ್ಫೂರ್ತಿ ಗಳಿಗೆಗಳ್ ದೇಹದ
ಬಿಸಿನೆತ್ತರಂ ಮಿಂಚುವೊನಲಪ್ಪುವ ಪರಿಯಲಿ
ನಲಿಯುತಿರ್ದುವು ಭಾವಕೋಶಮಂ ತುಂಬುವನ್ನ.
        ಅಸ್ತಮಾನ ರವಿ ಪಶ್ಚಿಮವಾರ್ಧಿಗಿಳಿಯೆ ಸಿಡಿದ
ಕಿರಣ ಶರದಭ್ರವೇದಿಯಿಂದಿಳಿತಂದು ಈ
ಭುವನ ಜೀವನ ಪಾಲನೆಗೆ ಯೋಚಿಸುತಿಹುದೊ
ಎಂಬವೊಲ್, ಯೋಜನೆಯನ್ನೆ ಯೋಜಿಸುವ ಪರಿಯಲಿ.
ಆತ್ಮತೇಜವದು ಸ್ಫಟಿಕ ಸ್ವಚ್ಛಮಾಯ್ತು ಮಿಗೆ
ಆತ್ಮಾನುಭವದಿಂದೆ. ಬೈಗುವೊಳ್ತಿನ ಪೆಂಪು
ತನಿಯುಗುವ ಸೊಂಪು, ತುಂಬಿ ಹರಡಿರೆ ಎಲ್ಲೆಡೆಯುಂ
ಬನದಲಿ ಬಯಲಲಿ ವಿಚರಿಸುತಲಿ ಮನದೆ ರಾಷ್ಟ್ರ
ನಿಷ್ಠೆಯಂ ಜಡಿ ತುಂಬಿ ಭವ್ಯ ಭವಿತವ್ಯದ ರನ್ನ
ವೇದಿಕೆಯನೇರಿ ಅಂಡಲೆಯುವಂ ಬಾಲಕವಿ.
        ಭಾರತ ವರ್ಷದ ಸಾಹಿತ್ಯ ಕ್ಷೇತ್ರಂ ದಾರಿದ್ರ್ಯ
ದೇವತೆಯ ನಂಟನಿಂ ಬಡಬಾನಲದಲಿ ನರೆ
ಬೇಯೆ, ಲೇಖನ ಕೃಷಿಯಿರ್ದೊಡಂ ಪ್ರಕಾಶನ
ಕಷ್ಟ ಸಾಧ್ಯಮಿರೆ, ಕವಿಗಳೊರ್ಗಂ ಮೂಲೆಯಲಿ

ಸೇರಿ ಹೋದ ಗುಂಫನಮಾಗಿರೆ ಕವಿಕುಮಾರ
ಪ್ರಕಾಶನದ ಭಂಗಮಿನಿತು ಕಂಡನಿಲ್ಲಂ.
ವಿರಂಚಿಯ ಕಾರುಣ್ಯ ದ್ರವ್ಯಂ ಬೊಗಸೆ ತುಂಬಿ
ಬರುತಿರೆ ಗೆಣೆಯರಾರಾದರೊರ್ವಂ ಮುಂಗೆತ್ತು
ಪ್ರಕಾಶನ ಭಾರಕೆ ಭುಜವಂ ಕೊಡುರ್ತಿರ್;
ಪ್ರತಿ ಹಂತದೊಳ್ ವಿಜಯ ಪತಾಕೆಯಂ ಎತ್ತಿ
ಹಿಡಿವ ತೆರದಿ ನಡೆದುದು ಕಾವ್ಯಶ್ರೀ ವಿಹಾರಂ!
ರಸಚಿಂತನಾವೇಶ ದೃಢ ಭಕ್ತಿಯಲಿ ಸಂದು
ಯೋಗ ಜೀವನದ ಸ್ವರ್ಣದ್ವಾರವಂ ತೆರೆದುದು
ಮಹರ್ಷಿಯ ವೈಖರಿಯಲಿ ಸ್ವಾಗತಿಪುದು ಗರ್ಭ
ಗುಡಿಗೆ; ದೇವ ಸನ್ನಿಧಿಯ ಸುಜ್ಞಾನ ದೇಗುಲಕೆ.
        ಸುಖದುಃಖಗಳ್ ಬಪ್ಪುದು ಒಂದರಹಿಂದೊಂದರ
ಮಾಳ್ಕೆಯಲಿ ಎಂಬುದು ದಿಟಮಲ್ತೇ ಈಭವದಿ?
ದುರ್ವಿಧಿಯು ಬೀಸಿವೊಗೆದ ಪಾಶಂ ಕೊರಳ್ಗೆತ್ತು
ತನ್ನಂ ಜಗ ಬೆಳಕಿಗಿತ್ತ ಜನನಿ ಬಲಿಯಾಗಿ
ಸಗ್ಗದ ಪಥವಿಡಿಯೆ ಬೆಸನಂ ಭೈರಿಗೆಯೊಲ್
ಕೊರೆದುದು ಮನಮಂ ರಾಹು ಕೇತುಗಳ ಪಾಂಗಿನಿಂ.
ನಲ್ಮೆ ಬಲ್ಮೆಗಳ್ ಜನನಿ ಕಣ್ಮರೆಯಾದೊಡಂ
ಹೃನ್ಮನಗಳ ಮುಂತೆ ಲಿಖಿತ ಚಿತ್ರದೊಲ್ ಮೆರೆದು
ನಲಿನಲಿಯುತಿರಲ್ ಬಾಲಕವಿ ಬನದಲಿ ಮನೆಯಲಿ
ತೋಂಟದಲಿ ಅರಸುತಿರ್ದಂ ಮೃಗ ಶಾಬಕಂ
ತಾಯನರಸುವೊಲ್!
                ಆ ಮೌನ ಭಾವಾತ್ಮಕತಾ
ಪೂರ್ಣದಿಂದೊಪ್ಪಿ ಲವಣಾಶ್ರು ಬಿಂದು ಸೂಸುತ
ಪರಿಭಾವಿಸುತಿರೆ, ನಿಜ ಮನಮಂಥನ ಧಾರೆಯಿಂ
ಕವಿಕಾವ್ಯ ವಸಂತೋದಯಾನಂದ ಯೋಗಂ
ಪುನೀತಗೊಳಿಸಿದತ್ತು ಮನಸ್ಸಾಗರಮಂ.
ದಿನ ವಾರಗಳ್ ಸಂದುವು ನೇಪಥ್ಯವೇರಿರ್ದ

ನಲ್ಮೆಯ ಜನನಿ ಒಮ್ಮೆಯುಂ ಮನಃಭಿತ್ತಿಯಿಂ
ಮರೆಯಾದಳಿಲ್ಲಮೆನೆ ಬಾನಿನೊಳು ಪೂವಿನೊಳು
ಮೋಡದಲಿ ಎಲ್ಲೆಲ್ಲಿಯುಂ ಕಾಂಬುದು ತಾಯಿಯ
ಚಿತ್ತಾರ; ಮುಗ್ಧದುಗ್ಧ ಮನೋಗತಿಯ ಮುಂತೆ.
ಸಾವು ಎಂಬುದು ರೋಗರುಜಿನಗಳೊಗೆವ ಪಾಶ
ಮಾತ್ರಮೆನೆ ಸರಿಯಲ್ತು. ಜಾತಸ್ಯ ಮರಣಂ
ಧ್ರುವಂ ಎಂಬುದು ಚಿರ ಸತ್ಯಂ. ಮೃತ್ಯುಪಾಶದಲಿ
ಸಿಲ್ಕಿ ಎಲ್ಲಮಂ ಒಗೆದು ಪೋಪುದು ಸಹಜಮೆನೆ
ಬರ್ದುಕಿನೊಳ್ ಆಶಾಪಾಶಂಗಳ ಜಾಡಿಸಿ
ಕಿತ್ತೊಗೆಯೆ, ನಿರ್ಲಿಪ್ತ ನಿರ್ವಿಕಲ್ಪ ಮಾನಸ
ಸಂಪುಟದ ಧ್ಯಾನಮಯ ಚಿಂತನಾವೇಶದಲಿ
ಮೃತ್ಯುಛಾಯೆ ಸುಳಿಸುಳಿಯಲೆಲ್ಲಿ ಭಯದ ಛಾಯೆ?
ಪುಟ್ಟನಿಂ ಬೆಂಬಳಿಯೆ ಇರುತಿಹ ದಯಾಶೀಲ
ಮೃತ್ಯು ಸಹ ಜೀವನೀಯ ಪರಮಾನುರಾಗಿ!
ಕಾಲ ಪರಿಪಕ್ವಮಾಗದೆ ಸೆಳೆಯನ್ ಪ್ರಾಣಂ!
ಒಮ್ಮೆ ಆಲೋಚನಾ ಬದ್ಧ ಮನೋದಧಿಗೆ ಚಣ
ಚಣಂ ಸಂಜೀವನೋಚಿತ ಸುಖ ಸಂಪದಂ
ಮೇಣ್ ಭಾಗ್ಯಲಕ್ಷ್ಮಿಯ ಪುರಸ್ಕಾರ 'ತನ್ನತನ'ಕೆ
ಒದವಿದ ಘನ ಪುಣ್ಯವೆನೆ ಮುಂದಿನ ಸಾವಿನಂಕ
ಸುಖಾಂತಮೆನಿಪುದಂತರಾತ್ಮನಿಗೆ. ಪುಟ್ಟಿದ
ಜೀವಾತ್ಮನಿಗೆ ಪುನರ್ಜನ್ಮಂ ನಿಶ್ಚಿತ ಸತ್ಯ
ಎನಲ್ ಎಲ್ಲಿಯ ಸಂಕಟವೊ ಮರಣದ ಮಹಾ
ನವಮಿ ಒದವಿ ಬರೆ? ಜೀವನೀಯ ಸಿಂಹದ್ವಾರಂ
ಬೊಕ್ಕು ಸಂಸಾರ ಸಾಗರದಲಿ ಮುಳುಗೇಳುತ
ಧನಕನಕ ರಾಗಾದಿ ಭಾವಗಳಿಗೆ ಮನವಿಡೆ
ಸಾವಿನ ಭಯ! ಅಲ್ಲದೊಡೆಲ್ಲಿಯ ಭಯ? ಜೀವನ
ಸಂಮೃದ್ಧಿ ಸಂಗ್ರಹದೊಳಲ್ಲಂ ಎನೆ ಮಾನಸ
ಪಕ್ಷಿಯ ತುಲಾ ಭಾರಮೇ ಸತ್ಯಸ್ಯಸತ್ಯಂ;

ಹೃದ್ಯಂ; ಸಂಜೀವನೀಯ ಪರಮ ರಹಸ್ಯಂ.
ಮರಣದಾಚೆಯ ಜೀವನೀವಾಹಿನಿ ಅಮೃತ
ಮಯಂ ಚೇತನಮಯಂ ಮೋಕ್ಷಮಯಂ ಸಂಪೂರ್ಣ
ಮಯಂ ಮೇಣ್ ಪರಮೋಚ್ಚಗತಿಯ ಆಧಾರ
ಮಯಂ ಎಂಬೊಂದು ಭಾವ ಬಲಿತಿರೆ ಮನದಲ್ಲಿ
ಯೋಗಾನುಯೋಗದ ಸುಖದುಃಖಗಳ ಅನುಪಮ
ಕ್ಷಣಗಳ್ ನಿಜ ಮಾರ್ಗ ಸೂಚಿ ಜೀವನ ಯೋಗಕ್ಕೆ.
ಜ್ಞಾನನಿಧಿಯ ವಿಶ್ಲೇಷಣೆಗೆ ನಿಲುಕದ ಸೂತ್ರವೀ
ರಸಸಿದ್ಧಿಯಿಂ ಮುಗ್ಧ ಮನಮತಿಗಳ ನೆಗಳ್ವ
ಬಯಕೆಯ ಶಿಖರವೇರ್ವ ಪಾಂಗಿನಿಂ ಅಧ್ಯಾತ್ಮ
ಸ್ಫೂರ್ತಿಸ್ಫುಲಿಂಗಗಳ್ ಮೂಡುತಿರೆ ಕವಿಮನಂ
ಧ್ಯಾನವಿಲಯದಿಂ ಮತ್ತಾದುದು ಮೈಮರೆವವೊಲ್.
ಮತ್ತಾಗಳ್, ರಾಷ್ಟ್ರ ವಿಕ್ಷೋಭೆಯ ದುರ್ಲಾಭದಿಂ
ಕ್ರೈಸ್ತ ಧರ್ಮ ಬೋಧೆಯ ಉಪಟಳಂ ವೆರ್ಚುತಿರೆ
ದೀನಜನರ ಸೇವೆಯ ಸೋಗಿನಲಿ! ಖತಿಗೊಂಡು
ದಿಟ್ಟತನದಿಂತೆಂದ "ಈ ಕ್ರೈಸ್ತ ಧರ್ಮೀಯರ
ಬೋಧನೆಯಲಿ ದೀನ ಜನರ ಸೇವೆಯರಿವೆಮಗೆ
ವೇಳ್ಕುಮೇ? ವೇದ ಕಾಲದಿಂ ಪ್ರಚಲಿತಮಿಹ
ಸಂಜೀವನ ತತ್ತ್ವಮಿದು ಮೇಣ್ ಬುದ್ಧ ಧರ್ಮಂ
ಬೋಧಿಸುವುದಿದುವೆ ಎನಲ್ಕೆ ಮತ್ತೇಂ ಕ್ರೈಸ್ತರ
ತತ್ವ ಬೋಧೆ? ಮಾತೃದೇವೋಭವ ಪಿತೃದೇವೋ
ಭವ ಅತಿಥಿದೇವೋಭವ ದೀನದೇವೋ ಭವ
ಎಂಬುದಿಂದಿನದಲ್ಲಮೆನೆ ಮನದೆ ಅರಿತು ನುರಿತು
ವರ್ತಿಪುದೆ ಘನಂ; ಶುಭಂ!" ಎಂಬೊಂದು ತೀರ್ಮಾನ
ದಿಟ್ಟತನದಿಂ ಪೊದಳ್ದಿರೆ ಎರ್ದೆಯಲಿ ಕ್ರೈಸ್ತ
ಜನರ ಸಮಯ ಸಾಧಕತನಕೆ ಕೊಡಲಿಯಿತ್ತರ್.
ದಿನನಿಚ್ಚಂ ಸಾಧನಾಪೂರ್ವಕ ಮನೋಧರ್ಮಂ
ಕವಿಗೆ ನವಸ್ಫೂರ್ತಿ ನೀಡುತಿರೆ "ಹೇ, ಎನ್ನೊಡೆಯ!

ಹೇ, ಪ್ರಭುವೇ!'' ಎನುತೆ ಭಕ್ತಿ ಮನೋಧರ್ಮದಿಂ
ಹರಿಸಿದ ಕಾವ್ಯಾಂಜಲಿಯ ರಾಗಭಾವ ಮೆರೆದುದು
ಜನಮನೋರಂಗದೊಳ್, ಸಾಧನೆ ಬೋಧನೆಗಳ
ವಿಕ್ರಮ ವಿಜಯ ಪುಳಕಗೊಳಿಸಿತು ವಂಗ ರಾಜ್ಯದ
ಭೂ ವಿಸ್ತಾರಮಂ. ಆಗಳ್, ಕವಿ ಮನೋಜನ್ಯ
ಕುತೂಹಲ ಮುಂಬೆಳೆಯುತಿರೆ, ಪರಮತಗಳೋದಿ
ತತ್ತ್ವ ಸಾರಮಂ ಪೀರ್ದು ಜೀರ್ಣಿಸಿ, ಈ ಎಲ್ಲ
ಧರ್ಮಪಂಥಗಳಿಗಿಂ ಮಿಗಿಲು ಹಿಂದೂ ಧರ್ಮ
ಎಂಬೊಂದು ಸಮಾಧಾನ ಮನಃಪ್ರಾಣಗಳಿಂಗೆ.
        ಚಿಂತನಾವೇಶದ ಮೌನಭಾವಾತ್ಮಕತೆಯುಂ
ಮುಟ್ಟುತಿರಲುರೆ ಚಿತ್ತಕಲ್ಪಮಂ, ಸುಳಿಬಾಳೆ
ಸಸಿಗೆ ಗೊಬ್ಬರವಿಟ್ಟು ನೀರೆರೆದು ಪಾಲಿಪೊಲ್
ಸಾಹಿತ್ಯ ಸಸಿಗಾಯ್ತು ಸಂಪುಷ್ಟಿ ಪರಿವೇಶಂ.
ಕಾಲಗತಿಯಲಿ ಮೌನಭಾರದೊಳ್ ಚಿಂತನ
ಮಂಥನಮಂ ವೆರಸಿ ತಾಯ್ವರಕೆಯೊಡಂ ಪ್ರಕೃತಿ
ಪರಕೆಗಳ್ ಕೂಡಿದತ್ತು ಮಾನಸಿಕ ದೈಹಿಕಗಳ
ಸ್ವಸ್ಥಿ ಸಂಪದಂ ಮೈಮನಗೂಡಿ, ಗ್ರಾಮೀಣ
ಜೀವನದಲಿ ತೊಳಗಿ ಬೆಳಗಿದರ್ ವರ ಕಣ್ಮಣಿ
ತಾನಾಗಿ; ಮಿನುಗು ತಾರೆಗಳ ಮಧ್ಯೆ ಬೆಳಗುವ
ಚಂದ್ರಬಿಂಬದೊಲ್! ಸಂದುವೇಸೋ ದಿನಮಾನಂ
ನಿಜ ಶಾಂತಿಯಲಿ. ಅನುದಿನ ಬೈಗುಪೊಳ್ತಿನವಾಯು
ವಿಹಾರ ಪಕ್ಷಿಕೂಟದ ಭೇಟಿಯಾಗರಂ. ಶುಕ,
ಪಿಕ, ಕೋಗಿಲೆ, ಕಾಜಾಣ, ಕಾಮಳ್ಳಿ, ಪಿಕಳಾರ,
ಮೈನ, ಚೋರೆ, ಮೀಂಚುಳ್ಳಿ, ಗುಬ್ಬಿ ಮೊದಲಪ್ಪ
ಪಕ್ಷಿವಳಗ ಉಲಿಯುತಿರೆ ಮಧುರ ದನಿಯಂ ಹರಿಸಿ
ಮನೋದಧಿಗೆ ಆನಂದರಸಾನ್ನಮಂ ಉಣಿಸೆ
ಮನ ಮುದಗೊಳಿಪ ಮಾಳ್ಕೆಯಲಿ ತರುಣ ಕವಿ ಸಂಜೆಯ
ಸೊಬಗಂ ಸವಿದು ಪಿಂಮರಳುವಂ ನಿಜ ವಸತಿಗೆ.

ಮುಂದೆ, ಪ್ರೌಢ ವ್ಯಾಸಂಗಂ ಬಯಸಿ ಪಿರಿಯಣ್ಣ
ಸತ್ಯೇಂದ್ರನಾಥನೊಡಗೂಡಿ ಸಾಗರಯಾನಂ
ಕೈಕೊಂಡಂ ಲಂಡನ್ ಪತ್ತನಕೆ. ಸುದೀರ್ಘಮಾ
ಮೊಟ್ಟಮೊದಲ ದೂರ ಪಯಣಂ. ಭಾರತ ಭುವಿಯಂ
ಪಿಂತಿಕ್ಕಿ ಮುಂದೆ ಸಾಗುತಿರೆ ಭೈತ್ರ, ಘೋರನೆ
ಘೋರ್ಗರೆವ ಮಹಾ ಜಲಧಿಯಲಿ ಮುನ್ನುಗ್ಗಿ.
ಏಂ ಭಯಾನಕಮೊ ಪಯಣಿಸುತಿರಲ್ ಮುಂತೆ ಮುಂತೆ!
ಸುತ್ತಮುತ್ತಲೆಲ್ಲಿಲ್ಲಿಯುಂ ನೀರೇ ನೀರು!
ಜಲ ಪ್ರಳಯಮಾದೊಲ್, ವಿಷ್ಣುವಿನ ಶಂಖದಿಂ
ಉಕ್ಕಿ ಹರಿದೊಲ್, ಶಿವನ ಜಡೆಯಿಂ ಇಳಿತಂದೊಲ್,
ಭೂಮಿಯೇ ದ್ರವಿಸಿ ಹರಿದೊಲ್ ಎಣೆಯಿಲ್ಲದಿಹ
ಮಹಾ ಸಾಗರವಾರಿ! ರವಿಕಿರಣ ಪ್ರತಿಫಲಿತ
ಕಮನೀಯ ಕಠೋರ ದೃಶ್ಯಮಾನ ಸೌಂದರ್ಯಂ.
ರವೀಂದ್ರ ನಾವೆಯಟ್ಟಣೆಯೇರಿ ಸುತ್ತಲೂ
ಸಿಂಹ ನೋಟ ಬೀರಿದನ್; ಮೇಲೆ ಅನನ್ಯ ನೀಲ
ನಭೋಮಂಡಲ! ಸುತ್ತಮುತ್ತಲೂ ಝಳಝಳಿಪ
ಜಲರಾಶಿ! ಘೋರ್ ಘೋರನೆ ಧುಮುಧುಮಿಸುತ ಬಹ
ಭಯಾನಕ ಪರಿದೃಶ್ಯಮಾನ ಅಲೆಗಳ ರಾಶಿ!
ನಿರ್ಭೀತಿಯಿಂ ಒಳಹೊರಗೆ ತಣಕು ಪಣಕೆನುತ
ಸರಾಗದಲಿ ಪರಿದಾಡುವ ವಿವಿಧ ಜಲಚರಗಳ
ವಾರಾಶಿ. ಹೊಂಬಿಸಿಲ ಝಳಕೆ ಮಿನುಮಿನುಗುತ
ನಲಿದಾಡುವ ಮತ್ಸ್ಯಕೋಟಿಯ ಸುಂದರ ಚಿತ್ತಾರ.
ನೀಲ ಬಾಂದಳದಲಿ ಅತುನೀಯ ಶ್ರದ್ಧೆಯಿಂ
ಒಯ್ಯೊಯ್ಯನೆ ತೇಲಿ-ತೇಲಾಡಿ ನಲಿವವೊಲ್
ಪಯಣಿಸುತಿಹ ಅನಂತ ಯಾತ್ರಿ, ಕೆಮ್ಮುಗಿಲ್
ಬೆಳ್ಮುಗಿಲ್ ಕರ್ಮುಗಿಲ್ ಕನಕಕಾಂತಿಯ ಮುಗಿಲ್
ಮೊದಲಪ್ಪ ಎಲ್ಲವಗೆಯ ಮುಗಿಲ್‌ಗಳ ಬೃಹದ್
ಪರಿವಾರದ ಮನೋರಮಾ ಮೈತ್ರಿಯುತ ಮೇಳ.

ಮೇಣ್ ಆಗೊರ್ಮೆ ಈಗೊರ್ಮೆ ದಂಡ್ಯೆಸಿ ಬರ್ಪ
ಖೇಚರಂಗಳ್ ಮಂದ ಮಾರುತನ ಮೇಲೇರಿ
ತೇಲುವವೊಲ್ ಹಾರಾಡುವ ಸುಂದರ ಚಿತ್ರಣ.
ಎಲ್ಲವಗೆಯ ದೃಶ್ಯಮಾನ ದೃಶ್ಯಮಂ
ವೀಕ್ಷಿಸುತ ಮನೋದಧಿಯಂ ಮಥಿಸಿ ಯಾನದಲಿ
ಬೇಸರ ಕಿನಿಸಿಗೆಗಳ್ ಬದಿಗೊತ್ತಿತು ಮಾನಸ
ಪಕ್ಷಿ. ಕೆಲಪದಂ ಸಾಹಿತ್ಯ ಮಂಥನೆ, ಕೆಲಪದಂ
ರಾಷ್ಟ್ರೀಯ ಚಿಂತನೆಯಲಿ ಕಳೆವುದು ಮಿಣ್ಣನೆ.
ದಂಡು ದಂಡ್ಯೆಸಿ ಬರ್ಪ ಅಲೆಗಳ ಭಯಂಕರ
ರಮಣೀಯ ಕೋಲಾಹಲ ಲೀಲಾ ಖೇಲನಂ!
ಅಲೆಗಳಲಿ ಮುಂಚಿ ಬಹ ಘೋರ ತಿಮಿಂಗಿಲಗಳ
ಭಯಾನಕ ರೂಪು! ಓರೋರ್ಮೆ ಹಡಗಿನೆಡೆಗವು
ಮಾಂಕರಿಸಿದೊಲ್ ಬರಲ್ ಜಲರಾಶಿ ಚಿಮ್ಮಿಮಣಿ
ಮಣಿಯ್ಯೆಸಿ ಮತ್ತೆ ಜಲ ಸೇರುವ ಘನ ಘೋರ
ಕ್ರೀಡೆಯುಂ ಕಂಡು ಬರೆ ಕಣ್ಮುಚ್ಚುವನಿತು ಭಯ
ಭೀತಿ ಎರ್ದೆಯಲಿ, ಪ್ರೌಢಮತಿ ತತ್ತರಿಸುವೊಲ್!
ಪಗಲುರುಳಿ ನಿಶಿಕಳೆಯೆ ಪ್ರಶಾಂತ ಶಾಂತಿಯಲಿ
ನಿದ್ದೆಯಿಂದೆಚ್ಚತ್ತು ನೋಡಲ್ ದೂರ ನಭ ಸೀಮಾ
ಕ್ಷೇತ್ರದಂಚಿನಲಿ ತುಳುತುಳುಕಿ ಬರುತಿಹ ಸುಸಿಲ್
ವಿಸಿಲ್ ಚೆಂಗಾಂತಿ ಚೆಲ್ಲಿರಲ್ ಕನಕ ರಾಗದ
ವರ್ಣಾಂತ ಜಲರಾಶಿ ಸುಮನೋಹರಂ. ಓವೊ!
ಪೊಳ್ತರೆದು ಸೌಂದರ್ಯವೆರ್ಚಿಪವೊಲ್ ಜಲ ಪಕ್ಷಿ
ಸಂಕುಲಂ ರೊಯ್ಯನೆರಗುತ ತೋಷ ಘೋಷಮಂ
ಕಲಕಂಠದಿಂದುಣ್ಮಿ ಅಲ್ಲಲ್ಲೆ ಸುಳಿಸುತ್ತಿ
ಚಕ್ಕನೆರಗಿ ಮೀಂಗಳ ಪಿಡಿದೊಯ್ವ ಚಿತ್ರಣಂ
ನೋನೋಳ್ಪ ಕಣ್ಮನಗಳಿಂಗೆ ಬಲ್ ಕೌತುಕಂ.
        ತಿಂಗಳೆರಡರ ಯಾನದಲಿ ದಿನದಿನ ಮೆತ್ತಲ್
ಕಾಂಬುದಿದು ಮಾತ್ರಮೆನಲ್ ಈ ದೂರಯಾನವೊರ್ಮೆ

ಕೊನೆಗೊಂಡೊಡೆ ಸಾಲ್ಗುಮೆನುವೊಂದಾತುರ ಮನದಿ.
ಅಂತಿಂತು ಸುಘಳಿಗೆ ಮೂಡಿ ದೂರ ಕಡಲ ಕರೆಯ
ಅಂಚಿನಲಿ ಕಂಡಿತು ವರ ಭೂಮಿ ಮಬ್ಬು ಮಬ್ಬಾಗಿ.
ಪಯಣಿಗರ್ ಮೋದದಿಂ ಹರ್ಷೋದ್ಗಾರಗೈದರ್
ಡೆಕ್ಕಿನಂಚಿಗೆತ್ತು! ನಸುವೊಳ್ತಿನಲಿ ಚೈತ್ರಂ
ತೀರಮಂ ಮುಟ್ಟಿ ನೆಲಗಚ್ಚಿದುದು. ಒಡನೊಡನೆ
ಮಣ್ಗಂಪು ಕಸ್ತೂರಿ ಕಂಪಿನೊಲ್ ಮನಮುಟ್ಟೆ
ಪಯಣಿಗರ್ ನುಗ್ಗಿದರ್ ಭೂಮಿಯತ್ತಣಂ ಕವಿ
ರವೀಂದ್ರನಾಥನಿಳಿದನಣ್ಣನೊಡಂ. ಓವೊ!
ನಾಗರಿಕ ಸಾಮ್ರಾಜ್ಯದ ಪ್ರಥಮ ದರ್ಶನಂ
ನೆಟ್ಟ ಕಣ್ಣಾಲಿ ಸಂಭ್ರಮದಿಂ ಅರಳ್ವವೊಲ್!
ಬಂದರಿನಲಿ ನೆರೆದಿರ್ದ ಆಂಗ್ಲೇಯರ್ ಮೇಣ್
ಭಾರತೀಯರ್ ಆನಂದ ಮೋದದಿಂ ಆತ್ಮೀಯ
ಸುಸ್ವಾಗತ ನೀಡಿದರ್. ತರುಣ ಕವಿ ಕೈಮುಗಿದು
ಪ್ರತಿ ವಂದನೆ ಸಲ್ಲಿಸಿದರ್. ಜನ ಜಂಗುಳಿಯ
ಗಜಬಜಂ ತಂಗಾಳಿ ತೀಟದಿಂ ನೇಹಿಗರ
ಹರ್ಷದಿಂ ಮೈಮನಂ ಪುಳಕಮಾದತ್ತು ಹೃತ್
ತಂತುಗಳ್ ಬಿರಿವ ಮಾಳ್ಕೆಯಲಿ. ಪ್ರಸನ್ನಮಯ
ಮಾದುದು ಪೊಳ್ತು. ಸಾಗರ ಲಗ್ನಕೊಲಿದ ನದಿಯುಂ
ನುಗ್ಗುವವೊಲ್ ತಾನೈದು ಆತ್ಮೀಯ ಆಲಿಂಗನ
ನೀಡಿದರ್ ಹರ್ಷೋದ್ಗಾರದಿಂ. ಊರ್ಧ್ವಮುಖೀ
ಸಂಜೀವನವಾಹಿನಿ ಮುಮ್ಮಾತಿನ ಬುರುಜಂ
ಒಟ್ಟಿರಲ್ ರೋಮ ಹರ್ಷಕಮಾಯ್ತು ಪ್ರಪ್ರಥಮ
ಭೇಟಿ. ಆಂಗ್ಲೇಯ ಗೆಣೆಯರ್ ಪರಮಾದರದಿಂ
ಕರೆದೊಯ್ದರ್ ತಮ್ಮಯ ಬೀಡಿಂಗೆ. ಕೆಲವೊಳ್ತು
ಅಲ್ಲಿರ್ದು ನಂತರಂ ಪಯಣಿಸಿದರ್ ಲಂಡನ್
ಪತ್ತನಕೆ. ನವವಲಯದೊಳ್ ನವನವೋನ್ವೇಷಣಾ
ರಸವೇಷ್ಟಿಗೆ, ವಿಶ್ವವಿದ್ಯಾಲಯದ ಅಧ್ಯಯನ

ಅನುಷ್ಠಾನಕೆ ಎನಿತೂ ಸಮಯವೇಳ್ಕುಮೆಂದೆಂದು
ಬಗೆದಿರ್ದ ಮನೋದಧಿಗೆ ಝುರಿಯೊಲ್ ಸರಾಗದಿ
ಪರಿಯೆಬಿಜ್ಜೆ ಮೋಜಿನಲಿ ತರುಣಂ ನಿರಾಳಂ.
ವರುಷವೆರಡು ಸಂದುವು ವಿದ್ಯಾರ್ಜನೆಯಲಿ ಹೊಸ ಕಂಪಿಗೆ
ಮಾರುವೋಗುವ ಭ್ರಮರದೊಲ್ ಬಿಜ್ಜೆಯಲಿ ಮನ
ಮತಿಯಂ ತೊಡರ್ಚೆ ಜಾನದೇಗುಲ ಕಟ್ಟಿದರ್
ಹೃದಯ ಕರಂಡದಲಿ. ಇಂಗ್ಲಿಷ್ ಭಾಷೆಯಂ
ಆತ್ಮಗತಗೈದು ಪರ ಸಂಸ್ಕೃತಿಯಲಿ ಮುಳುಗಿ
ಸಂಜೀವನೀಯ ಸ್ನಾತನಾದೊಡಂ ಸುಕುಮಾರ
ಪರಸಂಸ್ಕೃತಿಗೆ ಮಾರುವೋಗದೆ ಸ್ವಸಂಸ್ಕೃತಿಯ
ಯೋಧ ತಾನಾದಂ ಜಲಧಿಯಲಿ ಮುಳುಗಿದ ಶಿಲಾ
ಮೂರ್ತಿಯೊಲ್!
ಆದೊಡಂ, ಅತ್ತಲಾ ಭಾರತದಲಿ
ಮಡಿವಂತ ದೇವೇಂದ್ರನಾಥ ತನ್ನಯ ಸುತಂ
ಪಾಶ್ಚಾತ್ಯ ಸಂಸ್ಕೃತಿಗೆ ಮನತೆತ್ತು ಜಗವಂ
ಮರೆತು ದುರ್ಮಾರ್ಗಿಯಾದಪನೊ ಎಂಬ ಸಂಕೆಯ
ಗಾವರದಲಿ ನೆರೆ ಚಿಂತಿತನಪ್ಪಿ ಪಿಂತಿರುಗಿ
ಬಾರೆಂದು ನಿರೂಪಂ ಕಳಿಪಿದಂ. ಸರಸತಿಯ
ಕೃಪೆಯೊಳ್ ರಸಾನಂದ ಸ್ಫೂರ್ತಿಯಿಂ ಎಡೆವಿಡದೆ
ಕಲಿಯುತಿರ್ದ ಕವಿ ಕರಗತಮಾದ ಆ ಸಲ್ಕೆಯ
ಸುತ್ತೋಲೆಯಿಂ ಕಿಂಚಿತ್ ವಿಚಲಿತನಾಗದಿರೆ,
ಪೊರವೊಂಟನಲ್ಲಿಂದೆ. ಪಿತನಪ್ಪಣೆಯಂ ತಾಂ
ಶಿರಸಾವಹಿಸಿ. ಇಂ ಮುಗಿಯದಿರಲ್ ಕಲಿಕೆ ಮನ
ದೇಶದಲಿ ಕಳವಳಂ ಬಲಿತು ನೊಂದನಿಲ್ಲಂ.
ತನ್ನೆಲ್ಲ ವಸ್ತುವಂ ಹಿಂಗಟ್ಟು ಮುಂಗಟ್ಟು
ಬಿಗಿಸಿ ಸಾಗಿಸಿ ಸರಾಗದಿ ಸಾಗರ ಯಾನಂ
ಕೈಕೊಂಡು ತೆರಳಿದಂ ಬೋಲ್ಪುರಕೆ.
ಆಗಳಾ
ವರಪಿತ ಕಡು ಸಂತಸದಿಂ ಸ್ವಾಗತಿಸಿ ಬಲ್ಕೆಯ

ಆಲಿಂಗನ ನೀಡಿ ಮನದೊಲ್ಮೆಯಂ ತೋರಿದಂ.
ಮತ್ತೆ ಮೊದಲ್ಗೊಂಡುದುದು ಮುನ್ನಿನೊಲ್ ದಿನನಿಚ್ಚ
ಕಜ್ಜಭಾರಂ. ಬಿಸಿನೆತ್ತರಿನ ತರುಣ ಕವಿ ನಿಜ
ತೇಜದಿಂದೊಪ್ಪಿ ಲೇಖನ ಕೃಷಿಯಂ ಪರಮ
ಆಸ್ಥೆಯಿಂ ಕೈಕೊಂಡಂ. ಸುತನ ಸಾಹಿತ್ಯ ಶ್ರದ್ಧೆ,
ದೈವಭಕ್ತಿ, ಗುರುಹಿರಿಯರಲಿರ್ಪ ಗೌರವವಂ
ಕಣ್ತುಂಬ ಕಂಡ ದೇವೇಂದ್ರನಾಥನ ಮನದಿ
ತುಂಬಿರ್ದ ಸ್ವಸಂಸ್ಕೃತಿಗೆ ದೂರಾದಪನೆಂಬ
ಆಸಂಕೆಯ ಕೊಂಡಿ ಕಳಚಿಬಿಳ್ದು ಆನಂದ
ಭಾವದಿಂ ಮುಗ್ಧದುಗ್ಧ ಪುರುಷತೆ ನಾಚುತಿರೆ
ಆಸಂಕೆಯಂ ತಳ್ಳಿ ನಿತ್ಯಕರ್ಮದಲಿ ನೆರೆ
ಮನವಿಟ್ಟು ಸಂತೃಪ್ತಿ ಪಡೆದನಾ ವರಪಿತಂ.
ಕವಿ ಗದ್ದೆ ತೋಂಟಗಳ ಕೃಷಿಯಲಿ ಪಾಲ್ಗೊಳ್ಳುತುಂ
'ವಾಲ್ಮೀಕಿ ಪ್ರತಿಭಾ' ಮೊದಲಪ್ಪ ಅಪ್ರತಿಮ
ಕೃತಿಗಳಂ ಪ್ರಕಟಿಸಿ ಪೊಚ್ಚ ಸಂಗೀತೆಗಳಂ
ಕೋದು ಸಭೆಗಳಲಿ ವಾಚಿಸಿ ಮಧುರ ಸಾಹಿತ್ಯ
ಸಾರವಂ ಮತಿಮಾನ್ಯರಿಗಿತ್ತು ಮೆಚ್ಚುಗೆಗೆ
ಸತ್‌ಪಾತ್ರನಾಗೆ ಗಾಳಿಯಲಿ ಪುಷ್ಪ ಪರಿಮಳ
ಪಸರಿಸಿದವೊಲಾಯ್ತು ಪರಿಸರದಲಿ. ಆಗಳೇಂ
ಆಕರ್ಷಿತ ಸೃಜನಶೀಲ ಜನಮನಂ ಮುದಮಂ
ಸಂಮುದಿತಗೊಳಿಸುವೊಲ್ ಪ್ರೋತ್ಸಾಹಿಸಿದುದು ತುಂಬು
ಹೃದಯದಿಂದೊಪ್ಪಿ. ಜಾಜಿ ಮಿಡಿಮೊಗ್ಗಿನಲಿ ವರ
ಪರಿಮಳಂ ಪಸರಿಸುವವೊಲ್ ಯುವ ಕವಿ ಪ್ರತಿಭೆ
ಪ್ರೌಢಾವಸ್ಥೆಯ ಸೋಪಾನವೇರ್ವ ಮುನ್ನಮೆ
ಗ್ರಾಮಲಕ್ಷ್ಮಿಯ ಮಡಿಲಲಿ ದಳ ಬಿರಿದುದು ಅರಳಿ.
ಗ್ರಾಮೀಣ ಭುವಿಯಂಚಲ ಪಚ್ಚ ಪಸಿರೊಸರುವ
ವನಧಿಯಲಿ ಮುಳುಗೆದ್ದು ಆನಂದ ಮೋದದಿಂ
ಜಾನ ನಿಧಿ ಬುಗ್ಗೆಯೊಲ್ ಉಕ್ಕುತಿರೆ ರಮ್ಯರಸ

ಸ್ವಾದನೆಯಸತ್ವವೋ, ಚಿಂತನಾವೇಶವೋ
ಮೃಗಯಾ ವಿನೋದವೋ ಪಕ್ಷಿಗಳ ಕಲಕಂಠ
ರಾಗರಸಮೋ ಎನಲ್ಕೆ ವಸಂತ ಪ್ರಭುವಿನ
ಒಡ್ಡೋಲಗದಲಿ ಪರಮ ಮೋಹಿನಿ ಮಂತ್ರಮಂ
ಪಡೆದು ಧನ್ಯನಾದಂ. ವರುಷವೆರಡು ಸಂದುವು
ಅಂಕೆ ಸಂಕೆಯ ಗೋಜಿನಿತಿಲ್ಲದೆ ಸರಾಗಂ
ಬೋಲ್ಪುರದ ಗ್ರಾಮ್ಯ ಜೀವನೀ ಶಾಂತಿಯಲಿ.
ಮನೆಮನೆಯ ತಿಕ್ತ ಜೀವನ ವಾರ್ಧಿಯಲಿ ಮುಗ್ಧ
ದುಗ್ಧ ಮಾನಿನಿಯರ ಬರ್ಬರ ಬಾಳಿನ ಕಂಬನಿ
ಪರಿದಿರೆ ಕಡಲಾಗಿ ಸುಖದುಃಖವ ಮನಗೊಂಡು
ಭವ್ಯ ಭವಿತವ್ಯದಲಿ ಸುಸುಂದರ ಜೀವನೀ
ಯೋಗದ ಕನಸು ಕಟ್ಟಿ ಮತ್ತೆ ತಾಂ ಪಯಣಿಸಿದರ್
ಲಂಡನ್ ನಗರಿಗೆ. ಸೆಡ್ಡರ್ ವೀಥಿಯ ನಿವಾಸಿ
ಸತ್ಯೇಂದ್ರನಾಥನಂಗೂಡಿ ಸರಸತಿಯ ಸೇವೆ
ಮತ್ತೆ ಕೈಕೊಂಡರ್. ವಿದೇಶೀಯ ವಿಲಾಸಿ
ಭುವಿಯಲಿ ಕಣ್ಮುಗಿದು ಪಾಡಿದರ್ ಮಾಮರದಿ
ಹುದುಗಿ ಹಾಡುವ ಕೋಗಿಲೆಯ ತೆರಂ ತರುಣ ಕವಿ.
ಭಾರತೀಯರ ಇಂಗ್ಲಿಷ್ ಪದ ಪುಂಜಗಳ ಸುರ
ಸುಂದರ ಸಲಿಲಧಾರೆಯಂ ಪೀರ್ದ ಆಂಗ್ಲೇಯ
ಪ್ರಭೃತಿಗಳ್ ಅಚ್ಚರಿಯುಕ್ಕುವ ಕಂಗಳಿಂ
ನಿಟ್ಟಿಸಿ ಮನಮೆಚ್ಚಿ ಅಭಿನಂದಿಸಿದರ್ ಪರಮ
ತೋಷದಿಂ! ಕವಿ ರವೀಂದ್ರನಾಥಂ ಇಂಗ್ಲೀಷ್
ಭಾಷೆಯೊಳ್ ಭಾವನೋಜ್ವಲತೆಯಿಂ ಕನ್ನವುರ
ಕವಿತೆಯಂ ಕೋದು ಪ್ರಕಟಿಸೆ ಲಂಡನ್ ನಗರ
ದೇಶದಲಿ. ಪೇಳಲೇನಾ ಮಧುರ ರಸಧಾರೆ
ಉಕ್ಕಿದುದು ಚಿಲುಮೆಯೊಲ್ ಬುದ್ಧಿಮಾನ್ಯರೆದೆಯಲಿ!
"The Awakening of the water fall"
ಕವಿತೆಯ ಪದಲಾಲಿತ್ಯ, ವಿಚಾರ ಮಂಥನದ

ಭಾವಧಾರೆ ಪರಿದತ್ತು ಆತ್ಮ ಚೈತನ್ಯ ಧುನಿ
ರಾಗರಸಮಾಗಿ, ಸುಜನ ಮನವಂ ಮುಟ್ಟುವೊಲ್!
ವಿದೇಶೀಯರ ಮನಃಚಿತ್ತಗಳ ಓಜೆಯುಂ
ಓಜಿಸುವೊಲ್! ತೋಷಮಂ ಸಂತೋಷಿಸುವವೊಲ್!
ಬೈಗುವೊಳ್ತು ಸಾರಿಬರೆ ಥೇಮ್ಸ್ ನದಿಯ ತೀರ
ಆಕರ್ಷಿಪುದು ತನುಮನಮಂ. ಕವಿಯಭಾವಂ
ಉಕ್ಕಿ ತುಳುಕುವನಿತು ಅನುಭೂತ ಪರಮ ಶಾಂತಿ
ಸಮುದಾಯ ನಿಜ ನೀರವ ನೋಂಪಿಯಲಿ ಸುಶಾಂತಂ.
ಪಡುವಣ ದಿಗ್ವಣ್ಣು ರವಿಯಾಗಮನದಿಂದೆ
ಸಂಭ್ರಮಿಸೆ ಓಕುಳಿಯೆರಚಿ ಸ್ವಾಗತಿಸುತಿಹ
ಮಾಳ್ಕೆಯಲಿ ಅರುಣರಾಗ ರಂಜಿತಮಾದತ್ತು
ರವಿಯರಥ ಒಯ್ಯನೊಯ್ಯನೆ ಇಳಿದು ಬರುತಿರಲ್.
ಮಹಾನದಿ ತೀರದ ರಜತ ಪಟ್ಟಮಂ ದಾಂಟಿ
ಹಾಸುಗಲ್ಲಿನ ಮೇಲೆ ಮಂಡಿಸಿದರೇಕಾಂಗಿ,
ಧ್ಯಾನವಿಲಯ ವಿಪ್ಲವದಲ್ಲಿ ಮೈಮರೆಯುವವೊಲ್!
ಹಿಮರೋಚಿಯಂಬುಧಿಯಲಿ ಮಿಂಚುವ ವೀಚಿಗಳ
ಮೇಲೆ ತೇಲಿತು ನಗರಿ ಸಾಯಂ ಸುಧಾ ಸ್ವಪ್ನ
ಮುಗ್ಧತೆಯ ಪೆಂಪಿನಲಿ. ಮನೋವಾರ್ಧಿಯ ಮಧುರ
ರಸಮಯ ರಸಾಲತೆಯ ಕಮನೀಯ ಭಾವಗಳ
ಪೆಂಪಿನಿಂ ಕಾವ್ಯಕಾಮಿನಿಯು ಮೈಗೂಡುತಿರೆ
ಮೃದು ಮಂದ ಮಧುರ ನೃತ್ಯದ ರಂಗಣರಿಂಗಣ
ಟಂಟಣಿಟಣಿ ನಾದಂ ಪೊದಳ್ದಿರೆ ಎರ್ದೆಯಲಿ
ಜಗತ್ತು ಮಧುಮಯ, ಮಾತ್ರಮಲ್ತು, ರಸೋಜ್ವಲಂ!
ಮತ್ತಮಾ ರಸಾನ್ವಿತ ಮಧುರ ಕ್ಷಣ ಶೋಭಿತಂ!
ಒಗೆಗಣ್ಣಿನ ವಿದ್ಯಾಬುದ್ಧಿಗಳ ಆಸ್ಥೆಯಲಿ
ಸಂದುವೆರಡು ವರ್ಷಮಾಸಗಳ್ ಗಮನಕ್ಕೆ
ಬಾರದವೊಲ್ ಹರ್ಷದ ಹೊನಲಾಗಿ. ರವೀಂದ್ರ,
ವಿಶ್ವವಿದ್ಯಾಲಯದ ಕೊನೆಯ ಹಂತವನೇರಿ

ನಿಲ್ಲೋಡಂ ಪದವಿಯಂ ಪಡೆವಾಸೆಗೆ ಕಿಂಚಿತ್
ಮಣಿಯದ ಪರೀಕ್ಷೆಯಂ ಬದಿಗೊತ್ತಿ ಪಿಂದಿರುಗಿ
ನಡೆದಂ ಸಮುದ್ರಯಾನಂ ಮತ್ತೆ ಕೈಕೊಂಡು.
ಮನಂ ಪೇಸಿದುದು ಪಾಶ್ಚಾತ್ಯರ ವಿಲಾಸತನಕೆ!
ಸಂತಸಂ ಬಲಿತುದವರ ವಿಜ್ಞಾನ ವಿಶೇಷಕೆ.
ಮತ್ತೆ ಗ್ರಾಮೀಣ ಜೀವನೀಯೋಗ ಒದವಿದರೆ
ಭುವನ ಸಮ್ಮೋಹ ಪರಿಯಂ ಕಂಡಳ್ಕರೆಯ
ಉಲ್ಲಸದಿ ಎದೆಯ ಹಕ್ಕಿ ಬನದ ಕೋಗಿಲೆಯಂ
ಮೀರಿ ರಾಗ ಮಾಧುರ್ಯಮಂ ಸೂಸಿತು ನೀರವ
ಸುಖಸಂಗದಲಿ. ಅರಣ್ಯಾನಿಯ ಹಸಿರು, ಪುಷ್ಪ
ಲೋಕದ ಸುಗಂಧಪೂರ್ಣ ವರ್ಣಾಂತ ವರ್ಣಗಳ
ಬಣ್ಣನೆಯ ರಸಧಾರೆ ಲೋಕಮಂ ಆನಂದ
ಧ್ಯಾನ ದಗ್ಧಗೊಳಿಸುವೊಲ್ ಪರಿದತ್ತು ಅನುಪಮ
ಮಾಧುರ್ಯಂ ಚೆಲ್ಲಿ. ನಿಚ್ಚ ನೈಸರ್ಗಿಕ ಸೌಂದರ್ಯ
ವಾರಾಸಿ, ಇರುಳ್ಗಪ್ಪಿನಲಿ ಮಿನುಗುವ ಮಿಂಚು
ಮೈಯಿನ ಅಸಂಖ್ಯ ತಾರಾಳಿಗಳ ಸಂಪದಂ
ಮನಃಚಿತ್ತಗಳ ಪ್ರಚೋದಿಸಿ ಹರಿಸುತಿರಲ್
ಆಶುಕವಿತೆಗಳ ಕಮನೀಯ ಧಾರಾವಹಿ
ಹರಿದುದು ಜಗ ಹೃದಯಮಂ ಪುಳಕಗೊಳಿಪವೊಲ್
ಆಃ! ತನುಮನ ತುಂಬಿ ಕೊರಳ್ ತುಂಬಿ ಪಾಡುವರ್
ಭಕ್ತಿ ಧ್ಯಾನ ವಿಲಯ ವಿಪ್ಲವದಲಿ ಎಡೆಯೋತು.
ಅನುಪಮ ಕಾವ್ಯ ಕೃಷಿಗೆ ಪಕ್ಕಾಯ್ತು ಜೀವನಂ.
ಅನಕ್ಷರಿ ದೇಶಿಗರ ಬಾಳಿನೇಳ್ಗೆಯ ಕುರಿತು
ಯೋಚಿಸಿ ಮನದೆ, ಭವ್ಯ ಭಾರತದ ಭವಿತವ್ಯ
ಬುದ್ಧಿಮಾನ್ಯರೊಳಿರ್ಪುದಂ ನೆನೆದು ದೇಶಿಗರ
ಅಕ್ಷರ ಜಾಣಕೆ ನಲ್ ಬುನಾದಿಯನಿಡುವಾಸೆಯ
ಮೊಳಕೆ ಮೊಳೆಯೆ ಚಿತ್ತಾಲೋಕದಲಿ, ತರುಣಕವಿ
ಮೈಮನಂ ಚಿತ್ತಶ್ರೀಯಾಗಿ ಸಂಭಾವಿಸಿದ

ರೇಕಾಂಗಿ. ಆಪನ್ನಿತು ಅಕ್ಷರ ಯಜ್ಞಕ್ಕಾಗಿ
ಶ್ರಮವಹಿಸಿದಲ್ಲದೆ ಜ್ಞಾನ ಪ್ರಸರಣಮೇ
ಇಲ್ಲೆಂದು ಪರಿಭಾವಿಸೆ ಮಕ್ಕಳ ಶಾಲೆಯುಂ
ಆಗಳ್ತೆ ಮೂಡಿದತ್ತು ದೇಶೀ ರೀತಿಯಲಿ.
ನೆಲ, ಹಣಬಲ ಜಾನಬಲ ಶ್ರಮಬಲ ಎಲ್ಲಂ
ಸ್ವಂತಿಕೆಯಿರೆ ವಿದ್ಯಾಸರಸ್ವತಿ ಆಗಮಿಸಿದಳ್
ಮುಗ್ಧದುಗ್ಧ ಗ್ರಾಮ್ಯಭೂಮಿಗೆ ಬಹುಮಕ್ಕಳ
ಮನತಣಿಸೆ. ಪಿರಿಯರಾಶೀರ್ವಾದದೊಡಂ ಕಿರಿಯ
ಮಕ್ಕಳಕ್ಕರೆಯು ಬೆಳ್ನಗೆಯೊಳ್ ಚಿಮ್ಮುತಿರೆ
ಶಾಲೆ ಆನೆವಾಗಿಲಂ ತೆರೆದುದೆಲ್ಲರರೊಳ್ತಿನ
ಸದ್ ಆಶಯದಿಂದೆ. ಕುಸಂಸ್ಕಾರ ಕುವಿಚಾರ
ವಿಹಾರಗಳಿಂ ಮೇಣ್ ಆಂಗ್ಲೇಯರ ಪ್ರತಿಷ್ಠೆ
ದುಷ್ಟಪ್ರವೃತ್ತಿ ದುರಹಂಕಾರಗಳಿಂ ದೂರಾಗಿ.
ಶಾಲೆ ಸಕಲ ಕರ ಕುಶಲ ಕಲೆಗಳ ಬೀಡಾಗಿ
ಪರಮ ಜ್ಞಾನದೇಗುಲಮಾದತ್ತು ದೇಶೀಯ
ಅಜ್ಞರಿಗೆ. ದೂರ ಭವಿತವ್ಯದ ಸುಜೀವನೀ
ವಾಹಿನಿಗೆ ಸರ್ವತ್ರ ಪೂರಕಮೆನಿಪ ಶಾಲೆ
ನಿಜ ''ಗುರುಕುಲಂ''.
ಕಾಲ ಮುರುಳುತೆಲ್ಲ ಸುಸೂತ್ರ
ನಡೆದಿರೆ ರವೀಂದ್ರನಾಥಂ ತಾನೊಲಿದ ಕನ್ಯೆ
ಮೃಣಾಲಿನಿಯ ಪಾಣಿ ಗ್ರಹಣದಿಂ ಗೃಹೀ
ಜೀವನಕೆ ಪದಾರ್ಪಣೆ ಮಾಡಿದನ್. ಆಗಳಾ
ಪುರಾಣೇಯ ಭವನಂ ನಲ್ಮೆಯಿಂ ಬಲ್ಮೆಯಿಂ
ಸಿಂಹದ್ವಾರ ತೆರೆದು ಆನಂದ ತೋಷದಲಿ
ಸ್ವಾಗತಿಸಿತು ಅತಿಥಿ ಅಭ್ಯಾಗತರ ಕಣ್ಮಂತೆ.
ಸಂಭ್ರಮ ಸಂತಸಗಲ ಕೋಲಾಹಲ ಗೂಡಿ
ನಲಿನಲಿಯುತಿರಲ್, ಜನರಾಶಿಯ ಆಶೀರ್ವಚನಂ
ಅಕ್ಷತೆಗಳನೆರಚಿದುದು ನವ ದಂಪತಿಗಳ ವರ
ಶಿರೋದೇಶದ ಮೇಲೆ.

ಮತ್ತಾಗಳಿಂ ಕವಿಯ
ಜೀವನಂ ಎಡರಿಲ್ಲದೆಂದಿನೊಲ್ ಕೃಷೀಯ
ವೃತ್ತಿ ಮೇಣ್ ಅಧ್ಯಯನದ ಪ್ರವೃತ್ತಿಮೆರಡುಂ
ಕೂಡಿ ತುಂಬಿ ಬೆಳೆದುದೊಂದಾಗಿ. ಇಂತಿರುತಿರಲ್
ದುರ್ವಿಧಿಯ ದುರ್ನಿವಾರ ಪಾಶಂಗೊಲಿದು ಮೈ
ವಿಟ್ಟ ನಲ್ಮೆಯ ಅತ್ತಿಗೆ ರಾಮೇಶ್ವರೀ ದೇವಿ
ನೇಪತ್ಯವೇರಿದಳ್! ದುತ್ತೆಂದೊದವಿದ ಘೋರ
ಆಘಾತದಿಂ ಕಡು ದುಃಖಕೊಳಗಾದ ವರಕವಿ
ಸಂಕಷ್ಟದಿಂ ಬೀಳ್ಕೊಟ್ಟನಾ ಪಾರ್ಥಿವ ದೇಹ
ಸಂಪುಟಂ. ದುಃಖ ಭಾರದಿಂ ನೊಂದು ನೀರಾಗಿ
ದ್ರವಿಸಿ ಮನಂ ನರಳುತಿರೆ ಸಾಂತ್ವನಗೈಯಲ್
ಜ್ಞಾನ ದೀಪ್ತಿಯ ದಿವ್ಯ ಪ್ರಸರಣಕೊಪ್ಪುವೊಲ್
ನವ ವಿಧಾನದಿಂ ಪೊಣ್ಮಿದ 'ಬಾಲಕ್' ಎಂಬುವ
ಪತ್ರಿಕಾ ಪ್ರಕಟಣೆಯಂ ಕೈಕೊಳ್ಳಲಾ ಮಹತ್
ಕಾರ್ಯಭಾರದಿಂ ಚಿಂತೆಯ ಕೀಟ ಅರುಗಾಗಿ
ಕವಿ ಸಮಯ ಸಮಯೋಚಿತ ಮಾದತ್ತು ದಿನದಿನ.
ಭಾರತೀಯರಂ ಆಂಗ್ಲೇಯರ್ ತಿರಸ್ಕಾರದಿಂ
ತುಚ್ಛೀಕರಿಸುತಿರ್ದುದಂ ಕಂಡುರಿದೇಳುತ
ರಾಜಕೀಯ ರಂಗದೊಳ್ ಪದಾರ್ಪಣೆ ಮಾಡಿದ
ಮಹಾ ಧನ್ವಂತ್ರಿ! ಆಂಗ್ಲರ್ ರಾಷ್ಟ್ರದೇಳ್ಗೆಯಂ
ದುರ್ಲಕ್ಷಿಸಿ ಪ್ರಜೆಗಳ ಭಂಗ ಬವಣೆಯ ಕಂಡು
ಕಾಣದೊಲ್ ಕನಿಕರ ದಯೆ ಧರ್ಮ ಇನಿತಿಲ್ಲದೆ
ಪುಣ್ಯಭೂಮಿಯಂ ಸೂರೆಗೈದು ಬರಿದು ಮಾಡಿ
ರಾಜ ವೈಭೋಗದಲಿ ತಾವ್ ಮೆರೆಯುತಿರ್ಪರ್
ಪ್ರಪಂಚದ ಕಣ್ಮುಂದೆ. ಅಂತಪ್ಪ ಲಜ್ಜಾ
ಹೀನರ ಕರಿ ಛಾಯೆಯದೆಮ್ಮಯ ನಲ್ ಮಕ್ಕಳ
ಮನದ ಮೇಲೆ ಬೀಳದಿರಲೆಂಬೊಂದು ಆಶೆಯ
ಬೆಳಕು ಮುಂಚಿವಂದುದು ಮನದ ಕಿಂಡಿಯಲಿ. ಕವಿ

ಗುರುಕುಲದಲಿ ಹಲಕೆಲ ಮಾರ್ಪಾಟನು ರೂಪಿಸಿ
''ತಪ್ರೋವನ'' ಎಂಬ ಅಭಿಧಾನವಿತ್ತು ಶಿಕ್ಷಣವ
ನವೀಕರಿಸಿದೊಡಂ ಭಾರತೀಯತೆಯ ಸದ್
ಆಚಾರಗಳಂ ಮೀರದ ಪಾಂಗಿನಿಂ ಬಿಗಿಗಟ್ಟು
ಬಿಗಿದು ಸಂಸ್ಕೃತಿಯ ಪ್ರತೀಕಗೊಳಿಸಿದರ್. ಗುರು
ಶಿಷ್ಯ ಸಂಬಂಧ ಸ್ನೇಹಾನುರಾಗದಲಿ ದಿನ
ದಿನಂ ಊರ್ಜಿತಗೊಳಿಪ ಗುರಿಯೊಳ್ ನಡೆದುದು ಶಾಲೆ
ಹಿಂದೂತ್ವ ರೀತ್ಯ ಪ್ರತಿ ಹಂತದಲಿರೆ ಬಿಜ್ಜೆ
ಬುದ್ಧಿಮಾನ್ಯರ್ ಮೆಚ್ಚಿ ನೆಚ್ಚಿ ತಲೆದೂಗಿದರ್.
ವಿದ್ಯಾರ್ಥಿಗಳಲಿರ್ಪ ಶ್ರಮವನತಿಶ್ರಮಿಸುವ
ಸೌಜನ್ಯ ಸಂಪದಂ ಮೇಣಲ್ಲಿಯ ನೀರವ
ನಿಶ್ಯಬ್ದ ವಾತಾವರಣ ಸುಸಂಸ್ಕೃತಿಗೆ ನಿಜ
ಪೂರಕಂ. ಶಾಲೆಯುಂ ಮುಂಬೆಳೆಯುತಿರಲ್ ಆರ್ಥಿಕ
ಮುಗ್ಗಟ್ಟು ಮುಂಬೆಳೆದು ನಿಂದುದು ಮರುಭೂಮಿಯ
ಕಳ್ಳಿಯೊಲ್! ಸರಕಾರದ ನೆರಮಿಲ್ಲ. ಸ್ವಂತಿಕೆಯೆ
ಎಲ್ಲ. ಎನೆ ಸಾಮಾನ್ಯಮೆ? ಬಡಜನ ಬಡದೇಶ
ಎನಲ್ಕೆಲ್ಲಿಯ ಆರ್ಥಿಕ ನೆರಂ? ಬಡ ಮಕ್ಕಳ
ಸ್ಥಿತಿಗತಿಯಂ ಸ್ವಂತ ಕಂಗಳಿಂ ನೋಡುತುಂ
ಶಾಲೆ ಮುಚ್ಚಲೊಪ್ಪದು ಮನಂ. ಅಂತೆಂದು ಆ
ಭಾರಮಂ ಭರಿಪುದು ಅಸಾಧ್ಯಮಿರೆ ಕವಿವರರ
ಮನಃಕಲ್ಪಂ ಭವಿಷ್ಯಮಂ ನೆನೆದು ಚಿಂತೆಯಿಂ
ಏಂಗೈವುದೆಂದು ಜಾನಿಸಿ ಪರಿತಪಿಸುತಿರಲ್
ಕೀಟದೊಲ್ ಕೊರೆದತ್ತು ಅದೇ ಅದ್ಭುತ ಚಿಂತೆ.
ಆ ಸಂದಿಗ್ಧ ಸಮಯಕೆ ದೈವಮೇ ಮುಂಗೆತ್ತು
ಬಂದವೊಲ್ ಬುದ್ಧಿ ಮಾನ್ಯ ಗೆಣೆಯರ್ ಒಗ್ಗೂಡಿ
ಕೆಲವೊಂದು ಬಗೆಯಲಿ ಪರಿಶ್ರಮಿಸಿ ಸಂಕಷ್ಟ
ಭಾರದಿಂ ಆರ್ಥಿಕ ನೆರಂ ನೀಡಿದರ್ ಒಮ್ಮನ
ಒಮ್ಮತಗಳಿಂ. ಅತೀವ ಬಡತನದಿಂ ನರಳ್ವ

ದೇಶ ಹಣಮೊದವಿಪ ಕಡುಕಷ್ಟಂ ಬಲ್ಲವರೆ
ಬಲ್ಲರ್. ಎನಿತೆನಿತೋ ಶ್ರಮಿಕರ ಮಹತ್ತರ
ಸಾಧನೆಯಲಿ ಸಾಧಿತಮಾದತ್ತು ಆ ಕಾರ್ಯ
ಕಾರಣೀಯ ಬಂಧುರಂ. ಇಂತೊಂದು ಭಂಗದ
ವೈತರಣಿಯಂ ದಾಂಟಿರೆ ಇನ್ನೊರ್ ರಣಗೋಳು
ಬಂದೊದವಿದತ್ತು ದುರ್ವಿಧಿವತ್ತಾಗಿ. ಮಹರ್ಷಿ
ಸದೃಶ ಪಿತ ದೇವೇದ್ರನಾಥಂ ರೋಗಾದಿ
ಬಾಧೆಗಳ ವಿಶೇಷ ಕಳವಳಮಿಲ್ಲದೆ ಸ್ವರ್ಗ
ಸೋಪಾನವಡರಿದಂ! ಆಗಳೇಂ ಕವಿಮನದ
ಗೋಳು! ದುರ್ವಿಧಿಯ ಕಾಣದಕ್ಕೆ ಅದುಮಿದತ್ತು
ಹೃತ್ ಸಂಪುಟಂ ಚಿದ್ರವಿಚ್ಛಿದ್ರಗೊಳಿಸುವೊಲ್!
ಆಗಳಾ ವರಕವಿ ಗ್ರಾಮ ರಾಜ್ಯದಲಿ ನಿಸರ್ಗ
ಸೌಂದರ್ಯ ರಸಪಾನದಿಂ ಒಡಲ ದುಃಖಮಂ
ಸಾಂತ್ವನಗೊಳಿಸಲ್ ಹೊತ್ತರೆಯ ತಣ್ಪು, ಬೈಗಿನ
ಸೊಂಪುಗಳಂ ಸೂರೆಗೊಂಬರ್. ಕೆರೆಯ ತೀರದಲಿ
ಅಡ್ಡಾಡಿ, ವನ ಸಸ್ಯಗಳಲಿ ತುಂಬಿ ತುಳುಕುವ
ಬಗೆವಗೆಯೊಳ್ ನರುಗಂಪುಗುವ ರಂಗುರಂಗಿನ
ಪೂವಿನ ರೇಣುಗಳ ಮಧ್ಯೆ ಪಿತನಾತ್ಮ ನೆಲೆಸಿ
ವಿಶ್ರಾಂತಿಗೆತ್ತುದೊ ಎನೆ ಕುತೂಹಲಂ ಕೊನರಿ
ಕಣ್ಮನಂ ಹೊರಳುವುದತ್ತ ತಾನೆತಾನ್ನೆಸಿ.
ಆವ ಬನದಲಿ, ಮತ್ತಾವ ತಾಣದಲಿ, ಇನ್ನಾವ
ಸೊಬಗಿನಲಿ ಇಹನೆನ್ನ ಪಿತನೆಂಬ ಭಾವದಲಿ
ಅಲೆದು ಬಿದಿಯಂ ದೂರಿ ಪಿಂದಿರುಗವರ್. ಮನದ
ಬೇಸರಂ ನಿವಾರಿಸಲಾಗದೆಯೆ ಕನಲುವರ್.
ನರಳುವರ್. ಅದೊಡೇಂ ಪಿತನ ಮರಣ ದಿಟಮಿರೆ
ಅರಸುವಿಕೆ ಸಲ್ಲದೆನುತೆ ಲೇಖನ ಕೃಷಿಯಲಿ
ಮನವಿಟ್ಟು ಸಾಂತ್ವನಗೊಳಿಪುವರ್ ಮನಪಕ್ಷಿಯಂ.
ಕ್ರಮಾನುಕ್ರಮದೊಳ್ ಹತಾಶೆಯಂ ಬದಿಗೊತ್ತಿ

ಸಂಜೀವನ ಯಜ್ಞದೊಳ್ ಕಾವ್ಯ ವಿಹಾರದಲಿ
ಮುಳುಗಿದರ್. ಲೇಖನ ಕೃಷಿ ಮತ್ತೆ ಮೊದಲಾದುದು
ಅನುದಿನಂ ಯಥೋಚಿತಮಾಗಿ. ಕವಿ ಮಹರ್ಷಿಯ
ಮನದಿಚ್ಛೆಯದು ಸ್ಫುರಿಸಿತ್ತೈ ಹೃದಯ ನಿವೇದನೆ
ತಾನೆ ತಾನ್ನೈಸಿ ಹೊಮ್ಮಿದವೊಲ್....ಓ! ಪ್ರಭುವೆ!
ತಿಳಿದೂತಿಳಿದು ಮತ್ತೆ ಮತ್ತೆ ಅದ್ದುತಿಹೆನೆನ್ನ
ಹತಾಶೆಯ ಕುಂಡದಲಿ. ವರ ಮಹರ್ಷಿ ಎನಿಸಿರ್ದ
ತಂದೆಯೆನ್ನನೊಯ್ದುದ್ಯೈ ನಿನ್ನುಡಿಗೆ. ಎಲ್ಲಿಯುಂ
ಕಂಡೆನಿಲ್ಲ ಇನ್ನೆಬರಂ. ನೀಂ ತೆರೆ ಮರೆಯಲಿ
ಸೂತ್ರಧಾರಿಯಾದಪೆಯೇಕೆ? ವಿಶ್ವಲೋಕಂ
ನಡೆಸುತಿಹ ನಿನಗೆ ತೆರೆ ಬೇಕೆ? ಪೇಳ್ ದೊರೆಯೇ?
ನೀನ್ನೆನ್ನೆದುರಿಗೆ ಬಂದು ನಿಲ್ಲದಿರಲೆಂತೂಹಿಪೆ
ನಿನ್ನಯ ನಿಜರೂಪಂ? ನಿನ್ನನೆನ್ನ ಕಣ್ಣಿಂ
ಕಾಂಬ ಹಂಬಲವೆನ್ನ ವರ್ಜಿಸುತಿದೆ ದಿನದಿನಂ.
ನಿನ್ನ ವರ ದಯಾರ್ದ್ರೇದುರ ದೃಷ್ಟಿ ತಾಗುತಿರೆ
ನಿನಗೆಂದೆ ಕೋದ ಗೀತಗಳೆನ್ನ ಗಂಧದೊಲ್
ಪರಿಮಳಿಸವೇಂ ಈ ಧರೆಯಲಿ? ತಾರಾಲೋಕ
ನಿನ್ನದಿರೆ ನೀನೇಕಿಲ್ಲವೈ ಗಗನದ ಮಧ್ಯೆ?
ಅಖಿಲ ಪುಷ್ಪಕೋಟಿಯು ನಿನ್ನ ಸೃಷ್ಟಿಯಾಗಿರೆ
ನೀನಹೆ ಅಪ್ರತ್ಯಕ್ಷ ಪೂಗಳ ಮಧ್ಯೆ! ಹೇ,
ವರ ಪಿತನೆ! ಬಾರಯ್ಯ. ಹಸುರುಕ್ಕುವ ಗರಿಕೆಯ
ಪಚ್ಚ ವರ್ಣದ ರನ್ನ ಗಂಬಳಿಯ ವರಹಾಸು
ಮೇಣ್ ಕುಸುಮ ಕೋಟಿಯ ಸ್ವಾಗತಮಿದೆ ಸುಗಂಧ
ಗಂಧವಂ ಬೀರಿ. ನಿರ್ಜನ ನೀರವ ಶಾಂತಿಯ
ಹೇರಾಶಿ ತುಂಬಿ ತುಳುಕುತಿದೆ. ಮತ್ತೇಕೆ ನೀ
ಬರಲೊಲ್ಲೆ? ಓ! ದೇವ! ಭಾರ! ಓಡೋಡಿಬಾ!
ನಿನ್ನ ಪಾದ ಪೂಜೆಗೆಂದೆ ಕವಿತಾ ಮಾಲೆಯಂ
ಕೋದಿರುವೆ. ಬೃಹದ್ ಜಗತ್ತೆ ನಿನ್ನದಾಗಿರೆ

ಮತ್ತೆ ಆನೇನೀಯಬಲ್ಲೆ ಪ್ರಭುವೇ! ಆಂ
ದೀನಾತಿದೀನ. ನೀಂ ಕರುಣೆಸಿದರೆನಗುಂಟು.
ನಿನ್ನ ಕಾಂಬಾಸೆಯಂ ಗಿರಿಯಲಿ ಬನದಲಿ
ಅರಸಿಅರಸಿ ಹೃತ್ ಕರಂಡವೆನ್ನ ಭಕ್ತಿಯ
ರಸಧಾರೆಯಲಿ ತುಂಬಿ ತುಳುಕುತಿರೆ ತಪಿಸುತಿದೆ
ಮನಮಂಡಲ ಬರಡಪ್ಪಿ. ಒಡೆಯಾ! ನೀಂ ದಯದಿ
ಬಂದೆನ್ನ ಪರಸಿ ಉದ್ಧರಿಸೆನುತೆ ಕೈಮುಗಿದು
ಬೇಡುವೆನ್ನೈ....'' ಎಂದೆಂದು ಪಾಡುತ ಬೇಡುವರ್;
ಭಕ್ತಿಯಿಂ ಧ್ಯಾನಿಸುತೆ ಮೈಮರೆವರ್.

ಆದಿನಂ

ಸೂರ್ಯೋದಯದ ಮುನ್ನ ಮನದ ಯದೃಚ್ಛೆಯಿಂ
ಕೈಸಾಲೆಯೊಳ್ ನಿಂದು ಉದಯಮಾನೋತ್ಸವಂ
ಎದುರು ನೋಡುತಿರೆ ವರ ಕವಿಗೊಂದು ಪ್ರಕೃತಿಯ
ಪರಿಶೋಧದ ಅನುಭವ ಮೈಮನಗಳನಾವರಿಸೆ
ಕಂಗಳ ಪರೆ ಕಳಚಿದವೊಲಾಯ್ತು. ಇಡಿ ಜಗತ್ತು
ಅತ್ಯದ್ಭುತ ದೀಪ್ತಿಯಲಿ ಉರಿದತ್ತು ಜಗಜಗಿಸಿ
ಬೆಳಗುವೊಲ್! ಆ ಭಾಸಮಾನ ತಡಿಯಲಿರುತಿರೆ
ಮಂತ್ರಮುಗ್ಧತೆಯಲಿ, ಸುತ್ತಲೆತ್ತಲ್ ಸೌಂದರ್ಯ
ಆನಂದಗಳ ತರಂಗಗಳ್ ಏರಿ ಬಂದೌಂಕಿ
ಹೃತ್ ಕುಂಡದಲಿ ತುಂಬಿರ್ದ ಅಸುಖ-ಅಶಾಂತಿ-
ದೌರ್ಬಲ್ಯಗಳ ಪೊರೆಯಂ ಸೀಳಿ ಒಳಗಣ್ ತಿವಿದು
ವಿಶ್ವಲೋಕದ ತೇಜಮಂ ಕೋಡಿಹರಿಸಿತಾ
ಪ್ರಕಾಶಂ ಪ್ರಕಾಶಿತಗೊಳಿಸಿದೊಲ್, ಶಾಂತಿಯಂ
ಸುಶಾಂತಗೊಳಿಸಿದವೊಲ್ ಅನುಭವಂ ಪಕ್ವಾಯ್ತು.
ನಿಡುಹಗಲ್ ಉರುಳ್ದುರುಳ್ದು ಸಂಜೆಯಡರಿ ಬರಲ್
ಸಭಾಂಗಣದೊಳ್ ಕಲೆತ ಕಾರ್ಮುಗಿಲ್‌ಗಳ್ ಭೋರ್
ಭೋರನೆ ನೆರೆ ಸುರಿದುವು ಧಾರಾವರ್ಷಮಂ ಆಲಿ
ಗಲ್ಲುಗಳ ಸರಿಸುರಿಸಿ. ಬಿಸಿಲ್ ಬೆಂಕಿಗೆ ತೆಕ್ಕನೆ

ತನಿಯೆರೆವವೊಲ್. ಬಿರುಸಿನ ಬಿರುಗಾಳಿ ರೊಯ್ಯನೆ
ಝಾಡಿಸಿ ಜಡಿಕುಟ್ಟುವ ತೆರದಿ ಬೀಸುತಿರೆ, ಆ
ಮಳೆಗಾಳಿಯ ಲೀಲಾ ಖೇಲನಂ ಕವಿಯ ಸತ್
ಚಿತ್ ಚೇತನಾವೇಶದ ರಾಗಾರುಣತಾನ
ವಿತಾನಗಳ ಪರಿಶೋಧಕೆ ತಾನಾದುದು ಬಿತ್ತು.
ಅಃ, ನಿರ್ಜನ ನೀರವ ನಿರಾತಂಕಂ ಸತತ
ಏಕಾಗ್ರ ಯೋಚನಾವೇಶಕೆ ಪುಟವಿಟ್ಟುದು
ಬಗೆಗಣ್ಣು ದಲದಲ ಅರಳ್ವವೊಲ್! ದಿನದಿನಂ
ಆರ್ಜಿಸಿದ ಲೋಕಪ್ರಜ್ಞೆಯೊರತೆಯಂ ಸುಜ್ಞಾನ
ಭಂಡಾರ ತುಂಬಿತುಳುಕುತಿರೆ ಸಾಹಿತ್ಯಝರಿ
ಧಾರೆಧಾರೆಯ್ಯೆಸಿ ಪರಿದುದು ಸಂಭ್ರಮದಿಂ.
ಆವ ಘಳಿಗೆಯಲಿ ಲೇಖನಿ ಆತ್ಮನಿವೇದನೆ
ಹರಿಸಿದುದೊ ಭಕ್ತಿಭಾವಂ ಘನಿಸಿ ಧವಳಿಮಾ
ಕೀರ್ತಿಯೊಲ್! ಬಿಳಿ ಕಾಗಜಗಳ ಮೇಲಿನ ಕರ್‍ರನೆ
ಅಕ್ಕರಂ ಸಾಲ್ಗೊಡೆದ ನಮೋನವ ಕವನಗುಚ್ಛ
''ಗೀತಾಂಜಲಿ'' ಸಿರಿನಾಮಧೇಯದ ತನಿವೊತ್ತು
ಪೊದಳ್ದುದು ಸಿರಿಗ್ರಂಥ ಮಹೋನ್ನತ ಸತ್ಕೀರ್ತಿ
ಕೇತನದ ಗಗನಕೇರ್ವಡಿಸುವ ಮಾಳ್ಕೆಯಲಿ!
ಪರಮಕವಿ ಭಕ್ತಿಯೇ ಗ್ರಂಥಸಾರಮಿರೆ ಸೋನಾರ್
ಬಂಗಾಳ ಜನನಿಯ ಹೃತ್ ದೇಗುಲದ ಕದಮಂ
ತಟ್ಟಿತು ನಲವಿಂದೆ. ಆಗಳೇಂ ಗಜಬಜಂ ಜನ
ಜಂಗುಳಿಯಲಿ? ಭಕ್ತಿರಸ ಇಕ್ಷುರಸಮಾದುದೋ
ಮೇಣ್ ಹಾಲ್ಸಕ್ಕರೆಯ ಸವಿಯಾದುದೋ ಎನಲ್
ಜನಮನಂ ಆಕರ್ಷಿತಮಾದುದು ಕರ್ಬುನಂ
ಸೆಳೆವ ಸೂಜಿಗಲ್ಲಿನೊಲ್. ಎಲ್ಲರ ಜಿಹ್ವೆಯಲಿ
ನಲಿದುದು ಸುಸಂಗೀತ ಗೀತಾಂಜಲಿ ರಾಗರಸ,
ವಂಗಭೂಮಿ ಪುಳಕಿತಮಪ್ಪವೊಲ್. ಯುವ ಪ್ರತಿಭೆ
ಹರಡುತಿರೆ ಭಾರತಭುವಿಯಗಲ ಕವಿಚಿತ್ತ

ಆಧ್ಯಾತ್ಮಿಕ ಪ್ರಪಂಚಂಬೊಕ್ಕು ಮನ ಮಥಿಸಿ
ವೇದೋಪನಿಷತ್ತುಗಳನೋದಿಯೋದಿ ತಿರುಳಂ
ಬಗೆದು, ಅಧ್ಯಯನದಿಂ ಜೀವನಾನಂದಮಂ
ಪಡೆಯೆ ಶೋಧಪ್ರತಿಶೋಧಗಳ ಅನುರಾಗದಲಿ.
ಅರ್ಥಹೀನ ಹುರುಳಂ ಬದಿಗೊತ್ತುತಿರೆ ಕಾಂಬ
ಅಂತರಾರ್ಥ ಆತ್ಮ-ಪರಮಾತ್ಮರ ಅನುಬಂಧ
ಅಣ್ಣತಮ್ಮಂದಿರ ನಿಜ ಬಂಧಾನುಬಂಧಂ
ಎಂಬೊಂದು ಸತ್ಯಸ್ಯಸತ್ಯಮಂ ಕಂಡುಂಡು
ಧನ್ಯವಾದುದಾತ್ಮ ಸುಸಂಪದಂ. ಹಾರುತಿಹ
ಹಕ್ಕಿಯಾಗಿ, ಓಡುವ ಜಿಂಕೆಯಾಗಿ ನಲಿಯುತ
ಆತ್ಮಾನುಭವನಂ ಹರಿಸಿದರ್ ಲೆಕ್ಕಣಿಕೆಯಲಿ.
ಆಗಳಾಸಮಯದೊಳ್ ಮದರಾಸ್ ದೇಶೀಯ
'ಕಾರವಾರ' ಮೆನಿಪ್ಪ ಭೂಸ್ವರ್ಗ ಧಾಮದಲಿ
ಪಿರಿಯಣ್ಣ ಸತ್ಯೇಂದ್ರನಾಥ ಜಿಲ್ಲಾಧಿಪತಿ
ಸ್ಥಾನಿಕನಿರೆ, ನಲ್ಮೆಯ ತಮ್ಮಂಗೆ ಬರೆಸಿದಂ
ಪತ್ರೋಲೆಯಂ; ನೀನಿಲ್ಲಿಗೈತಂದು ಕರ್ನಾಟಕ
ದೇಶೀಯ ಪರಮ ನಿಸರ್ಗ ಸೌಂದರ್ಯಮಂ
ಕಣ್ತುಂಬ ಕಂಡು ತಣಿಯೆ ನಿನಗಪ್ಪುದು ನಿಚ್ಚ
ಪ್ರಕೃತಿ ವರ ಪ್ರದಾನ ಎಂದೆನೆ ದಿಟವಹುದು.
ಪತ್ರಮಂ ಕಂಡೊಡನೆಯೆ ರವೀಂದ್ರ ಪೊರವಂಟರ್
ಉಗಿಬಂಡಿಯ ಪಯಣಂ ಕೈಕೊಂಡು
ಅಃ, ಭರತ
ಭೂಮಿಯ ಅನನ್ಯ ಸಂದರ್ಶನ ದಾಕ್ಷಿಣಾತ್ಯ
ವಾರ್ಧಿಯವರೆಗೆ! ಎಲ್ಲಿ ಕಣ್ಣಿಡಲ್ ಅಲ್ಲಲ್ಲಿ
ಹಬ್ಬಿದ ನೆಲ ಜಲ ವನಗಳ ವಿಸ್ತಾರದಲಿ
ಪರಿದೃಶ್ಯಮಾನ ಸೌಂದರ್ಯದ ವಾರಾಶಿ!
ಪ್ರಕೃತಿ ಮಾತೆ ಎನಿತೊಂದು ಅಭಯ ಹಸ್ತೆಯೊ
ಈ ಪ್ರಾಂತ್ಯದಲಿ? ಪುಣ್ಯವಂತರ ಪರಮ ನಾಡು!

ಆದೊಡೇಂ ಪುಣ್ಯ ಭೂಮಿಯಲಿ ಕಡು ದಾರಿದ್ರ್ಯ
ದೇವತೆಯು ಅಕಾಂಡತಾಂಡವ ನೃತ್ಯಗೈದಿಹಳ್
ನಿಚ್ಚ. ಅಣಬೆಗಳವೊಲ್ ಮೈಯೊಡೆದ ಗುಡಿಸಲಲಿ
ಬರ್ದುಕುವ ಜನವಾರ್ಧಿಯಂ ಕಂಡು ಕಾಣುತಿರೆ
ಕರುಳ್ಗುಡಿ ವೀತರಾಗದಿಂ ಮಿಡಿವುದು ಕಾರುಣ್ಯ
ದ್ರವ್ಯಮಂ ದ್ರವೀಭೂತಗೊಳಿಸುವ ಮಾಳ್ಕೆಯಲಿ.
ರೈಲಿನ ಗುಜುಗುಜು ಪಯಣ ಸಾಗಿದುದು ಮಾನಸ
ಲೋಕಕೆ ಸುಖದುಃಖಗಳ ಪರಮಾನ್ನವನುಣಿಸಿ.
‘‘ಪುಣ್ಯಭೂಮಿ ಭಾರತದಲಿ ಎಂದಿಗೆ ಬಂಗಾರ
ಬೆಳೆವ ಕಾಲ ಬಂದಪುದೋ, ಎಂದಿಗೆ ಭಾರತ
ಜನನಿ ಬಂಧನದಿಂ ಬಿಡುಗಡೆಯಾದಪಳೋ,
ಇನ್ನೆಂದಿಗೆ ಭಾರತ ಸಂಮೃದ್ಧ ರಾಷ್ಟ್ರಗಳ
ಸಾಲಿನಲಿ ಆನಂದದಿ ವಿಜೃಂಭಿಪಳೋ,
ಎಂಬ ಚಿಂತನಮಂಥನಂ ನಡೆದಿತ್ತು ಮನದಿ.
ಉಗಿಬಂಡಿಯ ಪಯಣ ಮುಗಿಯೆ, ಮುಂದೆ ಸಾಗರ
ಯಾನ ಕಾರವಾರ ನಗರಿಗೆ, ಸೂಕ್ತ ಸಮಯದಿ
ಮಾರ್ಗಯೋಗಂ ಬದಲಾದುದು ಉದ್ಯುಕ್ತಮಾಗಿ.
‘‘ಅಃ, ಯೋಚಿಸುತಿರೆ ಭಾರತ ಭೂಮಿ ಯಾವೊಂದು
ರಾಷ್ಟ್ರದ ಪರಿಮಾಣಕೆ ಮೇಣ್ ಪ್ರಕೃತಿದತ್ತ
ಸಕಲ ಸೌಭಾಗ್ಯಗಳಿಗೆ ಹೋಲಿಸಿದೊಡೆ ಕಿರಿದೆನೆ
ಬಾರದೆನ್ನ ಬಾಯಿ. ಇದನೇನೆಂದರ್ಥೈಸಲಿ?’’
ಎನುತೆ ಪಾಡಿದರ್ ‘‘ದೇವ! ಇದೇನ್ ವಿಶೇಷಂ
ತವ ಉಡಿಯಲಿ? ಮಾನವ ಜನುಮದಲಿ ಒಗೆದು ನೀ
ಜಾನವ ಜಡಿಕುಟ್ಟಿ ಅವಜ್ಞೆಯ ನರಕದಲದ್ದಿಹೆ.
ಜೀವನದ ನೋವು ನೀನಲ್ಲದಾರ್ ಆಳಿಪರ್?
ನೀಂ ಗುರುವಾಗಿ. ಆಪದ್ಬಾಂಧವನಾಗದೆ
ಈ ಜನೋದ್ಧಾರಮೆಂದಿಗು ಕನಸಿನ ಹೆಗ್ಗಂಟು!
ಕರುಣೆಯಿಂ ದಯೆಗೈದು ಕಾಪಾಡೈ ಸಿರಿದೊರೆಯೆ!’’

ಭಕ್ತಿಯೊರತೆ ಪರಿದುದು ಕೊರಳ್ತುಂಬಿ ಮನತುಂಬಿ
ಭಾವಾನುಭಾವದ ಧ್ಯಾನ ವಿಲಯ ವಿಪ್ಲವದಲಿ.
ಸಾಗರೀ ಯಾನದ ಸುಶಾಂತ ಪ್ರಶಾಂತ ಕ್ಷಣ
ಕ್ಷಣಗಳ್ ಹೃದಯತಂತುಗಳಂ ಮೀಂಟುತಿರ್ದುವು
ಮಿಣ್ಣನೆ. ನೆರೆಯೋಚಿಸದೆಯೆ ಗೀತ ರಸಧಾರೆ
ಹರಿಯುತಿರ್ದುದು ತಾನೆತಾನ್ನೈಸಿ ಜಳಜಳಿಸುತ.

"In every vein of my body, night and day,
The stream of life surges, ever surges.
The same breath of life is out to conquer the universe.
Flowing with a marvellous rhythm.
Dancing beating time swaying.
It enters every grain of dust on this earth,
It rejoices through a million blades of grass,
And expands through leaves and flowers.
In the vast ocean of life and death
The same current rises and falls in tide and ebb.
I feel that every limb of my body
Has been made glorious by the touch of this life-force.
This stream. throbbing in the vast universe age after age.
Dances in every drop of my blood."

ಮೈಯ್ಯ ನರ ನಾಡಿಗಳಲಿ ಪರಿದುದು ಕೆನ್ನೆತ್ತರ್
ಬಿಸಿಗೊಳ್ವ ಮಾಳ್ಕೆಯಲಿ. ಕವಿವರ್ಯ ಭಾವನಾ
ಲೋಕದಲಿ ಮುಳುಗಿರೆ ಗಗನಭಿತ್ತಿಯಲಿ ಕರಿಯ
ಚುಕ್ಕಿಯೊಲ್ ಪಾರಾಡುತಿರ್ದ ಕಾಮಳ್ಳಿಗಳ
ದಂಡು ಚುಕ್ಕಿ ಚುಕ್ಕಿಯೆನೆ ಬಿಳ್ದುದು ಕಣ್ದಿಟ್ಟಿಗೆ.
ಬೆಳ್ಳನೆ ಬೆಳರ್ತ ಬೆಳ್ಮೋಡಗಳ ಮಾಲೆಯನು
ಮುಟ್ಟುವುವೊ ಎನೆ ಸರಾಗ ಸರಿಸದಲಿ ಲೀಲಾ
ಖೇಲನವ ಮೀರಿ ಹಾರುತಿಹ ಕಾಮಳ್ಳಿಗಳ್!
ನೋಡುತಿರೆ ಪಾಡಿತು ಎದೆಯಹಕ್ಕಿ ಕಾಮಳ್ಳಿ,
"ನಮ್ಮೀ ಭುವಿ ಸಾಮಾನ್ಯಮೇ? ಯುರೋಪಿನಾ
ಹಲಕೆಲವು ಪ್ರಾಂತ್ಯಗಳ್ ಒಗ್ಗೂಡಿದೊಡಂ ಈ

ಭುವಿಯ ಸಮಕೆ ಬಾರದೆನೆ ಏಂ ದುರದೃಷ್ಟಮೋ
ಪಾರತಂತ್ರ್ಯವೂಡಿದ ದರಿದ್ರಗತಿಯ ಪರಿವೇಶಂ!
ಸಿರಿವಂತರ್-ಮತಿಮಾನ್ಯರ್ ಕಡು ಸ್ವಾರ್ಥಿಗಳಿರೆ
ರಾಷ್ಟ್ರೀಯ ಸ್ಥಿತಿಗತಿಗೆ ಮರುಗುವರಾರಯ್ಯ
ಹೇ, ಪರಾತ್ಪರನೇ!'' ಮನಂ ಮರುಗಿ ನಿಟ್ಟುಸಿರ್
ಪೊಣ್ಮಿತು. ಜಹಜು ಮಹಾ ಸಾಗರದಲಿ ಒಯ್ಯನೆ
ಅತ್ತಿತ್ತ ತುಯ್ಯಲಾಡುತ ಸಾಗಿತು ತೀರಕೆ.
ಸುಖಪಯಣದಿಂ ತನುಮನ ಪ್ರಾಣಗಳುರ್ಬಿ ನಲಿ
ನಲಿಯುತ ಮುದಗೊಳ್ಳುತಿರೆ ದೂರದಿ ಕಂಗೊಳಿಸಿತು
ಕಾರವಾರದ ಸುಸುಂದರ ಸುರಮ್ಯ ಕಡಲತೀರ!
ಆಗಳ್ತೆ ಪತ್ರಸಾರದಿಂ ಕವಿಯಾಗಮನದ
ಸುದ್ದಿ ಕಿವಿಮುಟ್ಟಿ ಕಾದಿರ್ದಳ್ ಪ್ರಿಯ ಅತ್ತಿಗೆ
ಕಾದಂಬರೀ ದೇವಿ! ಬಂಗಾಳ ಭೂಮಿಯಂ
ಬಿಟ್ಟಬಳಿಕಲೈತರ್ಪ ಪ್ರಥಮ ಅತಿಥಿಯಾದ
ಮೈದುನನಂ ಆನಂದ ಮೋದದಿಂ ಸ್ವಾಗತಿಸಿ
ಆತಿಥ್ಯಮಿತ್ತಳ್ ಅನನ್ಯ ಪ್ರೀತಿ ಸ್ನೇಹಗಳ
ಕ್ರೋಢೀಕರಿಸಿ.
ಕಾರವಾರ ಪ್ರಕೃತಿ ದೇವಿಯ
ಸೌಂದರ್ಯದ ನೆಲೆವೀಡಾಗಿದೆ ಕವಿ ಚಿಂತನಾ
ವೇಶಂ ಗರಿಗೂಡುತೆ ವಿಶ್ವಾತ್ಮಕಮಾದುದು
ಆತ್ಮಪ್ರಜ್ಞೆಯಂ ಅರಳಿಸುವವೊಲ್. ದಿನನಿತ್ಯ
ಅಣ್ಣ ಅತ್ತಿಗೆಯರೊಡಗೂಡಿ ಕಡಲ ತೀರದಿ
ಅಡ್ಡಾಡಿ ಕಡಲ್ಗಾಳಿಯಂ ಪೀರ್ದು ತಣ್ಪಂ
ಮೈದುಂಬುವರ್ ತನಿಯುಂಡು. ಪ್ರಕೃತಿಯ ಸಕಲ
ಸಂಪದಮಂ ಮೇಣ್ ಸೌಂದರ್ಯಮಂ ವೀಕ್ಷಿಸುತ
ಧ್ಯಾನಲೀನವಾಗುವರ್ ಏಕಾಗ್ರ ಚಿಂತನ
ಮಂಥನಗಳಲಿ ಮುಳುಗಿ. ಸ್ವರ್ಗೋಪಮಮಾದಾ
ರಾಷ್ಟ್ರಮಿರ್ದು ದಾರಿದ್ರ್ಯ ಜೀವನವ ನೆರೆಹಳಿದು,
ಪರ್ಯಾಲೋಚನೆಗಿಂಬುಗೊಡುವರ್ ದಿನದಿನಂ.

ಮತ್ತಾಗಳ್ ದಾಕ್ಷಿಣಾತ್ಯ ಕೆಲ ಪ್ರಾಂತ್ಯಗಳಲಿ
ಪ್ರವಾಸಂ ಕೈಕೊಂಡರ್ ರಾಷ್ಟ್ರೀಯ ಸ್ಥಿತಿಗತಿ
ಅರಿಯಲ್, ಗಿರಿ-ವನ-ನದಿ ಪೊಳಲ್‌ಗಳ ದರ್ಶನಂ
ಅಂತರಂಗಕ್ಕೆತ್ತುದು ಭೂಸ್ವರ್ಗದ ಪರಿಯಲಿ,
ಮೇಣ್ ಸಿರಿತನ-ಬಡತನಗಳ್ ನಲ್ ಕೂಡಿರ್ದುದು
ಎಲ್ಲೆಡೆಗಳಲಿ ಪ್ರದರ್ಶನಕ್ಕಿತ್ತ ಚಿತ್ರದೊಲ್.
ಶ್ರಾವಣೋದಯದ ಕಾನನಗಳ್ ನಳನಳಿಸಿರಲ್
ವಿವಿಧ ಪುಷ್ಪಾಳಿ ವರ್ಣವರ್ಣಾಂತು ಚೈತನ್ಯ
ಮಯವಾಗಿ ಕಾಂಡಕಾಂಡಗಳಲಿ ಎಲೆಎಲೆಯಲಿ
ಮಿಡಿಮೊಗ್ಗಿನಲಿ ತುಂಬಿ ತುಳುಂಕುವ ನವಸ್ಫೂರ್ತಿ
ಮಾಧುರ್ಯಮಿರ್ದುದು ನಿರ್ಝರಣೆಯ ತೆರದಲಿ.
ಅಂದು, ಸುರಸುಂದರ ಉದಯಮಾನೋತ್ಸವಮಾಗಿ
ದಿನಚರಿಯ ಸಡಗರಂ ಸಂಭ್ರಮಿಪ ಸಮಯದೊಳ್,
ಯುವ ಪ್ರತಿಭೆ ಮಿಡುಕುವ ಪಾಂಗಿನಲಿ ಕೌತುಕಮಯ
ಸುದ್ದಿ ಧೀಮತಿ ಅರಳುವೊಲ್ ತಿಳಿದು ಬಂದತ್ತು.
ದೂರದೂರ ದಕ್ಷಿಣ ಆಫ್ರಿಕಾ ದೇಶದೊಳ್
ನೆಲೆಸಿರ್ದ ಗಾಂಧೀಜಿ ಸುಜನ ಬಂಧುಗಳೊಡಂ
ಪ್ರಭುತ್ವದ ವಿರುದ್ಧ ನಿಲ್ದು ಮಾನವ ಹಕ್ಕು
ಭಾದ್ಯತೆಗಳಿಂಗಾಗಿ ಹೋರುತಿರ್ದರ್ ಶಾಂತಿ
ಸೂತ್ರವ ಪಿಡಿದು! 'ಅಹಾ, ಏಂ ದಿಟ್ಟತನ!' ಎನಿಸೆ
ಆಗಳ್ತೆ ಗಾಂಧೀಜಿಗೆ ಶುಭವಂ ಕೋರಿ ನಲ್
ಪತ್ರೋಲೆ ಬರೆದರ್ ಸ್ವಹಸ್ತಾಕ್ಷರಗಳಿಂದೆ.
ಭಾರತೀಯ ದಿಟ್ಟಪುರುಷ ವಿದೇಶದಲಿ ನಿಜ
ಶಾಂತಿ ರಣಕಹಳೆಯಂ ಊದುವುದು ಸಾಮಾನ್ಯ
ಎನಲಕ್ಕುಮೆ? ಏಂ ಧೈರ್ಯ ಸಾಸಮೊ ತಾನಲ್ಲಿ
ಹೋರಾಟದ ರಣಕಣಕಿಳಿಯೆ? ಅಲ್ಲಿಯ ಪ್ರಜಾ
ಕೋಟಿ ಗಾಂಧೀಜಿಯ ಆಂತರ್ಯಮಂ ಅರಿತೊಡೆ
ಸಾಲ್ಗುಂ. ಜಗತ್ ಧೀಮತಿಯನರ್ಥೈಸದಿರ್ಪುದೆ

ಇಂದಿನ ಕಡು ಸಂಕಟ-ಸಂಕಷ್ಟಗಳಿಗೆ ದಾರಿ!
ಎಂಬೊಂದು ನಿರ್ಣಯದೊಳ್ ಮನದೆ ಶುಭಕೋರಿದರ್
ಮತ್ತೆ; ರಾಷ್ಟ್ರೀಯ ಭಾವೈಕ್ಯತೆಯ ನೇಮದಲಿ.
ಕಾರವಾರದ ಸುಂದರ ನೆಲೆವೀಡಿನಲಿ ನೆರೆ
ನಲ್ಮೆಯಿಂ ಬಲ್ಮೆಯಿಂ ಅತ್ತಿಗೆ ಕಾದಂಬರೀ
ದೇವಿಯುಂ ಶೋಧಷೋಪಚಾರಗಳೀಯುತಿರೆ
ಮುದವೆತ್ತು ಅನ್ನಮಯ ಪ್ರಾಣಮಯ ಆನಂದ
ಮಯ ಚೇತನಮಯಮಾದ ಹೃದಯ ದೇಗುಲದ
ಭಾವನದಿ ಉಕ್ಕುಕ್ಕಿ ಹರಿಯತೊಡಗಿದುದು ನಲ್
ಸಾಹಿತ್ಯಸೇವೆಯೊಳ್. ಭಾವನೆಗಳೋಳಿಯಲಿ
ಎಡೆವಿಡದೆ ನುಗ್ಗಿ ಬಂದ ವಿಚಾರ ಸಾಮಗ್ರಿ
ಸಾಹಿತ್ಯಮಾದತ್ತು. ಪ್ರಕೃತಿಯ ಉಡಿಯೊಳ್
ತೊಟ್ಟಿಲ ಶಿಶುವೆನೆ ಮಹದಾನಂದದಿಂ ಪಡೆದ
ಪರಿದೃಪ್ತಿ ಮಾನಸಿಕ ದೈಹಿಕಾರೋಗ್ಯಕ್ಕೆ
ತಾನಿತ್ತುದು ಸಾಂದರ್ಭಿಕ ಅಮೃತದ ಬಿತ್ತು.
ಕದ್ದಿಂಗಳಲಿ ಒಯ್ಯನೆ ಚಂದ್ರೋದಯಮಾಗಿ
ಬೆಳದಿಂಗಳ್ ತುಂಬಿ ಹರಡುವಂತೆ ಅಪೂರ್ವತರ
ಪ್ರಶಾಂತ ಶಾಂತಿಯ ಹರವು ಚಿಂತಿಸಿ ನೋಡಲ್.
ಅಲ್ಲಿ ಕೆಲಪದಂ ಕಳೆದ ಬಳಿಕಲಾ ಅತ್ತಿಗೆ
ಅಣ್ಣಂದಿರಿಂದೆ ಆತ್ಮೀಯ ಬೀಳ್ಕೊಡಿಗೆಯಂ
ಪಡೆದು ಪಯಣಂಬೋದರ್ ಬೋಲ್ಪುರಕೆ. ಮತ್ತಂ
ಮೊದಲಾದುದು ಮುನ್ನಿನ ಸಂಜೀವನ ಪ್ರವೃತ್ತಿ.
ಕಾರವಾರದ ಅನನ್ಯ ಅನುಪಮ ನೈಸರ್ಗಿಕ
ಸುಸುಂದರ ಸುರಲೋಕ ಸದೃಶ ಚಿತ್ತಾರಮಂ
ನೆನೆನೆನೆದು ಭಾವಿಸುತಿರೆಯಿರೆ ಸಾಹಿತ್ಯ ಝುರಿ
ಪ್ರಕೃತಿಯ ಆರಾಧನೆಯೊ ಎನಲ್ ಪೊದಳ್ದುದು
ಸುಜನ ಮನಮೋಹನೀಯ ವೈಖರಿಯಲಿ. ಮಾತೃ
ಭಾಷೆ ಬಂಗಾಳಿಯಲಿ ಮೇಣ್ ಆಂಗ್ಲಭಾಷೆಯಲಿ

ಕಾವ್ಯಕೃಷಿ ನಡೆದತ್ತು ನಿಚ್ಚ ಎಡೆವಿಡದೊಲ್.
ಗ್ರಾಮಜೀವನದ ಬಗೆಬಗೆಯ ಸಮಸ್ಯೆಯಂ
ನಿವಾರಿಸೆ ತಂತ್ರಜ್ಞಾನದ ನೆರವು ನೀಡಿದೊಡೆ
ಎಳೆಯರ ಮನೋಗತಿಗೆ ಪೊಸ ಬೆಳಕು ಬೀರುವುದು.
        ಮುಂಗಾರ್ ಮಳೆಯ ವಂಚನೆಯಿಂದೆ ದೇಶದಲಿ
ಬೇಸಗೆಯ ರಣಬಿಸಿಲ್ ಕಾವಿನಿಂ ತಹತಹಿಸಿ
ಗಾರ್ಸಿರೆ ಧೂಳೆತ್ತ ಭೂಮಿ; ವರುಣದೇವನ
ಕೃಪೆಗಾಗಿ ಘೀಳಿಡುವ ಜನಕೋಟಿಯ ಗೋಳು
ಮನಮುಟ್ಟಿ ದೈವಕೃಪೆ ದೋರ್ದವೊಲ್ ಅಂಬರದಲಿ
ನೀರೊಡಲ ಕಾರ್ಮುಗಿಲು ದಟ್ಟೈಸುತ ಮೆಲ್ಲನೆ
ನೆರೆದುವು ಕರ್ರನೆಯ ಕಾಳಮೇಘ ವೇಶದಲಿ.
ಅರುಣಾರುಣನ ಧೀರ ತೇಜಕೆ ಪಿರಿದೆರೆಯೊಡ್ಡಿ
ತಣ್ಪಿನ ತನಿಯಂ ಮೂಡಿಸುವವೊಲ್ ಓಲಾಡಿ
ತೇಲುತಿಹ ಕಾರ್ಮುಗಿಲ್‌ಗಳೋಳಿಯ ಕಣ್ತುಂಬ
ಕಂಡ ಸೋಗೆ ನವಿಲ್‌ಗಳ್ ಉನ್ಮದ ಮನಮತಿಯ
ತೋಷದಿಂ ಎರೆಂಕೆಗಳ ಬಿದಿರ್ಚಿ ಪಟಪಟಿಸಿ
ನೀಲ ಗರಿಗಣ್ಗಳ ಹರವುತ್ಸಾಹದಿ ಕುಣಿದು
ಕೇಗಿ ನಾಟ್ಯವಾಡಿದುವು ಶೃಂಗಾರಭಂಗಿಯಿಂ.
ವರ್ಷಾಗಮನ ಬಾರ್ತೆಯಂ ಸಾರಿ ಪೇಳುತಿಹ
ಮಾಳ್ಕೆಯಲಿ. ಮತ್ತೆ ಮತ್ತೆ ಮೇಣ್ಮತ್ತೆ ಕೇಗುತ
ನಲಿದಾಡಿದುವು ಹೆಣ್ಣು ಗಂಡುಗಳ್ ಒಗ್ಗೂಡಿ.
ಬೈಗಿನಲಿ ವರುಣ ಕೃಪೆದೋರಿ ಮಳೆ ಭೋರನೆ
ಸುರಿದುದು ಬಿರುಗಾಳಿ ಗುಡುಗು ಮಿಂಚುಗಳ ಮಹಾ
ಸಂಗದಲಿ. ಸುಡುಬಿಸಿಲ ಬೇಗೆಯೊಳ್ ಬೇಯುತ
ಸುಟ್ಟು ಕಟ್ಟುರಿಯಾದ ಸಸ್ಯಕೋಟಿ ತಣ್ಣಗೆ
ತನಿಯುಂಡು ಬೆದೆಗೊಂಡುದೊ ಎನೆ ಹಸಿರು ಮೊಳೆಯಿತು
ಅಲ್ಲಲ್ಲಿ. ಮುಂಗಾರ್ ಮಳೆ ದಿನದಿನಂ ಸುರಿಯೆ.
ಉತ್ತು ಬಿತ್ತ ಮುಂದಾದರ್ ರೈತ ಬಂಧುಗಳ್
ಹರುಷದ ಗಣೆಗಳಾಗಿ.

ರವೀಂದ್ರನಾಥ ಠಾಕೂರ್-೧೧೫

ಮತ್ತಾಗಳಾ ಸಮಯೆ
ಒಂದೆರಡು ಮಾಸಗಳ ಬಿಡುವು ದೊರೆತ ಸೋದರ
ಅತ್ತಿಗೆಯೊಡಂ ಪಿಂತಿರುಗಿ ಬಂದನ್ ಬೋಲ್ಪುರಕೆ.
ಆಗಳೇಂ ಸಂತಸದ ಮಧುರ ಹೊನಲು ಹರಿದುದು
ಧುಮುಧುಮಿಸಿ. ಎಲ್ಲೋ ಪರಿತ್ಯಕ್ತ ಸಂಭ್ರಮ ಝರಿ
ಓಡಿ ಬಂದವೊಲ್ ಆನಂದಮೋದಂ ಗೃಹ
ಶರೀರದ ಸಕಲ ನಾಡಿನಾಡಿಗಳನು ತುಂಬಿ.

''ಸಕಾಲದ ಮಳೆಯಿಂದೆ ಸಗ್ಗವೇ ಧರೆಗಿಳಿದು
ಬಂದವೊಲಾಯ್ತು'' ಎಂದಳತ್ತಿಗೆ ಹರುಷದಿಂ,
ಸಿತಸ್ಮಿತಸೂಸಿ ''ಆರೇಳು ದಿನ ಎಡೆವಿಡದೆ
ಸುರಿದುಪಕರಿಸಿರೆ ಸುಡುವಿಸಿಲ ರಣಕೂರ್ಮೆಯೊಳ್
ಬೆಂದರ್ಗೆ ತಣ್ಪೆನೆಲೆಯಾಯ್ತೀ ಧರಾತಲ!''

ಮೈದುನನ ಮಾತಿಂಗೆ ಮರುನುಡಿದಳ್ ಅತ್ತಿಗೆ
ಕಾದಂಬರೀದೇವಿ, ''ಅಹುದಹುದು; ರವೀಂದ್ರ!
ಇಹದೊಳೆಲ್ಲವುಂ ಒಪ್ಪಮಿರೆ ಜೀವನ ಸುಖಂ.
ಅಲ್ಲದೊಡೆ ಈ ಸುರಮ್ಯ ಸೋನಾರ್ ಭೂಮಿಯೆ
ನರಕವಪ್ಪುದು ನಿಜದೊಳ್!''

''ಅಹುದು, ದಿಟ. ಅತ್ತಿಗೆ!''
ಎಂದರಾ ವರಕವಿ ಮೊಗದೊಳ್ ಎಳೆನಗೆ ಸೂಸಿ.
ಆಗಳಾ ನಭೋಮಂಡಲದ ನೀಲ ಪಟಲದ
ಮೇಲೆ ಮೂಡಿತ್ತೊಂದು ಮುಗಿಲ್ ಮಂಜಿನ ಅನನ್ಯ
ನಾಟ್ಯಭಂಗಿಯ ಸುಂದರ ನಾರಿಶ್ರೀ ಎನಲ್ಕೆ
ಇಂದ್ರನೊಡ್ಡೋಲಗದ ಊರ್ವಸಿಯೆ ನೆಲೆದಪ್ಪಿ
ಬಂದು ನಿಂದವೊಲ್ ಕಾಂಬ ಅಪೂರ್ವ ಚಿತ್ರಣವ
ಕಣ್ಣಿಟ್ಟು ನೋಡಿಯೇ ನೋಡಿದರ್ ರವೀಂದ್ರ.
ಆಗಳ್ತೆ ಮನತುಂಬಿ ಆಶುಕವಿತೆಯೊಂದು
ಉದಿಸಿತು ಜಲಧಾರೆಯೊಲ್ ಇಂಗ್ಲಿಷ್ ಭಾಷೆಯಲಿ.

O Urvashi, dweller of the heavenly garden,
You are the perfect feminine form-
You are not mother, daughter or bride.
When evening discends upon the world,
Covering its weary limbs with a mantle of gold,
You light on lamps on homely doorsteps.
In the silence of midnight you do not move
Towards the decorated bedchamber-
Coyly smiling, with hesitant steps,
Lowered eyes and having bosom-
To taste the joys of sated love.
You are revealed like the coming of dawn,
O Urvashi, wholly unperturbed.

When did you bloom, O Urvashi,
Like a flower without a stem?
In the primal spring of creation
You arose from the foaming ocean,
With a flask of nectar in the right hand,
A jar of poison in the left.
The nighty ocean fill at your feet
Like a thousand-hooded serpent
Tamed by the charmer's mantra.
Jasmine-white, Yourn aked beauty
Received the worship of the gods,
O Urvashi, flawless Urvashi.

ಮೃತ್ಯು ಜರೆ ದುಃಖ ಆನಂದಮಂ ಗಣಿಸದೊಲ್
ನಾಟ್ಯಸಾಮ್ರಾಜ್ಞಿಯೈಸಿ ಮೆರೆದಿರ್ದ ಶ್ರೀವನಿತೆ.
ಓ, ಸುಂದರಿಯೆ! ಆವ ಚೋದನೆಯೊ ನೀನಿಂತು
ನಂದನವನದಿಂ ಜಾರಿದೊಲ್ ಜುಗುಳ್ದು ಬರಲ್ಕೆ?
ಚಿರ ಯೌವ್ವನೋಲ್ಲಾಸ ನಿಧಿ ನೀನಹುದಲ್ತೇ
ಈ ಜಗದಿ? ಕಾಲ ಪ್ರವಾಹದಲಿ ನೀನೆಂತು
ಕೊಚ್ಚಿ ಹೋಗದುಳಿದಿಹೆ ಹೇ, ದೇವಿ? ಊರ್ವಶಿ!''
ಹಾಡಿ ಪಾಡಿತು ಕವಿ ಹೃದಯ ತನ್ನ ತಾ ಮರೆತು.

ರವೀಂದ್ರನಾಥ ಠಾಕೂರ್-೧೧೭

ಉರಿವ ವಿಸಿಲ್ ಮಧುರತರಮಾಗೆಸೆದತ್ತು ನಿಶೆ
ಪೂರ್ಣಿಮಾ ಜ್ಯೋತ್ಸ್ನಾ ಸುಧಾಮೃತ ಹರಿಸಿದವೊಲ್!
ಕಣ್ಮುಗಿದು ಧ್ಯಾನಲೀನನಾಗುತೆ ಪಾಡಿದರ್
ಕವಿ "ಪ್ರಭುವೆ! ಎನ್ನಯ ಕನಸುಮನಸುಗಳಲಿ
ನಿನ್ನ ಧ್ಯಾನದ ಸಿರಿಯು ಹೆಪ್ಪುಗಟ್ಟಿರೆ ಅಮಿತ
ಆನಂದ ಗದ್ಗದಮಯ ವಿಪ್ಲವ ವಿಲಯದಲಿ
ಪೊದಳ್ದಿಹ ಸಾಹಿತ್ಯವೆನ್ನ ಮೇಣ್ ಅಚಿಂತ್ಯ
ಭಾವನೆಗಳೆನ್ನ ನಿನ್ನಯ ಪದತಲಕರ್ಪಿತಂ.
ಅವಧರಿಸು ನೀನಿದಂ ಸಿರಿದೊರೆಯೆ! ನಿನ್ನ ಉರಿ
ಗಣ್ಣಿನಿಂ ದಹಿಸೆನ್ನ. ಸಾಮಾನ್ಯ ಮತಿಗತಿಯುಂ
ಸುಟ್ಟುರಿದು ಹೋಹದೆ ಉದ್ಧರೋದ್ಧರಣಮಿಲ್ಲಂ.
ಪ್ರಾಂಜಲಿಯೊಡ್ಡಿ ಬೇಡುವೆನ್ನೈ ನಿನ್ನೊಳಲ್ಲದೆ
ಮತ್ತಾರಂ ಬೇಡುವೆ ಪ್ರಾಣೇಶ ಪ್ರಭುವೇ!"
ಭಕ್ತಿ ಜ್ಞಾನವಿಲ್ಲದ ಯುವ ಮನೀಷಿ ಗುರಿಯಂ
ಮುಟ್ಟುವನೇನ್ನೈ ಜೀವನೀಮಾರ್ಗಯೋಗದಲಿ?
ನಿನ್ನ ಪಾದಪದ್ಮಗಳ ನಿಷ್ಠೆಯೆ ಗುರಿಯೆನದೆ
ಬೇರುಂಟೆ ಕರುಣಿಸೆನ್ನ ಮಹಾ ಸಿರಿ ಪ್ರಭುವೇ!
        ಆ ಬಳಿಕ ಪಾಂಡಿತ್ಯ ದಿನದಿನಂ ವರ್ಜಿಸಿತು
ಜಲದಬುಗ್ಗೆಯೊಲ್! ಪರಮ ಪಿತನಗಲಿಕೆಯಿಂದೆ
ನೊಂದು ನಲುಗಿ ಪುನಶ್ಚೇತನಗೊಳ್ಳುವನಿತರೊಳ್
ಮತ್ತೊಂದು ಘೋರ ಆಘಾತ ಬಡಿದುದಾ ವರ
ಕವಿಗೆ. ನಲ್ಮೆಯ ಮಡದಿ ಮೃಣಾಲಿನಿ ದುರ್ವಿಧಿಯ
ಕ್ರೂರ ಮೃತ್ಯುಪಾಶಕೆ ಸಿಲ್ಕಿ ಪತಿಯಂ ಬಿಟ್ಟು
ಪೊರವಂಟಳ್ ಸಗ್ಗದರಮನೆಯ ಸಿರಿಸೊಬಗಿಗೆ
ಮೈಮರೆತು. ಒಂದರ ಮೇಲೊಂದು ಬಂದೊವಿದ
ದುಃಖಸಂಕಟದಿಂ ಮನಂ ನೊಂದು ನೀರಾಗಿ
ಸೋಲ್ದು-ಗೆಲ್ದು ಜೀವನದ ಕ್ಷಣ ಬಂಗುರತೆಯಂ
ಅನುಭವಿಸಿ ಕಹಿ-ಸಿಹಿಗಳ ರಸಮುಂಡು ಮಾನಸ

ದೀಪ್ತಿಯಂ ಬೆಳಗಿ ತೊಳಗಿ ಕಾರ್ಯೋನ್ಮುಖನಾದರ್
ಎಂದಿನೊಲ್.
ಆಗಳ್ ರಾಜಕೀಯ ಬಿರುಗಾಳಿ
ಭೀಮಿಸುತಿರಲ್ ಭೀಮವೇಗದಿಂ; ಉದ್ರೇಕಿತ
ಜನ ಜಂಗುಳಿಯ ಗಜಬಜಂ ಜಡಿ ಕುಟ್ಟಿ ರೋಷಾ
ವೇಷದಿಂ ಆಂಗ್ಲೇಯರ ಢಂಕಾರದ ಘೋರ
ಶಬ್ದದಿಂ ಮನಃಚಿತ್ತಂ ಮಿಡಿಸಿ ಒರೆಗಲ್ಲ
ಪೆರ್ಬಂಡೆಗೊತ್ತಿ ತೀಡುತಿರ್ದುದು ಅರೆದರೆದು.
ರಾಷ್ಟ್ರೀಯ ನಾಯಕರ್ ಕಾರ್ಯಾರ್ಥ ಬರಲ್ ವಂಗ
ಭೂಮಿಗೆ ಕವಿಋಷಿಯ ಸಂದರ್ಶನಮಿಲ್ಲದೆಯೆ
ಪಿಂಮರಳರ್. ಯಾವತ್ಕಾಲಂ ನಡೆಯುತಿರ್ದ
ಕಾಂಗ್ರೆಸ್ ಮಹಾ ಸಂಸ್ಥೆಯ ಕಾರ್ಯಕ್ರಮಗಳಲಿ
ಪಾಲ್ಗೊಳ್ಳುತ ವಿಚಾರ ವಿಮರ್ಶೆಯಲಿ ಒಮ್ಮತ
ಮೂಡದಿರೆ ರಾಜಕೀಯ ವಿಷ ಚಕ್ರಕೆ ಸಿಲುಕಿ
ತೊಳಲಾಡಲು ಮನವೊಪ್ಪದೆ ಪಿಂದುಳಿದರ್ ಕವಿ.
ರಾಜಕೀಯ ರಂಗದ ಕಲುಷಿತ ಪರಿಸ್ಥಿತಿಯು
ಮನಕೆ ಮುಳ್ಳು ಮುರಿಯೆ ಬಲು ಬೇಸರ ಬೆಸನಗಳ
ಒತ್ತಡಕೆ ಮಣಿದು ಆ ಕ್ಷೇತ್ರದಿ ದೂರ್ಸೈದಿರೆ
ಲೇಖನ-ಸಲಹೆಗಳಿಂದಾದತ್ತು ನಿಜಸೇವೆ
ಭಾರತ ಜನನಿಯ ಪದ ಸನ್ನಿಧಿಗೆ. ಉತ್ಸಾಹ
ಭಕ್ತಿ ಪ್ರೇಮಗಳ ಸಂಭ್ರಮದಿಂ ಮುನ್ನುಗ್ಗಿ
ಗೆಯ್ಯಲೆಂದಿರ್ದ ಆಸೆಯುಂ ಈ ರೀತಿಯಲಿ
ತೀರ್ಚುವಾ ಸಂದರ್ಭ ಒದವಿತು ಗುರುದೇವಂಗೆ.
ಚಿತ್ತ ಶಾಂತಿಗೆ ಮೇಣ್ ಮನಶ್ಶಾಂತಿಗೆ ಸುಭದ್ರ
ಬುನಾದಿಯನಿಟ್ಟಿತು ಕವಿ ಕಾವ್ಯ ವಿಹಾರಂ.
ಪಶ್ಚಿಮ ದಿಶಾಭಿತ್ತಿ ದಿನಾಂತ ಕಾಲೀನ
ಕನಕರಾಗದಿಂ ವಿಜೃಂಭಿಸುತಲಿರ್ದತ್ತು
ತ್ರಿಲೋಕಕೆ ರಂಗೆರೆಚುವವೊಲ್! ಸಪ್ತಾಶ್ವಗಳ

ರಥವೇರಿ ಉಜ್ವಲಿಸಿದಂ ಸಾಯಂ ಶಿರೋಮಣಿ
ಆಸ್ತಮಾನ ಶೋಭಾ ಶೈಲಿಯಲಿ, ದಿನಾಂಕ
ಸಂಲಗ್ನಕೊಲಿದು. ತಮ್ಮ ಭವನದ ಜಗಲಿಯಲಿ
ನಿಂದು ಆ ಪರಿದೃಶ್ಯಮಾನ ಸೌಂದರ್ಯಮಂ
ಪೀರುವೊಲ್ ರಾಗಾರುಣ ತಾನದಲಿ ಮುಳುಗಿದ
ಗುರುದೇವ ಕವಿಯಾಗಿ, ಕಲಾರಾಧಕನಾಗಿ,
ಭಕ್ತನಾಗಿ ಸೌಂದರ್ಯರಸ ಪಾನದಲಿ ಮೈ
ಮರೆತರ್ ಕಂಗಳ್ ಮುಗಿದು. ಮಾನಸ ಭಿತ್ತಿಯಲಿ
ರಾಷ್ಟ್ರ ಸ್ವಾತಂತ್ರ್ಯ ಚಳವಳಿ ಚಿತ್ರ ಸುಳಿದತ್ತು.
ಕವೀಂದ್ರರಾಗಳ್ ತನ್ನೊಳ್ ಯೋಚಿಸಿದರಿಂತು
'ರಾಷ್ಟ್ರ ಪ್ರಜ್ಞೆಯಂ ಅಜ್ಞರಲಿ ಬಡಿದೇಳಿಪುದೆ
ರಾಷ್ಟ್ರ ನಾಯಕರಿಂದು ಕೈಕೊಳ್ವ ಕಾಯಕಂ.
ಎಲ್ಲರೊಗ್ಗಿನಿಂ ದುಡಿಯದೆ ರಾಷ್ಟ್ರಧ ಬಂಧನ
ನೀಗುವುದಸಾಧ್ಯಮೆನೆ ಎನಿತೆನಿತೊ ಮಂದಿ ಈ
ಸ್ವಾತಂತ್ರ್ಯ ಜ್ವಾಲಾವಹ್ನಿಯಲಿ ಸುಟ್ಟು ಬೇಯುತ
ನೆತ್ತರೋಕುಳಿ ಚೆಲ್ಲದೆ ವಿಧಿಯಿಲ್ಲ. ದೇವರೆ
ರಕ್ಷಿಸವೇಳ್ಕುಂ!'
ಆ ಬಳಿಕಲಾ ಗುರುದೇವಂ
ಲೇಖನ ಕೃಷಿಯೊಳ್ ರಾಷ್ಟ್ರಪ್ರಜ್ಞೆಯನಜ್ಞರಲಿ
ಅರಳಿಸುವ ಲೇಖಗಳ್ ಕೋದು ಸಂಗೀತೆಯಂ
ಪಾಡಿದರ್ ವಂಗಭೂಮಿ ಪುಳಕಿತಮಪ್ಪವೊಲ್!
ರಾಷ್ಟ್ರೀಯ ಹೃತ್ ದೇಗುಲದ ದ್ವಾರಮಂ ಜಡಿ
ತಟ್ಟಲೆನೆ ಸಮಗ್ರ ರಾಷ್ಟ್ರಮಂ ಕುರಿತು ಬಣ್ಣಿಸಿ
ಸಂಗೀತೆಯಂ ಕೋದು ಪ್ರಜೆಗಳ ಕೈಗಿತ್ತರ್
'ಜನಗಣಮನ ಅಧಿನಾಯಕ ಜಯಹೇ ಭಾರತ ಭಾಗ್ಯ
ವಿಧಾತಾ ಜಯ ಜಯ ಜಯ ಜಯ ಜಯ ಹೇ!'
ಆಗಳೇಂ ಪ್ರಜಾಕೋಟಿಯ ಸಂಭ್ರಮ ವಿಶೇಷಂ!
ಆವೊಂದು ಸಭೆಗಳಾದಿಯಲಿ ರಾಷ್ಟ್ರಗೀತೆಯ

ಪ್ರಖ್ಯಾತಿ! ಭಕ್ತಿ ರಸ ಭಾವನೆಯ ಪ್ರಖ್ಯಾತಿ!
ಭಾರತ ಜನನಿಯ ಶ್ರೀಹೃದಯಂ ತುಂಬುವನ್ನ.
ಆಂಗ್ಲೇಯರೊಡಲ್ ಕಿಚ್ಚಿನಿಂ ನೆರೆ ಕುದಿವನ್ನ.
ಅಃ! ಗ್ರಾಮ್ಯ ಜೀವನಂ ಬೆಳಗಿಸಲೆನೆ ತಪೋವನ
ಶಾಲೆಯುಂ ಅತ್ತಿತ್ತ ಹರೆಗೈಗಳಂ ಚಾಚಿ
ನಿಂದತ್ತು ಪ್ರೌಢಶಿಕ್ಷಣದಾಗರ ತಾನಾಗಿ.
ವಿವಿಧ ಭಾಷಾಜ್ಞಾನ ವಿಜ್ಞಾನ ತಾಂತ್ರಿಕ
ಜ್ಞಾನ ಕರಕುಶಲಕಲೆ ಮುಂತಪ್ಪ ಬಗೆವಗೆಯ
ವಿದ್ಯೆಗಳ್ ಮೊಳೆತು ರಾಷ್ಟ್ರದ ಗಮನಮಂ ಸೂಜಿ
ಗಲ್ಲಿನೊಲ್ ಸೆಳೆದು ಪೆಸರಾಂತುದು ನಿಜ ಪರಿಮಳ
ಪ್ರಸರಿಸಿ. ಆಂಗ್ಲೇಯ ಸಂಸ್ಕಾರದ ವಿರುದ್ಧ
ಮತ್ತವರ ಶಿಕ್ಷಣದ ವಿರುದ್ಧ ಹೆಡೆಯೆತ್ತಿದ್ದ
ತಪೋವನ ಶಾಲೆಯುಂ ಮುಂಬೆಳೆಯೆ ಬಗೆವಗೆಯ
ಪ್ರೌಢ ಶಿಕ್ಷಣಕೆನೆ 'ಶಾಂತಿ ನಿಕೇತನಂ' ಮೈದಾಳ್ದು
ಸುಖಾಶ್ರಯಮಿತ್ತುದು ಅಮಿತ ಜ್ಞಾನಾರ್ಥಿಗಳಿಗೆ.
ದೇಶೀಯ ಪಂಡಿತೋತ್ತಮರಿಂ ವಿದ್ವಜ್ಜನರಿಂ
ಜ್ಞಾನಿಗಳಿಂ ಪ್ರಶಂಸೆಯ ಒಳ್ನುಡಿಗಳ್ ಉಕ್ಕಿ
ಹರಿದು ಅನುಪಮ ಸಂಭ್ರಮದಿಂ ಪರಕೆನಿಂದುದು;
ಭಾರತೀಯರ ಮೇಲೆ ಚೆಂಬೆಳಕು ಬೀಳಿಸುವ
ಪರಿಯಲಿ ತೊಳಗಿ ಬೆಳಗಿ ಕತ್ತುರಿಯ ಕಂಪಿನೊಲ್
ಆಕರ್ಷಿಸಿತು ಮನಮತಿಗಳಂ ಶಾಂತಿರಸ ಸೂಸಿ.
ಗ್ರಾಮೀಣ ಪ್ರದೇಶದ ತಣ್ಣನೆಯ ತಂಪಿನ
ವಾತಾವರಣದಲಿ ಪೊದಳ್ದ ಸಕಲ ವಿದ್ಯೆಗಳ
ಸಮುದಾಯ ಮನಮಂ ಸಂಮುದಿತಗೊಳಿಸುವವೊಲ್;
ಜ್ಞಾನವಂ ಪ್ರಜ್ಞಾನಗೊಳಿಸುವವೊಲ್; ಧೀಮತಿಯಂ
ಪ್ರದೀಪ್ತಗೊಳಿಸುವೊಲ್; ಜನಮನದ ಕತ್ತಲೆಯಂ
ಪೋಗಾಡೆ ಸರ್ವತೋಮುಖೀ ಪ್ರಗತಿಗಾಮಿ
ಶಾಂತಿನಿಕೇತನ ಸರುವರಿಗೂ ಶಾಂತಿ ನಿಕೇತವೆ!

ರವೀಂದ್ರನಾಥ ಠಾಕೂರ್-೧೨೧

ರಾಷ್ಟ್ರದಾದ್ಯಂತ ಸ್ವಾತಂತ್ರ್ಯದಾ ಆಂದೋಳನ
ದಳ್ಳುರಿಯೊಲ್ ಧಗಧಗಿಸಿದತ್ತು ಎಣೆಯಿಲ್ಲದ
ಪಾಂಗಿನಿಂ. ಜನ ನಾಯಕರಂ ಸೆರೆವಿಡಿದು ಜಡಿ
ಕುಟ್ಟಿ ತಳ್ಳಿತು ಸೆರೆಮನೆಗೆ ಆಂಗ್ಲ ಸರಕಾರ
ದನ ಆಡುಗಳಂ ಧೊಡ್ಡಿಗಟ್ಟುವ ಮಾಳ್ಕೆಯಲಿ.
ಯರವಾಡ ಜೇಲಿನಲಿ ಬಂದಿಯಾದ ಮಹಾತ್ಮ
ಗಾಂಧೀಜಿಯಂ ಭೇಟಿಗೈವ ಮಹದಿಚ್ಛೆಯಿಂ
ಪರವಾನಗಿಯಂ ಪಡೆಯೆ ವ್ಯವಹರಿಸಿದರ್ ಕವಿ
ಆಂಗ್ಲ ಪ್ರಭುತ್ವದಲಿ. ರೋಷದುರಿಯಿಂ ಸುಟ್ಟ
ಎರ್ದೆಯಲಿ ಸುಲಭದೊಳ್ ಒಪ್ಪುಗುಮೆ ಆಂಗ್ಲೇಯ
ಪ್ರಭುತ್ವ? ದಿನಗಳೇಸೊ ಉರುಳಿಸಮೆದ ಬಳಿಕ
ಒಪ್ಪಿ ಪರವಾನಗಿಯನಿತ್ತಿತು ಗುರುದೇವನ
ಬೇಡಿಕೆಗೆ. ಅಗಳಾ ಕವಿವರ್ಯ ಯರವಾಡ
ಜೇಲಿಗೆ ಪಯಣ ಬೆಳೆಸಿದರ್. ಗಾಂಧೀಜಿಯ ಮುಖ
ಸಂದರ್ಶನಕ್ಕೊದವಿದ ಕರಿಯಕ್ಕರದ ಹಿರಿ
ಪತ್ರ ಅರೆ ತಾಸಿನವಕಾಶಮಿತ್ತುದು ಪರಮ
ದಯೆದೋರ್ದ ಮಾಳ್ಕೆಯಲಿ. ಕವಿ ಮಹರ್ಷಿತಾನೈದು
ಜೇಲಿನಾನೆವಾಗಿಲ ದೌವಾರಿಕನಂ ಕಂಡು
ಪರವಾನಗಿಯಂ ತೋರ್ದು, ನಿಯಮಾನುಸಾರಂ
ವಿಧಿಯಿಲ್ಲಮೆಂಬಂತೆವೊಲ್ ಕೊಠಡಿಯಂ ಪುಗಲ್
ಲೇಖನದಲಿ ಮೈಮರೆತಿರ್ದ ಆ ಮಹಾತ್ಮರ್
ಗುರುದೇವನಂ ಕಂಡು ಪರಮ ಸಂತಸದಿಂದೆ
ಜಗ್ಗನೆಳ್ದು ಪ್ರಸನ್ನತೆಯಿಂ ಅತ್ಯಾದರದಿಂ
ಸ್ವಾಗತಿಸಿ ಕೈವಿಡಿದು ತನ್ನಯ ಪಸೆಯ ಮೇಲೆ
ಕುಳ್ಳಿರಿಸಿ ಉಭಯ ಕುಶಲೋಪರಿಯ ಬಳಿಕ್ಕಂ
ನುಡಿದರಿಂತು ಮಹಾತ್ಮಾ ಗಾಂಧೀಜಿ ''ಗುರುದೇವ?
ಇನಿತು ದೂರ ಪಯಣ ಬಂದೆನ್ನಂ ಕಾಂಬೊಂದು
ಶ್ರಮವಂ ಕೈಕೊಂಡಿರೇಕೆ? ತವ ಪತ್ರಾವಳಿ

ಾಕಿತ್ತೆನಗೆ'' ಎನಲ್ ಗುರುದೇವ ''ಬಾಪೂಜಿ!
ಶವ ದರ್ಶನ ಅಹೋಭಾಗ್ಯಮಲ್ತೆ? ಇದರ ಮುಂತೆ
ಶ್ರಮವೊಂದು ಲೆಕ್ಕಮೆ?'' ಎನುತೆ ಪರಮಾನಂದ
ಭಾವದಿಂ ಅರೆತಾಸು ಅವರೊಡನಿರೆ ದೇಶೀ
ಅಧಿಕಾರಿಗಳ ಮುಂತೆ ಸಂದರ್ಶನಂ ಪಡೆದು
ಸಂತಸಂಬಟ್ಟೊಡಂ ಆಂಗ್ಲರ ಕಡು ಸಂಶಯ
ಪ್ರವೃತ್ತಿಯಂ ನೆನೆದು ಮನದೆ ನೊಂದು ಪಿಂತಿರುಗಿ
ಬಂದರ್ ಶಾಂತಿನಿಕೇತನಕೆ. ಆ ಜೇಲಿನಲಿ
ಆದ ನರಕ ದರ್ಶನವದು ಮರೆಯಲಾರದೊಲ್
ಮುಸ್ಸಂಕಟದ ಆಗರಮೆನಲ್ ಸರಿಯಕ್ಕು.
ಜೇಲಿನ ಒಳಹೊರಗೆಲ್ಲೆಡೆಯುಂ ಭಾರತೀಯ
ಸತ್ ಪ್ರಜೆಗಳೆ ಸರ್ಪಕಾವಲೆನೆ ನತದೃಷ್ಟ
ಮೇಣ್ ಬುದ್ಧಿಹೀನ ಗತಿ ಹಾವಿನ್ಹೆಡೆಯಡಿಯೆ
ಸುಖಾಶ್ರಯ ಪಡೆಯಲೆಳಸಿಹುದಂ ಕಂಡು ನೊಂದು
ದ್ರವಿಸುತಿರೆ ಮನಂ ನಿಟ್ಟುಸಿರ್ ಬಿಟ್ಟರ್ ಮಹರ್ಷಿ.
        ಯಾವತ್ಕಾಲಂ ಲೇಖನ ಕೃಷಿಯೊಡಂ ಶಿಕ್ಷಣ
ಕ್ಷೇತ್ರಂ ತೊಳಗಿ ಬೆಳಗೆ ಶ್ರಮಿಸಿದ ಗುರುದೇವ
ಧನ್ಯನಾದಂ. ಶಿಕ್ಷಣ ಕ್ಷೇತ್ರವದು ಪತ್ತನದ
ಸದ್ದು ಗದ್ದಲಗಳಿಂ ದೂರಾಗಿ, ಆಂಗ್ಲೇಯ
ದರ್ಪದಾಳ್ವಿಕೆಯಿಂ ಮರೆಯಾಗಿ; ದುರ್ವ್ಯಸನಿಗಳ
ಹಾಳು ಹವ್ಯಾಸಗಳಿಗೆ ನಿಲುಕದ ಪೀಠಮಾಗಿ
ಶಾಂತಿ ಸಂಮೃದ್ಧಿಗೊಳುತಿರೆ ವಿದ್ಯಾರ್ಥಿಗಳುಂ
ಪಾರಾದರ್ ನಾನಾ ದುರ್ವ್ಯಸನದಿಂ; ಮೇಣ್
ಗಿಡಮರಗಳಿಂ ತುಂಬಿದ ವನವಾರ್ಧಿಯ ಸೊಂಪು,
ಸತ್ ಶಾಂತಿಯ ಪೆಂಪು, ವನವಿಹಂಗಮಗಳ ಮಧುರ
ಕೊರಳ್ದನಿಯ ಇಂಪುಗಳ್ ಒಗ್ಗೂಡಿ ನಿಸರ್ಗ
ಸೌಂದರ್ಯ ಸಂಮೃದ್ಧಮಿರೆ ಅಖಿಲ ವಿದ್ಯಾರ್ಥಿ
ಸಮುದಾಯ ನಿಚ್ಚ ಪರಿಶುದ್ಧ ಭಾವದಿಂದೊಪ್ಪಿ

ಕಲಿಕೆಯ ಸ್ಪರ್ಧೆಗಿಳಿದರ್ ಜ್ಞಾನದಾಸ್ಥೆಯಿಂ.
ಸ್ವರ್ಗ ತಾಂ ಸ್ವರ್ಗೀಯಮಾದತ್ತು ಅರೆಮುಗುಳ್ದ
ಮುಗ್ಧ ಮಾಣಿಕ್ಯಗಳ ಮನೋಗತಿ ನಿಚ್ಚ
ವನಶೀತಲ ಶೈತ್ಯ ವೈಭೋಗದಿಂ. ಮತ್ತ ಮನದ
ಕೋಗಿಲೆಗಳಾದುವು ನಿಜ ಜೀವನದಿ. ವರಕವಿಯ
ಮಾರ್ಗದರ್ಶನದಿಂದೆ ಸುವಿಚಾರ ಶೀಲತೆಗೆ
ಪುಷ್ಟಿಯೆನೆ, ಮನಃಚಿತ್ತ ಮಂಥನ ಲೋಕ ಪ್ರಜ್ಞೆ
ಬಲಿಯೆ ಕಾರಣಮಾಯ್ತು.
ಪಶ್ಚಿಮ ನಭದ್ದೇಶದಿ
ಒಯ್ಯನೊಯ್ಯನೆ ಇಳಿವ ಸಪ್ತಾಶ್ವಗಳ ಸ್ವರ್ಣ
ರಥದೊಳ್ ಉಜ್ವಲಿಸುತಿರಲಾ ರವಿ ತೇಜಶ್ರೀ
ಅರುಣ ಜಲದಲಿ ಮಿಂದವೊಲ್! ಮಹರ್ಷಿಯತ್ತಲ್
ಕಣ್ಣಾಲಿಗಳಂ ನೆಟ್ಟು ವಕ್ಷಸ್ಥಲಿಯ ಮೇಲೆ
ಕೈಗಳಂ ಕಟ್ಟಿ ನೋಡುತಿರ್ದರ್ ಗಂಭೀರ
ಧ್ಯಾನ ಭಂಗಿಯಲಿ. ಆಶ್ರಮದಂಗಣ ನೀರವ
ನಿರ್ಜನ ನಿಶ್ಶಬ್ದ ಶೋಭೆಯಲಿ ಮೆರೆದತ್ತು. ಕವಿ
ಮಹರ್ಷಿಯ ಭಾವ ಪ್ರವಾಹ ಚಣಚಣ ಪ್ರತಿ
ಚಣ ವೃದ್ಧಿಸುತಿರೆ ಮಧುರ ಮಹತ್ತರಮಾದುದು
ಸಾಯಂ ಸಮಯಂ. ಆ ಪುಣ್ಯ ಪ್ರಸನ್ನ
ಶುಭೋದಯ ಬಂಡುಣಿಗೆ ಕಮಲದ ಹೃದಯಕಳಸ
ದೊರೆತವೊಲ್ ಆನಂದ ರಸನೆಯಾ ಮಡುವಾಯ್ತು.
ಪೊಳ್ತುರುಳುತಿರೆ ಚಿತ್ತ ಶಾಂತಿ ಘನಿಸಿ ಜಗತ್ತೆ
ಆನಂದಮಯ ಮೇಣ್ ಶಾಂತಿಮಯಮಾಯ್ತು. ಮುಗಿದ
ಕಣ್ ತೆರೆಯಲಿಲ್ಲ. ಜಗಮರೆತು ಮೈಮರೆತು ಅಪೂರ್ವ
ಅನುಭವ ಘನಿಸಿ ಪಾರಮಾರ್ಥಿಕ ಸತ್ಯ ನಿಗಿನಿಗಿ
ಮಾರ್ಪೊಳೆಯೆ ದಿವ್ಯ ಸಮಾಧಿಯಲಿ ನೆರೆ ಮುಳುಗಿದರ್
ಹೊಂಗನಸಿನಾನಂದ ಭಂಗಿಯಲಿ ನಿಂದವೊಲ್!
ಕಲಿಕತ್ತೆಯ ನಗರಿಯಲಿ ನೆರೆಯಲಿರ್ದ ಕಾಂಗ್ರೆಸ್
ಮಹಾಧಿವೇಶನದ ಸಭೆಯ ಮುನ್ನಾದಿನಮೆ

ಅಲ್ಲಿಗೈದಿರ್ದ ಗಾಂಧಿ ಮಹಾತ್ಮರ್ ಮೌಲಾನ
ಅಜಾದ್ ಮೇಣ್ ಜವಹರಲಾಲರೊಡನೆ ಕವಿ
ಮಹರ್ಷಿಯ ಭೇಟಿಗಾಗೈತಂದರ್ ಆಶ್ರಮಕೆ.
ಗುರುದೇವ ವಿದ್ಯಾರ್ಥಿಗಳ ಸಮೂಹದಲಿ ನಿಜ
ಗುರುಗಳಾಗಿರ್ದರ್ ಆಧ್ಯಾತ್ಮಿಕ ಉಪನ್ಯಾಸದ
ಕಾರ್ಯ ಕೈಕೊಂಡು. ಆಗಳಾಶ್ರಮದಿಂದೋಡಿ
ಬಂದ ಶಿಷ್ಯಂ ಅತಿಥಿಗಳಾಗಮನ ವಾರ್ತೆಯಂ
ಬಿತ್ತರಿಸಿದಂ ಉತ್ಸುಕ ದನಿಯಲಿ. ಸುವಾರ್ತೆಯು
ಕರ್ಣಪಟಲಗಳಿಂಗೊರೆಯೆ ಕವೀಶ್ವರಂ ಮಿಗೆ
ಸಂತಸಂಬಟ್ಟು ಪಿಂತಿರುಗಿದರ್ ಆಶ್ರಮಕೆ.
ಪ್ರಪ್ರಥಮ ನೋಟಕೆತ್ತ ಅಪೂರ್ವ ಸಂಗಮದ
ತ್ರಿಮೂರ್ತಿಗಳ್ ತ್ರಿಕಾಲ ಜ್ಞಾನಿಗಳಂತೆವೊಲ್
ಕಂಡರ್ ರಸದೃಷ್ಟಿಗೆ. ಒಡನೆ ತಲೆಯಂ ಬಾಗಿ
ಕರಗಳಂ ಜೋಡಿಸಿದರ್ ವಿನಯ ವಿನಮ್ರತೆಯಿಂ.
ಆತ್ಮೀಯ ಗೆಣೆಯ ಚತುಷ್ಟಯರ್, ವಿದ್ವನ್ಮಣಿಗಳ್,
ಸುಜ್ಞಾನ ಮಹೋದಯರ್, ಭಾರತ ಜನನಿಯ ವರ
ಪುತ್ರರ್ ಪರಮ ಪ್ರೀತಿಯಿಂ ಸಂಗಮಿಸಿರಲ್
ಪೇಳ್ವುದೇಂ ಆಶ್ರಮದ ಸಂಭ್ರಮ? ಅತಿಥೇಯ
ಬಂಧುಗಳ ಆತಿಥ್ಯಂ ಪ್ರೇಮ ಬಂಧುರಮಯದಿ
ಹಾಲ್ಸಕ್ಕರೆಯ ನಿಜ ಸವಿಯಂ ಮೀರ್ವ ತೆರದೊಳ್
ಸಂದುದು ವರ ದೇಶಬಂಧುಗಳ ಮನೋದಧಿಗೆ.
ಬಂಧುಗಳ್ ಸಂಜೆಯಲಿ ಆಶ್ರಮ ವಲಯದಿಂ
ತೆರಳಿದ ಬಳಿಕಂ ಶ್ರೀ ಮಹರ್ಷಿ ಗುರುದೇವಂ
ಆಶ್ರಮದ ಪಡಸಾಲೆಯ ಜಗಲಿಯಲಿ ಮಂಡಿಸಿ
ನಿಸರ್ಗದ ಪರಮ ಸೌಂದರ್ಯಮಂ ಮನದಣಿಯೆ
ಅವಲೋಕಿಸುತಲಿರೆ ಹೃನ್ಮನಂ ನೆರೆತುಂಬಿ
ಭಕ್ತಿಭಾವದಿಂ ಘನಿಸಿ ಉಕ್ಕಿ ಹರಿದುದೊಂದು
ಆಶುಕವಿತೆ. ಕಣ್ಮುಗಿದು ಕೈಕಟ್ಟಿ ಪಾಡಿದರ್.

ಓ ಪರಮ ತಂದೆಯೇ! ತವ ಪದ ತಲದಲಿ ಈ
ಎನ್ನ ಜೀವನ ಕುಸುಮನ ಸಮರ್ಪಿಸುವೆ. ನಿತ್ಯ
ನೈವೇದ್ಯದ ನೇಮದಲಿ. ನಿನ್ನಂ ಕಣ್ತುಂಬ
ಕಾಂಬಾಸೆಗಿಂದು ನೀನಿತ್ತೆ ನಿಜ ದರುಶನವ
ಸಿರಿಸೊಬಗಿನ ರೂಪದಲಿ! ಹಾ! ತವ ತೇಜದಿಂ
ಧೀಮತಿಯು ಮಾರ್ಪೊಳೆದು ಧನ್ಯನಾದೆ ನಾನೆಲೊ!
ನಿನ್ನ ಸೇವೆಗೆನ್ನೀ ಜೀವನವು ಸರ್ವತ್ರ
ಮೀಸಲು. ದಿನ ನಿತ್ಯದ ಚಿಂತನ ಮಂಥನಗಳ್
ನಿನಗೆ ಮೀಸಲು. ದಿನಚರಿ ವ್ಯವಹಾರ ನಿನಗೆ
ಮೀಸಲು ದೊರೆಯೆ! ನಿನ್ನ ಸಂದರ್ಶನ ಭಾಗ್ಯದಿಂ
ಜನ್ಮಜನ್ಮಾಂತರದ ರಸಸಿದ್ಧಿ ಘನಿಸಿದೊಲ್
ಮಿಳ್ಳಳೆ ಮಿಡಿಯುತಿದೆ ಪುಳಕಿತ ಪ್ರಾಣವಾಹಿನಿ.
ಓ, ಬಂಧು! ಇದೊ ನಿನಗೆನ್ನಯ ನಮನಂ!''

ಅಗಳಾ ಮಾಮರದೊಳಡಗಿರ್ದ ಕೋಗಿಲೆಯು
ರಾಗಾರುಣತಾನದ ಸವಿಸೂಸಿ ಇನಿಗೊರಳ
ಆನಂದ ಮೋದದಿಂ ಪಾಡಿತು ಕವಿ ಚೇತನ
ರಸಸ್ಫೂರ್ತಿಯಿಂ ಪುಳಕಗೊಳ್ವವೊಲ್. ಮತ್ತಂ
ಕೋಗಿಲೆಯ ಇನಿದನಿಯನನುಕರಿಸಿ ಪಾಡಿದರ್
ಕವಿವರ್ಯ ಸಂತೃಪ್ತ ಭಾವಸಾಗರದಲಿ ತಾಂ
ಮುಳುಗೆದ್ದವೋಲ್ ಪ್ರಶಾಂತ ಭಾವದಿಂದಲಿ
''ಓ ದೇವಾದಿದೇವ! ನಿನ್ನಂ ಅರಸಲೆಂದು
ಪೊರಗೈದೆ ಪೂರ್ವೀ ದಿಗಂತದಲಿ ಮುಂಬೆಳಕು
ಮೂಡುವ ಮುನ್ನ. ಮಸುಗತ್ತಲಿನಲಿ ಜಗತ್
ಸ್ವಾಪ್ನಿಕ ಮಧುರವೇಶ ರಾಶಿ ತುಂಬಿ ಹರಡಿದ
ಮಹತ್ತರ ಪಾರಾವಾರವೆ ನಿನ್ನ ಪ್ರತೀಕ
ರಸದೃಷ್ಟಿಗೆ. ಕದ್ದಿಂಗಳ ಕರ್ರನೆಯ ಉತ್ತರೀಯಂ
ಹೊದ್ದವೊಲ್ ಗಂಭೀರ ಪರಿವೇಶಿ ನೀನಾದೆ!
ಕಾಡಿಗೆಯ ಕರ್ಪು ಕಣ್ ಕತ್ತಲಿಸಿದುದೆ ನಿನ್ನ

ಚಿತ್ತಕಲ್ಪಮಂ ಲೋಕೇಶ! ನಿನ್ನ ಪ್ರೇಮದ
ಸಂಪುಟವನೆತ್ತ ನಿಳುಪಿದೆಯೊ ಎನೆ ಎನ್ನಂ
ಮರೆಯುವರೆ? ಕಣ್ಣೆದುರಿಹ ಕಂದನ ಕಾಣೆಯಾ?
ಏಕಿಂತು ನಿರ್ಲಕ್ಷ್ಯ, ನಿರಾಸಕ್ತಿ ದೊರೆಯೇ!
ಎನ್ನ ಭಕ್ತಿ ಧ್ಯಾನಗಳ ಕಾಣಿಕೆಗಳಿಗಿದೆಯೆ
ಪ್ರೇಮ ಕಾರುಣ್ಯರಹಿತ ಉತ್ತರ? ಏಗಳುಂ
ಕಾದು ಸೋಲ್ದು ಪ್ರಾಂಜಲಿಯೊಡ್ಡಿ ಬೇಡುತಿಹೆ. ತವ
ದಯಾರ್ದ್ರಮೇದುರ ಕೃಪೆಯಿಂ ಹಚ್ಚೆನ್ನಂ ವಿಶ್ವ
ಪಥದ ವಿಶ್ವಮಾನವತೆಗೆ ಹೇ, ಪರಾತ್ಪರನೇ!''
ಧ್ಯಾನಮಯ ಗಾಂಭೀರ್ಯ ಸ್ಥಿತಿ ಇಳಿಯದಿರೆ ಮನ
ದೇಶದಲಿ ಪ್ರಾತಃಸಮಯದ ಶೀತಲ ಶೈತ್ಯ
ಮೆಯ್ಯಂ ಬಲುಮೆಯಿಂ ಮುದ್ದಿಡುತಿರ್ದುದುದರ
ಅರಿವಿಲ್ಲವಿನಿತು ಕವಿವರ್ಯಂಗೆ. ಆಗಳಾ
ಪೂರ್ವೀ ದಿಗಂತದಲಿ ತಿಳಿಗೆಂಪು ಕಡುಗೆಂಪು
ನಸುಗೆಂಪು ಕೆನ್ನೀಲಗೆಂಪು ಹಳದಿಕುಂಕುಮ
ಪೀತ ಕನಕ ಬಣ್ಣಗಳ ಜೀಮೂತ ಗೋಪುರ
ಸ್ತೂಪ ಸ್ತೂಪಗಳ್ ಸೀಮೆಯಂಚಿನಲಿ ಸಾಲ್ಗೈಸಿ
ವರ್ಣೋಪವರ್ಣಮಯ ವೇಶದಲಿ ಮೈವೆತ್ತು
ಚಿತ್ರವಿಚಿತ್ರ ರೂಪಿನಿಂದಲಂಕರಿಸಿರೆ
ಮೆಲ್ಲಮೆಲ್ಲನೆ ತಿಳಿಬೆಳಕು ತುಳುಕಿತು ಸುನೀಲ
ಶಿಖರ ದೇಶದಲಿ ಧವಳಿಮಾ ಕೀರ್ತಿ ಶಾಲಿನಿ
ಉಷಾಕಾಂತೆ ಮುಂದಿಡಲಾ ಹೆಜ್ಜೆ ಹೆಜ್ಜೆಯಂ
ತಾಳಲಯ ಬದ್ಧಮಾಗಿ. ಜ್ಯೋತಿರ್ಧಾರೆ ಬ್ರಹ್ಮನ
ಕಮಂಡಲದಿಂ ತುಳುಕಿದುದೊ ಎನಲ್ ಅವನಿಯೊಳ್
ಚೆಲ್ಲಿ ಸೂಸಿತು ನಿಶಿಯ ಕತ್ತಲೆ ಸೆರಗಂ ಜಡಿ
ನೂಂಕಿ ಜಾಡಿಸುವವೊಲ್! ಆ ಮುಂಬೆಳಕಿನಲಿ
ಪೊಳ್ತು ಚೆಲ್ವಾಯ್ತು. ರಮ್ಯಾರುಣನ ಉಜ್ವಲಿಪ
ಜ್ಯೋತಿರ್ಮಂಡಲ ಮೇಲೆ ಮೇಲೇರುತಿರೆ ಕೊಳದ

ಜಲದೊಳ್ ಪಡಿಮೂಡಿ ಜಲವುರಿಯುತಿಹ ತೆರದಲಿ
ಮಾಪೊರ್ಳೆಯೆ ಕುಮುದಿನಿಗೆ ಮೊಗ ಬಾಡುತಲಿರಲ್
ಕಮಲಿನಿಗೆ ನಗೆಯ ಮುಗುಳು ಅರಳಿದುದು ತೆಕ್ಕನೆ
ತಂಗಾಳಿ ನೆರೆ ತೀಡಿತು ಸುಯ್ ಸುಯ್ಯನೆ ಸುಯ್ದು
ವನ ವಿಹಂಗಮ ಕೋಟಿಯನೆಳ್ಚರಿಸುವವೋಲ್.
ಗುರುದೇವ ಆ ಮಧುರಾತಿಮಧುರ ಚಿತ್ತಾರದಿ
ಮನ ನೆಟ್ಟಿರೆ ಮಂದ ಪವನನ ಮೋಹನಾಸ್ತ್ರಂ
ಸುಯ್ಯನೆ ಸುಯ್ದುಯ್ದು ಸಾಗಿದುದು ಮೈಮನ ಮುದ್ದಿಸಿ.
ರವಿಯ ಪೊಂದೇರ್ ಮೆಲುಮೆಲ್ಲನೆ ಜಿಣುಕಿ ಮೇಲೆ
ಮೇಲೇರುತಿರೆ ಹೊಂಗಿರಣಗಳ ಹೊಂಗಾಂತಿ ಹರಡಿ
ಸೊಗಸಿದತ್ತು ಸುಸಿಲ್ ವಿಸಿಲ್. ಆ ಸುರಮ್ಯತೆಗೆ
ಒಡಲ್ ಗಿಚ್ಚಿನಿಂ ಸುಟ್ಟು ಕಟ್ಟುರಿಯಾಗಿ ರವಿ
ಬಿಂಬಮಂ ಆಕ್ರಮಿಸಿದೊಲ್ ಮುಗಿಲ್ ಮೋಡಗಳ್
ಅಡ್ಡೈಸಿದುವು ತೆರೆಯನೊಡ್ಡಿದೊಲ್. ಆ ಚಿತ್ರ
ನೋಡುತಿರೆಯಿರೆ ಕವೀಂದ್ರ, ಕೆನ್ನೀಲಿಯ ಮೋಡ
ಒಡನೆ ಮೂಡಿಸಿತೊಂದು ಗುಡಿಗೋಪುರ. ತೆಕ್ಕನೆ
ರವಿಯ ಕಿರಣಧಾರೆ ಸ್ವರ್ಣ ದ್ವಾರದಲಿ ತೂರಿ
ಕರ್ತನಿರುವಂ ಸಾರಿ ಬರೆ ಜಗ ಜಗಿಸಿ ಸೃಷ್ಟಿ
ಹೇಳುವೊಲ್! ಅಹ ಆ ದೃಶ್ಯಮಾನ ಸೌಂದರ್ಯ
ಚಿತ್ರಮಂ ಪರಿಭಾವಿಸಿ ನಲಿದಾಡಿತು ಹೃದಯ
ಪಕ್ಷಿ. ಮತ್ತಾಗಳಿಗೆಯೊಳೆ ಸ್ವರ್ಣದ್ವಾರದಲಿ ಥಳ
ಥಳಿಸುತಿರ್ದ ಸೂರ್ಯನ ಸ್ವರ್ಣಮಂಡಲ ಸರಿದು
ಮೇಲೇರಿ ಕಣ್ಮರಸೆ ಕ್ಷಣ ಭಂಗುರಮಾದಾ
ಚಿತ್ರದರ್ಶನ ಜೀವನ ಗತಿಯ ತೋರ್ದವೋಲ್
ಸಂಭವಿಸೆ ಮತ್ತೆ ಭಾವೋದ್ವೇಗದಿಂ ಭಕ್ತಿ
ಸಮುಜ್ವಲತೆ ತುಂಬಿ ಬರೆ ಸುಖಾಶ್ರು ಫಳಫಳನೆ
ಮೊಳೆತುವು ಕಣ್ ಅಂಚಿನಲಿ. ಗುರುದೇವಂ ಮತ್ತೆ
ಹಾಡಿದರ್ ಭಕ್ತಿ ಪೂರವಂ ಹರಿಸಿ ''ಹೇ, ವರ ಪ್ರಭುವೇ!

ಕಣ್ಮಲೆತು ನೋಡಿದ ಭಕುತಿಭಾವ ಹೃದಯದಲಿ
ಹೆಪ್ಪುಗಟ್ಟುವನ್ನ. ತವ ಸೃಷ್ಟಿಯ ಪ್ರತಿ ಅಂಶ
ಅಂಶದಲಿ ಕಾಂಬುದಾಂ ನಿನ್ನ ಪ್ರತೀಕವನ್ನೆ.
ಎಲ್ಲೆಲ್ಲಿ ನೋಡಲಲ್ಲಿ ನೀನಹೆ. ಮುಗಿಲ್ಮಂಜು
ಮೋಡಗಳಲಿ, ಸಕಲ ಕುಸುಮ ರಾಜಿಯಲಿ, ಸಸ್ಯ
ಕೋಟಿಗಳಲಿ, ಸತ್ಯ ಸೌಂದರ್ಯದಲಿ, ಪ್ರತಿ ಜೀವ
ಕಣಗಳಲಿ, ನಿಸರ್ಗ ವೈಖರಿಯಲಿ, ಸುಧರ್ಮದಲಿ
ಕಣ್ ಕಾಂಬುದು ನಿನ್ನನ್ನೆ! ಪ್ರಭುವೇ! ದಿನದಿನ
ನಿನ್ನಂ ಪ್ರತ್ಯಕ್ಷ ಕಂಡು ಕಾಣುತಿರೆ, ಸಗ್ಗದಲಿ
ನೀನಿಹೆನೆನುತೆ ಪುಡುಕುವ ಮೂರ್ಖತೆ ಪೊಸತಲ್ಲ.
ಮುಂದೆಯುಂ ಪೋಪುದಲ್ಲವೆನೆ ಭಜನ ಪೂಜನ
ಆರಾಧನ ಎಲ್ಲಂ ಪ್ರಕೃತಿಗೆ ಸಲ್ಲಿಸುತ
ಧನ್ಯರಪ್ಪುದು ಲೇಸು. ಓ, ಒಡೆಯಾ! ಜಾಗಟೆ
ಗಂಟೆ ಕೊಂಬು ನಗಾರಿ ಕಹಳೆಗಳ ಭಯಾನಕ
ಬಡಿವಾರದಿಂ ಗೈವ ಮೂರ್ತಿ ಪೂಜೆ ವ್ಯರ್ಥಂ!
ಒಡೆಯಾ! ಮತಿ ಹೀನರ್ ತವ ರಹಸ್ಯವರಿಯದೆ
ಗುಡಿಗೋಪುರಗಳಲಿ ಪುಡುಕುವರ್ ದಿನ ನಿತ್ಯಂ
ವ್ಯರ್ಥಕಾಮರ್ರೈಸಿ. ತವ ಭವ್ಯತೆಯ ಉಜ್ವಲ.
ಉಜ್ವಲೋಜ್ವಲ ಪ್ರತಿಭೆಗೆನ್ನ ನಮನ. ನಿನ್ನ
ಪರಿಪಾವನತೆಗೆನ್ನ ವಿನಮ್ರ ನಮನ ಪ್ರಭುವೆ!''
        ಎನಿತೆನಿತೂ ಇನಿಪೊಳ್ತು ಕಳೆದತ್ತು ಪ್ರಕೃತಿಯ
ಆರಾಧನೆಯಲಿ. ಶ್ವೇತ ಜೀಮೂತಗಳ್ ರವಿ
ತೇಜಕೆ ತೆರೆಯೊಡ್ಡುತಿರೆ ಬೃಹದ್ ವಾಹಿನಿಯ
ಪೋಲಿ! ಚಿತ್ತೈಕಾಗ್ರತೆಯಿಂ ಕವಿ ಹೃದ್ಗಡಲು
ಧುಮುಧುಮಿಸಿ ಉಕ್ಕೇರಿದುದು ಕಾವ್ಯ ಸ್ಫೂರ್ತಿಯಿಂ
ಮನ ಮಂಥನದಿಂದುಣ್ಮಿದ ಶಾಂತ ರಸಾಯನ
ಜಡಿ ತುಂಬಿ ಚಿತ್ಕೋಷದಿಂದುಕ್ಕಿದಕ್ಕರದಿಂ
ಪೊದಳ್ದು ಪ್ರಭಾತ್ ಸಂಗೀತ ಗುಚ್ಛ ಸುಮ

ಸಮುಚ್ಚಯದವೊಲ್ ಜನಮನವಂ ಆಕರ್ಷಿಸಿ
ಪಕ್ವಾದುದು ಜಗದುಸಿರಿಗೆ ವಂಗ ಸಾಹಿತ್ಯ
ಕ್ಷೇತ್ರಮಂ ಶ್ರೀಮಂತಗೊಳಿಸಿ ಭಾರತ ಜನನಿಯ
ಪದಾಂಬೋಜಗಳಿಗರ್ಪಿಸಿದರ್ ಧವಳ ಕೀರ್ತಿ
ಮಾಲೆಯೊಲ್! ಆಗಳೇಂ ಜನಗಣಮನ ಮತಿಗಳ
ಆನಂದ ತುಡಿತಮಂ! ಗೆಣೆಯ ಬಳಗಂ ಮುದದಿ
ಹಾಡಿ ಪಾಡಿದರ್ ಬೃಹದ್ ಸಭೆಗಳಲಿ, ಜನಮನ
ಮೆಚ್ಚಿ ತಲೆದೂಗಿ ಆನಂದ ರಸ ಉಕ್ಕುಕ್ಕಿ
ಹರಿವನ್ನ. ಗೆಣೆಯ ಪ್ರಜ್ಞಾನಿಗಳ ಆನಂದ
ತುಮುಲ ಘನಿಸಿ ಪರಮಾನಂದವಾಯ್ತು ಸುಮಧುರ
ಚೈತ್ರ್ಯ ಪ್ರಭಾತದವೊಲ್. ಕವಿ ಗುರುದೇವನಾ
ಗೀತಾಂಜಲಿ ಕವಿತಾ ಗುಚ್ಛಮಂ ಇಂಗ್ಲೀಷ್
ಭಾಷೆಗೆ ಅನುವಾದಿಸಿ ವಿದೇಶಗಳ ಗಾಳಿಗೆ
ಬೆಳ್ಳಕ್ಕಿಯೊಲ್ ಹಾರಬಿಟ್ಟರ್; ಮಧುರ ಸ್ನೇಹ
ಬಾಂಧವ್ಯದುದ್ದೀಪನೆಯ ಸಂಪದಂ ಬಯಸಿ.
ಇಂಗ್ಲೀಷ್ ಭಾಷಾ ಪರಿಣತರಗಮನವದರ
ಕಡೆಗೆ ಹರಿಯೆ ಬೆರಗಾದರ್! ವಿದೇಶೀ ಕವಿಯ
ಇಂಗ್ಲೀಷ್ ಭಾಷಾಜ್ಞಾನ, ಪದ ಪುಂಜಗಳ ಮಧುರ
ಲಾಲಿತ್ಯ ಮೇಣ್ ಅನುಪಮ ಭಕ್ತಿರಸಧಾರೆ
ಅಮೃತ ಸಲಿಲದೊಲ್ ಸರಾಗದಿಂ ಹರಿದಿರ್ದ
ವಿಶಿಷ್ಟ ವಿಮಲ ವೈಖರಿಯಂ ಮನಗೊಂಡರೈ
ವಿಸ್ಮಯಾವಿಷ್ಟ ಚಿತ್ತವನಟ್ಟಿ ಆ ಪರಮ
ಗ್ರಂಥಕೋಶಕ್ಕೆ. ಭಾರತೀಯ ಬಂಗಾಳಿಗಳ್
ಅರ್ಥೈಸಿದುದರ ಇತಿಮಿತಿಯಂ ದಾಂಟಿ ಮುಂದೈದ
ಇಂಗ್ಲೀಷರ್ ಅರಿತ ಅಂತರಾರ್ಥದ ಸುವಿಸ್ತಾರ
ಚಾರುಧೀರತೆಯ ಭೂಮ! ಮೇಣ್ ಯೂರೋಪ್
ಪ್ರಾಂತ್ಯಗಳಲಿ ಪಡೆಕೊಂಡ ಪರಮೋತ್ಕೃಷ್ಟ ಕೀರ್ತಿ
ಪ್ರಸರಿಸಿ ಪರಿಮಳಿಸಿ ಸ್ವೀಡನ್ ಪ್ರದೇಶದಲಿ

ಪೊದಳ್ದ ವಿಶೇಷ ಜ್ಞಾನ ಪೀಠಂ ಕಮನೀಯ
ಸಾಹಿತ್ಯ 'ಗೀತಾಂಜಲಿ' ಗ್ರಂಥವಂ ಸರ್ವತಃ
ಶ್ರೇಷ್ಠಮೆಂದು ಪರಿಗಣಿಸಿ ನೋಬೆಲ್ ಪ್ರಶಸ್ತಿಯಂ
ಪ್ರದಾನಗೈದರ್ ಭಾರತ ಜನನಿಯನ್ನೆ ನೆರೆ
ಗೌರವಿಸುವ ಮಾಳ್ಕೆಯಲಿ. ಮತ್ತಾಗಳ್ ಬ್ರಿಟಿಷ್
ಸರಕಾರ ಕವಿಯ ಪಾಂಡಿತ್ಯಮಂ ಮನಗೊಂಡು
ಪ್ರೀತ್ಯಾದರದಿಂ 'ನೈಟ್' ಎಂಬ ಪ್ರಶಸ್ತಿಯ
ಗೌರವವಿತ್ತು ಪುರಸ್ಕರಿಸಿತು. ದೇಶವಿದೇಶ
ಖ್ಯಾತಿವೆತ್ತ ಗುರುವರ್ಯನಂ ಬಹು ದೇಶಗಳ್
ನಲ್ಮೆ ಗೌರವಗಳಿಂ ಆಹ್ವಾನಿಸಿ ಅನನ್ಯ
ನೇಹದಿಂದಾದರಿಸುತಿರೆ, ಕವಿ ಗುರುದೇವಂ
ಎಲ್ಲರ ಅಮೂಲ್ಯ ಆಶೀರ್ವಚನಗಳ ಅಕ್ಷತೆ
ಶಿರದೊಳ್ ಧರಿಸಿ ವಿದೇಶಗಳ ಪ್ರವಾಸಮಂ
ಮುಗಿಸುತೆಲ್ಲ ದೇಶಗಳಲಿ ಗೆಣೆಯ ಶ್ರೇಷ್ಠರಂ
ಗಳಿಸಿ ಸಂಪ್ರೀತಿಯಿಂ ಪಿಂಮರಳಿದರ್ ತಮ್ಮ
ಪುಣ್ಯಭೂಮಿ ಭಾರತಕೆ. ಅನಂತರದೊಳವರ
ಭಾರತ ಜನನಿಯ ಔರಸ ಪುತ್ರನ ಪರಮೋಚ್ಚ
ವಿಜಯ ಕೇತನದಿಂ ಪುಳಕಿತ ಗೆಣೆಯವರ್ಗಂ
ಒಗ್ಗೂಡಿ ಅಪೂರ್ವ ಗೌರವಾದರಗಳಿಂದೆ
ಸತ್ಕರಿಸಿ ಸನ್ಮಾನಿಸಿತು ಹರ್ಷಗೊಳ್ವವೊಲ್
ವಂಗಭೂಮಿ. ಸತ್ಕೀರ್ತಿ ಕಿರಣಗಳ್ ವರ್ಜಿಸಿ
ಹರಡುತಿರೆ ರಾಷ್ಟ್ರದಾದ್ಯಂತ; ಉಲ್ಲೇಖಿಸಿದ
ಗ್ರಂಥಗಳನೇಕಂ ಕ್ಷಿಪ್ರ ಪ್ರಕಾಶಿತಗೊಂಡು
ಕವಿವರ್ಯನ ಮನ ರೋಮಹರ್ಷಕಮಾದತ್ತು.
ಮತ್ತಮಾ ಜೀವನೀಯ ಬಹುಮುಖ ಪ್ರತಿಭೆಯ
ವಿಧಾನಗಳಂ ಬಸಿದು ಅನುಭವ ಘನಿಸುತಿರಲ್
ಮನಃಕಲ್ಪಂ ಮಜಲು ಮಜಲ್ಗೈಸಿ ಏರುತಿರೆ
ವಿಶ್ವತೋಮುಖೀ ಜೀವನದಲಿ ಮನುಕುಲಜರಂ

ಮುನ್ನಡೆಸುವುದೇ ಈ ಜೀವನ್ಮುಕ್ತಿಯಾಗಿರೆ,
ವಿಶ್ವಾತ್ಮಕ ಸಮಸ್ಯೆಗಳ ಲಕ್ಷ್ಯಕಿಂ ಮಿಗಿಲು
ಈ ಮನುಕುಲದುದ್ಧರಣಂ ಎನುತೆ ತನ್ನೊಡಲ
ಚಿಂತೆಗಿಂಬು ಕೊಟ್ಟರ್ ಕವೀಂದ್ರ. ಆವೊಂದು
ಸಂಘ ಸಂಸ್ಥೆಗಳ ಸಭೆ ಸಮಾರಂಭಂ ಬೊಕ್ಕು
ಉಲ್ಲೇಖನ ಭಾಷಣಗಳ ವಾಹಿಯಂ ಹರಿಸಿ
ಜನಗಣಮನಸಮಂ ತಣಿಸುವರ್; ನೆರೆ ಬೋಧಿಸುವರ್
ಗುರು ಸ್ಥಾನದಲಿ ತಾನಿರುತಿರೆ. ದಿನದಿನಂ ವಿಧ
ವಿಧ ಸಮಸ್ಯೆಗಳೇಳುತಿರ್ದುವು ಸರಸತಿಯ
ದಿವ್ಯ ಕ್ಷೇತ್ರದಲಿ. ಎಲ್ಲವಂ ಅರಿತು ನುರಿತು
ತನ್ನೊಳ್ ಪ್ರಶಾಂತ ಚಿತ್ತದಿಂ ಮಥಿಸುವರ್
ಕವಿ ಮಹರ್ಷಿ.
ದೂರ ವಿದೇಶಗಳಿಂದೆ ನಲ್ಮೆ
ಬಲ್ಮೆಗಳ್ ತುಂಬಿರ್ದ ಆಹ್ವಾನ ಪತ್ರಗಳ್
ಬಿಡುತಿರಲ್ ಮತ್ತೆ ಪರದೇಶಗಳ ಯಾತ್ರೆಯಂ
ಕೈಕೊಂಡರ್ ಲೋಕಾನುಭವದಲಿ ಮುಳುಗೇಳೆ.
ಪಾಶ್ಚಿಮಾತ್ಯ ಮೇಣ್ ದಾಕ್ಷಿಣಾತ್ಯ ಜೀವನ
ಸಂಗಮದಲಿ ದಿವ್ಯ ಸಂಕ್ರಮಣ ಎಂಬೊಂದು ನಿಧಿ
ಮನದಲಿರೆ ಪ್ರವಾಸ ಚೆಲ್ವಾಯ್ತು; ಸೊಗಮಾಯ್ತು.
ಪರದೇಶ ಯಾತ್ರೆಯಿಂ ವೈಚಾರಿಕ ವೇದಿಯಲಿ
ಅಂಡಲೆದರೇಕಾಂಗಿ. ಪುಣ್ಯಭೂಮಿ ಭಾರತ
ದಟ್ಟ ದಾರಿದ್ರ್ಯದಿಂ ನರಳ್ವಗತಿಗೆಮ್ಮಯ
ಅಜ್ಞಾನಮಲ್ಲದೇನಲ್ಲ. ಈ ದಾರಿದ್ರ್ಯ
ನೀಗುವೊಡೆ ಬಹಳಷ್ಟು ಕಾಲಮಾನವುರುಳ್ದು
ಸಂಜೀವನ ಸೌಂದರ್ಯ ಕೃಪೆಯಿಂ ಜ್ಞಾನಧನ
ಪ್ರಜ್ಞಾನವೆನಿಸದೆ ಗತಿಯಿಲ್ಲವೆನುತೆ ತನ್ನ
ದಿನಚರಿಯೊಳ್ ಮನವಿಟ್ಟರ್ ಶ್ರೀಗುರು ಮಹರ್ಷಿ
ಪಂಜಾಬ್ ಗಲಭೆಯ ಗಂಭೀರ ಸಮಸ್ಯೆ, ಜಲಿಯನ್
ವಾಲಾಬಾಗಿನ ಮಹಾ ನರಮೇಧ ಮುಂತಪ್ಪ

ರುದ್ರ ಕ್ಷುದ್ರ ಕ್ರೂರತರ ಕಾರ್ಯಾಚರಣೆಯಿಂ
ಮನನೊಂದು ಶೋಕದಿಂ ದುಃಖದಿಂ ರೋಷದಿಂ
ಬ್ರಿಟಿಷ್ ಸರಕಾರಕೆ ಪ್ರತಿಭಟನೆ ಸೂಚಿಸೆ
ತಮ್ಮ 'ನೈಟ್' ಪದವಿಯಂ ಪಿಂತಿರುಗಿಸಿದರ್ ನಿಜ
ಪ್ರತಿಭಟನೆಯ ಪತ್ರದೊಡಂ ದಿಟ್ಟತನದಿಂ.
ಕಾಲನದಿಯ ಪ್ರವಾಹ ಮುನ್ನುಗ್ಗುತಿರೆ ಚಣ
ಚಣವನೊದ್ದು ಸದ್ದಿನ ಗದ್ದಲಮಿಲ್ಲದೆಯೆ
ಆರಾರ ಭಂಗ ಬವಣೆಯನಿನಿತು ಲೆಕ್ಕಿಸದೆ
ಲೋಕಾಭಿರಾಮವಾಗಿ ಚಣಂ ಹಿಂಚುಮಿಂಚದೆ.
ಸಾವಿರದೊಂಭೈನೂರ ಮೂವತ್ತೆರಡನೆಯ ಇಸವಿ
ಕಾವಳಿಸಿದುದೆಲ್ಲರ ಜೀವನದಲಿ ಕಹಿ ಸಿಹಿ
ಸುಖದುಃಖಗಳ ಭೋಂಕನೆ ತಂದೊಡ್ಡುವ ಧೀರ
ಪಟು ತಾನೈಸಿ, ಹೊಸ ವರುಷ ಹರುಷ ತಂದುದು
ತನುಮನಗಳಿಗಾನಂದದ ಹೊನಲ್. ಕವಿವರಂ
ಏಳುದಶಕದ ತುಂಬು ಜೀವನಿಯ ಚಿರ ಧವಳ
ಕೀರ್ತಿ ಶಿಖರದ ತೊಟ್ಟಿಲೇರೆ ರಾಷ್ಟ್ರದಾದ್ಯಂತ
ವಿಜೃಂಭಣೆಯಿಂ ಆಚರಿಸಿತು ಕವಿವರ್ಯರ
ಎಪ್ಪತ್ತನೆಯ ಜನ್ಮದಿನೋತ್ಸವಂ ಆನಂದ
ಮೋದದಿಂ. ವಿಶ್ವಖ್ಯಾತಿವೆತ್ತ ವಿಶ್ವಮಾನವ
ಶ್ರೇಷ್ಠನೆನೆ ಸಾಮಾನ್ಯಮೇ? ಜಗತ್ತು ತಾನೈಸಿ
ಶುಭಕೋರಿ ಬರೆಸಿರ್ದ ಪತ್ರಗಳ ರಾಶಿಯೇ
ಬಂದು ಬಿಳ್ದುದು ಮಹತ್ ಸಾಹಿತ್ಯ ರೂಪದಲಿ!
ಮೇಜಿನ ಮೇಲೆ ತುಂಬಿರ್ದಾ ಸರಸತಿ ಭಂಡಾರ
ಕಣ್ಮನಗಳಂ ಸೆಳೆವನಿತು ಭಾವ ಹರ್ಷಕಂ.
ಅನಂತರದೊಳ್ ಆದೂರ್ ಉದ್ಗ್ರಂಥಮಾದುದು
ಗೆಣೆಯರ ಸಸ್ನೇಹ ಕೂಟದಿಂ. ಕವಿ ಗುರುದೇವ
ಎಪ್ಪತ್ತೊಂದರ ವರ್ಷಮಾನದಲಿ ಗ್ರಾಮೀಣ
ಶಾಂತ ಪ್ರಶಾಂತ ವಾತಾವರಣದ ತನಿರಸ

ಮೈದುಂಬಿ ಅಧ್ಯಾತ್ಮ ಚಿಂತನಾವೇಶದಿಂ
ಜಗಮರೆತು ತಪಸ್ಯೆಯ ಕುಂಡದಲಿ ಮುಳುಗುವರ್
ದಿನದಿನಂ. ಶಾಂತಿ ನಿಕೇತನಂ ಮಂಬೆಳೆಯುತಿರಲ್
ಅತ್ತಿತ್ತ ಹರೆಗೈಚಾಚಿ. ವಿವಿಧ ವಿಭಾಗೀಯ
ವಿದ್ಯಾರ್ಥಿ ಸಂಗಂ ಅಮಿತ ಪ್ರಬೋಧಕರ
ಸಂಗಂ ದೂರ ದೂರದಿಂದೈತರ್ಪ ಅನನ್ಯ
ವಿದ್ವಾಂಸ ಮಹನೀಯರ ನೇಹಂ ತುಂಬಿರಲ್
ಗುರುದೇವ ಸುಜನ ಸಂಗದಲಿ ಸಂಮೋದದಿಂ
ಬೆರೆತು ಬೋಧಿಪರ್ ವಿಸ್ಮಯದ ಪೂತ ಸ್ಮಿತದಲಿ;
ಸಾಹಿತ್ಯಕಲೆಯ ಉದ್ದೀಪನೆಯ ನಿಟ್ಟಿನಲಿ
ಮತ್ತೊಂದು ದಿವ್ಯ ಕಲೆಯು ಕರಗತ ಮಾದತ್ತು
ಚಿತ್ರವತ್ತಾಗಿ. ಚಿತ್ರಕಲೆಯಭ್ಯಸಂ ದಿನ
ನಿತ್ಯ ಸಾಗಿದುದು ಚಿತ್ರಕಲಾ ವಿಭಾಗದಲಿ.
ನೈಸರ್ಗಿಕ ಚಿತ್ತಾರಂ ಮೇಣಂ ಜೀವನದ
ರಮ್ಯ ಚಿತ್ತಾರಗಳ ವರ್ಣಮಯ ಪ್ರಣಾಲಿಯ
ವೈಭವೋಪೇತ ಸಂಭ್ರಮಪೂರ್ಣ ದಿಬ್ಬಣಂ
ಮೇಳೈಸಿದ ಮಾಳ್ಕೆಯಲಿ ಮೆರೆದತ್ತು ಕಲೆ ವೀಡು.
ಕಲಾಭಿಜ್ಞತೆ ಚಣಚಣಂ ಅಭಿವೃದ್ಧಿಸುತ
ನಡೆದಿರೆ ಎಣೆಯಿಲ್ಲದ ಚಿತ್ರಕಲೆ ಮೈವೆತ್ತು
ಸ್ವರ್ಣ ದ್ವಾರಮಂ ತೆರೆದುದು ಕಲಾಭಿಮಾನೀ
ಕಲಾಭಿಜ್ಞತೆಯ ವಿದ್ಯಾರ್ಥಿಗಳಿಗೆ ಪ್ರೇಮದಿಂ.
ಇಡೀ ಜೀವಮಾನಂ ಸರಸತೀ ಸೇವೆಯೊಳ್
ಸಂದು ಮಾನಸ ಪಕ್ಷಿಗರಿಗೆದರಿ ಎರೆಂಕೆಯಂ
ಬಿದಿರ್ಚಿ ಗಗನಾಂಗಣದಲಿ ಹಾರುತಿರೆ ಮುದದಿ.
ಜಗದಗಲ ಸುಂದರ ಸ್ವಾಪ್ನಿಕ ಸುಧಾ ಸೂತಿಯಲಿ
ಕವಿ ನಿರ್ವಿಕಲ್ಪ ಸಮಾಧಿಯಲಿ ಮುಳುಗೆ ಸೃಷ್ಟಿಯ
ಮಹಾಪಾರಾವಾರದ ಉರಿಹೊತ್ತಿ ಧಗಧಗ
ಉರಿವೊಲ್ ತೋರ್ದತ್ತು ರಾಷ್ಟ್ರೀಯ ವಿಕ್ಷುಬ್ಧ

ಪರಿಸ್ಥಿತಿ. ನಿರಕ್ಷರೀ ಲೋಗರ್ಗೆ ಅಜ್ಞಾನದ
ಬಂದಳಿಕೆ ವಿಡಿದು ನರಳುತಿಹ ಜೀವನಂ ನೆರೆ
ತಲ್ಲಣಿಸಿ ಕುದಿಗೊಳೆ ಪರಕೀಯರ್ ಮರುಗುವರೆ?
ದಯಾ ದಾರಿದ್ರ್ಯದಿಂ ದೀನಾತಿದೀನ ಜನ
ಜೀವನ ಬಲ್ ಸಂಕಟ ಪ್ರದಂ; ಚಿಂತಾಕುಲಂ.
ಬಾಳಿನ ಬೈಗಿನಲಿ ಮನಶ್ಶಾಂತಿಗೆ ಅವಕಾಶಂ
ಇಲ್ಲಮೆಂಬೊಂದು ದುಃಖದ ಕೀಟ ಕೊರೆಕೊರೆದು
ಕಾಡುತಿರ್ದತ್ತು ಮನದಾಳದಲಿ. ಸ್ವದೇಶದ
ಮಂತ್ರಮಂ ಪಾಡೆ ಪುರಿದುಂಬಿದುದು ಜನರಾಶಿ.
ಜಾಗೃತಿಯ ಜ್ಯೋತಿಯುರಿಸಿ ರಾಷ್ಟ್ರದಾದ್ಯಂತ
ಖ್ಯಾತಿವೆತ್ತರೇಂ? ರಾಷ್ಟ್ರದ ಸ್ವಾತಂತ್ರ್ಯಮಿನ್ನು
ದೂರ ಕನಸಾಯ್ತು. ನಿರಾಯುಧೀ ದೀನ ಜನರಿಂ
ಕ್ಷಿಪ್ರ ಸಾಧನೆಯುಂ ಅಸಾಧ್ಯಮೆಂಬುದು ನಗ್ನ
ಸತ್ಯ. ಎಂಬೊಂದು ಮನ ಮಂಥನಚಿಂತನದಿ
ಮನವಿಟ್ಟು ಸುಜನ ಬಂಧುಗಳ ಸಂದೋಹದಲಿ
ನೆರೆ ಬೆರೆತು ರಾಷ್ಟ್ರೀಯ ರಾಜನೀತಿ, ದೇಶದ
ಪರಿಸ್ಥಿತಿ, ವಿದ್ಯಾಕ್ಷೇತ್ರ, ರೂಢಿಮೂಲಮಾದ
ಹಳೆಯ ಕಂದಾಚಾರ, ಅವೈಜ್ಞಾನಿಕತೆಯಲಿ
ಜನ ಜೀವನ, ಆರ್ಥಿಕ ಅಭದ್ರತೆಯ ಗೋಳಿನ
ಕಣಜದಲಿ ಗುಲಾಮೀ ಬದುಕು. ಸ್ತ್ರೀ ಸಂಗದ
ದಯನೀಯ ಬಾಳು ಮೊದಲಪ್ಪ ವಿವಿಧ ವಿಚಾರ
ವಿಹಾರದಲಿ ವಿಚರಿಪುದು ಬುದ್ಧಿಮತ್ತೆ. ಚಿಂತೆಯ
ನಿಟ್ಟುಸಿರಿಡುವುದು ಹೃದಯ ಪಕ್ಷಿ. ಹಳಹಳಿಸುತ
ಮುದುಡುವುದು ಮನ.
ದಿನದಿನಂ ವಿದ್ವಾಂಸ ವಿಭೂತಿ
ಮಹೋದಯರ್ ಆಗಮಿಸುತಿರೆ ಶಾಂತಿನಿಕೇತನ
ಜ್ಞಾನ ಪೀಠ ವಿಜೃಂಭಿಸಿದುದು ನವನವೀನ
ಷೋಡಷ ಕಳೆಯಿಂ, ಕವಿವರ್ಯರಾ ಜನಕೋಟಿಗೆ

ಮಹರ್ಷಿಯೈಸಿ, ಶ್ರೀಗುರುದೇವನೈಸಿ ಪ್ರಜಾ
ಹಿತೈಸಿಯೆ ತಾನೈಸಿರೆ ತುಂಬು ಜೀವನೀಯಲಿ
ಸುಸುಂದರ ಬದುಕು ಪರಿಪೂರ್ಣಮಾದತ್ತು ವರ
ಪುಟವಿಟ್ಟ ಮಿಸುನಿಯೊಲ್! ಮಾನವ ಜನುಮ ಸಾರ್ಥಕಂ.
ಮೇಣ್ ಮಾನವೀಯತೆ ಸಾರ್ಥಕಂ! ಪರಮಾರ್ಥ
ಪರಿವಾರದಿಂ ಪರಮ ಪ್ರತಿಭಾ ಪರಿವೇಶದಿಂ.
ಜೀವನೀಯ ಸಂಧ್ಯಾರಂಗದಲಿ ದೈಹಿಕ
ಶಕ್ತಿಯುಂ ಮೆಲ್ಲನೆ ಕುಸಿಯುತಿರುತಿರೆ ಪರಮ
ಚಿಶ್ಶಕ್ತಿ ಕುಂದಿದುದಿಲ್ಲ. ಪ್ರತಿ ಸಾಯಂ ಸಮಯೆ
ಪಡಸಾಲೆ ಜಗಲಿಯಂಚಿನಲಿ ಮಂಡಿಸಿರೆ ಕವಿ,
ಸಂಜೆ ಬಿಡುವಿನ ಶಿಕ್ಷಕರಂ ಬಂಧು ಬಳಗಮಂ
ವಿದ್ಯಾರ್ಥಿಗಳಂ ಆಕರ್ಷಿಪುದು ಅಕ್ಷತೆಯಿಟ್ಟು
ಕರೆದವೊಲ್! ಆಗಳೇಂ ಎಲ್ಲರುಂ ಎಳೆಸೇರಿಸಿ
ಹೊಸೆದಂತೆ ನೆರದಪರ್ ಜಗಲಿಯಲಿ. ಆಗಳ್
ಕವಿವರೇಣ್ಯರ್ ಉಲ್ಲೇಖಿಸಿರ್ದ ಕವಿತೆ ಕಾವ್ಯ
ಮೇಣ್ ಲೇಖನಗಳಂ ತಾವೋದುವರ್ ಮೇಣ್
ಓದಿಸುವರ್. ಮತ್ತಂ ವಿದ್ಯಾರ್ಥಿಗಳ್ ವಿವಿಧ
ರಾಗದಲಿ ಹಾಡಿ ಭಜನೆಗೈದಪರ್ ಕವಿಮನ
ತುಷ್ಟಿಗೊಳ್ವನ್ನ. ಮೇಣಿತರರ್ ತಾವೆ ಲೇಖಿಸಿದ
ಕಥೆ ಕಾವ್ಯಗಳನೋದಿ ವರಕವಿಯ ಸಲಹೆಯಂ
ಪಡೆದು ಧನ್ಯರಾದಪರ್, ತನುಮನಗಳಿಗೆ ನೆರೆ
ಸಂತಸವನು ಜಡಿ ತುಂಬಿ. ಇಂತು ಸಂಜೆವೊಳ್ತು
ರಂಜಿಪುದು ರಂಗುರಂಗಾಗಿ. ಕವಿ ಉದ್ಯಾನ
ವನದಲಿ ಪದಚಾರಣಗೈಯ್ಯುತಿರೆ ಶಿಷ್ಯಜನ-
ಗೆಣೆಯ ಬಂಧುಗಳ್ ಪಿಂಬಾಲಿಪರ್, ಮುಸ್ಸಂಜೆ
ಉರುಳ್ದು ಮೆಲುಮೆಲ್ಲನೆ ನಿಶಿ ಹೆಜ್ಜೆ ಹೆಜ್ಜೆಯಂ
ಮುಂದಿಡುತೆ ಕರ್ಪುಡಿಗೆಯುಟ್ಟು ನಕ್ಷತ್ರ ಕೋಟಿಯ
ಮಾಲೆ ಸೂಡುವನ್ನ. ಎಣೆಯಿಲ್ಲದ ಗೆಣೆಯರಿಂದೆ

ಮಂಗಳಮಯಮಾದತ್ತು ಮುಸ್ಸಂಜೆ ಘನಿಸಿದ
ಇನಿವೊಳ್ತು. ದಿನನಿತ್ಯ ನಿರಂತರ ಪರಿದಿರ್ದ
ಉಲ್ಲೇಖವಾಹಿನಿಯ ರಭಸವಿಳಿದ ಬಳಿಕಲಾ
ಪೊಳ್ತು ನೀರಸಮಾಗದೆ ಸರಾಗಮಾದತ್ತು
ಎಂದಿನವೊಲ್, ಬಹುಮುಖೀ ಪ್ರತಿಭೆಗೆ ವೃದ್ಧಾಪ್ಯ
ಭಾರಮಲ್ಲ. ದೀರ್ಘಾನುಭವದ ಸಾರಸರ್ವಂ
ವರ್ಣವರ್ಣಗಳಿಂದೆಸೆವ ಚಲನಚಿತ್ರದೊಲ್
ಫೇರಿ ನಡೆಸುತಿರೆ ಚಿತ್ತಭಿತ್ತಿಯಲಿ; ಅನನ್ಯ
ನಿರ್ವಿಕಲ್ಪ ಸಮಾಧಿಯ ಸತ್- ಚಿತ್- ಆನಂದ
ಮೋಕ್ಷದ ಸವಿ ನಿತ್ಯ ನಿರಂತರಂ.
ಅಂದಿನಾ
ಬೆಳಗುವೊಳ್ತಿನ ಬಾಲರವಿ ಬಾನೇರುವ ಮುನ್ನ
ಆಗಮಿಸಿದ ಹಳೆಯ ಗೆಣೆಯನೊರ್ವಂ ತಲೆಬಾಗಿ
ವಂದಿಸಿ ಗುರುಗಳಿಂಗೆ ಕೇಳಿದಂ ''ಗುರುಗಳೇ!
ನಿಮ್ಮ ಕಾವ್ಯಾವಲೋಕನದಿಂದೆ ಕಂಡುಬಹ
ದೈವೀಕ ಶಕ್ತಿಯನರಿಯೆ ಕುತೂಹಲವೆನ್ನ
ಕುದಿಕುದಿದು ಕೊನರಿಹುದು ಮನಃ ಬುದ್ಧಿಬಲದಲಿ.
ದೇವರೆನಿಪ ಶಕ್ತಿಯಿಹುದೇಂ? ಏನೆಂಬಿರೈ?''
''ದೈವಿಕಶಕ್ತಿಯನಿಲ್ಲವೆಂದೆಂದು ಭಾವಿಸೆಂ''
''ಲೋಕ ಸಂಗ್ರಾಮದಲಿ ಸಾಯ್ವವರ ಕೊಲ್ವವರ
ಪ್ರೇರಣೆ ಅಥ ಚೋದನೆಯಂ ದೈವಿಕ ಎಂಬಿರೇಂ?
ಏನೆನಿಸುಗು ನಿಮಗೆ?''
''ಈ ಪ್ರಶ್ನೆ ಇತರರ್ಗೆ
ಸಂಬಂಧಿಸಿರ್ಪುದೆನೆ ಇದಂ ನಿಮ್ಮ ನಿಮ್ಮಯ
ತರ್ಕದೊಳೆ ನಿರ್ಣಯ ಸುಲಭಂ'' ಎಂದುತ್ತರಿಸಿ
ಸಿತಸ್ಮಿತರಾದರ್ ಕವಿಗುರುದೇವ. ವಿಚಾರ
ವಿಸ್ತೃತ ನಯನದ್ವಯಗಳಲ್ಲಿ ಸೆಳೆ ಮಿಂಚು
ಮಿನುಗುವೊಲ್ ಮಲರ್ದುದು. ಬೆಳ್ನವಿರ ಬೆಳ್ಳಿಯೆಳೆ
ಬೊಂತೆಬೊಂತೆಯಾದೊಲ್ ಬೆನ್ನಮೇಲೆ ಇಳಿದಿರಲ್

ನೀಳದಾಡಿ ಇಳಿದಿರ್ದುದೆರ್ದೆಯ ಮೇಲೆ ಬಿಳಿ
ರೇಸಿಮೆಯ ಹೋಲಿ! ಧವಳ ಕಾಂತಿಯ ನಿಲುವಂಗಿ
ಅಂದಿಂದಿನ ಒಂದೇ ಬಗೆಯ ತೊಡಿಗೆ. ಏಗಳ್
ಸರಳ ಜೀವನ ಪಟುವೆಂತಂತೆಯೆ ಘನಕಾರ್ಯ
ದುರಂಧರ. ಎಂಭತ್ತೊಂದು ವರುಷಗಳ ನಿರ್ಮಲ
ಬದುಕಿನಲಿ ಸಂಸ್ಕೃತಿಯನ್ನೆ ಸಂಸ್ಕೃತಿಗೊಳಿಸಿದ
ಮಹೋನ್ನತ ವ್ಯಕ್ತಿವರ ಕವಿ ರವೀಂದ್ರನಾಥಂ.
        ವಂಗೀಯ ಸಾಹಿತ್ಯ ಪರಿಷತ್ ಅನನ್ಯಪ್ರೇಮ
ಗೌರವಾದರಗಳಿಂ ಸನ್ಮಾನಿಸಿತು ಎಂಭತ್ತು
ವರ್ಷಗಳ ಶ್ರೀಮಂತ ಕವಿವರ್ಯನಂ. ನೆಚ್ಚಿನ
ಪೆರ್ಮೆಯ ಕವಿಕಲಾವಿದನಂ. ಅಮಿತ ಹರ್ಷದಿಂ
ಆನಂದ ಮೋದದಿಂ ಜಯಧ್ವನಿಗೈಯಿತು ಜನ
ವಾಣಿ. ಹರ್ಷೋದ್ಗಾರ ಗಗನ ಭೇರಿಯಾಯಿತು
ದೂರ ಬೆಟ್ಟ ಮರುದನಿಗೊಡುವವೊಲ್! ಎಲ್ಲೆಡೆಯುಂ
ಜನವೇ ಜನ! ಅಸಂಖ್ಯ ಜನರಾಶಿ! ಆನಂದ
ತುಂದಿಲತೆಯಿಂ ಹರಸಿ ಶುಭಹಾರೈಸುವ ಸುಜನ
ಮೇಳ. ಕವಿಗುರುವು ಪರಮಾತ್ಮನಿಗರ್ಪಿಸಿದರ್
ತಮ್ಮಾತ್ಮ ಸಂತೋಷಮಂ. ಎನಿತು ಜನ್ಮಗಳ
ಸಂಸ್ಕಾರಮೊ ತವನಾಮ ಹಚ್ಚಹಸಿರಾಗಿರೆ
ಭಾರತದಲಿ, ಧವಳ ಕೀರ್ತಿ ಶಿಖರಮೈಸಿ ಗುರುವೆ!
        ವಂಗಭೂಮಿ ಪುಣ್ಯ ಪುತ್ರರ ಜನನಿ! ತನ್ನೊಡಲ
ಪಿಠಾರಿಯಲಿ ನವರತ್ನಗಳ ಕಡೆದು ಜೀವನ
ಪರಿಪುಷ್ಟಿಗೆ ವೇದಾಂತ ಸಂಸ್ಕೃತಿ ಪರಿಮಳಿಸಿ
ಸತ್ಕೀರ್ತಿ ಪತಾಕೆಯನ್ನೆತ್ತಿ ಹಿಡಿದ ಮಹೀಯಸಿ!
ಜನನಿ ಮಾನಿನಿ! ನಿನಗೆ ವಂದನಂ! ದಿನನಿತ್ಯ
ವಂದನಂ!
        ರಾಷ್ಟ್ರೀಯ ಕಾರ್ಯಕ್ಷೇತ್ರಂಗಳಲಿ
ರಾಷ್ಟ್ರಗೀತಾ ಪಠಣಮಿಲ್ಲದೆ ನಡೆಯದು ಕಾರ್ಯ

ಕಾರಣಂ. ''ಜನಗಣಮನ ಅದಿನಾಯಕ ಜಯಹೇ!''
ಘೋಷಣೆಯ ಠೇಂಕಾರ ಮೊಳಗುತಿರೆ ಜನಮನಂ
ತಕ ಥೈ ಪುಳಕಿತಂ! ಕವಿ ರವೀಂದ್ರರ್ ಬಹುಮುಖ
ಪ್ರತಿಭೆಯಲಿ ವಿರಾಜಿಸಿರ್ದೊಡಂ ರಾಷ್ಟ್ರೀಯ
ರಾಜಕೀಯದಲಿ ಮನವಿಟ್ಟ ಮಹಾ ಪ್ರಧಾನಿ!
ಅಜ್ಞಾನವ ಬಗ್ಗುಬಡಿಯೆ ಮುಂದೈದ ಧನ್ವಂತ್ರಿ!
ವಿಶ್ವಕೀರ್ತಿ ಕಸ್ತೂರಿ ಪರಿಮಳ ಪ್ರಸರಿಸಿ
ವಿಶ್ವಕವಿ ಪ್ರಶಸ್ತಿ ಪಡೆದ ಪರಮ ಧನ್ಯಾತ್ಮ!
ಪರಮೋಚ್ಚ ಕಲಾಭಿಜ್ಞತೆಯ ಶ್ರೀ ಪರಂಜ್ಯೋತಿ!
ಸೃಜನಶೀಲತೆಯಿಂದೊಪ್ಪಿ ಹಿಮವತ್ಪರ್ವತದ ಪ್ರತಿ
ಸ್ಪರ್ಧಿಯೋ ಎನೆ ಗಗನಕೇರ್ಪಡೆದ ಕೇತನಂ!
ವಿಶ್ವತೋಮುಖೀ ಪ್ರತಿಭೆಯಂ ಪೊಂದಿ ವಿಶ್ವ
ಮಾನವಂ ತಾನಾಗಿ, ವಿಶ್ವಮಾನವತೆಯಂ
ಜಗಕೆ ಬೋಧಿಸಿದ ಅದ್ಭುತ ವಿಚಾರ ವಿಹಾರಿ
ಕವಿಗುರು ಮಹರ್ಷೀ ರವೀಂದ್ರನಾಥ ಠಾಕೂರ್!
    ''ವಂಗೀಯ ಪುಣ್ಯಭೂಮಿ ಕವಿಯಂ ಜಗತ್ತಿಗೆ
ನೀಡಿರ್ದೊಡೆ ಯುರೋಪ್ ಕವಿಯಂ ವಂಗಭೂಮಿಗೆ
ನೀಡಿತು'' ಎಂದೆಂಬ ದನಿಯಂತರಾರ್ಥಮಿನ್ನುಂ
ಗ್ರಹಿಕೆಗಿರದಿರ್ಪುದು ವಿಶೇಷಂ! ಸಾಗರಮಂ
ಆವಾವ ಮಾನದಂಡ ಅಳೆಯಬಲ್ಲುದೈ ಈ
ಲೋಕದಲಿ? ವಿಶ್ವಮಾನವನಂ ವಿಶ್ವಮಾನ
ದಂಡ ಮಾತ್ರಮೆ ಅಳೆಯಬಲ್ಲುದಲ್ಲದೆ ಮನುಜ
ಸಾಮಾನ್ಯರಿಂದಳೆಯಲಕ್ಕುಮೆ? ಕಡಲ ತಡಿಯಲಿ
ನಿಂತು ನೋಳ್ಪಂಗೆ ಕೊನೆಯುಂ ಕಾಂಬುದೇಂ? ಕಡಲ
ಅಂಶ ಮಾತ್ರಂ ಕಂಡು ಅಳೆಯಲಕ್ಕುಮೆ ಕಡಲಂ?
ಹಿಮಾಲಯ ಪದತಲದಲಿರ್ದಾವು ನೋಡಲ್
ದೃಷ್ಟಿ ಕಕ್ಷೆಯ ಪ್ರದೇಶಂ ಮಾತ್ರಮೆನಲ್ಲೆಲ್ಲಿಯ
ಮಾನದಂಡಂ ಕವಿ ಮಹರ್ಷಿಯ ಸಂಜೀವನೀ

ವಾಹಿಯಂ ಅಳೆಯಲ್ಕೆ? ಪರಮ ಗುರುದೇವನಾ
ಸಾಹಿತ್ಯ ಜೀವನಂ ಇಬ್ಬಗೆಯ ಸುಸುಂದರ
ಆರಾಧನೆಯ ನೇಮದಲಿ ಬಲಿತು ಪರಿಪಕ್ವಂ.
ಪೂರ್ವಾರ್ಧಂ ಸಾಹಿತ್ಯ ಮೇಣ್ ನೈಸರ್ಗಿಕ
ಸೌಂದರ್ಯಕೆ ಮೀಸಲೆನೆ ಉತ್ತರಾರ್ಧಂ
ಸತ್ಯ ಸೌಂದರ್ಯಕೆ ಮೀಸಲಿಸಿದ ಸಾಧನೆಯು
ಜನಕೋಟಿಯ ಅಂತರಂಗದ ಕದವಂ ಮೆಲು ತಟ್ಟಿ
ಸುಪ್ತ ಚೇತನವನೇಳಿಸುವ ಭಾವತೀರ್ಥಂ!
ಆ ಮಹೋನ್ನತ ಕವಿಯ ವ್ಯೋಮರಂಗವಿಹಾರಿ
ಭಾವೋತ್ಕರ್ಷತೆಯಂ ವಿಶ್ಲೇಷಿಸುವೊಡೆ ಕವಿಯೊಲ್
ಅಂಬರದೊಳಾಡಿದಲ್ಲದೆಲ್ಲಿಯ ವಿಶ್ಲೇಷಣೆ?
ಬರಿದೆ ಗಳಪುತ ವ್ಯರ್ಥ ಸಾಸಗೈದೊಡೆಲ್ಲಂ
ಅರ್ಥಮನರ್ಥಮಲ್ಲದೆ ಬೇರೊಂದು ಇಲ್ಲಮೆಂಬೆ.
ಮನಮನಂ ಬೆಸೆದು, ಹೃದಯ ಹೃದಯಂಗಳಂ
ಒಂದು ಗೂಡಿಪ ಸಾರ ಸರ್ವಸ್ವಮಾ ಸಾಹಿತ್ಯ
ಭಂಡಾರ. ವಿಶ್ವಮಾನ್ಯತೆಗೆ ಪಕ್ಕಾದುದು
ವಿಶ್ವಪ್ರಜ್ಞೆಯ ಆಳದಿಂ ಪೊದಳ್ದ ಭಾವನೆ.
ಕವಿ ಮಹರ್ಷಿ ಎಂಭತ್ತೊಂದರ ಹೊಸ್ತಿಲನೇರಿದ
ಸುರಸುಂದರ ಪ್ರಾತಃಸಮಯದಲಿ ಪರಿಸರದ
ಪಚ್ಚವಾರ್ಧಿಯಲೆಲ್ಲೆಡೆ ಮುಂಬಕ್ಕಿಗಳ್ ಎದ್ದು
ಮೆಲ್ಲನೆ ಎರೆಂಕೆಯಂ ಪಟಪಟಿಸಿ ಸುಪ್ರಭಾತ
ಗೀತಮಂ ಪಾಡಿದುವು ರಾಗಾನುರಾಗದಿಂ
ಒಗ್ಗೂಡಿ. ಮಂದ ಮಂದಾನಿಲಂ ಸುಳಿಸುತ್ತಿ
ಸುಯ್ದು ಒಯ್ಯನೊಯ್ಯನೆ ಬೀಸಿವೀಸಿ ಚಾಮರ
ಬೀಸುತಿರೆ ಸಸ್ನೇಹ ರಾಗದಿಂ ತನಿಯಿಂಪು
ಮುದ್ದಿಸಿತು ಮೈಮನಗಳಂ ಪರಮ ಪ್ರೇಮದಿಂ.
ಉದ್ಯಾನ ವನದಲಿ ವಿವಿಧ ವರ್ಣವರ್ಣಾಂತು
ಅರೆಯರಳ್ದ ಪುಷ್ಪ ಸಮುಚ್ಚಯಂ ನರುಗಂಪು

ಬೀರಿ ತಲೆದೂಗುತಿರ್ದುವು ಸಂಮುದ ತೋರ್ಪ್ಪವೊಲ್
ಮಂದಪವನಂಗೊಲಿದು.
ಬೋಲ್ಪುರದ ಪೆರ್ಬಯಲ
ಮಧ್ಯೆ ನೆಲೆಗೊಂಡ ಶಾಂತಿನಿಕೇತನದ ಬೀಡು.
ಅತ್ತಿತ್ತ ಮೈಕೈ ಚಾಚಿ ಶಾಲೆ ಕಾಲೇಜು
ಮೇಣ್ ಕವಿ ಮಹರ್ಷಿಯ ಆಶ್ರಮಗಳ ಅನನ್ಯ
ಸಂಗಂ. ಪಚ್ಚ ಪಸುರೊಸರುತಿಹ ಗ್ರಾಮೀಣ
ಸುಂದರಿಯ ಹಣೆ ತಿಲಕದ ಮಾಳ್ಕೆಯಲಿ; ನೋಳ್ಪಕಣ್
ಮತ್ತಾಗುವನಿತು ಆತ್ಮಸ್ಫೂರ್ತಿಯ ಆಗರಂ.
ವೇದ ಕಾಲೀನ ಋಷ್ಯಾಶ್ರಮಗಳಂ ನೆನಪಿಗೆ
ತರ್ಪವೊಲ್ ಯೋಗಾಶ್ರಮ ಪ್ರದೇಶ ನಿಚ್ಚಂ
ಸಂದರ್ಶನೀಯಮಾದತ್ತು ಎಲ್ಲ ವರ್ಗದ
ಬುದ್ಧಿಮಾನ್ಯ ಜನ ಸಮುದಾಯಕ್ಕೆ.
ಪ್ರಾತಃರ್ವಿಧಿ
ಪೂರೈಸಿ ಪಡಸಾಲೆಯಂಚಿನ ಜಗಲಿಗೈತಂದರ್
ಕವಿ ಮಹರ್ಷಿ. ಪರಿಶುಭ್ರ ಮಂಗಳ ಧವಳಿಮಾ
ಕೀರುತಿಯೊಲ್ ನೀಳ ನಿಲುವಂಗಿ ಧರಿಸಿ. ವೆಳ್ಳಿ
ಎಳೆಯೊಲ್ ಪೊಳೆವ ಅಲಕ ರಾಶಿಯಿಂದೆ ಬೆಳ್ಪವಿರ
ನೀಳ ದಾಡಿಯಿಂದೆ ಜಲಮುತ್ತುಗಳಲ್ಲಲ್ಲಿ
ತೊಟ್ಟಿಕ್ಕುತಿರ್ದುವು ಪರಿಸ್ನಾತ ಶಿರಸ್ಸಿನಿಂ.
ವಯೋವೃದ್ಧ ಮಹರ್ಷಿಯು ರಜತ ಸಲಾಕೆಯೊಲ್
ನಿಂದರ್ ಪಡಸಾಲೆಯ ಸಿಂಹದ್ವಾರದ ಕರಿಯ
ಹೊಸ್ತಿಲಿನ ಮೇಲೆ. ಅಃ! ಬೆಳಗಿನ ತನಿಗಾಳಿಗೆ
ಮೈಗೊಟ್ಟು ಮುನ್ನೇಸರಿನ ವೈಭವೋಪೇತ
ಉದಯಮಾನೋತ್ಸವದ ಸಂನಿರೀಕ್ಷಣೆಯಲ್ಲಿ.
ದೂರ ದಿಕ್ತಟದ ಸೀಮಾ ಕ್ಷೇತ್ರದಲಿ ನೆಟ್ಟ
ಕಂಗಳಂ ಚಂಚಲಿಸದೆ ನೋಡುತಿದ್ದರ್ ಪರಮ
ಸತ್ಯ ಸೌಂದರ್ಯದಾರಾಧನೆಯಲಿ ಮನವಿಟ್ಟು.

ರವೀಂದ್ರನಾಥ ಠಾಕೂರ್-೧೪೧

ಪೊನ್ನೇಸರ್ ಇನಿದಿನಿದಾಗಿ ಮೈದೋರುತಲಿ
ತ್ರಿಲೋಕಮಂ ಎಳೆ ಬೆಳಕಿನಿಂ ಬೆಳಗಿ ತೊಳಗಿ
ಆನಂದ ಸೌಂದರ್ಯ ತೇಜದಿಂ ಜ್ವಲಿಸುತ
ಜಗದೇಕ ವಂದ್ಯನಾದಂ ಗಗನ ಭಿತ್ತಿಯಲಿ.
ಆ ಮಹಾ ಘನತೇಜ ಪುಂಜದಲಿ ಕಣ್ಣಿಟ್ಟು
ಕವಿಮಹರ್ಷಿ ವಕ್ಷ ಸ್ಥಲಿಯ ಮೇಲೆ ಕೈಗಳಂ
ಕಟ್ಟಿದರ್ ಸಂವೀಕ್ಷಣಾ ಭಂಗಿಯಲಿ. ಸುತ್ತ
ಗಿಡಮರಗಳಲಿ ಪಕ್ಷಿ ಸಂಕುಲಮಿನ್ನು ಹಾಡುತಿವೆ
ಸುಪ್ರಭಾತಮಂ ಕೊರಳೆತ್ತಿ. ಸುಳಿ ಸುತ್ತುವೊಲ್
ಸುಯ್ದು ಬಹ ಮಂದ ಮಂದಾನಿಲದ ಮೃದುಸ್ಪರ್ಶ
ತಾಯಳ್ಕರೆಯೊಲ್ ಸುಖ ಪ್ರವಿಷ್ಟಮಾ ವದನ
ಬಿಂಬಕೆ. ಮುಗಿಲ್ ಮಂಜಿನ ತುಟಿಯಂ ಮುದ್ದಿಸಿರೆ
ಎಳೆನೇಸರ್ ಸುವರ್ಣ ಕಾಂತಿಯೊರೆದ ಸಾಲಂಚು
ಕೆನ್ನೀಲ ಮುಗಿಲಿನಲಿ. ಆಗಳೇಂ ಅಂಬರದಿ
ಬೆಳ್ಳಕ್ಕಿಗಳ ಹಿಂಡು ಎರೆಂಕೆಯ ಬಿದಿರ್ಚಿ
ಹಾರುತಿರೆ ಕರ್ಪುಮೋಡದದಡಿಯಲಿ ಸಾಲ್ಗೈಸಿ
ಧವಳ ಕೀರ್ತಿಯೇ ಪಾರ್ದುದೊ ಎನಲ್ ಮನೋಹರ
ದೃಶ್ಯಂ ರಸಪೂರ್ಣ ದೃಷ್ಟಿಗೆ. ನೋಡುತಲಿರೆಯಿರೆ
ನಸುವೊಳ್ಳು ಉರುಳಿ ಮುಂಬೆಳಕು ಹೊಂಬಿಸಿಲಾಯ್ತು
ಮೈಗೆ ಬೆಚ್ಚನೆ ಮುದ್ದಿಡುವಂತೆವೊಲ್. ಆಗಳ್
ವಿದ್ಯಾರ್ಥಿಗಳಿತ್ತಲ್ ದಂಡೈಸಿ ಬರುತಿರಲ್
ಅಧ್ಯಾಪಕರ್ ಪಿಂಬಾಲಿಸಿ ಬಂದರ್ ಮಹರ್ಷಿಯ
ಸಂದರ್ಶನಕೆ.
''ಶುಭಾಶಯಗಳು ಗುರುದೇವಾ!
ಹೊಸವರುಷ ಹರುಷತರಲಿ ನಿಮಗೆ!'' ಎಂದರೆಲ್ಲ
ಕೈಮುಗಿದು ಪ್ರಸನ್ನ ಮುಖದಿಂ. ಮಹರ್ಷಿಯುಂ
ಎಲ್ಲರಂ ಹರಸಿ ಪ್ರತಿ ಶುಭಾಶಯ ಕೋರಿದರ್!
ಮತ್ತಾಗಳ್ ಕುಟುಂಬಿಗರ್ ಮಿತ್ರರ್ ಬಂಧುಗಳ್

ಬಂದು ನೆರೆದರ್ ಪ್ರೀತಿ ವಾತ್ಸಲ್ಯ ಗೌರವಗಳ
ಗಣಿಗಳಾಗಿ. ಪರಸ್ಪರ ಸಂದರ್ಶನ ಭಾಗ್ಯ
ಆನಂದಲಹರಿಯಂ ಉಕ್ಕಿ ಹರಿಸಿತು. ಪೊಳ್ತು
ಸರಸ ಸಂಭಾಷಣೆಯಲುರುಳಿ ಚದರಿದರೆಲ್ಲ.
ಕವಿ ಬಾಗಿಲಿನ ಹೊಸ್ತಿಲಲಿ ನಿಂತು ನೋಡಿದರ್
ಲೋಕದೈಸಿರಿಯ. ಕೈಯಲಿ ಧವಳ ಕಾಂತಿಯಿಂ
ನಳನಳಿಸುವ ಗುಲಾಬಿಪೂಗೊಂಚಲ್. ಸುಗಂಧಿತ
ಪೂವುಗಳ ಆಕರ್ಷಣೀಯ ರೂಪು! ವರಕವಿಯು
ಪ್ರಕೃತಿಯೆಡೆಗೊರ್ಮೆ ಪೂಗಳೆಡೆಗೊರ್ಮೆ ಕಣ್
ನೆಟ್ಟು ನೋಡಿದರ್; ಜಗತ್ ಸೃಷ್ಟಿಯ ಮಾಯಾವಿ
ದೇವತೆಯ ಅದ್ಭುತ ಅನನ್ಯ ಚಾಣಾಕ್ಷ್ಯ ಮತಿ
ಇಂದಿನಾವ ವೈಜ್ಞಾನಿಕ ದೃಷ್ಟಿಗೆ ನಿಲುಕದ
ಮಹಾ ಮಾಯಾ ತಂತ್ರಮೆನೆ ಏಂ ಅದುಭುತಮಾ
ಮಹೋನ್ನತ ಸೃಷ್ಟಿ ಶಕ್ತಿ! ಅಃ, ಏಂ ಪ್ರಜ್ಞಾನ!
ಏಂ ತಾಂತ್ರಿಕತೆ! ದೇವ! ನಿನ್ನನೆನಿತು ಯೋಚಿಸಿ
ತರ್ಕಿಸಿದೊಡಂ ಅರ್ಥೈಸಲಾರದು ಈ ಮಾನವ
ಬುದ್ಧಿ ವೈಜ್ಞಾನಿಕದೇಣಿಯಂ ಎನಿತು ಏರ್ದರೇಂ?
ನೀನು ನೀನೆ! ನಾವು ನಾವೇ! ದೊರೆಯೇ! ನೀಂ
ದಾರಿದೋರದಿರೆ ಈ ಬದುಕು ನಶ್ವರವಯ್ಯ!
ಎನುತೆ ಜೋಡಿಸಿದರ್ ಕರಂಗಳಂ ಭಕುತಿಯಿಂದೆ.
ಭವನ ವಲಭಿಯಿಂ ದಿವ್ಯ ಕಪೋತಗಳ ದಂಡು
ಎರೆಂಕೆಗಳ ಪಟಪಟಿಸಿ ರೊಯ್ಯನೆ ವೇಗದಲಿ
ಪಾರ್ದುವಂಬರಕೆ ಮನಮೋಹನೀಯ ಶೈಲಿಯ
ವಿರಚಿಸಿ. ಕವಿ ಮಹರ್ಷಿಯು ಆ ಪರಿದೃಶ್ಯಮಾನ
ಸೌಂದರ್ಯಮಂ ವೀಕ್ಷಿಸಿದರವು ಮರೆಯಾಗುವನ್ನ.
ಹೊಸ ವರುಷ ಪರಿಸಿದ ಹರುಷ ವಾಹಿನಿಯ ನೆನೆದು,
ಅಷ್ಟ ದಶಕಗಳ ಜೀವನ ಸಾರ ಸಲಿಲದಲಿ
ಮುಳುಗೆದ್ದು ಆನಂದ ರಸ ಪೂತ ಹೃತ್ ಕಲಶ

ಉಕ್ಕಿರೆ ರಸ ಋಷಿಯಾಗಿ ನಾಕದರಮನೆಯಂ
ಚಿಂತಿಸಿದರ್.
''ತನ್ನಯ ಜೀವಮಾನ ಕಳೆಯುತಿರೆ
ರಾಷ್ಟ್ರ ಸ್ವಾತಂತ್ರ್ಯ ಪಡೆಯದಿರ್ದುದು ದುರದೃಷ್ಟ.
ಎನ್ನ ಜೀವಿತದೊಳದ ಕಾಂಬೆನೋ ಇಲ್ಲವೋ.
ರಾಷ್ಟ್ರೀಯ ಸಂಕಷ್ಟ ಹರಿದಿರ್ದೊಡೆನ್ನ ಮನ
ಸೊಗದಿಂದಿರುತಿರ್ದುದು ಶಾಂತ ರಸ ನಲಿದುಂಡು.
ರಾಜಕೀಯ ಸುಸ್ಥಿತಿಯುಂ ಇಲ್ಲ. ಬಡತನದ
ನಿವಾರಣೆಯುಂ ಇಲ್ಲ. ವಿದ್ಯೆ-ಬುದ್ಧಿಗಳಿಲ್ಲ.
ಎಲ್ಲಮಿರ್ದು ಏನಿರದ ದಾರಿದ್ರ್ಯದ ಕೋಟೆ
ಭಾರತವರ್ಷ! ಆನೆನ್ನ ಗುರಿ ಮುಟ್ಟಿರ್ದೊಡೇಂ?
ರಾಷ್ಟ್ರೀಯ ಪ್ರಗತಿಯಂ ಕಣ್ತುಂಬ ಕಂಡೆನಿಲ್ಲ.
ಎಂಬೊಂದು ದುಃಖ ಇನ್ನೆಗಂ ಮನದಲಿರ್ಕುಂ....''
ಎನುತೆ ಪದಚಾರಣಗೈದರ್ ತಾನೇಕಾಂಗಿ.
ಅಂಚೆಯವ ಜಣಿ ಜಣಿರೆನೆ ಅಲುಗಿಸುತ ಗೆಜ್ಜೆಯ
ಕೋಲಂ ಪರಮಾನಂದ ಮೋದದಲಿ ನೀಡಿದಂ
ದೇಶಾಂತರಗಳಿಂದೈತಂದ ನೂರಾರು ಶುಭ
ಸಂದೇಶಗಳ ಪತ್ರಾವಳಿಯಂ. ಹರಿವಾಣಂ
ತುಂಬುವನಿತು ಪತ್ರಗಳ ವಾರಾಶಿ; ತನುಮನ
ಆನಂದ ಪುಳಕಮಪ್ಪವೊಲ್ ಅಂದ ಚೆಂದದ
ರಾಶಿ! ನಯನದ್ವಯಗಳಲಿ ಸುಖಾಶ್ರು ತುಂಬಿರೆ
ಒರಿಸಿ ನುಡಿವನಿತರೊಳ್ ಅಂಚೆಯವ ವಿನಯದಿಂ
ಕೈಮುಗಿದು ಪಿಂತಿರುಗಿದಂ ಬಂದ ಬಟ್ಟೆಯೊಳೆ.
ಕಾಲಮಾನಂ ಉರುಳುತಿರೆ ದಿನದಿನ ಎಂದಿನ
ಮಾಳ್ಕೆಯಲಿ. ಮಹರ್ಷಿಯ ದೇಹಸ್ಥಿತಿ ಸೂಕ್ಷ್ಮತೆಯ
ಹಂತವೇರಿದತ್ತು ವಯೋಧರ್ಮದಿಂ. ಬಂಧು
ಜನಂ, ಶಿಷ್ಯಗಣಂ ಗೆಣೆಯರ್ ಆಗಾಗಳುಂ
ಬರುತಿರ್ದರ್ ದರ್ಶನಾರ್ಥಿಗಳೈಸಿ. ಬೇಸಿಗೆಯ

ಸುಡು ಬಿಸಿಲಿನ ಗಾವರದಿಂ ರಾಜ್ಯದೆಲ್ಲೆಡೆ
ಜಲ ಬತ್ತಿ ಹಿಂಗಿ ಜಲದಾಹ ಬೆಳೆಯುತಿರಲಾ
ಬಿಸಿ ಶಾಂತಿ ನಿಕೇತನಮಂ ಮುಟ್ಟಿತು ಒಣನಗೆ
ಬೀರಿ. ಜನಮನಂ ಸೈಗೆಟ್ಟಿರೆ ಅನಾರೋಗ್ಯ
ಪೀಡಿತ ಗುರುವರ್ಯರ ನೆರವಿಂಗೆ ಮುಂದೈಯ್ದು
ಬಂದನೊರ್ವ ತಾಂತ್ರಿಕ ಬುದ್ಧಿಬಲದ ಪ್ರತಿಭಾ
ವ್ಯಕ್ತಿ. ಗುರುದೇವನಂ ಕಂಡು ನಮಿಸಿ ಜಲ ಬವಣೆಯಂ
ತಾಂ ಬಗೆ ಹರಿಸಲೆಂದೈತಂದೆನ್, ತವ ಅಪ್ಪಣೆ
ದೊರೆತೊಡಾಂ ಕಜ್ಜ ಕೈಕೊಳ್ವೆಂ'' ಎನಲ್ ಪರಮ
ವಿನಯದಿಂ. ಆದರ್ಕಾ ಗುರುದೇವನೊಪ್ಪಿ ಬಲ್
ಆನಂದದಿಂ ನುಡಿದರ್ ''ನಮ್ಮ ವಿಪರೀತ ಜಲ
ಕ್ಷಾಮಮಂ ನಿವಾರಿಸಲ್ ಮುಂದೈದ ನಿಮ್ಮನಾಂ
ಅಭಿನಂದಿಸುವೆನ್ ಬಂಧು! ಜಲಕ್ಷಾಮವೆಮ್ಮಂ
ಕಾಡುತಿಹುದು ನಿಜ ರಾಹು ಕೇತುಗಳ ಮಾಳ್ಕೆಯಲಿ.''
''ಗುರುವರ್ಯ! ತಮ್ಮ ಸಾಮ್ರಾಜ್ಯಮಂ ಜಲಕ್ಷಾಮ
ರೋಗದಿಂ ಬಿಡುಗಡೆಗೈವುದರಲಿ ಪುಣ್ಯವಿದೆ.
ಆನಿದರೊಳ್ ಸಂಪ್ರೀತಂ. ನಿಮ್ಮ ಸಮ್ಮತಿಯು
ದೊರೆಯೆ ಸಾಲ್ಗುಂ,'' ಎನುತೆ ಕೈಮುಗಿದನ್ ತಲೆಬಾಗಿ.
ಬಳಿಕ ತಾಂತ್ರಿಕಂ ಆ ಪುಣ್ಯಭೂಮಿಯಲೆಲ್ಲ
ಓಡಾಡಿ ಬುದ್ಧಿಬಲದಿಂ ಗುರುತಿಸಿದಂ ಜಲ
ಸಂವೃದ್ಧಮಿರ್ದ ತಾಣಮಂ. ಕಾರ್ಮಿಕ ಜನಂ
ನಿಯೋಜಿಸಿ ಭೂಮಿಯಂ ಆಗಳ್ತೇ ತೋಡಿಸಿದನ್
ವರ ಅಂತರಗಂಗೆ ಜಳಜಳನೆ ಸಿರಿನಿಧಿಯ್ಯೆಸಿ
ಉಕ್ಕಿ ಹರಿವನ್ನ. ಆ ಜಲ ಬುಗ್ಗೆಯಂ ಕಂಡು
ಆಶ್ರಮ ನಿವಾಸಿತರ್ ಆನಂದಿತರಾದರ್
ಕುರುಡಂಗೆ ಕಣ್ಬೆಳಕು ಮೂಡಿದವೊಲ್! ಮತ್ತಂ
ಗುರುದೇವನಲ್ಲಿಗೈದು ಜಲಮಂ ಸಂವೀಕ್ಷಿಸಿ
ಪಾಡಿ ಪೂವೆರಚಿ ಪಿಂತಿರುಗಿದರ್ ಸಂತುಷ್ಟ

ಮನದಿಂ. ಕೆಲದಿನಗಳ ಬಳಿಕ ಕಟ್ಟೆಯಂ ಕಟ್ಟಿ
ಬಾವಿಯ ನಿರ್ಮಾಣ ಪೂರ್ಣಗೊಂಡಿರೆ ಆಶ್ರಮ
ವಾಸಿಗಳಿಗೆ ಪರಮ ನಿಧಿಯೈಸಿ ಉಪಕರಿಸಿದ
ತಾಂತ್ರಿಕಜ್ಞನಂ ಅಮಿತ ಉತ್ಸಾಹದಿಂ ಹರಸಿ
ಅಭಿನಂದಿಸಿದರ್ ಶಿಷ್ಯಗಣಂ.
                    ಪಗಲ್ ಉರುಳಿ
ಪೊನ್ನೇಸರ್ ಇಳಿಮುಖನಾದಂ ಅಂಬರದೊಳ್
ಮುಸ್ಸಂಜೆಯ ಹೊಂಗಾಂತಿ ಹರಸುತಿರೆ ಪಶ್ಚಿಮ
ದಿಗ್ದೇಶದಲಿ. ಒಯ್ಯೊಯ್ಯನೆ ತಣ್ಪು ತಳೆದತ್ತು
ದಿಶೆಯಿಂದಿಶೆಗೆ ಬೀಸಿ ಬರ್ಪ ಮಂದ ಪವನಂ.
ಪಕ್ಷಿಗಳ್ ಸುಳಿಸುತ್ತುತಿರೆ ಮರಗಳೆಡೆ ಕಣ್ಣಿಟ್ಟು
ಗೂಡುಗಳರಸುತ. ದೂರ ವೆಟ್ಟಿನ ಬೆಂಗಡೆಗೆ
ಇಳಿದ ಅಸ್ತಮಾನ ರವಿ. ಉಜ್ವಲ ರವಿಬಿಂಬ
ಮರೆಯಾದೊಡಂ ಹೊನ್ನ ವರ್ಣ ಅಳಿದುದಿಲ್ಲಂ.
ಚಣಚಣಂ ಮುಸ್ಸಂಜೆ ಕವಿದುಬರುತಿರೆಯಿರೆ
ದಿಕ್ತಟದ ನೀಲಿಯಂಚಿನಲಿ ಹುಣ್ಣಿಮೆ ಚಂದ್ರ
ವೈಶಾಖೀ ವೈಖರಿಯಲಿ ಮೆಲುಮೆಲ್ಲನೆ ಮೂಡಿ
ಬಂದಂ ಹೊನ್ನ ಹರಿವಾಣದವೊಲ್! ಕನಕ ಕಾಂತಿ
ಹರಡಿದ ಸುನೀಲ ಭಿತ್ತಿಯಲಿ ಹೊನ್ನ ಬಿಂಬಂ
ಮೇಲೇರುತಿರೆ ನೋಳ್ಪ ಕಂಗಳಿಗೆ ರಸದೌತಣ
ಇಕ್ಕಿದವೊಲ್ ಅನುಪಮ ಸೌಂದರ್ಯ ಶ್ರೀನಿಧಿಯೆ
ಉತ್ತುಂಗಕೇರ್ವವೊಲಿರೆ ಜಗತ್ತು ಮಧುಮಯಂ
ಆ ಮಹೂರ್ತದಲಿ.
                    ಗುರುದೇವ ಜಗಲಿಗೆ ಮೆಲ್ಲ
ಮೆಲ್ಲನೈತಂದು ಮಂಡಿಸಿದರ್ ದಿನ ನಿಚ್ಚದ
ಪೀಠದಲಿ. ಆಗಳ್ತೇ ತಮ್ಮ ಜಲ ಕ್ಷಾಮವಂ
ನೀಗಿಸಿ ಉಪಕರಿಸಿದ ತಾಂತ್ರಿಕಜ್ಞನಿಗೆ ಕಿರು
ಸನ್ಮಾನ ನೀಡಿ ಗೌರವಿಸುವ ಸಿದ್ಧತೆಯೊಳಿರ್ದ

ಆಶ್ರಮದಲಿ ಸಂತಸ ಪ್ರೀತಿ ಗೌರವಗಳ ಹೊನಲು
ಹರಿದಿರ್ದುದೆಲ್ಲರೆರ್ದೆಯಲಿ ವ್ಯಾಪಕಮಾಗಿ.
ಅಮೃತಮಯ ಸಂಧ್ಯಾ ಶೋಭಾ ಸಮುದ್ರದಲಿ
ತರಂಗ ತರಂಗಗಳ್ ಎದ್ದು ಮೆಲು ಮೆಲ್ಲನೆಯೆ
ತರಂಗಿತಗೊಳುವವೊಲ್ ಶೋಭಾಯಮಾನದಿಂ
ಮೃದು ಮಂದ ಮರ್ಮರ ಲೀಲೆ ಮೆರೆದತ್ತು ಪರಿ
ಸರದ ತನಿ ಗಾಳಿಯ ಲೀಲಾ ಖೇಲನದಲಿ.
ನಸುವೊಳ್ತಿನಲಿ ತಾಂತ್ರಿಕಜ್ಞಂ ನಡೆತಂದನ್
ಲಜ್ಜೆ ಸಂತಸಗಳೆರಡರ ಗಣಿಯೆ ತಾನಾಗಿ.
ಕಿರು ಕಜ್ಜಕೆ ಸನ್ಮಾನ ಬೇಡಿಮೆಂದು ಬೇಡಿರೆ
ಗುರುದೇವ ಮಾನಿಸದೆ ಸಂಜೆಯಲಿ ಅರೆತಾಸು
ಬಂದೆಮ್ಮೊಡಂ ಸಹಕರಿಸೆಂದು ನುಡಿಯಲ್ ಆ
ತಾಂತ್ರಿಕಜ್ಞ ಮರುನುಡಿಯೆ ನಾಲಗೆಯಿನಿತಲುಗದೆ
ಮಿಣ್ಣನಿರ್ದಂ. ಮೇಣಾಸಂಜೆ ಜಗಲಿಯೇರಲೆಲ್ಲರ
ಪ್ರಸನ್ನತೆಯೆ ಸ್ವಾಗತಿಸಿತು ಆಳ್ಕರೆಯಿಂದೆ.
ಗುರುದೇವನ ಬಳಿಯೆ ಕುಳ್ಳಿರಿಸಿ ಪೀಠದಲಿ ಅತಿ
ಗೌರವದಿಂ ಪಾಲ್ಪಣ್ಣುಗಳನಿತ್ತರ್ ಕಾಣಿಕೆಯ
ಮಾಳ್ಕೆಯಲಿ. ಆಗಳ್ ನಿಜ ಸಂಧ್ಯಾ ಸೊಬಗಿನ್ನು
ವಿಜೃಂಭಿಸುತಲಿತ್ತು. ಪೂರ್ಣಚಂದ್ರನ ಸ್ವರ್ಣ
ಬಿಂಬ ಮುಗಿಲ ದಿಣ್ಣೆಯನೇರ್ದು ಪರಮ ಪವಿತ್ರ
ತೇಜದಿಂದೊಪ್ಪುತಿರ್ದಂ ಎನೆ ಆ ರಮಣೀಯ
ಸೌಂದರ್ಯ ವಾರಾಶಿಯ ಮಧ್ಯೆ ಗುರುದೇವನ
ಸನ್ನಿಧಿಯಲಿ ಪಾಲ್ಪಣ್ಣುಗಳ ಕೈಗಾಣಿಕೆಯೇಂ
ಸಾಮಾನ್ಯಮೇ? ಅಹಾ! ಪ್ರೀತಿ ವಿಶ್ವಾಸಗಳ
ಪರಿಮಳಂ ತುಂಬಿ ತುಳುಕಿ ಅನುರಣಿತಮಾದೊಲ್
ರಾಜೋಚಿತಮಾದ ಮಹಾ ಗೌರವವಂ ಮಿಕ್ಕಿ
ಮೀರಿತಾ ಸನ್ಮಾನಶ್ರೀ! ಅಂದ ಬಳಿಕಲಾ
ತಾಂತ್ರಿಕಜ್ಞಂ ಸಂತಸ ಭಕ್ತಿವಿನಯ ಲಜ್ಜೆ

ಗೌರವಗಳ ಪರವಶತೆಯಿಂ ಸ್ವೀಕರಿಸಿದಂ
ತಲೆವಾಗಿ. ಮೇರು ಗುರುವಿನ ಕಾಲ್ವಿಡಿದು ನಮಿಸಿ
ಧನ್ಯನಾದನಾ ತಾಂತ್ರಿಕಜ್ಞಂ.

ಏಗಳುಂ

ರಾಜಕಾರಣಿಗಳ್ ವರ ವಿದ್ಯಾಲಂಕಾರ
ವಿದ್ವಾಂಸರುಗಳ್ ಶಿಷ್ಯರುಗಳ್ ಬರುತಿರ್ದರ್
ಸಂದರ್ಶನಾರ್ಥಂ. ಬಿಡುವಿಲ್ಲದನಿತು ನಿಚ್ಚ
ಜನಸಂದಣಿ. ದೂರದಿಂದೈದುವರ್ಪ ಅತಿಥಿ
ಮಹೋದಯರ ದಿನನಿತ್ಯದ ಯೋಗಕ್ಷೇಮವಂ
ಗಮನಿಸುವರ್ ಆಸ್ಥೆಯಲಿ ಎಂದಿನ ಪಾಂಗಿನಿಂ.
ಮೆಯ್ಯಶಕ್ತಿ ಕುಗ್ಗಿ ನಲುಗಿರ್ದೊಡಂ ಭಾರತದ
ಪರಿಸ್ಥಿತಿಯಂ ಕುರಿತು ರಾಜಕಾರಣಿಗಳ ಬಳಿ
ಚರ್ಚೆ ನಡೆಸುವರ್. ಗೆಣೆಯರಾಗಿ, ಗುರುಗಳಾಗಿ,
ಕವಿಯಾಗಿ ಬೆರೆವರ್ ಕಿನಿಸಿಲ್ಲದೆ ಎಲ್ಲರಲಿ.
ಕಣ್ ಹೊಳಪಿನಿತು ಕುಗ್ಗಿದುದಿಲ್ಲಂ. ದನಿಕಿಂಚಿತ್
ಜುಣುಗಲಿಲ್ಲಂ. ಚಿಂತನ ಶಕ್ತಿ ಉಡುಗಲಿಲ್ಲಂ
ಎನಲ್ ತಿಳಿ ಮನವೇ ಗುರು ಮಹರ್ಷಿಯ
ಪ್ರತಿಭಾಮಯ ಜೀವನಂ. ಆದೊಡಂ ಕವಿಯ
ವರ ರಜತ ಸಲಾಕೆಯೊಲಿರ್ದ ದೇಹ ಸಂಪದಂ
ಕರಗಿ ಸೊರಗಿದತ್ತು ವಯೋಧರ್ಮದಿಂ ಮೇಣ್
ಒಡಲರೋಗವಶದಿಂ. ಮೊಲ್ಲೆ ಬಿಳ್ಪಿನ ನೀಳ
ನಿಲುವಂಗಿಯ ಮರೆಯೊಳಿರ್ದ ಶರೀರ ಸಂಪುಟಂ
ಚೆನ್ನವೀರ ಮರೆಯೊಳಿರ್ದ ಮುಖಮಂಡಲಂ ನೆರೆ
ಒಳಗಿಂದೊಳಗೇ ನಮೆಯುತಿರಲ್ ಘನ ವೈದ್ಯರ
ಚಿಕಿತ್ಸೆ ಔಷಧ ಪಥ್ಯಪಾನ ಎಲ್ಲಮಿರ್ದು ಮೈ
ಗೂಡಲಿಲ್ಲವಾರೋಗ್ಯ ಭಾಗ್ಯಂ. ಅಶಕ್ತ ದೇಹ
ಮೆಲುಮೆಲ್ಲನೆ ದಿನಚರಿಯಂ ಪೂರೈಸುತಿರ್ದುದು
ಯಥೋಚಿತಮಾಗಿ. ಮೆಲ್ಲುಲಿಯ ನಲ್‌ವಾತುಗಳ

ಸರಿಸುರಿಸಿ ಹೇಳಿಕೇಳಿ ರಾಷ್ಟ್ರದ ಸ್ಥಿತಿಯಂ
ಅವಲೋಕಿಸಿ ತನ್ನೊಳ್ ನುಡಿದರಿಂತು "ಈಗಳ್
ವೃದ್ಧಾಪ್ಯವೆನ್ನಂ ಬದಿಗೊತ್ತಿರಲೇಂ? ಪಗಲ್
ಇರಳ್ ದೈವವೆನ್ನಯ ಬಳಿಯಲಿರೆ ಬೇರೆಯೇಂ
ವೇಳ್ಕುಮೆನಗೆ? ದೈವ ಕೃಪೆಯೊಳ್ ಸೋಲುಗೆಲುವು
ಏನಿರ್ದೊಡವಂಗಕ್ಕು. ಪ್ರಯತ್ನದಲೆನ್ನಯ
ವಿಫಲತೆಯಿರೆ ಬೆಸನಮಿಲ್ಲಂ. ಬದುಕು ಪ್ರೇಮದ
ಪರಿಪಕ್ವತೆಯಂ ಮುಟ್ಟದಿರೆ ವ್ಯರ್ಥಮಾಗದು.
ಪುಟ್ಟಿನೊಳೆ ಬಾಡುವ ಕುಸುಮಗಳ್ ಮರಳುಗಾಡ
ಕಾವಿನಲಿ ಹಿಂಗುವ ಹೊಳೆಗಳ್ ವ್ಯರ್ಥವೆಂಬೆನೆ?
ಮಂದಗತಿಯ ಬಾಳೆಂದಾದೊಡಂ ಸಫಲತೆಯ
ಪಡೆದಪುದು ಎನಲಿನ್ನು ಫಲಿಸದೇಂ ಒಗ್ಗಟ್ಟು
ಒಗೆದ ರುದ್ರ, ಭೀಷಣ ರಾಜಕೀಯದ ಪಾಶ?
ಗಾಂಧೀಜಿಯ ನೇತೃತ್ವದ ಸ್ವದೇಶ ಕಾರ್ಯಂ
ಕೈಗೂಡುವುದರಲಿ ಅಪನಂಬಿಕೆ ಇಲ್ಲ. ಹಾಡಿ
ಪಾಡದ ಪರಮ ಗೀತೆಗಳ್ ವಾಣಿಯ ವೀಣಾ
ತಂತ್ರಿಯಲಿ ಮುಂದೆಯಂ ಮಿಡಿವುದಂ ಬಲ್ಲೆನಾಂ.
ಮತ್ತದರ ಪರಮಾರ್ಥಮರ್ಥೈಸದ ವ್ಯರ್ಥಮಂ
ನಷ್ಟಕಲ್ಪನೆಯ ಗುಳಿಗೊತ್ತುವಗತ್ಯಮಿಲ್ಲ.
ಜೀವನೀ ಸೂತ್ರಧಾರಿ ಆ ದೇವನಿರೆ ಆಂ
ಚಿಂತಾನಲಕೆ ಬೀಳುವ ಗೋಜಿನಿತಿಲ್ಲ....ಎನುತೆ
ಗಂಭೀರ ಭಾವದೊಳ್ ದೂರ ನೀಲ ಸೀಮಾ
ಕ್ಷೇತ್ರಮಂ ನಿಟ್ಟಿಸಿದರ್ ತನ್ನಾತ್ಮ ಪುಷ್ಪಂ
ಸಮರ್ಪಿಸುವೊಲ್ ಇಷ್ಟದೈವದ ಪದತಲದಲಿ!

Oh king, you sought to charm
Time with the Magic of beauty
And weave a garland that
Would bind formless death

ರವೀಂದ್ರನಾಥ ಠಾಕೂರ್-೧೪೯

With deathless form....this
Mausoleum stands still and
Unmoving in its place.
Here on this dusty earth it
Keeps death tenderly covered
In the shroud of memory.

ಕವಿಮಹರ್ಷಿಯ ಆತ್ಮನಿವೇದನೆ ಪೊಣ್ಮಿದುದು
ಮೊರೆದು ಭಾವೋದ್ವೇಗದಿಂ ತನಗರಿಯದವೊಲ್.
ಅಂದಿನ ಬಳಿಕ ಮಹರ್ಷಿಯ ಶರೀರಾರೋಗ್ಯ
ಮೆಲುಮೆಲ್ಲನೆ ಕುಸಿದತ್ತು ನೆತ್ತರ ಕಣಕಣಂ
ಪೀರುವವೊಲ್ ನಿಚ್ಚಂ. ಕವಿ ಮಹರ್ಷಿಯು ಅದೇ
ಸಂಸ್ಥಿತಿಯಲಿ ಮೇಣದೇ ತಾಣದಲಿ ತನ್ನಯ
ಸಂದರ್ಶನಾರ್ಥಿಗಳಿಗೆ ದರ್ಶನವೀಯುತಲಿ
ಮುಂದಿನ ಪರಮ ಕಾಲಮಾನಮಂ ನಿರಂತರ
ತ್ರಿಲೋಕದ ಲೋಗರ ಶುಭ ಹಾರೈಕೆಯಿಂದೆ
ಮೇಣ್ ಸರಸ್ವತಿಯ ಕಾರುಣ್ಯಪೂರ್ಣ ದಯೆಯಿಂದೆ
ಉಸಿರಾಡಿದರ್ ದೈವಚಿಂತನೆಯ ನಿರ್ವಿಕಲ್ಪ
ಸಮಾಧಿಯಲಿ ಮುಳುಗಿ.
"ರವೀಂದ್ರ ಸ್ವರ್ಣಗ್ರಂಥ"
ಎಂದೆಂಬ ಪುಸ್ತಿಕೆ ಕವಿವರ್ಯರ ಸಂಜೀವನ
ವಿಸ್ತಾರ ಎಲ್ಲೆಲ್ಲಿ ಎಂತೆಂತು ಹರಿದತ್ತು
ಎಂದೆಂಬುದಂ ಅರಿಯೆ ಘನಂ ಲೋಕಮಾನ್ಯರ
ಪತ್ರಾವಳಿಯ ದಿವ್ಯ ಸಂಪುಟಂ. ಈಯೊಂದು
ಸಂಪುಟಮೆ ಸಾಲ್ಗುಂ ರವೀಂದ್ರರ ಸುಪರಿಚಯಕೆ.
ಪ್ರಪಂಚದ ಮಹೋನ್ನತ ಸ್ಥಾನೀಕರ್ ವೀರ
ಕಲೋಪಾಸಕರ್ ಉದ್ದಾಮ ಪಂಡಿತರ್ ವರ
ಜಿಹಾಸುಗಳ್ ಪ್ರಜಾಪತಿಗಳ್ ಪರಮಗುರುಗಳ್
ಪ್ರಜ್ಞಾನ ಘನರ್ ಧೀರ ಸಾಸಿಗಳ್ ಅನುಪಮ

ಸ್ನೇಹದಿಂ ಪಾಲ್ಗೊಂಡಿಹರೊಗ್ಗೂಡಿ ಸುಜೀವನ
ಧಾರೆಯಂ ಲೇಖಿಸಿರಲ್ ಸುವರ್ಣಾಕ್ಷರಗಳಲಿ.
ಸರ್ ಸಾವಿರದೊಂಭೈನೂರನಲವತ್ತೆರಡರ ಮೇ
ತಿಂಗಳಿನಲಿ ತಮ್ಮ ಎಂಭತ್ತೊಂದರ ಜನ್ಮ
ದಿನೋತ್ಸವದಂದು ಕವಿಮಹರ್ಷಿಗಳ ಸ್ವಾಸ್ಥಂ
ಅಸಮರ್ಪಕಮಿರೆ ಕೊರಗು ಅಂಟಲಿಲ್ಲ ಚಿತ್ತಕೆ.
ನಿಶ್ಚಿಂತೆ ನಿರಾತಂಕದಿಂ ವಯೋಧರ್ಮಕೆ
ಮಣಿದು ಅಧ್ಯಾತ್ಮಚಿಂತನಾವೇಶದಲಿ ನೆರೆ
ಮುಳುಗಿ ಶಾಂತಪ್ರಶಾಂತ ಭಾವಂ ಬಲಿಯುತಿರೆ
ದಿನದಿನಂ ದೇದೀಪ್ಯಮಾನಮಾದತ್ತು ಆತ್ಮ
ಪ್ರದೀಪ್ತಿ.
ಎಂದಿನೊಲ್ ಜಗಲಿಯಂಚಿನ ನೀಲ
ನಿಚುಲ ಪೀಠದಲಿ ಮಂಡಿಸಿರ್ದರ್ ವಿರಾಮದ
ವಿಶ್ರಾಂತಿಗೆತ್ತು. ಮುಂದಿನ ಪ್ರಾಂಗಣದಿ ನೆರೆದ
ನೂರಾರು ವರ್ಣಮಯ ಕಪೋತಗಳ್ ಕಾಳಿನ
ಆಸೆಯಿಂ ಸುಗ್ಗಾಡಿ ಕಿತ್ತಾಡಿ ಎರೆಂಕೆಯ
ಪಟಪಟಿಸಿ ಗುಬ್ಬಳಿಸಿ ಕಾಳು ಹೆಕ್ಕಿ ನುಂಗುವ
ಸುಸುಂದರ ಚಿತ್ರದಲಿ ಕಣ್ಣಿಟ್ಟಿರಲ್ ಚಿತ್ರ
ರಮಣೀಯಮಾದತ್ತು ರಸಪೂರ್ಣ ನಯನಗಳ
ಚೆಂಬೆಳಕಿಗೆ. ಕಪೋತಗಳ ಲೀಲಾಖೇಲನಂ
ಸಂದರ್ಶಮಯಿಂ ಅನ್ನಮಯ ಪ್ರಾಣಮಯ ನಿಜ
ಜೀವನ ಸಾಂತ್ವನಕೆ. ಮಿನ್ನೆ ಭಾರತವರ್ಷ ತಾಂ
ಸಾಧಿಸಿದ ಶಾಂತಶಿವ ಅದ್ವೈತಮಂ ಭಾವಿಸುತಿರೆ
ದೃಷ್ಟಿ ನಲಿದತ್ತು ದೂರ ಸೀಮಾ ಕ್ಷೇತ್ರದಲಿ.
ಶಬ್ದಗಳ ಆಲೈಸಿರ್ದತ್ತು ಕರ್ಣದೇಶಂ.
ನೋಡ ಬಯಸಿದುದು ಕಂಗಳಿಗಿಂ ನಿಲುಕಲಿಲ್ಲಂ.
ಕೇಳ ಬಯಸಿದುದು ಕಿವಿಗಳಿಗಿಂ ಕೇಳಲಿಲ್ಲಂ.
‘‘ಓ ಪರಾತ್ಪರವೇ! ಓ ಕೊರಳಗಾನವೇ!

ರವೀಂದ್ರನಾಥ ಠಾಕೂರ್-೧೫೧

ಎಲ್ಲಿಹುದು ತವ ಸರಿ ನೀಡಮೀಧರಿತ್ರಿಯಲಿ?
ತೋರೆ ಶಾಂತಶಿವಶೀಲಮಾದತ್ತು ಮನದಲಿ.''
ಇಂತಿಂತು ಜೀವನೀ ಸಂಧ್ಯೆಯಲಿ ಧ್ಯಾನಮಯ
ಅನುಭವಂ ಆತ್ಮ ಕುಸುಮವ ಪರಮಾತ್ಮನಿಂಗೆ
ಸಮರ್ಪಿಸಿತು ನಿಶ್ಶೇಷ ಭಾವದಿಂ. ಅಂಜಲೀ
ಬದ್ಧರಾಗಿ, ಮೇಣ್ ಶಾಂತನಿಶ್ಯಾಂತ ಭಾವದಿಂ
ಚಿರನಿದ್ರೆಗೆತ್ತರ್ ಸಾವಿರದೊಂಬೈನೂರ ನಲ-
ವತ್ತೆರಡರ ಆಗಸ್ಟ್ ಎಂಟನೇ ತೇದಿಯಲಿ.
ಭಾರತ ಜನನಿಯಂ ಕಡು ದುಃಖದಲಿ ಮುಳುಗಿಸಿ
ನೇಪಥ್ಯವನ್ನೇರಿತು ಪುಣ್ಯಜೀವ. ವಿಶ್ವ
ವಿಖ್ಯಾತ ನಾಮ, ದಿವ್ಯಚೇತನ, ಪರಮ ನಿಧಿ
ಭಾರತದ ಅಮೂಲ್ಯ ನಕ್ಷತ್ರ ಸಿಡಿದು ಭೂಮಿಗೆ
ಬಿದ್ದು ಮಣ್ಣ ಹುಡಿಯಲಿ ಮಣ್ಣಾಗಿ ಬೆರೆತುದುದು
ಜೀವನ ಸಂಗ್ರಾಮದಲಿ ಬಳಲ್ದು ನಿರಂತರ.
ಓ ಗುರು ಮಹರ್ಷಿಯೇ! ತವ ವಿಶ್ವವಿಖ್ಯಾತ
ನಾಮ ಇತಿಹಾಸ ಪುಟಮಂ ಸುವರ್ಣಾಕ್ಷರಗಳಲಿ
ಅಲಂಕರಿಪುದು ದಿಟಂ. ಪರಮ ದಿವ್ಯ ಚೇತನ.
ಕಣ್ಮರೆಯೈಸಿ ದಶಕಗಳೆನಿತೊ ಕಳೆದುವಿಂದಿಗೆ.
ಆದೊಡಂ ಮರೆಯಾಗದೀ ಚಿತ್ತ ಭಿತ್ತಿಯಿಂ.
ಭಾರತ ಕವಿಕಾವ್ಯ ಬನದಲಿ ಅರಳಿದ ಮೊಲ್ಲೆ
ಪೂವಿನ ತೆರದಿ ಅರಳಿ ಮಘಮಘಿಸಿದ ಮಧುರ
ಮೊಲ್ಲೆವೇಶಿ! ಮೊಲ್ಲೆ ಬನದಲಿ ಮೊಲ್ಲೆಯಲ್ಲದೆ
ಬೇರೊಂದು ಅರಳಲಕ್ಕುಮೆ? ಮಲ್ಲಿಕಾ ಬನದಿ
ಮೈಮೆತ್ತ ಮಹಾ ಮಲ್ಲಾರಿ ನಿನಗಿದೊ ನಮನ!

— o —

''ಗಾಯಂತಿದೇವಾಃ ಕಿಲ ಗೀತಕಾನಿ
ಧನ್ಯಾಸ್ತುತೇ ಭಾರತಭೂಮಿ ಭಾಗೇ ।
ಸ್ವರ್ಗಾಪವರ್ಗಾಸ್ಪದ ಹೇತುಭೂತೇ
ಭವಂತು ಭೂಯಃ ಪುರುಷಾಃ ಸುರತ್ವಾತ್ ।।''

ಸಂತ್ರಸತರ ಕಾರುಣ್ಯ ದೈವ ರೆಡ್ ಕ್ರಾಸ್

"Trust no future, howier pleasant!
but the dead post bury its dead!
Act, act in the living present!
Heart within and God O'erhead?"

ಅದೊ! ಜಿನೀವಾ ಧರಾತಲದಲ್ಲಿ ಹಸುರುಕ್ಕಿ
ಹಸುರ್ಗಟ್ಟಿ ಪಚ್ಚನೆ ಪಸರಿಸಿ ಪಸುರ್ಗಡಲೇ
ತಾನೆನೆ ಪಸುರಾದ ವನರಾಜಿಯು ಸುರಾಜತ್
ಪ್ರಪ್ರಾಂತ್ಯವು ಪೆರ್ಮೆಯ ಪಶುರೈಶ್ವರ್ಯದಲಿ
ಮೈಮೆರೆದಿತ್ತು. ಹಸುರಿನ ವನಧಿಯಲಿ ಹೂವಿಲ್ಲ
ಮೊಗ್ಗಿಲ್ಲ ಮಿಡಿಯಿಲ್ಲ ಕಾಯಿಲ್ಲ ಎನುಲುಂಟೆ?
ಎಲ್ಲೆಲ್ಲಿ ದೃಷ್ಟಿಯನಟ್ಟಿದೊಡಲಲ್ಲಿ ವಿವಿಧ
ಬಗೆಯ ಪುಷ್ಪಾಲಂಕಾರ! ಆವೊಂದು ವಿಶಿಷ್ಟ
ವ್ರತಾರಾಧನೆಗೆಂಬೊಲ್ ತಳಿರಿನ ಸೊಗಸೇ
ಸೊಗಸು! ಶೀತಲ ದೇಶದ ಶೈತ್ಯ ಬಲುಮುದ್ದಿನ
ಮುದ್ರೆಯಿಡುತಿರೆ ನೀರಿಗಾಗಿ ಹಾತೊರೆವ ಗೀಳಿಲ್ಲ.
ಅಹ, ಮುದತುಂಬಿ ನೋನೋಳ್ಪ ದೃಷ್ಟಿಯಷ್ಟಿಯಂ
ಶಾಂತ ಮುಗ್ಧಗೊಳಿಪಂತು ಪರಮೋಚ್ಚ ಶೋಭನಾ
ಶೈಲಿ! ನೈಸರ್ಗಿಕ ಮಹಾರಾಜ್ಞಿ ಮನತುಂಬಿ
ತನುತುಂಬಿ ಪ್ರಾಣತುಂಬಿ ಪ್ರದೇಶವೆ ತುಂಬಿ
ಹೆಪ್ಪಿಟ್ಟು ಶುಭಹಾರೈಸಿದಳೋ ಎನೆ ಏನಾ
ಸೌಂದರ್ಯ ಮೀಮಾಂಶೆ ?!

ಸಗ್ಗದೊಡೆಯನಿಲ್ಲಿಗೆ
ಬಂದಾನೋ ಬಾರನೋ ಆದೊಡವನಂ ಕೈ
ಬೀಸಿ ಕರೆಯುವನಿತ್ತು ಶೃಂಗಾರಮಯಮಾ ಪಚ್ಚ

ದೇಗುಲ. ಬೆಳ್ಗಳಿರ್ ಕೆಂದಳಿರ್ ಹೊಂದಳಿರ್
ಹರಿದ್ರದಳಿರ್ ಎಡೆಎಡೆಯಲಿ ಹೊಂದಿಸಿ ಜೋಡಿಸಿದ
ಪರಿಯಲಿ ಮೆರೆವ ಸೌಂದರ್ಯರಾಶಿಗೆ ಮೋಹನಾ-
ಕಾರದೊಳೆಸೆವ ಪುಷ್ಪಾಲಂಕಾರ! ಸುಸುಂದರ
ಶೈಲಿಯ ಸುರಸುಂದರ ಕಂಪುಪೆಂಪುಗಳ ಮನ
ಮೋಹನೀಯ ಶೃಂಗಾರ!

ಓಹೋ ಏನೊಂದು
ಪೇಳಲು ಬಯಸಿ ಬೇರೊಂದನುಸುರಿದೆ ಓದುಗರ
ಮನಗೆಡಿಸಿದೆ! ಮನ್ನಿಸಿ, ಮನ್ನಿಸಿರಿ ; ಓದುಗರೆ!

ಮೇ ತಿಂಗಳ ಎಂಟನೆಯ ತೇದಿ! ನಸುಬೆಚ್ಚನೆ
ಸುಸಿಲ್ ಬಿಸಿಲ್ ಹರಡಿ ಮುದ್ದಿನ ಮುದ್ರೆಯನೊತ್ತಿರೆ
ತ್ರಿಲೋಕದ ಪ್ರಭೆಯೆ ಹರಿದು ಧರೆಗಿಳಿತಂದ
ಪಾಂಗಿನಲಿ. ಆವ ಕಜ್ಜಗುಜ್ಜುಗಕೆ ಮತ್ತಾವ
ಪುರುಡು ಪುರುಪುಗಳಿಂಗೆ ಚೋದನೆಯೊ ಎನಲ್ಕಾ
ಪ್ರಕೃತಿಯು ವರದಾನಗೈದತ್ತು ಸಂತಸದಿಂ.
ಮೇ ತಿಂಗಳ ಮಾಸದ ಎಂಟನೆಯ ತೇದಿ! ನಸು
ಬೆಚ್ಚನೆಯ ಸುಸಿಲ್ ಬಿಸಿಲ್ ಹರಡಿ ಮನಮುದದಿಂ
ಮೆರೆದಿತ್ತು. ತ್ರಿಲೋಕದ ಪ್ರಭೆಯೇ ಇಳಿದಿತ್ತು

ಅಂದು, ಆ ಶುಭದಿನಂ ಲೋಕೋಪಕಾರಿ
''ರೆಡ್‌ಕ್ರಾಸ್'' ಸಂಸ್ಥೆಯಾ ಉತ್ಪನನಮಾಯಿಯ್ತು!
ಅದೇ ಮೇ ತಿಂಗಳಿನ ಎಂಟನೆಯ ತೇದಿಯಂದು
ಮೂವತ್ತೆರಡು ವರ್ಷಮಾನಗಳ ಮುನ್ನಮೆಯೆ
ರೆಡ್‌ಕ್ರಾಸ್ ಸಂಸ್ಥೆಯಾ ಜನ್ಮದಾತ ಶ್ರೀಮಂತ
ಸಹೃದಯ ಸದ್ಗುಣಿ ಸರಸತೀತನಯ ಜೀನ್
ಹೆನ್ರಿ ಡಾನಾಂಟನ ಪರಿ ಪುಣ್ಯ ಜನನವೂ ಆ
ಚಣದಲ್ಲೇ ಆಗಿತ್ತು. ಆ ಮಹೋನ್ನತ ದಿನ
ಮಾನ ಜೀನ್ ಹೆನ್ರಿ. ಡೂನಾಂಟನಾ
ಜನ್ಮದಿನವೆಂತಂತು ಮಹಾನ್ ತರಣಿಯೆನೆ

ಮೈದಳೆದ ರೆಡ್‌ಕ್ರಾಸ್ ಸಂಸ್ಥೆಯುಂ ಅಂದೇ
ಮೂಡಿದುದು ಕಾಕತಾಳೀಯವೊ ಅಥ ಭಗವತ್
ಪ್ರೇರಣೆಯೊ ಆ ದೇವದೇವನೇ ಬಲ್ಲಕಣಾ!
ಅಂದಿಂದಿಗೂ ಉಭಯತ್ರರ ಜನ್ಮದಿನಾಚರಣೆಯ
ಸಂಭ್ರಮ ವರ್ಷೇವರ್ಷೇ ಒಂದೇ ಮಂಟಪದಲಿ
ನಡೆವುದು ಎನೆ ಎನಿತೆನಿತು ಆನಂದದಾಗರಮೊ
ರೆಡ್‌ಕ್ರಾಸ್ ಸಂಸ್ಥೆಯಾ ಸಂಯೋಜಕರಿಂಗೆ!
ಅದು, ಒಮ್ಮನ ಒಮ್ಮತಮೆನಲ್ ಅತ್ಯುತ್ಸಾಹದ
ಹೊನಲ್ ಹರಿಯುತಲಿರಲ್ ನೀನೇ ಪರಿಭಾವಿಸು
ಮನವೇ! ವಿಶ್ವಶಕ್ತಿದ್ವಯರ ಸ್ಮರಣೆ ಪುನಃ
ಪುನಃ ಸ್ಮರಣೆ ಪ್ರಶಂಸೆ ಗುಣಗಾನ ಮುಂತಪ್ಪ
ಮಾಸಪೀಯ ಕಾರ್ಯಕ್ರಮಗಳ ನಡೆದಪವು
ಪರಮಾನಂದ ಪೂರ್ಣಗತಿಯೊಳ್!
ಇಂದಿಗೂ
ಅಲ್ಲಿ-ಇಲ್ಲಿ-ಎಲ್ಲೆಲ್ಲಿ ನೋವಿನ ರಣಗೋಳ್
ಮೂಡುವುದೊ ಅಲ್ಲಿ ತಾನಿರ್ಪುದು ರೆಡ್‌ಕ್ರಾಸ್!
ಭೂಕಂಪ ಬಿರುಗಾಳಿ ಸುಂಟರಗಾಳಿ ಪ್ರವಾಹ
ಅಥ ಭೀಕರ ಅಪಘಾತಗಳ ಘೋರಾತಿಘೋರ
ಪ್ರಕಾಂಡಕಾಂಡಗಳ ನೋವು ನಿಡಿಯಾಶೀಘ್ರ
ನಿವಾರಣೆಗೆ ನೆರಂಗೂಡೆ ಧಾವಿಪುದಾಗಲೇ
ವೈದ್ಯಶಿಖಾಮಣಿಗಳ್ ಸುರಿತದಾದಿಯರ್ ಮೇಣ್
ಸಕಲತರ ಮದ್ದುಗಳ ಸಹಿತ. ಆ ರೆಡ್‌ಕ್ರಾಸ್
ವಾಹನಂ ಧಾವಿಪುದು ಕಾರುಣ್ಯನಿಧಿಯಾಗಿ!
ಸೇವೆ-ಸೇವೆ-ಸೇವೆಯಲ್ಲದೆಯೆ ಮತ್ತೊಂದು
ಧ್ಯೇಯವಿಲ್ಲ! ರೆಡ್‌ಕ್ರಾಸ್ ಸಂಸ್ಥೆಯು ಮೂಡಿದುದು
ಕಡುನೋವಿನ ಉಡಿಯಲ್ಲಿ.
ಅಂದು, ವಿದೇಶದೊಳ್
ರಾಜ್ಯಕೋಶಗಳ್ ಒಳಗೊಳಗೆ ದ್ವೇಷಾಸೂಯೆಯ

ಒಳಗೊಂಡು ಕುದಿಕುದಿದು ಕುದಿಗಂಟು ಸಿಡಿಯುವೊಲ್
ತುಂಬಿ ಬಿರಿಯುತ್ತಿರೆ ನೆರೆಹೊರೆಯಿಲ ಕಿಚ್ಚುರಿಸಿ
ಕಿಡಿಕಾರಿ ದ್ವೇಷವಂ ಬಗೆದು ಜುದ್ದರಂಗಕೆ
ಇಳಿದಿದ್ದರ್ ಈಟಿ ಗುರಾಣಿ ಖಡ್ಗಗಳ ಸಹಿತ!
ಆಸ್ಟ್ರಿಯನ್ನರ್ ಇಟಾಲಿಯನ್ನರ ಮೇಲೆ ಸದಾ
ಕೂರ ದಬ್ಬಾಳಿಕೆಯಂ ನಡೆಸುತ ಹಿಂಸಿಸುತಿರೆ
ಇಟಲಿಯಾ ಪ್ರಜೆಗಳ್ ಫ್ರೆಂಚರ ಕೆಳೆಕೊಂಡು
ಆ ಕೂರತರ ಕಟುಮನದ ಕುಟಕಿಗಳ ವಿರುದ್ಧ
ರಣಾಂಗಣಕಿಳಿದರ್ ರಣಭೇರಿ ಬಡಿಬಡಿದು
ಬಾರಿಸಿ! ಕೊಳಗುಳದಲಿ ಕೆಚ್ಚಿನಿಂ ರೊಚ್ಚಿನಿಂ
ಆವೇಶದಿಂ ಮೂದೇಶೀಯರ್ ಕೂಡಿ ಮೂಮೂರು
ಲಕ್ಷ ಸೈನಿಕರ್ ಹೋರಾಡಿದಲ್ ನಾಲ್ವತ್ತು
ಸಾವಿರ ಸೈನಿಕರ್ ಗಾಯಾಳುಗಳಾಗಿ, ಅಸು
ವಳಿದ ಶವಗಳಾಗಿ ರಣಕಣದುದ್ದಗಲಕ್ಕು
ಬಿದ್ದಿದ್ದರೆ ಓ ಅಲ್ಲಿ! ಹಾ ಇಲ್ಲಿ! ಅಲ್ಲಲ್ಲಿ!
ಏಂ ಹೃದಯ ವಿದ್ರಾವಕ! ಏಂ ರುದ್ರ, ಭೀಷಣ!
ಮೂವತ್ತೆರಡು ವರ್ಷ ವಯೋಮಾನದ ಜೀನ್
ಹೆನ್ರಿ ಡೂನಾಂಟ್‌ತನಗಾಗಿ ಧಾನ್ಯದ ಗಿರಣಿ
ಸ್ಥಾಪಿಸುವ ಇಚ್ಛೆಯೊಳ್ ಮೂನೆಯ ಚಕ್ರವರ್ತಿ
ನೆಪೋಲಿಯನ್-ನ ಕಾಂಬ ಉದ್ದೇಶದಿಂ ತಾನ್
ಪೊರಟರ್ದನ್ ಅಶ್ವಾರೋಹಿಯಾಗಿ. ಅದೇನ್
ಅಚ್ಚರಿಯೊ ಎನಲ್ ಹಾದಿ ತಪ್ಪಿಯೊ ಅಥ ವಿಧಿಯ
ನೇಮದಿಂದಲೋ ಕುದುರೆ ನಡೆಯಿತು ದೂರದಾ
ರಣಾಂಗಣಕೆ! ನೋಡೆ! ನೋಡೆ!! ಏನಾ ಘೋರ-
ಘೋರಾತಿಘೋರ ರಣಕೇಳಿ! ‘‘ಹಾ, ದುರ್ವಿಧಿಯೆ!
ಏಂಗೈದೆ? ಚೀರಿತು ಎದೆಯೊಳ್ ಜೀವ. ಅತ್ಯಂತ
ಕರುಣೆ ಕಾತರತೆಯಲಿ ಹಾ! ಧರೆಗೊರಗಿ ನರಳುತ
ಚೀರ್ವ ಯೋಧರ್, ಅಸುವಳಿದ ಕಳೇವರಂಗಳ್,

ಪಸಿವು ನೀರಡಿಕೆಗಳಿಂ ಕೀರಲು ದನಿಯಿಂದೆ
ಚೀರ್ವ ಯೋಧರ್ ಒಬ್ಬರೇ, ಇಬ್ಬರೇ? ನಾಲ್ವತ್ತು
ಸಹಸ್ರ ಗಾಯಾಳುಗಳ ಭಯಾನಕ ಚಿತ್ಕಾರ!
ನಾರುವ ಕಳೇವರಗಳ್! ಪ್ರಥಮ ಚಿಕಿತ್ಸೆಯಂ
ಕಾಣದಿಹ ಗಾಯಗಳು! ಅಬ್ಬಾ! ನೋಡಲಾಗದ
ಕರುಣಾಜನಕ ದೃಶ್ಯ! ಆ ಭೀಷಣತೆ ಎದೆಯಂ
ಹೌಹಾರಿಸಿತು! ಧಿಗ್‌ಭ್ರಾಂತಿ ಮನವಂ ಆವರಿಸಿ
ಯೋಚನೆಯಲೆಗಳೇ ಸ್ತಬ್ಧವಾದವೊಲ್ ಗಳಿಗೆ
ಕಾಲ ಮಿಣ್ಣನಾದಂ. ಮೂರನೆಯ ಚಕ್ರವರ್ತಿ
ನೆಪೋಲಿಯನ್ ಮನದಿಂ ಮರೆಯಾದಂ! ಗಿರಣಿಯ
ನೆಲವೆ ಅರುಗಾಯ್ತು! ತೇಜಿಯ ಬೆನ್ನ ಮೇಲಿನಾ
ಮೆತ್ತನೆಯ ಪೀಠದಿಂ ದೊಪ್ಪನೆ ಕೆಳಗೆ ಜಿಗಿದಂ!
ಹೃದಯದಮಿಡಿತ ಆಯತಪ್ಪುವ ಮಾಳ್ಕೆಯಲಿ
ದಡದಡ ಮಿಡಿಯಿತು ಎದೆಯೇ ಬಿರಿವಂತೆ!
ಹಾ! ಭಯಾನಕ! ಭೀಕರ! ಭೀಭತ್ಸ! ತೆಕ್ಕನೆಯ
ಹೃದ್ಗಡಲಿನ ಕಾರುಣ್ಯ ದ್ರವ್ಯ ದ್ರವಿಸಿ ಕರಗಿ
ನೀರಾಗಿ ನರನಾಡಿಗಳ್ ಶೀಳುವ ತೆರದಿ
ಆರೋಹಣಾವರೋಹಣ ನಡೆಸಿ ಬೆನ್ತಟ್ಟಿ
ಪುರುಪಿತ್ತುವು ತಾನರಿಯದ ತೆರದಿ! ಒಡನೊಡನೆ
ಉಕ್ಕಿಹರಿದ ಕಂಬನಿ ಧಾರೆಯಂ ನಿವಾರಿಸಿ
ಊರಿನ ಕಡೆಗೆ ಧಾವಿಸಿದಂ. ಅಲ್ಲಿ ಅನೇಕ
ಹುರಿಯಾಳ್ಗಳಂ ಕಂಡು, ಯುವಜನರ ಮನನಂ
ಒಲಿಸಿದಂ. ಸುಸುಂದರ ನಬಾರ್ಡ್ ರಮಣಿಯರು
ಬಿಸಿ ನೆತ್ತರಿನ ಯುವಕರು ಹಿರಿಯರು ಮತ್ತಮಾ
ವೈದ್ಯರುಗಳು ಮುಂದಾಗಲ್ ಮಿಲಿಟರಿ ದಂಡು
ಮುಂಬಂದಿತು. ಗಾಯಾಳುಗಳ ಶುಶ್ರೂಶೆಗೆ! ಅಹ,
ಎಂತಪ್ಪ ನಲ್ ಸಂಘಟನೆ? ಎನಿತೆನಿತು ದಯೆ
ಕರುಣೆ ಕನಿಕರಗಳ ಪರಮ ಭಂಡಾರಗಳಾಗಿ

ಶ್ರಮವನ್ನೆ ಶ್ರಮಿಸಿ ಶ್ರಮಿಸಿ ದುಡಿದರ್ ಎಡೆ
ಬಿಡದೆ. ಗಾಯಾಳುಗಳ್ ತಲೆಯೆತ್ತಿ ನೋಡಿದರ್.
ತಮ್ಮ ಸೇವೆಗೈಯುತಿಹ ಬಹುಜನ ಮಿತ್ರರಂ
ನೋನೋಡಿ ಹನಿಗೂಡಿದುವು ಕಂಗಳ್. ಶವಗಳ
ಹೊತ್ತುಸಾಗಿಸಿ, ಶತ್ರುಗಳೆನದೆ ಮಿತ್ರರೆನದೆ
ಚಿಕಿತ್ಸೆ ನಡೆಯಿತು ಅವ್ಯಾಹತಗತಿಯಲಿ. ಆ
ಸೃಜನಶೀಲರ್, ಮಾನವ ಮಿತ್ರರ್ ಎಲ್ಲಿಂದ
ಇಲ್ಲಿಗೈದರೊ ಎಂಬನಿತು ಅಚ್ಚರಿದುಂಬಿದ
ಮನದಿ ಗಾಯಾಳುಗಳ್ ಮೆಚ್ಚಿ ನೆಚ್ಚಿ ಎಂದಿಗೂ
ಈ ಸೇವೆ ಸಲ್ಲಲಿ ಭಗವನ್ ಎಂದು ಪ್ರಾರ್ಥಿಸಿದರ್
ಮಿಲಿಟರಿಯವರ್ಗೈಯುತೆ ದಂಡುಗೊಂಡು ಕರುಣೆಯಿಂ
ಮುಂದಾಗಿ ಬ್ಯಾಂಡೇಜುಗಳಂ ಕಟ್ಟಿ ಸಹಕಾರ
ತೋರಿದರ್, ತರುಣರ್ ಸಮೀಪದ ಜಲಬುಗ್ಗೆಯ
ನೀರ್ ಸಂಗ್ರಹಿಸಿ ತಂದು ನೀರುಣಿಸಿದರ್. ಆ
ಪ್ರಾಥಮಿಕ ಶುಶ್ರೂಷೆ ಹತಾಶಮನದ ಯೋಧ
ಬಂಧುಗಳಿಗೆ ಕಿಂಚಿತ್ ಆಶಾಕಿರಣಂಗಳ್
ಮೂಡಿಸಿತು. ಕಣ್ತೆರೆದು ನೋಡಿದರ್ ಎತ್ತಲುಂ
ಸುತ್ತಲುಂ ಮಾನಿಸರ ವದನಮಂಡಲಗಳ್! ಅಹಾ,
ಎನಿತೆನಿತು ಕಾರುಣ್ಯದೈವಗಳಿರ್ದರ್ ಬಳಿಯಲಿ!
ದುಃಖಸಂಕಟದ ಮೂರ್ತಿಗಳಾಗಿ, ನೆರೆ ತೊಯ್ದ
ಕಂಗಳಿಂ ನೋಡುತ್ತೆ ಸೇವೆ-ಸತತ ಸೇವೆ
ಗೈವ, ಪರಮಾದರದಲಿ ಉಪಚರಿಪ, ಮಾನವ
ಕುಲೀನರ ಮೃದುಮಂದ ಸಲ್ವಾತುಗಳ್ ಎದೆ
ಯಾಳಕಿಳಿದು ಬದುಕುವಾಸೆಯಂ ಮೂಡಿಸಿದುವು.
ಮನೆಮನೆಗಳಿಂ ಉಣಿಸಿನ ಬುತ್ತಿಗಳಿಗೆ ಬೇಡಿ
ತಂದು ಹೊತ್ತುಹೊತ್ತಿಗೆ ಉಣಿಸುವತಿ ಭಂಗಮಂ
ಯೋಚಿಸಿ ತಿಳಿಯಲೆ ಮನವೇ! ಆಪನಿತು ನೀನೆ
ತಿಳಿಯಲೆ ಮನವೇ!! ಮತ್ತಮಾ ಕೊಳೆತು ನಾರುವ

ಕಳೇವರಗಳಂ ಕೊಂಡೊಯ್ದು ಅಂತ್ಯಕ್ರಿಯೆಯಂ
ಕೈಗೂಡಿಪ ಭಂಗ! ಸತ್ತರಿನ ಹೊಳೆಯಲಿ ಮಿಂದ
ಘೋರಮೆಯೊಳ್ ಅಸ್ತವ್ಯಸ್ತಗತಿಯೊಳ್ ಬಿಳ್ದ
ಸಹಸ್ರ ಸಹಸ್ರ ಜೀವಚ್ಛವಗಳ ನರಳಾಟ
ಕಂಡುಕಾಣುತ್ತೆ ಚಿಕಿತ್ಸೆ ಮೇಣ್ ಉಣಿಸಿಡುವಾ
ಭಂಗ! ನೆರಳಿಲ್ಲ, ಮನೆಯಿಲ್ಲ ಸಾಕಷ್ಟು ಸ್ವಯಂ
ಸೇವಕರೇ ಇಲ್ಲ. ಆಗಳಾ, ಜೀನ್ ಹೆನ್ರಿ ಡೂನಾಂಟ್
ದೇಶದೇಶಾಂತರಂ ಬೊಕ್ಕು ಮತಿ ಮಾನ್ಯರಂ
ಕಂಡು ಜನಸೇವೆಯ ಮಹತ್ವಮಂ ವಿವರಿಸುತ್ತೆ
ಮನವಿಯಂ ಹೃತ್‌ಪೂರ್ವಕವಾಗಿ ಮುಂದಿಡಲ್
ಅನೇಕರೈದರ್ ಸೇವಾಂಗಣಕೆ. ಧೀರ ಧೀ-
ಮಂತ ಜೀನ್ ಹೆನ್ರಿ ಡೂನಾಂಟ್ ತಾಂ ಮುಂಬಿನ
ವ್ಯಕ್ತಿಯೆನೆ ಸತತ ಸೇವೆಗೈದನ್ ಪಗಲಿರುಳ್.
ಸ್ವಿಡ್ಜರ್ಲೆಂಡಿನ ನಾಲ್ವರ್ ಧೀಮಂತ ಮಾನಿಸ
ಮೂರ್ತಿಗಳ್ ಮುಂದೈದು ನೆರವಿತ್ತರ್. ತಮ್ಮಯ
ಸೇವಾ ಕೈಂಕರ್ಯ ಪೆರ್ಚುತಿರುತಿರೆ ಸಹಕರಿಸಲ್
ಬಹುಮಂದಿ ಮುಂದಾದರ್. ಸ್ವಯಂ ಸೇವಕರುಂ
ನಿಷ್ಠೆಯಿಂ ಕೈಗೂಡಿಸುತಿರೆ ''ಗಾಯಾಳುಗಳ ಸೇವಾ
ಸಮಿತಿ'' ಎಂಬಿನಂ ಪೆಸರ್ ಪಡೆಯಿತು ಒಕ್ಕೂಟಂ
ಎನಿತು ಜನಕೋಟ ಸಹಕರಿಪರೊ ಅನಿತು ವಿರೋಧಿ
ಗುಂಪು ಬೆಳೆಯಿತು. ಅನೇಕಾನೇಕ ಕೊರಳ್ ಬಲಿತ
ಕುಟುಕಿಗಳ್ ''ಇದೇನ್ಸೈ, ಮಿತ್ರ ಜನರ ಸೇವೆಯೆನೆ
ಸರಿಯಕ್ಕು. ಧೂರ್ತ ಶತ್ರುಗಳ ಶುಶ್ರೂಷೆಯದು
ತರವೇಂ? ಇದು ಮರಳುತನವಲ್ಲದೇಸಲ್ಲಂ.''
ಎಂದೆಂದು ಅಣಕವಾಡಿದರ್. ಅವರ ಮಾತಿಂಗೆ
ಮುನಿಯದ ಡೂನಾಂಟ್ ''ನಾವೆಲ್ಲ ಮಾನವರ್
ಎಂದೆನುತೆ ಸಾಧುವಾದವಂ ನುಡಿದಂ. ಬಹುಲ
ಶಾಂತಿರಸ ಸೂಸೆ, ಮಂಜಿನ್ಹೈಕಿಲ್ ಸುರಿದವೊಲಾಯ್ತು.

ರೆಡ್ ಕ್ರಾಸ್-೧೬೪

ಸ್ವಿಡ್ಜರ್ಲೆಂಡ್ ದೇಶಮಿದರ ಸಂಸ್ಥಾಪನೆಯ
ಮಹಾಕಾರ್ಯಕೆ ಬೀಜವಂ ಬಿತ್ತಿ ಮೊಳಕೆಯೊಡೆಸೆ
ಕಾರಣಮಿರೆ ಸ್ವಿಡ್ಜರ್ಲೆಂಡಿನಾ ರಾಷ್ಟ್ರೀಯ ಧ್ವಜವನ್ನೆ
ಅಲ್ಪಸ್ವಲ್ಪ ಅದಲ್ ಬದಲ್ಗೈದು ಸಂಸ್ಥೆಯುಂ
ತನ್ನದಾಗಿಸಿ ತನ್ನತನಮಂ ಮೆರೆದು 'ರೆಡ್‌ಕ್ರಾಸ್'
ಎಂಬಾಸುನಾಮವಂ ಪಡೆದು ಧನ್ಯವಾಯಿತ್ತೈ
ಮಾನವತಾವಾದಿಯಾಗಿ! ರೆಡ್‌ಕ್ರಾಸ್ ಸಂಸ್ಥೆಯುಂ
ಯಾವತ್ತು, ಎಲ್ಲಿ ನೋವಿರ್ದೊಡಲ್ಲಿಗೆ ತಾನೇ
ದಾವಿಪುದು ಸಕಲ ವೈದ್ಯಕೀಯ ಸದಸ್ಯರಿಂ
ಕೂಡಿ, ಸಕಾಲಿಕವಾದ ಔಷಧಿಗಳಂ ಪೊತ್ತು.
ಅಪಘಾತ-ಅವಗಡಗಳ್, ಭೂಕಂಪ-ಬಿರುಗಾಳಿ
ಇಂತಪ್ಪ-ಔತ್ಪಾತಕಗಳಿಂದೆ ಸಂತ್ರಸ್ತ
ಜನಕೋಟಿಗೆ ಸಹಾಯ-ಸಹಕಾರಗಳನೀವ
ಮಹಾನ್ ಪರಮ ಸಂಸ್ಥೆ ರೆಡ್ ಕ್ರಾಸ್. ಪಗಲಿರುಳ್
ವೈದ್ಯಕೀಯ ಸೇವೆಯಿಂದೆ ಸಾಂತ್ವನಗೊಳಿಸಿ ನಲ್
ದಯಾಭಾವನೆಯಿಂದೆ ಚಿಕಿತ್ಸೆ ನೀಡುವುದೆ ಧರ್ಮ!

ಲೋಕದ ಇತರಿತರಿತರ ರಾಷ್ಟ್ರಗಳುಡಿಯಲ್ಲಿ
ನೆಲೆಯಂ ಪಡೆದು ನೊಂದವರ ಪಾಲಿಗೆ ಕಾರುಣ್ಯ
ದೇವತೆಯು ತಾನಾಗಿ ಸೇವೆಯಂ ಸಲಿಸುವುದು
ರೆಡ್‌ಕ್ರಾಸ್, ಪೆತ್ತಮ್ಮೆಯೊಲ್! ಎಪ್ಪತ್ತೇಳು ವರ್ಷ
ಮಾನಗಳಿಗಿಂತ ಮುನ್ನಮೆಯೇ ಭಾರತ ರಾಷ್ಟ್ರಕ್ಕೆ
ಪದಾರ್ಪಣೆ ಮಾಡಿತಾ ರೆಡ್‌ಕ್ರಾಸ್ ಸಂಸ್ಥೆ
ಎಂದೆಂದಿಗೂ ಶಿವಕರುಣೆ ದಯೆಗಳ ಸಾಕಾರ
ಮೂರ್ತಿ ತಾನಾಗಿ! ಇಂತಪ್ಪ ಪರಮ ಮಾನವತಾ
ವಾದಿಯ ಪರಮ ವ್ಯಕ್ತಿತ್ವದ ದಿವ್ಯಪ್ರಭೆಯ
ಘನಗೌರವಕೆ ಸಲ್ಲುವ ಮಾಳ್ಕೆಯಲಿ ನೋಬಲ್
ಪ್ರಶಸ್ತಿದಾತರುಂ ತುಂಬುಹೃದಯದ ಸಿರಿ
ಸೊಬಗಿನ ಕರೆಯಿತ್ತು ಅಮೂಲ್ಯಮಾದ "ನೋಬಲ್

ಶಾಂತಿ ಪ್ರಶಸ್ತಿ''ಯಂ ಪ್ರಧಾನಗೈದರ್ ಮುಕ್ತ
ಮನದ ತೋಷಪೂರ್ಣ ಗೌರವಾದರಗಳಿಂ. ಅಹ,
ಆನದಂಮಯ ಶಾಂತಿಮಯ ಬಹುಮೂಲ್ಯಮಯ
ಎನಿಪ್ಪಾ ನೋಬಲ್ ಪ್ರಶಸ್ತಿಗಳ ಪ್ರತಿಷ್ಠಾನ
ಜೀನ್‌ಹೆನ್ರಿ ಡೂನಾಂಟ್ ಮಹನೀಯನಂ ಬಲು
ತಡವಾಗಿ ಗುರುತಿಸಿದೊಡಂ ಘನಗೌರವಯುತ
ಸನ್ಮಾನವಂ ನೀಡಿ ಆದರಿಸಿತು. ಸಭಿಕರ
ಕರತಾಳವಿಕ್ಕಿ ಸಂಹರ್ಷದ ಹೊನಲ್ ಹರಿಸೆ
ನಭೋಭೇರಿಯಾಯ್ತು ಸಹಸ್ರ ಸಹಸ್ರ ಕಂಠಗಳ
ಉತ್ಕಂಠಿತ ಸ್ವನಂ. ಆ ಗೌರವಾದರ ಸಂಭ್ರಮ
ಸಡಗರಗಳ್ ಒಗ್ಗೂಡಿ ವಿಜೃಂಭಿಸಿ ಹಬ್ಬಿ
ಹರಡಿತ್ತೈ ಜಗದಗಲ. ಜೀನ್‌ಹೆನ್ರಿ ಡೂನಾಂಟ್-ನ
ಮಾನವತಾವಾದ ಪ್ರಸಿದ್ಧಿ ಪಡೆಯಿತು ರೆಡ್
ಕ್ರಾಸ್ ಸಂಸ್ಥೆಯ ಮುಖೇನಂ.

ಸಾವಿರದೊಂಬೈನೂ-
ರಹತ್ತರ ಅಕ್ಟೋಬರ್ ಮೂವತ್ತರಂದು ಜೀನ್
ಹೆನ್ರಿ ಡೂನಾಂಟ್ ನೇಪಥ್ಯವನ್ನೇರಿದಂ.
ಅಂದು ಹೊತ್ತಿಸಿದ ಅವನ ಪಂಜು ನಿರೀಕ್ಷಿತ
ರೇಖೆಯಂ ದಾಂಟಿ ವಿಜೃಂಭಿಸಿತು ದಯ ಕರುಣೆ
ಸೇವೆಗಳ ಸದ್ಧರ್ಮವ ಸಾರಿ. ಸಂತ್ರಸ್ತರಾ
ಕಾರುಣ್ಯದೈವ ರೆಡ್ ಕ್ರಾಸ್ ತೊಳಗಿ ಬೆಳಗಲಿ
ಚಿರಕಾಲ, ಜೀನ್ ಹೆನ್ರಿ ಡೂನಾಂಟನ ಪೆಸರ್
ಉಳಿದು ಬಾಳಿರಲಿ ಆಚಂದ್ರಾರ್ಕವಾಗಿ!

— o —

ವಂದೇ ಮಾತರಂ

ವಂದೇ ಮಾತರಂ
ಸುಜಲಾಂ ಸುಫಲಾಂ
ಮಲಯಜ ಶೀತಲಾಂ
ಸಸ್ಯ ಶ್ಯಾಮಲಾಂ ಮಾತರಂ
ಏಂ ಸಾಲ್ನುಡಿಗಳ ಬಣ್ಣನೆಯೋ ಭಾರತ ಜನನೀ ?
ನಿನ್ನ ಅಂಗಾಗಗಳ ಪರಿಶುಭ್ರ ವರ್ಣನೆಯದು
ಸತ್ಯ ಸೌಂದರ್ಯ ಸಂಸ್ಕೃತಿ ವಿಹಾರಂ.
ಇಂತಪ್ಪ ಮಹಾಯೋಗದರಿವು
ಬಂಕಿಮಚಂದ್ರ ಚಟ್ಟೋಪಾಧ್ಯಾಯ
ಮಹೋದಯ ಮಾತ್ರರಿಂದಲ್ಲದಿನ್ನಾರಿಂತಿಂತು
ಬಣ್ಣಿಸಬಲ್ಲರ್ರೈ ಈ ಭವಧಿಯೊಳ್
ಶುಭ್ರಜೋತ್ಸ್ನಾ ಪುಲಕಿತ ಯಾಮಿನೀಂ
ಪುಲ್ಲಕುಸಮಿತ ದ್ರುಮದಳ ಶೋಭಿನೀಂ
ಸುಹಾಸಿನೀಂ ಸುಮಧುರ ಭಾಷಿಣೀಂ
ಸುಖದಾಂ ವರದಾಂ ಮಾತರಂ ॥
ಭಾರತಮಾತೆಯ ನಿಜಸ್ವರೂಪಮಂ
ಕಂಡುಕಾಣದ ಹುಂಬರಿಗೆ ವರ್ಣನಾ ವೈಖರಿಯಲಿ
ತಿಳಿಪಿ ಹೊಂಪುಳಿಯೇಳಿಸಿದ ಕವಿ ಕಾರ್ತಿಕೇಯ!
ಘನವಂತ! ಶ್ರೀ ಜ್ಞಾನವಂತ! ಬಂಕಿಮ ಚಂದ್ರ ಚಟ್ಟೋಪಾಧ್ಯಾಯ!
ಕೋಟಿ ಕೋಟಿ ಕಂಠ ಕಲಕಲ ನಿನಾದ ಕರಾಲೇ
ಕೋಟಿ ಕೋಟಿ ಭುಜೈರ್ಧೃತ ಖರ ಕರವಾಲೇ
ಕೇ ಬೋಲೆ ಮಾ ತುಮಿ ಅಬಲೆ
ಬಹು ಬಲ ಧಾರಿಣೀಂ ನಮಾಮಿ ತಾರಿಣೀಂ
ರಿಪುದಲ ವಾರಿಣೀಂ ಮಾತರಂ ॥
ಎಂತಪ್ಪ ಸುವರ್ಣನೆಯೋ ಸಗ್ಗದ ಸಿರಿಯೇ ಧರೆಗಿಳಿದ
ಪರಿಯಲಿ ನಿತ್ಯಸುಂದರಂ, ಸತ್ಯಸುಂದರಂ,
ದಿವ್ಯಮಾ ಸುಂದರಂ, ಭವ್ಯತಾ ಸುಂದರಂ!

ತುಮಿ ವಿದ್ಯಾ ತುಮಿ ಧರ್ಮ
ತುಮಿ ಹೃದಿ ತುಮಿ ಮರ್ಮ
ತ್ವಂಹಿ ಪ್ರಾಣಾಃ ಶರೀರೇ
ಬಾಹುತೇ ತುಮಿ ಮಾ ಶಕ್ತಿ
ಹೃದಯೇ ತುಮಿ ಮಾ ಭಕ್ತಿ
ತೋಮಾರಯಿ ಪ್ರತಿಮಾ ಗಡಿ
ಮಂದಿರೇ ಮಂದಿರೇ ॥
ವಂಗಭೂಮಿಯ ಔರಸ ಪುತ್ರರತ್ನಂ ತನ್ನೊಳ್
ಯೋಚಿಸಿ ಯೋಚಿಸಿ ಮನನೊಂದು ಮರುಗಿ ಕರಗಿ
ಭಾರತಮಾತೆಯ ದಿವ್ಯ ಚಿತ್ತಾರಮಂ ಬಣ್ಣಿಸಿ ಚಿತ್ರಿಸಿ
ಕಣ್ಣಿದ್ದುಃ ಕುರುಡಾದ ಹೀನ ದೀನತೆಗೆ ಮರುಗಿ
ಮನನೊಂದು ತಮ್ಮೆಲ್ಲರಾ ಭಾಗ್ಯಶ್ರೀ
ಭಾರತಮಾತೆಯ ಭವ್ಯ ಚಿತ್ತಾರಮಂ
ಬಿಚ್ಚಿ ತೆರೆದಿಟ್ಟು ತೋರಿದ ಸಂಗೀತೆ ವಂದೇ ಮಾತರಂ!
ತ್ವಂಹಿ ದುರ್ಗಾ ದಶ ಪ್ರಹರಣಧಾರಣೀ
ಕಮಲಾ ಕಮಲ ಜಲ ವಿಹಾರಿಣೀ
ವಾಣಿ ವಿದ್ಯಾ ದಾಯಿನಿ
ನಮಾಮಿತ್ವಾಂ
ನಮಾಮಿ ಕಮಲಾಂ ಅಮಲಾಂ ಅತುಲಾಂ
ಸುಜಲಾಂ ಸರಲಾಂ ಸುಸ್ಮಿತಾಂ ಭೂಷಿತಾಂ
ಧರಣೀ ಭರಣೀಂ ಮಾತರಂ
ಮತಿಗತಿ ಬೆಳಗದ ಹೃನ್ಮನ ಅರಳದ ದೀನ ದಲಿತರ,
ಉಡಾಳತನದ ಅಜ್ಞಾನಿಗಳ, ಸೊರ್ಕುಬ್ಬಿನ ಸಿರಿವಂತರ,
ಪ್ರಜೆಗಳಂ ಪಿರಿದುಂಬುವ ರಾಜ ಮಹಾರಾಜರ,
ಮುಗ್ಧದುಗ್ಧ ಅಂಗನೆಯರ, ಮಕ್ಕಳ,
ವೇದವನರಿದರೂ ಮಾತೆಯನರಿಯದ ಬ್ರಹ್ಮಜ್ಞರ
ಕಣ್ಮನ ತೆರೆಸುವ ಸಲುವಾಗಿ ಒಡಮೂಡಿದ
ಸಂಗೀತೆ ವಂದೇ ಮಾತರಂ!

·ಮಲ್ಲಿಕಾ ಕೃತಿಗಳು (ಕಾದಂಬರಿಗಳು)

೧. ಜೀವನಗಂಗಾ
೨. ಡಾ॥ ಅಘೋರ
೩. ಡಾ॥ ಕಮಲೇಶ್
೪. ವಂದೇಮಾತರಂ
೫. ಅನಂತಾನಂತದೆಡೆಗೆ
೬. ಮನೋನ್ಮಣಿ
೭. ಸಂತ್ರಾಸಿನಿ
೮. ಆಸೆಯ ಸುಳಿಯಲ್ಲಿ
೯. ಪದ್ಮಾಲಯ
೧೦. ಶ್ರದ್ಧಾಲಯ
೧೧. ಕಮಲಾನಿ ಕಥಾ (ಕಥಾ ಸಂಕಲನ)
೧೨. ಬಹುರತ್ನಾವಸುಂಧರಾ
೧೩. ರತ್ನಗರ್ಭಾವಸುಂಧರಾ
೧೪. ಸುಧಾಮಣಿ
೧೫. ರಮಣೀಮಣಿ
೧೬. ಲಿಯೋನಾ
೧೭. ಶ್ರೀಮುಖಿ
೧೮. ಶ್ರೀಹರ್ಷಲಾ
೧೯. ವೈಶಾಖೀಪರ್ವ
೨೦. ಫಾಲ್ಗುಣೀಪರ್ವ
೨೧. ಮಣಿಮೇಖಲಾ
೨೨. ಮಣಿಕರ್ಣಿಕಾ (ಕವಿತಾ ಸಂಕಲನ)
೨೩. ಪೂಜಾವಸಾನ ಸಮಯೇ......!
೨೪. ಧ್ಯಾನಾವಸಾನ ಸಮಯೇ......!
೨೫. ಗಗನ ಕುಸುಮ
೨೬. ಜೀವನ ಕುಸುಮ
೨೭. ಚಂಪಕರಾಜಿ
೨೮. ಬಕುಳ ರಾಜಿ
೨೯. ಕಸ್ತೂರಿ ಮಾಲಿಕಾ
೩೦. ಮಂದಾರ ಮಾಲಿಕಾ
೩೧. ವಿಜಯ ಗಾಥಾ
೩೨. ಗಾನ ತೀರ್ಥ
೩೩. ನಾದ ಬಿಂದು
೩೪. ಕಾವ್ಯಾನಂದ
೩೫. ಭಾವಾನಂದ ನಂದಿನಿ
೩೬. ಸಂಗೀತ ಪುಷ್ಪಾಂಜಲಿ
೩೭. ಆತ್ಮ ಗೀತಾಂಜಲಿ (ಸಂಜೀವನ ಕಾವ್ಯ)
೩೮. ಮಂಗಳ ಭಾರತಿ
೩೯. ಕಲ್ಯಾಣ ಭಾರತಿ
೪೦. ಉತ್ತರೋತ್ತರಣಿ
೪೧. ರಾಗಾನುರಾಗಿಣಿ
೪೨. ಪ್ರಪುಲ್ಲ ಭಾರತ (ಪೌರಾಣಿಕ ನಾಟಕ)
೪೩. ಪುಣ್ಯಾಭಿಸಾರ
೪೪. ಪುಣ್ಯಪಯೋನಿಧಿ (ಸಾನೆಟ್‌ಗಳು)
೪೫. ತರಂಗಿಣಿ (ಗದ್ಯಕಾವ್ಯ)
೪೬. ಐಂದ್ರ ಕೀರ್ತಿ ಕೇತನಂ (ಉಪನಿಷತ್ಕಥಾ)
೪೭. ಕೃತಂ ಸ್ಮರ ಕ್ರತುಂ ಸ್ಮರ (ಶಿಶುಸಾಹಿತ್ಯ)
೪೮. ದೂರ ದೇಶದಲ್ಲಿ
೪೯. ಬೆಳದಿಂಗಳರಾತ್ರಿ
೫೦. ರಂಗನ ಸಾಹಸ
೫೧. ಒಹಿಯೋಜ ಸರೋವರ
೫೨. ಕೌಶಿಕನ ಗೊಂಬೆ
೫೩. ವಿಶೇಷ ಸುದ್ದಿ
೫೪. ಕಲ್ಯಾಣಿ ರಾಗಿಣಿ (ಮಹಾಕಾವ್ಯ)
೫೫. ಶ್ರೀ ವಿವೇಕಾನಂದ ವಿಜಯಂ